UNIVERSAL
LIBRARY
OU_200170
UNIVERSAL
LIBRARY

# ಆನಂದಮಠ

ಬಿ. ವೆಂಕಟಾಚಾರ್ಯ

ಬೆಂಗಳೂರು ಸಿಟಿ:
ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪೆನಿ
1930

ಬೆಂಗಳೂರು ಸಿಟಿ:
ಬೆಂಗಳೂರು ಪ್ರೆಸ್, ಮೈಸೂರು ರೋಡ್

# ಉತ್ಸರ್ಗ

ಕ್ಷ್ವಸುಮಾಂ ತ್ವದಧೀನಜೀವಿತಂ ।
ವಿನಿಕೀರ್ಯ ಕ್ಷಣಭಿನ್ನಸೌಹೃದಃ ॥
ನಳಿನೀಂ ಕ್ಷತಸೇತುಬಂಧನೋ ।
ಜಲಸಂಘಾತ ಇವಾಸಿ ವಿದ್ರುತಃ ॥

ಇಹಪರ ಎರಡಕ್ಕೂ ಸಂಬಂಧವಿದೆ. ಆ ಸಂಬಂಧದ ಸ್ಮರಣಾರ್ಥವಾಗಿ ಈ ಗ್ರಂಥವು ಈ ಪ್ರಕಾರ ಉತ್ಸರ್ಗಮಾಡಲ್ಪಟ್ಟಿದೆ.

ಯೇತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೆ ॥

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್।
ಭವಾಮಿ ನಚಿರಾತ್ಪಾರ್ಥ ಮಯ್ಯಾವೇಶಿತ ಚೇತಸಾಂ ॥

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ।
ನಿವಸಿಷ್ಯಸಿ ಮಯ್ಯೇವ ಅತಊರ್ಧ್ವಂ ನ ಸಂಶಯಃ ॥

ಅಥ ಚಿತ್ತಂ ಸಮಾಧಾತುಂ ನಶಕ್ನೋಷಿ ಮಯಿ ಸ್ಥಿರಂ।
ಅಭ್ಯಾಸಯೋಗೇನ ತತೊ ಮಾಮಿಚ್ಛಾಪ್ತುಂ ಧನಂಜಯ ॥

—ಶ್ರೀ ಭಗವದ್ಗೀತಾ, ೧೨ನೆಯ ಅಧ್ಯಾಯ.

ಆದುದರಿಂದ ಎಲ್ಲಾ ಕ್ರಿಯೆಗಳನ್ನು ನನ್ನಲ್ಲಿಯೇ ಸೇರಿಸಿ ನನ್ನವರಾಗಿ ಬೇರೊಂದನ್ನು ಎಣಿಸದ ಭಕ್ತಿಯೋಗದಿಂದ ನನ್ನನ್ನು ಧ್ಯಾನಿಸುವರಾಗಿ ಉಪಾಸನೆ ಮಾಡುವವರು ಯಾರೋ,

ಅಂತಹ ನನ್ನಲ್ಲಿ ಪ್ರವೇಶಿಸಲ್ಪಟ್ಟ ಮನಸ್ಸುಳ್ಳವರನ್ನು ನಾನು ಮೃತ್ಯು ಸಂಸಾರ ಸಮುದ್ರದಿಂದ ಜಾಗ್ರತೆಯಾಗಿ ಚೆನ್ನಾಗಿ ಎತ್ತುವವನು, ಎಲೈ ಪಾರ್ಥನೇ.

ನನ್ನಲ್ಲಿಯೇ ಮನಸ್ಸನ್ನು ನಿಲ್ಲಿಸು, ನನ್ನಲ್ಲಿಯೇ ಬುದ್ಧಿಯನ್ನು ಹೊಗಿಸು, ಇದರ ಮೇಲೆ ಸಂಶಯವಿಲ್ಲ, ನನ್ನಲ್ಲಿಯೇ ಇರುವಿ,

ಹಾಗೆ ಚಿತ್ತವನ್ನು ನನ್ನಲ್ಲಿ ಸ್ಥಿರವಾಗಿ ಸಮಾಧಾನಪಡಿಸುವುದಕ್ಕೆ ಶಕ್ತಿ ಇಲ್ಲದವನಾಗುವಿ. ಎಲೈ ಅರ್ಜುನನೇ, ಅಭ್ಯಾಸಯೋಗದಿಂದ ನನ್ನನ್ನು ಸೇರುವುದಕ್ಕೆ ಇಚ್ಛೈಸು.

# ವಿಜ್ಞಾಪನೆ

ಇದು ಬಂಗಾಳಾದೇಶದಲ್ಲಿ ಉತ್ಕೃಷ್ಟವಾದ ಉಪನ್ಯಾಸ ಲೇಖಕರೆಂದು ಖ್ಯಾತಿಗೊಂಡಿದ್ದ ಶ್ರೀ ಬಂಕಿಂಚಂದ್ರ ಚಟ್ಟೋಪಾಧ್ಯಾಯರಿಂದ ರಚಿತವಾದ ಮೂಲಗ್ರಂಥದ ಭಾಷಾಂತರವು. ಆ ಮಹಾತ್ಮರನ್ನೂ ಅವರ ಗ್ರಂಥರಚನಾ ಶಕ್ತಿಯನ್ನೂ ಕುರಿತು ಇದಕ್ಕೆ ಮೊದಲು ನಾನು ರಚಿಸಿರುವ ದುರ್ಗೇಶನಂದಿನೀ ಎಂಬ ಗ್ರಂಥದಲ್ಲಿ ವಿವರವಾಗಿ ವಿಜ್ಞಾಪಿಸಿಕೊಂಡಿದ್ದೇನೆ. ವಂಗಭಾಷೆಯಲ್ಲಿರುವ ಮೂಲಗ್ರಂಥವನ್ನು ಓದಲು ಸಮರ್ಥರಾಗದವರು ಈ ಗ್ರಂಥವನೋದಿ ನಮ್ಮ ಸ್ವದೇಶೀಯರಾದ ಆ ಮಹಾತ್ಮರ ಅದ್ಭುತವಾದ ಶಕ್ತಿಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಆ ಮಹಾತ್ಮರು ಸ್ವರ್ಗಸ್ಥರಾಗಿದ್ದರೂ ಅವರ ಅನೇಕ ಗ್ರಂಥಗಳಿಂದ ಚಿರಸ್ಮರಣೀಯರಾಗಿದ್ದಾರೆ. ಅವರು ನನ್ನಲ್ಲಿ ವಿಶ್ವಾಸವುಳ್ಳವರಾಗಿದ್ದರು.

ಇಂಗ್ಲಾಂಡು ದೇಶದಲ್ಲಿ ಸರ್ ವಾಲ್ಟರ್ ಸ್ಕಾಟ್ ಎಂಬುವರು ಜಗದ್ವಿಖ್ಯಾತರಾದ ಉಪನ್ಯಾಸ ಲೇಖಕರೆಂದು ಸರ್ವಸಾಧಾರಣ ಪರಿಚಿತರು. ನಮ್ಮ ಗ್ರಂಥಕರ್ತರು ಭಾರತಖಂಡದ ಸರ್ ವಾಲ್ಟರ್ ಸ್ಕಾಟೆಂದು ಹೇಳಿದರೆ ಅತ್ಯುಕ್ತಿಯಾಗದು.

ಸಮಾಜ ಕ್ಷೋಭೆಯು ಆತ್ಮಪೀಡನ ಮಾತ್ರ. ರಾಜವಿದ್ರೋಹಿಗಳು ಆತ್ಮಘಾತಿಗಳು.

ಇಂಗ್ಲೀಷರು ಬಂಗಾಳಾದೇಶವನ್ನು ಅರಾಜಕತೆಯಿಂದುದ್ಧಾರ ಮಾಡಿದರು.

ಮೇಲೆ ಹೇಳಿದ ಅಂಶಗಳು ಈ ಗ್ರಂಥದಲ್ಲಿ ಉದಾಹೃತವಾಗಿವೆ.

ಬಂಗಾಳಾದೇಶದಲ್ಲಿ 1773–74 ನೇ ವರುಷಗಳಲ್ಲಿ ನಡೆದ ಸನ್ಯಾಸಿ ವಿದ್ರೋಹದ ಚರಿತ್ರೆಯ ಅವಲಂಬನದಿಂದ ಈ ಗ್ರಂಥವು ರಚಿತವಾಗಿದೆ. ಸನ್ಯಾಸಿ ವಿದ್ರೋಹದ (Sannyasi Rebellion) ಯಥಾರ್ಥವಾದ ಚರಿತ್ರೆಯು ಇಂಗ್ಲೀಷು ಗ್ರಂಥಗಳಿಂದ ಉದ್ಧೃತವಾಗಿರುವುದು ಪರಿಶಿಷ್ಟದಲ್ಲಿ (Appendix) ನೋಡಬಹುದು. ಉಪನ್ಯಾಸದಲ್ಲಿ ವರ್ಣಿತವಾದ ಯುದ್ಧಗಳು ವೀರಭೂಮಿಯಲ್ಲಿ ನಡೆಯಲಿಲ್ಲ; ಉತ್ತರ ಬಂಗಾಳಾ ಪ್ರದೇಶದಲ್ಲಿ ನಡೆದ ಯುದ್ಧಗಳಾಗಿವೆ. ಈ ವ್ಯತ್ಯಾಸವು ಉಪನ್ಯಾಸದಲ್ಲಿ ಮಾರಾತ್ಮಕವಾದ ದೋಷವಾಗಿ ಗ್ರಹಿಸಲಾಗದು. ಏತಕ್ಕೆಂದರೆ, ಉಪನ್ಯಾಸವು ಉಪನ್ಯಾಸವೇ ಹೊರತು ಚರಿತ್ರೆಯಾಗಲಾರದು.

ಇತಿ,

**ಕೋಲಾರ,**
**ಶ್ರಾವಣ ಬಹುಳ ೧೧–೧೮೯೭.**

**ಬಿ. ವೆಂಕಟಾಚಾರ್ಯ.**

# ವಿಜ್ಞಾಪನೆ

---

ಈ ಪ್ರೌಢಗ್ರಂಥದ ಪೀಠಿಕೆಯನ್ನು ಗ್ರಂಥಕರ್ತರೇ ಬರೆದಿರುವುದರಿಂದ ಪುನಃ ಬರೆಯಬೇಕಾಗಿರುವುದಿಲ್ಲ. ನಮ್ಮ ಸರಕಾರದ "ಟೆಕ್ಸ್ಟ್ ಬುಕ್ಸ್ ಕಮಿಟಿ" ಯವರು ಈ ಗ್ರಂಥವನ್ನು 1923-24ನೆಯ ವರುಷದ S.S.L.C. ಪರೀಕ್ಷೆಗೆ ಪಠ್ಯಪುಸ್ತಕವನ್ನಾಗಿ ಚುನಾಯಿಸಿರುವುದೇ ಈ ಗ್ರಂಥದ ಪ್ರೌಢಿಮೆಯನ್ನು ತೋರ್ಪಡಿಸುತ್ತೆ. ಈ ರೀತಿ ಅವರು ಪ್ರೋತ್ಸಾಹಿಸಿದ್ದಕ್ಕೆ ಅವರಿಗೆ ಚಿರಋಣಿಯಾಗಿರುವೆನು.

"ಹೆಂಗಸರು ಅನೇಕ ಅವಸ್ಥಾವಿಶೇಷದಲ್ಲಿ ಪುರುಷರಿಗೆ ಪ್ರಧಾನ ಸಹಕಾರಿಗಳು" ಎಂಬುದು ಈ ಕಥಾಭಾಗದಲ್ಲಿ ನಿದರ್ಶಿತವಾಗಿರುವುದೊಂದೇ ಅಲ್ಲದೆ ಈಚೆಗೆ ಸ್ತ್ರೀಯರು ಮುದ್ರಣಾಲಯದ ಕ್ಲಿಷ್ಟ ಕೈಗಾರಿಕೆ ಕುಶಲತೆಯನ್ನು ಹೊಸದಾಗಿ ಕಲಿತು ಈ 'ಆನಂದಮಠ' ಗ್ರಂಥದಾದ್ಯಂತವಾಗಿ ಪುನರ್ಮುದ್ರಣದಲ್ಲಿ ಸಹಾಯಮಾಡಿ ಆ ಮೂಲಕ "ಸ್ತ್ರೀಯರು ಪುರುಷರಿಗೆ ಸಹಕಾರಿಗಳು" ಎಂಬುದನ್ನು ಕಾರ್ಯತಃ ದೃಢಪಡಿಸಿರುವುದನ್ನು ಮಹನೀಯರಿಗೆ ತಿಳಿಸಲು ಆನಂದಪಡುತ್ತೇನೆ. ಈ ಗ್ರಂಥದಲ್ಲಿ ಅಕ್ಷರ ಸ್ಖಾಲಿತ್ಯಗಳೇನಾದರೂ ಇದ್ದಲ್ಲಿ ಮನ್ನಿಸಿ ಗುಣಗ್ರಾಹಿಗಳು ಗುಣವನ್ನು ಗ್ರಹಿಸಿ ಮೊದಲಿನಂತೆಯೇ ಪ್ರೋತ್ಸಾಹಿಸುತ್ತಾ ಬರುವರೆಂದು ನಂಬಿರುತ್ತೇನೆ.

ಮೈಸೂರು,
13-12-22.

**ಬಿ. ವಿ. ನರಸಿಂಹೈಯ್ಯಂಗಾರ್.**

# ವಿಜ್ಞಾಪನೆ

ಈ ಐತಿಹಾಸಿಕ ಕಥೆಯು ಹೆಸರಿಗನುಗುಣವಾಗಿ ಪಾಠಕಮಹಾಶಯರ ಮನದಲ್ಲಿ ದೇಶಸೇವೆಗೆ ಸಲುವಾಗಿ ದೇಶಭಕ್ತರು ತಮ್ಮ ಆತ್ಮಯಜ್ಞಕ್ಕೂ ಸಿದ್ಧರಾಗಬೇಕೆಂಬ ಉತ್ಸಾಹವನ್ನುಕ್ಕಿಸುವ ಈ ಗ್ರಂಥರತ್ನದ ಮೂರನೆಯ ಸಂಸ್ಕರಣವಿದು. ಈ ಗ್ರಂಥವನ್ನು ಏಕಾಗ್ರಚಿತ್ತದಿಂದೋದುವವರಿಗೆ ಶ್ರೀಮದ್ಭಗವದ್ಗೀತೆಯಲ್ಲಿ ಉದ್ಧೃತವಾಗಿರುವ ಪರಮಪಾವನ ಗೂಢಾರ್ಥವು ಹೃದಯಂಗಮವಾಗಿ ಬೋಧೆಯಾಗುವುದಲ್ಲದೆ ಶ್ರೀಕೃಷ್ಣ ಪರಮಾತ್ಮನು ಉಪದೇಶಿಸಿರುವ ಮುಖ್ಯ ತತ್ವಾರ್ಥವಾದ:—"ಪ್ರಾಣವು ತುಚ್ಛವಾದುದು, ಭಕ್ತಿಯೇ ಎಲ್ಲಕ್ಕಿಂತಲೂ ಶ್ರೇಷ್ಠವು. ಜ್ಞಾನ, ಭಕ್ತಿ, ದಯೆ, ಧರ್ಮ, ಶಾಂತಿ—ಮುಂತಾದವುಗಳಿಗೆ ಸಂಯೋಗವಿರುವುದು ಮತ್ತು ಇಹಪರ ಎರಡಕ್ಕೂ ಸಂಬಂಧವಿದೆ" ಎಂಬ ದೈವವಾಕ್ಯವನ್ನು ತಿಳಿದುಕೊಳ್ಳುವ ಸುಯೋಗ ಪುಣ್ಯಫಲವೂ ಉಂಟಾಗುವುದು.

ಕನ್ನಡ ಭಾಷಾಭಿಮಾನಿಗಳ ಉದಾರಾಶ್ರಯವು ಎಂದಿನಂತೆ ಸರ್ವದಾ ದೊರೆಯುತ್ತಿರುವುದೆಂದು ಸಂಪೂರ್ಣ ನಂಬಿರುವೆನು.

ಬೆಂಗಳೂರು ಸಿಟಿ,
12–8–1930.

ಶ್ರೀ ಶಲ್ಲಮ್ಮ.

ಶ್ರೀಃ

ಶ್ರೀಯೈನಮಃ

# ಆನಂದಮಠ

## ಉಪಕ್ರಮಣಿಕಾ

ಅತ್ಯಂತ ವಿಸ್ತಾರವಾದ ಅರಣ್ಯ. ಅರಣ್ಯದಲ್ಲಿ ಅಧಿಕಾಂಶ ಮರಗಳೂ ಸಾಲ ವೃಕ್ಷಗಳೂ ಇತರ ಅನೇಕ ಜಾತಿ ಮರಗಳೂ ಇದ್ದುವು. ಮರಗಳ ಕೊಂಬೆಗಳೂ ಎಲೆಯೂ ಸಹ ಎಡೆಬಿಡದೆ ದಟ್ಟವಾಗಿ ಹೆಣೆದುಕೊಂಡು ಆಕಾಶಮಾರ್ಗದಲ್ಲಿ ಸಾಲು ಸಾಲಾಗಿ ಹೊರಟುಹೋಗಿದ್ದುವು. ಎಡೆಬಿಡದೆ ಬೆಳಕು ತೂರುವುದಕ್ಕೂ ಕಂಡಿಗಳಿಲ್ಲದೆ, ಅನಂತವಾದ ಪಲ್ಲವಸಮುದ್ರವು ಹರಿದಾರಿ ಮೇಲೆ ಹರಿದಾರಿಗಳ ಪರ್ಯಂತ ವ್ಯಾಪಿಸಿಕೊಂಡು ಗಾಳಿಯಿಂದ ಬೀಸಲ್ಪಟ್ಟು ತರಂಗ ತರಂಗವಾಗಿ ಹೊರಟುಹೋಗುತ್ತಿದ್ದಿತು. ಕೆಳಗೆ ಗಾಢಾಂಧಕಾರ. ಮಧ್ಯಾಹ್ನದಲ್ಲಿಯೂ ಕೂಡ ಅಸ್ಫುಟವಾದ ಬೆಳಕು; ಭಯಂಕರವಾಗಿರುವುದು! ಅದರೊಳಗೆ ಮನುಷ್ಯ ಪ್ರವೇಶವಿಲ್ಲ. ಎಲೆಗಳ ಮರ್ಮರ ಶಬ್ದ, ಅರಣ್ಯದ ಪಶುಪಕ್ಷಿಗಳ ಧ್ವನಿ, ಇದು ಹೊರತು ಆ ಕಾಡಿನಲ್ಲಿ ಮತ್ತಾವ ಶಬ್ದವೂ ಕೇಳುತ್ತಿರಲಿಲ್ಲ.

ಇಂತಹ ವಿಸ್ತಾರವಾದ ಅತಿ ನಿಬಿಡವಾದ ಅಂಧತಮೋಮಯವಾದ ಭಯಂಕರವಾದ ಗೊಂಡಾರಣ್ಯ;—ಅದರಲ್ಲಿಯೂ ರಾತ್ರಿಕಾಲ—ರಾತ್ರಿಯಲ್ಲಿಯೂ ಒಳ್ಳೇ ಅರ್ಧರಾತ್ರಿ; ಅರ್ಧರಾತ್ರಿಯಲ್ಲಿ ಅತಿಶಯವಾದ ಅಂಧಕಾರ; ಅರಣ್ಯದ ಹೊರಗೂ ಅಂಧಕಾರ, ಏನೇನೂ ಕಾಣಿಸದು. ಅರಣ್ಯದೊಳಗಾದರೋ, ತಮೋರಾಶಿಯು ಭೂಗರ್ಭದಲ್ಲಿರುವ ಅಂಧಕಾರದಹಾಗೆ ತುಂಬಿರುವುದು.

ಪಶುಪಕ್ಷಿಗಳು ನಿಶ್ಶಬ್ದವಾಗಿದ್ದುವು. ಕೋಟ್ಯನುಕೋಟಿ ಪಶು, ಪಕ್ಷಿ, ಕೀಟ, ಪತಂಗ ಮುಂತಾದುವು ಆ ಅರಣ್ಯದಲ್ಲಿ ಎಷ್ಟೋ ವಾಸವಾಗಿರುವುವು; ಆದರೂ ಒಂದರ ಶಬ್ದವೂ ಇಲ್ಲ. ಶಬ್ದಮಯಿಯಾದ ಈ ಪೃಥ್ವಿಯಲ್ಲಿ ಆ ನಿಸ್ತಬ್ಧಭಾವವನ್ನು ಅನುಭವಿಸುವುದು ಅತಿಕಷ್ಟ.

ಕೊನೆಗಾಣದ ಆ ಅರಣ್ಯದ ಮಧ್ಯದಲ್ಲಿ ಆ ಸೂಚ್ಯೋಭೇದ್ಯವಾದ ಅಂಧಕಾರಮಯವಾದ ಅರ್ಧರಾತ್ರಿಯಲ್ಲಿ, ಆ ಅನನುಭವನೀಯವಾದ ನಿಶ್ಶಬ್ದ ಮಧ್ಯದಲ್ಲಿ, "ನನ್ನ ಮನೋರಥವು ಸಿದ್ಧಿಯಾಗಲಾರದೆ, ಏನು ?" ಎಂಬ ಶಬ್ದವು ಕೇಳಿಸಿತು

ಈ ಶಬ್ದವು ಕೇಳಿಬಂದೊಡನೆಯೇ ಆ ಅರಣ್ಯವು ಪುನಃ ನಿಶ್ಶಬ್ದದಲ್ಲಿ ಮುಳುಗಿ ಹೋಯಿತು. ಇಂತಹ ಅರಣ್ಯದಲ್ಲಿ ಮನುಷ್ಯನ ಧ್ವನಿ ಕೇಳಿಸಬಹುದೆಂದು ಯಾರುತಾನೇ ಹೇಳುವರು? ಸ್ವಲ್ಪ ಹೊತ್ತಿನಮೇಲೆ ಆ ನಿಸ್ತಬ್ಧತೆಯನ್ನು ಮಥನ ಮಾಡಿಕೊಂಡು ಮನುಷ್ಯನ ಕಂಠಸ್ವರದಿಂದ, "ನನ್ನ ಮನೋರಥವು ಸಿದ್ಧಿಯಾಗ ಲಾರದೇನು?" ಎಂದು ಧ್ವನಿಯಾಯಿತು.

ಹೀಗೆ ಮೂರುಸಲ ಆ ಅಂಧಕಾರ ಸಮುದ್ರದಲ್ಲಿ ಧ್ವನಿಯು ಆಲೋಡಿತ ವಾಯಿತು. ಅದಕ್ಕೆ ಉತ್ತರವಾಗಿ, "ಇದಕ್ಕೆ ನೀನು ಕಟ್ಟುವ ಪಣವೇನು" ಎಂದು ಶಬ್ದವಾಯಿತು.

ಪ್ರತ್ಯುತ್ತರ—ನನ್ನ ಪ್ರಾಣ ಸರ್ವಸ್ವವೂ ಇದಕ್ಕೆ ಪಣವಾಗಿದೆ.

ಪುನಃ ಪ್ರತಿಶಬ್ದ—ಪ್ರಾಣವು ಕೇವಲ ತುಚ್ಛವಾದದ್ದು; ಎಲ್ಲರೂ ಅದನ್ನು ತ್ಯಾಗಮಾಡಬಲ್ಲರು.

"ಮತ್ತೇನುಂಟು? ಇನ್ನೇನು ಕೊಡಬೇಕು?"

ಅದಕ್ಕೆ ಉತ್ತರ—ಭಕ್ತಿ.

# ಮೊದಲನೆಯ ಭಾಗ

## ಮೊದಲನೆಯ ಪರಿಚ್ಛೇದ

ಸುಮಾರು ಒಂದು ಸಾವಿರದ ಏಳನೂರು ಎಪ್ಪತ್ತಮೂರನೇ ವರುಷದ ಗ್ರೀಷ್ಮಕಾಲದಲ್ಲಿ ಪದಚಿಹ್ನವೆಂಬ ಗ್ರಾಮದಲ್ಲಿ ಒಂದು ದಿನ ಬಿಸಿಲಿನ ಝಳವು ಅತಿ ಪ್ರಬಲವಾಗಿದ್ದಿತು. ಗ್ರಾಮವಾದರೋ ದೊಡ್ಡದು. ಸಾವಿರಾರು ಮನೆಗಳಿರುವುವು. ಆದರೆ ಊರೊಳಗೆ ಒಬ್ಬನಾದರೂ ಕಾಣಿಸಲಿಲ್ಲ; ದೊಡ್ಡಪೇಟೆ; ಸಾಲು ಸಾಲಾಗಿ ಅಂಗಡಿಗಳ ಬೀದಿ; ದೊಡ್ಡ ಮಾರ್ಕೆಟ್; ಬೀದಿ ಬೀದಿಯಲ್ಲಿ ನೂರಾರು ಮಣ್ಣಿನಮನೆಗಳು,—ಅವುಗಳಲ್ಲಿ ದೊಡ್ಡದೂ ಚಿಕ್ಕದೂ ಇಟ್ಟಿಗೆ ಮನೆಗಳು. ಆ ದಿನ ಎಲ್ಲೆಲ್ಲಿಯೂ ನಿಶ್ಶಬ್ದವಾಗಿತ್ತು. ಪೇಟೆಗಳಲ್ಲಿ ಅಂಗಡಿಗಳೆಲ್ಲ ಮುಚ್ಚಲ್ಪಟ್ಟಿದ್ದುವು, ಅಂಗಡಿಯವರು ಎಲ್ಲಿ ಪಲಾಯನಸೂಕ್ತ ಹಿಡಿದರೋ ಗೊತ್ತೇ ಇಲ್ಲ; ಆ ದಿನ ಸಂತೆಕೂಡುವ ವಾರ; ಸಂತೆಯಲ್ಲಿ ಒಬ್ಬರೂ ಇಲ್ಲ; ಸಂತೆಯ ಭಿಕ್ಷಕ್ಕೆ ಭಿಕ್ಷುಕನೊಬ್ಬನೂ ಹೊರಗೆ ಹೊರಟಿಲ್ಲ; ಮಗ್ಗದವರು ಮಗ್ಗಗಳನ್ನೆಲ್ಲ ಮುಚ್ಚಿಬಿಟ್ಟು ಎಲ್ಲಿಯೋ ಹೋಗಿ ಅಳುತ್ತಿದ್ದರು; ರೈತರು ವ್ಯವಸಾಯವನ್ನು ಬಿಟ್ಟು ಮಕ್ಕಳನ್ನೆತ್ತಿಕೊಂಡು ಎಲ್ಲಿಯೋ ಹೋಗಿದ್ದರು; ಪಾಠಶಾಲೆಗಳನ್ನು ಮುಚ್ಚಿ ಉಪಾಧ್ಯರು ಓಡಿಹೋಗಿದ್ದರು; ಮಕ್ಕಳುಗಳಿಗೆ ಕೂಡ ಗಟ್ಟಿಯಾಗಿ ಅಳುವುದಕ್ಕೆ ಧೈರ್ಯವಿಲ್ಲವೆಂದು ಕಂಡಿತು; ರಸ್ತೆಯಲ್ಲಿ ಒಂದು ಪ್ರಾಣಿಯೂ ಕಾಣಿಸಲಿಲ್ಲ; ಕೆರೆ ಕುಂಟೆಗಳು ವಿಜನವಾಗಿದ್ದುವು; ಮನೆ ಬಾಗಲಿನಲ್ಲಿ ಜನವಿಲ್ಲ; ಮರದ ಮೇಲೆ ಪಕ್ಷಿ ಕೂಡ ಇಲ್ಲ; ಗೋಮಾಳಗಳಲ್ಲಿ ದನಕರುಗಳು ಕಾಣಲಿಲ್ಲ; ಕೇವಲ ಸ್ಮಶಾನವಾಗಿ ನಾಯಿ ನರಿ ಓಡಾಡುತ್ತಲಿದ್ದುವು.

ಒಂದು ದೊಡ್ಡ ಮಹಡಿಯಮನೆ—ಅದರ ದೊಡ್ಡದೊಡ್ಡ ಮೆಟ್ಟಲುಗಳು ದೂರದಿಂದ ಕಾಣುವುವು. ಆ ಗೃಹಾರಣ್ಯ ಮಧ್ಯದಲ್ಲಿ ಅದು ಶೈಲಶಿಖರದಂತೆ ಶೋಭಿಸುತಿದ್ದಿತು. ಶೋಭಿಸುವುದು ಅಷ್ಟರಲ್ಲಿಯೇ ಇದ್ದಿತು. ಬಾಗಲು ಮುಚ್ಚಿದ್ದಿತು; ಮನುಷ್ಯರ ಸಮಾಗಮವೇ ಇಲ್ಲ; ಕೇವಲ ನಿಶ್ಶಬ್ದವಾಗಿದ್ದಿತು; ಗಾಳಿ ಸಂಚಾರಕ್ಕೆ ಕೂಡ ಮಾರ್ಗವಿಲ್ಲ; ಮನೆಯಲ್ಲಿ ಮಧ್ಯಾಹ್ನದಲ್ಲಿಯೂ ಕಗ್ಗತ್ತಲೆಯಾಗಿದ್ದಿತು. ಆ ಕತ್ತಲೆಯಲ್ಲಿ, ಅರ್ಧರಾತ್ರಿಯಲ್ಲಿ ಅರಳಿದ ಕುಸುಮಯುಗಳದಂತೆ ದಂಪತಿಗಳಿಬ್ಬರು ಕುಳಿತುಕೊಂಡು ಯೋಚನೆಮಾಡುತಿದ್ದರು. ಮಹಾ ಕ್ಷಾಮವು ಪ್ರಾಪ್ತವಾಗಿದ್ದಿತು.

ಸನ್ ಸಾವಿರದ ಏಳನೂರ ಎಪ್ಪತ್ತೊಂದನೆಯ ವರುಷದಲ್ಲಿ ಬೆಳೆಯು ಸರಿಯಾಗಿ ಆಗಲಿಲ್ಲ; ಆದುಕಾರಣ ಮಾರನೆಯ ವರುಷದಲ್ಲಿ ಭತ್ತದ ಬೆಲೆಯು ಬಹಳ ಹೆಚ್ಚಾಗಿಹೋಯಿತು. ಜನಗಳಿಗೆ ಬಹಳ ಕಷ್ಟವು ಪ್ರಾಪ್ತವಾಯಿತು; ಆದರೆ ಸರಕಾರದವರು ತೆರಿಗೆಯನ್ನು ಒಂದು ಕಾಸೂ ಬಿಡದೆ ಮನೆಮಾರು ಮಾರಿಸಿ ತೆಗೆದುಕೊಂಡುಬಿಟ್ಟರು. ಇದರಿಂದ ಬಡವರಾದವರು ಒಂದು ಹೊತ್ತು ಹೊಟ್ಟೆಗೆ ತಿಂದು ಕಾಲಕ್ಷೇಪವನ್ನು ಮಾಡಿದರು. ಎಪ್ಪತ್ತಮೂರನೆಯ ವರುಷದಲ್ಲಿ ಮಳೆಗಾಲದಲ್ಲಿ ಒಳ್ಳೆಯೊಳ್ಳೆ ಮಳೆಗಳಾದುವು. ಜನರು ಈಸಲವೇನೋ ದೇವರು ಕಣ್ಣುಬಿಟ್ಟು ನೋಡಿದನೆಂದು ತಿಳಿದುಕೊಂಡರು. ರೈತರು ಹೊಲಗದ್ದೆಗಳಲ್ಲಿ ಆನಂದವಾಗಿದ್ದರು. ರೈತರ ಹೆಂಡಿರು ಬೆಳ್ಳಿ ನಗನಟ್ಟು ಮಾಡಿಸಿಕೊಡಬೇಕೆಂದು ತಮ್ಮ ತಮ್ಮ ಗೌಡರನ್ನು ಪೀಡಿಸುವದಕ್ಕಾರಂಭಿಸಿದರು. ಹಿಂಗಾರಿನಲ್ಲಿ ದೇವರು ಶುದ್ಧವಾಗಿ ಕೈಬಿಟ್ಟುಬಿಟ್ಟನು. ಹಿಂಗಾರಿನಲ್ಲಿ ಒಂದು ಹನಿಯೂ ಹನಿಯಲಿಲ್ಲ. ಪೈರೆಲ್ಲ ಸುಟ್ಟು ಹಾಳಾಗಿ ಕೈಗೆ ಒಂದು ಕಾಳೂ ಸಿಕ್ಕದೆ ಹೋಯಿತು. ಅಲ್ಲಲ್ಲಿ ಅಲ್ಪಸ್ವಲ್ಪ ಬೆಳದುದೆಲ್ಲ ದಂಡಿನ ಸರಬರಾಯಿಗೋಸ್ಕರ ಸರಕಾರದವರು ಬೆಲೆಮಾಡಿ ತೆಗೆದುಕೊಂಡುಬಿಟ್ಟರು. ಜನಗಳಿಗೆ ತಿನ್ನುವುದಕ್ಕೆ ಮಾರ್ಗವಿಲ್ಲದೆ ಬಂದಿತು. ಮೊದಲು ಒಂದುಹೊತ್ತು ಉಪವಾಸಕ್ಕೆ ಪ್ರಾರಂಭವಾಯಿತು. ಹರಳು, ಎಳ್ಳು ಮುಂತಾದ ತೈಲಧಾನ್ಯಗಳಾದದ್ದು ಹೊಟ್ಟೆಗೆ ಹೋಗಲಿಲ್ಲ. ಮಹಮ್ಮದ್ ರೇಜಖಾನನು ಕಂದಾಯದ ವಸೂಲಿ ಕೆಲಸಕ್ಕೆ ಯಜಮಾನನಾಗಿದ್ದನು. ಅವನು ಈ ಸಮಯದಲ್ಲಿ ಸರಕಾರಕ್ಕೆ ಆದಾಯವನ್ನು ತೋರಿಸಿ ತಾನು ಸನ್ಮಾನಪಡೆಯಬೇಕೆಂದು ಯೋಚಿಸಿಕೊಂಡು ರೈತರು ಕೊಡುತಲಿದ್ದ ಕಂದಾಯವನ್ನು ನೂರಕ್ಕೆ ಹತ್ತರೂಪಾಯಿನ ಮೇರೆಗೆ ಹೆಚ್ಚಿಸಿದನು. ಇದರಿಂದ ಬಂಗಾಳ ದೇಶದಲ್ಲೆಲ್ಲ ಅತಿ ಗೋಳಿಗೆ ಕಾರಣವಾಯಿತು.

ಜನಗಳು ಭಿಕ್ಷಕ್ಕೆ ಪ್ರಾರಂಭಿಸಿದರು. ದುರ್ಭಿಕ್ಷದಲ್ಲಿ ಭಿಕ್ಷವನ್ನು ಹಾಕುವವರು ಯಾರು? ಅನಂತರ ಉಪವಾಸಕ್ಕೆ ಪ್ರಾರಂಭಿಸಿದರು. ಅನಂತರ ರೋಗಗಳಿಗೆ ಗುರಿಯಾದರು. ಅನಂತರ ದನಕರುಗಳನ್ನು ಮಾರಿದರು. ಅನಂತರ ವ್ಯವಸಾಯದ ನೇಗಿಲು, ಕುಂಟೆ ಮುಂತಾದ್ದನ್ನು ಮಾರಿದರು. ಅನಂತರ ಬೀಜಕ್ಕೆ ಇಟ್ಟುಕೊಂಡಿದ್ದ ದವಸವನ್ನೆಲ್ಲ ತಿಂದುದಾಯಿತು. ಅನಂತರ ಮನೆಮಾರು ಮಾರಿಹೋಯಿತು. ಅನಂತರ ಒಡವೆವಸ್ತುವನ್ನೆಲ್ಲ ಮಾರಿದರು. ಅನಂತರ ಹೆಂಡಿರು ಮಕ್ಕಳನ್ನು ಮಾರಿದರು. ಅನಂತರ—ಇನ್ನೇನು? ಹೆಂಡಿರು ಮಕ್ಕಳನ್ನು ತೆಗೆದುಕೊಳ್ಳುವವರು ಯಾರು? ಖರೀದಿಗೆ ತೆಗೆದುಕೊಂಡು ಅನ್ನವಸ್ತ್ರ ಕೊಡುವವರು ಯಾರು ಇದ್ದರು? ಎಲ್ಲರೂ ಮಾರುವರೇ ಆಯಿತು; ಕೊಂಡುಕೊಳ್ಳುವರಿಲ್ಲ. ಅನ್ನವಿಲ್ಲದೆ ಎಲೆಯನ್ನು ತಿನ್ನುವುದಕ್ಕೆ ಆರಂಭವಾಯಿತು. ಹುಲ್ಲು ತಿಂದರು, ಇತರ ಪಶುಪಕ್ಷಿಗಳನ್ನೂ, ನಾಯಿ, ಬೆಕ್ಕು, ಇಲಿ, ಹೆಗ್ಗಣ ಮುಂತಾ

ದುದನೆಲ್ಲ ತಿಂದರು. ಅನೇಕರು ದೇಶವನ್ನು ಬಿಟ್ಟುಹೋದರು. ಓಡಿಹೋದವರು ವಿದೇಶದಲ್ಲಿ ಅನ್ನವಿಲ್ಲದೆ ಸತ್ತರು. ಓಡಿಹೋಗದವರು ತಿನ್ನಬಾರದ್ದನ್ನು ತಿಂದು ರೋಗದಲ್ಲಿ ನರಳಿ ಪ್ರಾಣತ್ಯಾಗ ಮಾಡಿದರು.

ರೋಗಾದ್ಯುಪದ್ರವಗಳಿಗೆ ಒಳ್ಳೆಯ ಸಮಯ ಸಿಕ್ಕಿದಹಾಗಾಯಿತು. ಜ್ವರ, ವಾಂತಿಭೇದಿ, ಕ್ಷಯ, ಸಿಡುಬು, ಮುಂತಾದ ರೋಗಗಳ ಅವಾಂತರಗಳು ಪ್ರಬಲವಾದುವು. ಅದರಲ್ಲಿಯೂ ಸಿಡುಬು ಒಂದೇ ಬಹಳ ಕೊಲೆಯನ್ನು ನಡಸಿತು. ಮನೆಮನೆಯಲ್ಲಿಯೂ ಸಾವು. ಯಾರುತಾನೇ ರೋಗಗ್ರಸ್ತರಿಗೆ ಉಪಚರಿಸುವರು? ಒಬ್ಬರನ್ನು ಒಬ್ಬರು ಮುಟ್ಟರು. ಯಾರುತಾನೇ ಯಾರಿಗೆ ಚಿಕಿತ್ಸೆ ಮಾಡುವರು? ಒಬ್ಬರನ್ನೊಬ್ಬರು ನೋಡುವುದಕ್ಕೇ ಇಲ್ಲ. ಸತ್ತವರನ್ನು ಎತ್ತಿ ಹಾಕುವವರೂ ಇಲ್ಲ. ಅತಿ ರಮಣೀಯವಾದ ಉಪ್ಪರಿಗೆ ಮನೆಗಳಲ್ಲಿ ಅವರವರೇ ರೋಗದಿಂದ ಬೆಂದುಹೋಗಬೇಕು. ಮನೆಗೆ ಸಿಡುಬು ಪ್ರವೇಶವಾದ ಕೂಡಲೆ, ಸಿಡುಬೆದ್ದವನನ್ನು ಅಲ್ಲಿಯೇ ಬಿಟ್ಟು ಉಳಿದವರೆಲ್ಲ ಮನೆಯನ್ನೇ ಬಿಟ್ಟು, ಭಯದಿಂದ ಓಡಿಹೋಗುವರು.*

ಮಹೇಂದ್ರಸಿಂಹನು ಪದಚಿಹ್ನಗ್ರಾಮದಲ್ಲಿ ಒಬ್ಬ ಧನಾಢ್ಯನು. ಆದರೆ ಈ ಕಾಲದಲ್ಲಿ ಧನಿಯೂ ನಿರ್ಧನಿಯೂ ಒಂದೇ. ಈ ದುಃಖಪೂರ್ಣವಾದ ಕಾಲದಲ್ಲಿ ಅವನ ಸ್ವಜನರೂ ದಾಸದಾಸಿಯರೂ ವ್ಯಾಧಿಗ್ರಸ್ತರಾಗಿ ಎಲ್ಲರೂ ಹೋಗಿ ಬಿಟ್ಟರು. ಕೆಲವರು ಮೃತಪಟ್ಟರು; ಕೆಲವರು ಓಡಿಹೋದರು. ಅಂತಹ ದೊಡ್ಡ ಪರಿವಾರದಲ್ಲಿ ಅವನ ಹೆಂಡತಿ, ಅವನು, ಒಂದು ಹೆಣ್ಣುಶಿಶು ಈ ಮೂವರೇ ಉಳಿದಿದ್ದರು. ಮೇಲೆ ನಾವು ಅವನ ವೃತ್ತಾಂತವನ್ನೇ ಹೇಳುತ್ತಿದ್ದೆವು.

ಅವನ ಹೆಂಡತಿ ಕಲ್ಯಾಣಿಯು ಯೋಚನೆಮಾಡುವುದನ್ನು ಬಿಟ್ಟು ಗೋಶಾಲೆಗೆ ಹೋಗಿ ತಾನೇ ಹಾಲನ್ನು ಕರೆದಳು. ಹಾಲನ್ನು ಕಾಸಿ ಮಗುವಿಗೆ ಹಾಕಿ ಅನಂತರ ದನಕರುಗಳಿಗೆ ನೀರನ್ನು ತೋರಿಸಿ ಹುಲ್ಲುಹಾಕಿ ಬರುತ್ತಲೆ ಮಹೇಂದ್ರನು ಹೀಗೆಷ್ಟು ದಿನ ನಡೆದೀತೆಂದನು.

ಕಲ್ಯಾಣಿ—ಹೆಚ್ಚು ದಿನ ನಡೆಯದು. ನಡೆದಷ್ಟು ದಿನ, ನನ್ನ ಕೈಲಾದಷ್ಟು ದಿನ ನಡೆಸುತ್ತೇನೆ. ಅದರಮೇಲೆ ನೀವು ಮಗುವನ್ನು ಕರೆದುಕೊಂಡು ನಗರಕ್ಕೆ ಹೊರಟುಹೋಗಿ.

ಮಹೇಂದ್ರ—ನಗರಕ್ಕೆ ಹೋಗುವುದಾದರೆ ನಿನಗೆ ಏತಕ್ಕೆ ಇಷ್ಟು ಕಷ್ಟ ಕೊಡಬೇಕು? ಈಗಲೇ ಏತಕ್ಕೆ ಹೋಗಕೂಡದು? ಹೊರಡು; ಹೋಗೋಣ.

ಇದರಮೇಲೆ ಅವರಿಬ್ಬರೂ ಅನೇಕ ಚರ್ಚೆಮಾಡಿಕೊಂಡರು.

ಕಲ್ಯಾಣಿ—ನಗರಕ್ಕೆ ಹೋದರೆ ಎಷ್ಟೋ ವಾಸಿ.

---

* ನಮ್ಮ ದೇಶದ ಮಲ್ಲಾಡಿನಲ್ಲಿ ಈಗಲೂ ಮನೆಯಲ್ಲಿ ಒಬ್ಬನಿಗೆ ಮೈಲಿ ಎದ್ದರೆ, ಮಿಕ್ಕವರೆಲ್ಲರೂ ಮನೆ ಬಿಟ್ಟು ಓಡಿಹೋಗುತ್ತಾರೆ. ಮೈಲಿ ಅಂದರೆ ಮಲ್ಲಾಡಿನಲ್ಲಿ ಸಿಡುಬಿಗೆ ಹೆಸರು

ಮಹೇಂದ್ರ—ಹೆಸರೇನೋ ರಾಜನಗರ, ಮತ್ತು ವೀರಭೂಮಿಗೆ ರಾಜಧಾನಿಯಾಗಿಯೂ ಇದೆ. ಅಲ್ಲಿಯೂ ಇದೇ ಅವಸ್ಥೆ; ಜನರು ಕಡಿಮೆ; ಪ್ರಾಣರಕ್ಷಣೆಗೆ ಉಪಾಯವಿಲ್ಲ.

ಕಲ್ಯಾಣಿ—ಹಾಗಾಗಿದ್ದರೆ, ಮುರಷಿದಾಬಾದು, ಕಾಶೀಂಬಜಾರು, ಅಥವಾ ಕಲಿಕತ್ತೆಗೆ ಹೋದರೆ ಪ್ರಾಣರಕ್ಷಣೆ ಆದೀತು, ಈ ಊರನ್ನು ಬಿಟ್ಟು ಹೋಗಲೇಬೇಕು, ಇಲ್ಲಿ ಉಳಿದುಕೊಳ್ಳುವ ಭರವಸೆ ಏನೂ ಇಲ್ಲ. ಅದು ಖಂಡಿತ.

ಮಹೇಂದ್ರ—ಈ ಮನೆಯು ನಮ್ಮ ತಾತ ಮುತ್ತಾತನ ಕಾಲದಿಂದ ಬಂದದ್ದು. ಇಲ್ಲಿ ಪುರುಷಾನುಕ್ರಮವಾಗಿ ವಂಶಪಾರಂಪರ್ಯವಾಗಿ ಗಳಿಸಿದ ಸಂಪತ್ತು ತುಂಬಿದೆ; ನಾವು ಬಿಟ್ಟು ಹೊರಟುಹೋದರೆ ಕಳ್ಳರು ಬಿದ್ದು ಎಲ್ಲಾ ಹೋಗುವುದು.

ಕಲ್ಯಾಣಿ—ಕಳ್ಳರು ಬಿದ್ದು ದೋಚಿಕೊಂಡು ಹೋಗುವುದಾದರೆ ನಾವಿಬ್ಬರು ಇದ್ದು ತಪ್ಪಿಸುವುದಕ್ಕಾದೀತೆ? ಪ್ರಾಣವೇ ಹೋದರೆ ಐಶ್ವರ್ಯವನ್ನು ಅನುಭವಿಸುವವರು ಯಾರು? ಹೊರಡಿ, ಇರುವುದನ್ನು ಹೇಗೋಹಾಗೆ ಭದ್ರಪಡಿಸಿಟ್ಟು ಹೋಗೋಣ; ಪ್ರಾಣ ಉಳಿದುಕೊಂಡರೆ ಹಿಂದಿರುಗಿ ಬಂದು ಭೋಗಿಸಬಹುದು.

ಮಹೇಂದ್ರ—ನೀನು ನಡೆಯಬಲ್ಲೆಯಾ? ನಿನ್ನ ಕೈಲಾಗುವದೆ? ಬೋಯಿಗಳೆಲ್ಲ ಸತ್ತುಹೋದರು; ಬಂಡಿ ಇದ್ದರೆ ಎತ್ತು ಇಲ್ಲ; ಎತ್ತು ಇದ್ದರೆ ಬಂಡಿಯಿಲ್ಲ; ಎರಡೂ ಇದ್ದರೆ ಆಳು ಇಲ್ಲ; ಒಂದು ಇದ್ದರೆ ಮತ್ತೊಂದು ಇಲ್ಲ. ಹೊರಡುವುದಾದರೆ ನಡೆಯಲೇ ಬೇಕು.

ಕಲ್ಯಾಣಿ—ನಾನು ನಡೆಯುತ್ತೇನೆ, ನೀವೇನೂ ಯೋಚಿಸಬೇಡಿ.

ಹೀಗೆ ಹೇಳುತ ಕಲ್ಯಾಣಿಯು ಮನಸ್ಸಿನಲ್ಲಿ ನಡೆಯಲಾರದೆಹೋದರೆ ದಾರಿಯಲ್ಲಿಯೇ ಪ್ರಾಣವನ್ನು ಬಿಟ್ಟುಬಿಡುತ್ತೇನೆ. ನೀವಿಬ್ಬರಾದರೂ ಪ್ರಾಣದಿಂದುಳಿದುಕೊಳ್ಳುವಿರಿ ಎಂದೆಂದುಕೊಂಡಳು.

ಮರುದಿನ ಪ್ರಾತಃಕಾಲದಲ್ಲಿ ಇಬ್ಬರೂ ಸ್ವಲ್ಪ ಹಣವನ್ನು ತೆಗೆದುಕೊಂಡು ಮನೆಗೆ ಬೀಗಹಾಕಿಕೊಂಡು ದನಕರುಗಳನ್ನು ಬಿಚ್ಚಿ ಹೊರಕ್ಕೆ ಅಟ್ಟಿಬಿಟ್ಟು, ಮಗುವನ್ನು ಕಂಕುಳಲ್ಲೆತ್ತಿಕೊಂಡು ರಾಜಧಾನಿಗೆ ಪ್ರಯಾಣವಾಗಿ ಹೊರಟರು. ಹೊರಡುವಾಗ ಮಹೇಂದ್ರನು ಕೆಟ್ಟದಾರಿ, ಹಜ್ಜೆ ಹಜ್ಜೆಗೂ ದರೋಡೆ ಅವಾಂತರ, ಬರೀಕೈಲಿ ಹೋಗುವುದು ಸರಿಯಲ್ಲವೆಂದು ಹೇಳಿ, ಮನೆಗೆ ಹೋಗಿ ಬಂದೂಕು ಮದ್ದು ಗುಂಡುಗಳನ್ನು ತೆಗೆದುಕೊಂಡು ಬಂದನು.

ಇದನ್ನು ನೋಡಿ ಕಲ್ಯಾಣಿಯು ಗಂಡನನ್ನು ಕುರಿತು ಕೈಲಿ ಆಯುಧವಿರುವುದು ಒಳ್ಳೆಯದು, ಜ್ಞಾಪಿಸಿದ್ದು ಒಳ್ಳೆಯದಾಯಿತು. ಸುಕುಮಾರಿಯನ್ನು ಸ್ವಲ್ಪ ಎತ್ತಿಕೊಂಡರೆ ನಾನೂ ಹೋಗಿ ಬಂದು ಆಯುಧವನ್ನು ಸಂಗಡ ತರುತ್ತೇನೆ, ಕೈಲಿ ಇರುವುದು ವಾಸಿ ಎಂದು ಹೇಳಿ ಮಗುವನ್ನು ಗಂಡನ ಕೈಯಲ್ಲಿ ಕೊಟ್ಟು ಮನೆಯೊಳಗೆ ಹೋದಳು.

ಮಹೇಂದ್ರನು ನೀನು ಮತ್ತಾವ ಆಯುಧವನ್ನು ತರುವೆ? ಎಂದನು.

ಮನೆಯೊಳಗೆ ಹೋಗಿ ಕಲ್ಯಾಣಿಯು ಒಂದು ಭರಣಿಯನ್ನು ಮಡಲಿನಲ್ಲಿ ಮುಚ್ಚಿಟ್ಟುಕೊಂಡು ಬಂದಳು. ಅವಳು ಏನಾದರೂ ಕಷ್ಟಕಾಲ ಬಂದರೆ ಇರಲೆಂದು ಯೋಚಿಸಿ ಒಂದು ಭರಣಿಯ ತುಂಬ ವಿಷವನ್ನು ಸಂಗ್ರಹವಮಾಡಿಟ್ಟುಕೊಂಡಿದ್ದಳು.

ಒಳ್ಳೆಯ ಜ್ಯೇಷ್ಠಮಾಸ, ಮಹತ್ತರವಾದ ಬಿಸಿಲಿನ ದಗೆಯಿಂದ ಭೂಮಿಯು ಕಾದು ಅಗ್ನಿಮಯವಾದ ವಾಯುವು ಬೀಸುತ್ತಿದ್ದಿತು. ಆಕಾಶವು ಕೆಂಡದ ಹಾಗೆ ಕಾದ ತಾಮ್ರದ ತಗಡಾಗಿ ಉಗುಳುವ ಉಗುಳು ಕಿಡಿಕೆಂಡವಾಗಿದ್ದಿತು. ರಸ್ತೆಯಲ್ಲಿ ಧೂಳಿನಮೇಲೆ ಕಾಲಿಟ್ಟರೆ ಗುಳ್ಳೆಯೇಳುತಲಿದ್ದಿತು. ಕಲ್ಯಾಣಿಯು ಬೆವರಿ ಬೆವರಿ ನೀರಾಗಿ ಅಲ್ಲಲ್ಲಿ ಸಿಕ್ಕಿದ ಈಚಲು ಜಾಲಿ ಗಿಡಗಳ ನೆರಳಿನಲ್ಲಿ ಕೂತುಕೊಳ್ಳುತ್ತ ಒಣಗಿಹೋದ ಕೊಳಗಳಲ್ಲಿ ಸಿಕ್ಕಿದಷ್ಟು ಕೊಚ್ಚೆ ನೀರು ಕುಡಿಯುತ್ತ ಎಷ್ಟೋ ಕಷ್ಟದಿಂದ ನಡೆದಳು. ಮಗುವು ಮಹೇಂದ್ರನ ಕಂಕುಳಲ್ಲಿತ್ತು. ಅವನದಕ್ಕೆ ಗಾಳಿ ಬೀಸುತ್ತ ಎತ್ತಿಕೊಂಡು ಬರುತ್ತಿದ್ದನು. ರಸ್ತೆಯಲ್ಲಿ ಸಿಕ್ಕಿದ ಶ್ಯಾಮಲವಾದ ಪತ್ರದಿಂದ ಶೋಭಿಸುತ ಸುಗಂಧಕುಸುಮಯುಕ್ತವಾದ ಲತಾವೇಷ್ಟಿತವಾದ ಒಂದು ವೃಕ್ಷಛಾಯೆಯಲ್ಲಿ ಅವರಿಬ್ಬರೂ ಕುಳಿತುಕೊಂಡು ವಿಶ್ರಮಿಸಿಕೊಂಡರು. ಮಹೇಂದ್ರನು ಕಲ್ಯಾಣಿಯ ಶ್ರಮಸಹನವನ್ನು ನೋಡಿ ವಿಸ್ಮಿತನಾಗಿ ಬಟ್ಟೆಯನ್ನು ಒದ್ದೆಮಾಡಿಕೊಂಡು ಬಂದು ಕಲ್ಯಾಣಿಯ ಮುಖದ ಮೇಲೂ ಕಾಲಿನಮೇಲೂ ನೀರು ಹಿಂಡಿ ಚಿಮುಕಿಸಿದನು.

ಕಲ್ಯಾಣಿಗೆ ತಾಪವು ಸ್ವಲ್ಪ ಕಡಿಮೆಯಾಯಿತು. ಆದರೆ ಗಂಡಹೆಂಡಿರಿಬ್ಬರೂ ಹಸಿವಿನಿಂದ ಬಳಲಿದರು. ಅವರು ಹೇಗಾದರೂ ಸಹಿಸಿಕೊಳ್ಳುವರು. ಮಗುವೋ, ಅದು ಹಸಿವು ಬಾಯಾರಿಕೆಯನ್ನು ತಡದೀತೆ? ಅದಕ್ಕೋಸ್ಕರ ಎಲ್ಲಾದರೂ ಊರು ಸೇರಬೇಕೆಂದು ಹೇಳಿ ಮುಂದೆ ಪ್ರಯಾಣವನ್ನು ಸಾಗಿಸಿದರು. ಆ ಅಗ್ನಿ ತರಂಗದಲ್ಲಿ ಮೆಲ್ಲಮೆಲ್ಲನೆ ನಡೆದುಹೋಗುತ್ತ ಸಾಯಂಕಾಲಕ್ಕೆ ಮೊದಲೇ ಒಂದು ಹಳ್ಳಿಯನ್ನು ಸೇರಿದರು. ಮಹೇಂದ್ರನು ಹಳ್ಳಿಗೆ ಹೋದಕೂಡಲೆ ತಣ್ಣೀರನ್ನು ತಂದು, ಹೆಂಡತಿಗೂ ಮಗುವಿಗೂ ಕೊಟ್ಟು ಏನಾದರೂ ಆಹಾರವನ್ನು ಕೊಡಬೇಕೆಂದು ಯೋಚಿಸಿಕೊಂಡಿದ್ದನು. ಆದರೆ ಸಿಕ್ಕುವುದು ಹೇಗೆ? ಹಳ್ಳಿಯಲ್ಲಿ ನರಪ್ರಾಣಿಯಿಲ್ಲ. ದೊಡ್ಡ ದೊಡ್ಡ ಮನೆಗಳೇನೋ ಇರುವುವು. ಮನೆಯವರೆಲ್ಲ ಎಲ್ಲಿಯೋ ಪಲಾಯನ. ಮಹೇಂದ್ರನು ಅಲ್ಲಲ್ಲಿ ಹುಡುಕಿದನು. ಪ್ರಯೋಜನವಿಲ್ಲವಾಯಿತು. ಕಡೆಗೆ ಹೆಂಡತಿಯನ್ನೂ ಮಗುವನ್ನೂ ಒಂದು ಮನೆಯಲ್ಲಿಟ್ಟು, ಹೊರಗೆ ಹೋಗಿ, ಗಟ್ಟಿಯಾಗಿ ಕೂಗು ಹಾಕಿದನು. ಯಾರೂ ಉತ್ತರವನ್ನೇ ಕೊಡಲಿಲ್ಲ. ಅಲ್ಲಿಂದ ಬಂದು ಕಲ್ಯಾಣಿಯನ್ನು ಕುರಿತು, ನೀನು ಕೊಂಚ ಧೈರ್ಯಮಾಡಿ ಇಲ್ಲಿದ್ದರೆ ಊರಲ್ಲಿ ಶ್ರೀಕೃಷ್ಣನ

ಕೃಪೆಯಿಂದ ಹಸುಗಳಿದ್ದರೆ ಹಾಲು ತರುವೆನೆಂದು ಹೇಳಿ, ಒಂದು ಮಣ್ಣು ಚಟ್ಟಿಯನ್ನು ತೆಗೆದುಕೊಂಡು ಹೋದನು. ಮಣ್ಣು ಗಡಿಗೆಗಳು ಅನೇಕ ಬಿದ್ದಿದ್ದುವು.

---

## ಎರಡನೆಯ ಪರಿಚ್ಛೇದ

ಮಹೇಂದ್ರನು ಹೊರಟುಹೋದನು. ಕಲ್ಯಾಣಿಯು ಮಗುವನ್ನು ಇಟ್ಟು ಕೊಂಡು ಒಬ್ಬಳೇ ಬೆಳಕಿಲ್ಲದ ಜನಶೂನ್ಯವಾದ ಆ ಮನೆಯಲ್ಲಿ ನಾಲ್ಕು ದಿಕ್ಕೂ ನೋಡಿಕೊಂಡು ಕುಳಿತಿದ್ದಳು. ಅವಳಿಗೆ ಬಹಳ ಭಯವಾಯಿತು. ಎಲ್ಲಿ ನೋಡಿದರೂ ಒಬ್ಬರೂ ಇಲ್ಲ. ಮನುಷ್ಯರ ಶಬ್ದವೇ ಇಲ್ಲ. ಬರೀ ನಾಯಿ ನರಿಗಳ ಕೂಗು ಹೊರತು ಮತ್ತೆ ಬೇರೆ ಇಲ್ಲ. ಮನಸ್ಸಿನಲ್ಲಿ ಅವರನ್ನು ಏತಕ್ಕೆ ಕಳುಹಿಸಿಬಿಟ್ಟೆನೋ, ಹಸಿವಾದರೂ ತಡೆಯಬಹುದಾಗಿದ್ದಿತು, ಇನ್ನೇನು ಮಾಡೋಣ, ನಾಲ್ಕು ಕಡೆಯೂ ಬಾಗಿಲು ಹಾಕಿಕೊಂಡು ಕುಳಿತಿರೋಣವೆಂದು ಯೋಚಿಸಿ ಬಾಗಿಲು ಹಾಕುವುದಕ್ಕೆ ಹೋಗಿ ನೋಡಲಾಗಿ, ಬಾಗಿಲಿಗೆ ಕದ ಅಗಣಿ ಚಿಲಕ ಯಾವವೂ ಇರಲಿಲ್ಲ. ಉಪಾಯವಿಲ್ಲದೆ ಹಾಗೆಯೇ ಸಿರೀಕ್ಷಿಸಿಕೊಂಡು ಕುಳಿತಿದ್ದಳು. ಇದ್ದಕ್ಕಿದ್ದಹಾಗೆ ಮುಂಬಾಗಿಲಿನಲ್ಲಿ ಏನೋ ಒಂದು ನೆಳಲಿನ ಹಾಗೆ ಕಣ್ಣಿಗೆ ಬಿದ್ದಿತು. ಮನುಷ್ಯಾಕೃತಿಯ ಹಾಗೆ ತೋರಿತು, ಆದರೆ ಮನುಷ್ಯ ನೆಂದು ಬೋಧೆಯಾಗಲಿಲ್ಲ. ಅತಿ ಶುಷ್ಕವಾಗಿ, ಶೀರ್ಣವಾಗಿ ಅತ್ಯಂತ ಕಪ್ಪಾದ ವರ್ಣವುಳ್ಳ ನಿರ್ವಾಣವಾಗಿ ವಿಕಟಾಕಾರವುಳ್ಳ ಮನುಷ್ಯನಂತೆ ಏನೋ ಒಂದು ಬಂದು ನಿಂತುಕೊಂಡಿತು. ಸ್ವಲ್ಪಹೊತ್ತಿನಮೇಲೆ ಆ ಛಾಯಸ್ವರೂಪವು ಕೈಯನ್ನು ಮೇಲಕ್ಕೆತ್ತಿ ಅಸ್ಥಿ ಚರ್ಮಾವಶಿಷ್ಟವಾದ, ಅತಿ ದೀರ್ಘವಾದ, ಶುಷ್ಕ ಹಸ್ತದ ಉದ್ದವಾದ ಒಣಗಿಹೋದ ಬೆರಳಿನಿಂದ ಯಾರನ್ನೋ ಸನ್ನೆಮಾಡಿ ಕರೆಯಿತು. ಅದನ್ನು ನೋಡಿ ಕಲ್ಯಾಣಿಗೆ ಪ್ರಾಣವೇ ಹೋದಹಾಗಾಯಿತು. ಆಗ ಅಂತಹ ಸ್ವರೂಪದ ಇನ್ನೊಂದು ಛಾಯೆಯು—ಶುಷ್ಕವಾದ, ಕೃಷ್ಣವರ್ಣ ವುಳ್ಳ ನಿರ್ವಾಣವಾದದ್ದು ಬಂದು—ಮೊದಲು ಬಂದ ಛಾಯೆಯ ಪಾರ್ಶ್ವದಲ್ಲಿ ನಿಂತಿತು—ಅದರ ಮೇಲೆ ಮತ್ತೊಂದು ಬಂದಿತು. ಇದಾದಮೇಲೆ ಇನ್ನೊಂದು ಬಂದಿತು. ಅವು ಮೆಲ್ಲಮೆಲ್ಲನೆ ನಿಶ್ಶಬ್ದವಾಗಿ ಮನೆಯೊಳಗೆ ಪ್ರವೇಶ ಮಾಡಿದವು. ಆ ಬೆಳಕಿಲ್ಲದ ಮನೆಯು ನಿಶೀಥದಲ್ಲಿ ಸ್ಮಶಾನದಹಾಗೆ ಭಯಂಕರವಾಗುತ ಬಂದಿತು. ಆಗ ಆ ಪ್ರೇತಗಳಹಾಗಿದ್ದ ಮೂರ್ತಿಗಳು ಕಲ್ಯಾಣಿಯನ್ನು ಅವಳ ಮಗಳನ್ನು ಸುತ್ತಿಕೊಂಡು ನಿಂತವು. ಕಲ್ಯಾಣಿಯು ಮೂರ್ಛೆಹೋದಳು. ಆ ಕೃಷ್ಣವರ್ಣವುಳ್ಳ ಶೀರ್ಣವಾದ ಜನಗಳು ಕಲ್ಯಾಣಿಯನ್ನು ಅವಳ ಮಗಳನ್ನು ಎತ್ತಿಕೊಂಡು ಬಾಗಲಿಗೆ ತಂದು ಅಲ್ಲಿಂದ ಹೊರಟು ಹೊಲಗಳ ಮೇಲೆ ಬಿದ್ದು ಒಂದು ಅರಣ್ಯವನ್ನು ಪ್ರವೇಶಮಾಡಿದರು.

ಸ್ವಲ್ಪಹೊತ್ತಿನಮೇಲೆ ಮಹೇಂದ್ರನು ಮಡಕೆಯಲ್ಲಿ ಹಾಲು ತೆಗೆದುಕೊಂಡು ಬಂದು ನೋಡಲಾಗಿ ಕಲ್ಯಾಣಿಯು ಇರಲಿಲ್ಲ. ಅಲ್ಲಲ್ಲಿ ಹುಡುಕಿದನು. ಮಗಳ ಹೆಸರನ್ನು ಹಿಡಿದು ಕೂಗಿದನು. ಕಡೆಗೆ ಹೆಂಡತಿಯ ಹೆಸರನ್ನು ಹಿಡಿದು ಕೂಗಿದನು. ಏನೂ ಪ್ರತ್ಯುತ್ತರ ಬರಲಿಲ್ಲ. ಯಾವುದೂ ಗೊತ್ತಾಗಲಿಲ್ಲ.

---

## ಮೂರನೆಯ ಪರಿಚ್ಛೇದ

ಕಳ್ಳರು ಕಲ್ಯಾಣಿಯನ್ನು ತೆಗೆದುಕೊಂಡು ಹೋಗಿ ಇಟ್ಟ ವನವು ಅತ್ಯಂತ ಮನೋಹರವಾಗಿದ್ದಿತು. ಬೆಳಕು ಬರುವುದಕ್ಕೆ ಸಹ ಅವಕಾಶವಿಲ್ಲದೆ ದಟ್ಟವಾಗಿದ್ದಿತು. ಅದರ ಸೌಂದರ್ಯ, ಶೋಭಾಕಾಂತಿಯನ್ನು ನೋಡುವದಕ್ಕೆ ನೂರು ಕಣ್ಣು ಸಾಲದು. ದರಿದ್ರನ ಹೃದಯಾಂತರ್ಗತವಾದ ಸೌಂದರ್ಯದಂತೆ ಆ ಅರಣ್ಯದ ಸೌಂದರ್ಯವು ಅದೃಷ್ಟವಾಗಿದ್ದಿತು; ಕಂಡವರೇ ಇಲ್ಲ. ಊರುಗಳಲ್ಲಿ ದವಸ ಧಾನ್ಯಗಳು ಇಲ್ಲದಿದ್ದರೂ, ವನದಲ್ಲಿ ಮಾತ್ರ ಪುಷ್ಪಗಳಿದ್ದೇ ಇರುವುವು. ಪುಷ್ಪಗಳ ಸುಗಂಧದಿಂದ ಆ ಅಂಧಕಾರವು ಸಹ ಬೆಳಕಾದಹಾಗೆ ಕಾಣುತಲಿದ್ದಿತು. ಕಳ್ಳರು ಕಲ್ಯಾಣಿಯನ್ನೂ ಅವಳ ಮಗುವನ್ನೂ ಸಹ ಚಿಕ್ಕ ಗರಿಕೆಯು ಕೋಮಲವಾಗಿ ಬೆಳೆದಿದ್ದೊಂದು ಭೂಖಂಡ ಮಧ್ಯದಲ್ಲಿ ಮಲಗಿಸಿ, ಅವರೆಲ್ಲರೂ ತಾಯಿ ಮಗುವಿನ ಸುತ್ತಲೂ ಸುತ್ತಿಕೊಂಡು ಪರಸ್ಪರ ವಾಚಾಟಕ್ಕೆ ಪ್ರಾರಂಭಿಸಿದರು. ಕೆಲವರು ಇವಳನ್ನು ತೆಗೆದುಕೊಂಡು ಹೋಗಿ, ಏನು ಮಾಡಬೇಕು? ಇವಳ ಹತ್ತಿರ ಇದ್ದ ಆಭರಣಗಳನ್ನೆಲ್ಲ ಮೊದಲೇ ತೆಗೆದುಕೊಂಡಿದ್ದಾಯಿತೆಂದರು. ಮತ್ತೆ ಕೆಲವರು ಅದನ್ನೆಲ್ಲ ಪಾಲುಮಾಡಬೇಕೆಂದರು. ಪಾಲು ಮಾಡಿಕೊಂಡಾಯಿತು. ಒಬ್ಬ ಕಳ್ಳನು, ಬೆಳ್ಳಿ ಬಂಗಾರವನ್ನು ತೆಗೆದುಕೊಂಡೇನುಮಾಡಲಿ? ಒಂದು ಬತವೆ ಕೊಟ್ಟರೂ ಯಾರೂ ಒಂದು ಹಿಡಿ ಅಕ್ಕಿಯನ್ನು ಹಾಕರು. ಹಸಿವಿನಿಂದ ಪ್ರಾಣ ಹೋಗುತ್ತೆ, ಈ ಹೊತ್ತು ಶುದ್ಧವಾಗಿ ಬರೀ ಸೊಪ್ಪು ತಿಂದೆ, ನನಗೆ ಬತವೆ ಬೇಡವೆಂದನು. ಅವನ ಹಿಂದೆ ಎಲ್ಲರೂ ಅಕ್ಕಿ ಕೊಡೆಂದು ಗದ್ದಲ ಮಾಡಿದರು. ಮಾತುಮಾತಿನಮೇಲೆ ಬೈಗಳಿಗೆ ಪ್ರಾರಂಭವಾಯಿತು. ಅವರ ಯಜಮಾನನು, ಎಲ್ಲರಿಗೂ ಸಮಾಧಾನ ಹೇಳಿದನು. ಆದರೆ ಯಾರೂ ಸಮಾಧಾನಕ್ಕೆ ಬರಲಿಲ್ಲ. ಕ್ರಮಕ್ರಮವಾಗಿ ಮಾತಿನಮೇಲೆ ಮಾತು ಬಂದು ಬೈಗಳಿಗೆ ಪ್ರಾರಂಭವಾಗಿ ಕಡೆಗೆ ಮಾರಾಮಾರಿಗೆ ಪ್ರಾರಂಭವಾಯಿತು. ಒಬ್ಬನು ತನ್ನ ಪಾಲಿಗೆ ಬಂದಿದ್ದ ಆಭರಣಗಳನ್ನೆಲ್ಲ ಗಂಟುಕಟ್ಟಿ ಯಜಮಾನನ ಮೈಮೇಲೆ ಬಲವಾಗಿ ಬಿಸಾಟನು. ಯಜಮಾನನು ಒಬ್ಬೊಬ್ಬರನ್ನು ಹೊಡೆದನು. ಆಗ ಎಲ್ಲರೂ ಒಟ್ಟಾಗಿ ದಳಪತಿಯ ಮೇಲೆ ಬಿದ್ದು ಹೊಡೆದು ಘಾಯಮಾಡಿದರು. ದಳಪತಿಯು ಆಹಾರವಿಲ್ಲದೆ ಶೀರ್ಣನಾಗಿ ಕ್ಲಿಷ್ಟನಾಗಿದ್ದ ಕಾರಣ ಮೂರು ನಾಲ್ಕು ಪೆಟ್ಟು

ಹೇಳುತ್ತಲೇ ನೆಲಕ್ಕೆ ಬಿದ್ದು ಪ್ರಾಣವನ್ನು ಬಿಟ್ಟನು. ಆಗ ಹೊಟ್ಟೆಗಿಲ್ಲದ ಕೋಪಗೊಂಡ ಜ್ಞಾನವಿಲ್ಲದ ಕಳ್ಳರಲ್ಲೊಬ್ಬನು ನರೀನಾಯಿಗಳ ಮಾಂಸವನ್ನು ಕೂಡ ಬಿಡದೆ ತಿಂದಿದ್ದೇವೆ, ಈಗ ಹಸಿವಿನಿಂದ ಪ್ರಾಣವು ಹೋಗುತ್ತಲಿದೆ, ಬನ್ನಿರೊ! ಈ ಸೂಳೇಮಗನನ್ನು ತಿಂದುಹಾಕಿಬಿಡೋಣವೆಂದನು. ಇದನ್ನು ಕೇಳಿ, ಜಯಕಾಳಿ! ಓಂಕಾಳಿ! ಎಂದು ಕಿರುಚುತ್ತ, ಈ ದಿನ ನರಮಾಂಸವನ್ನು ತಿನ್ನುತ್ತೇವೆಂದಂದುಕೊಂಡು ಆ ವಿಶೀರ್ಣವಾದ ಮಶೀಕಪ್ಪಾದ ದೇಹವನ್ನುಳ್ಳ ಪ್ರೇತಮೂರ್ತಿಗಳೆಲ್ಲರೂ ಅಂಧಕಾರದಲ್ಲಿ ಕಲಕಲ ಎಂದು ನಕ್ಕು ಚಪ್ಪಾಳಿಕ್ಕುತ್ತ ಕುಣಿದಾಡುವುದಕ್ಕಾರಂಭಿಸಿದರು. ದಳಪತಿಯು ದೇಹವನ್ನು ಸುಡುವುದಕ್ಕೆ ಚಿತೆಯನ್ನು ಮಾಡಲು ಒಬ್ಬನು ಪ್ರವರ್ತಿಸಿದನು. ಒಣಗಿದ ಬಳ್ಳಿ ಕಡ್ಡಿ ಕಸ ತಂದು ಚಕ್ಕಮುಕ್ಕಿ ಹೊಡೆದು ಚಿತೆಯನ್ನು ಮಾಡಿದನು. ಚಿತೆಯು ಹತ್ತಿಕೊಂಡಹಾಗೆಲ್ಲ, ನಾಲ್ಕು ಕಡೆಯಲ್ಲಿಯೂ ಇದ್ದ ಮಾವು, ನೇರಳೆ, ಹಲಸು, ತಾಲ, ತಿಂತಿಡೀ, ಖರ್ಜೂರ ಮುಂತಾದ ಶ್ಯಾಮಲ ಪಲ್ಲವರಾಜಿಯು ಅಲ್ಪ ಅಲ್ಪವಾಗಿ ಪ್ರಭಾಸಿತವಾಯಿತು. ಒಂದೊಂದು ಕಡೆಯಲ್ಲಿ ಒಣಗಿದ ಹುಲ್ಲು, ಎಲೆ ಹತ್ತಿಕೊಂಡು ಬೆಳಕಾಯಿತು. ಒಂದೊಂದು ಕಡೆಯಲ್ಲಿ ಅಂಧಕಾರವು ಮತ್ತಷ್ಟು ಗಾಢವಾಯಿತು. ಚಿತೆಯು ಸಿದ್ಧವಾಯಿತು. ಒಬ್ಬನು ಆ ನಿರ್ಜೀವವಾದ ದೇಹವನ್ನು ಕಾಲುಹಿಡಿದೆಳೆದುಕೊಂಡು ಬಂದು ಚಿತೆಯಲ್ಲಿ ಹಾಕಿ ಸುಡುವುದಕ್ಕೆ ಪ್ರಯತ್ನಪಟ್ಟನು. ಮತ್ತೊಬ್ಬನು, ನಿಲ್ಲು ನಿಲ್ಲು! ಈ ದಿನ ಮಹಾ ಮಾಂಸವನ್ನೇ ತಿಂದು ಪ್ರಾಣವನ್ನು ಉಳಿಸಿಕೊಳ್ಳುವ ಸಂದರ್ಭದಲ್ಲಿ ಈ ಮುದಿಗೊಡ್ಡಿನ ಒಣಮಾಂಸವನ್ನೇತಕ್ಕೆ ತಿನ್ನಬೇಕು? ಈ ಹೊತ್ತು ನಾವು ಲೂಟಿಮಾಡಿಕೊಂಡು ಬಂದಿರುವುದರ ಮಾಂಸವನ್ನು ತಿನ್ನೋಣವೆಂದನು. ಮತ್ತೊಬ್ಬನು ಯಾವುದಾದರೂ ಆಗಲಿ, ಹಸಿವನ್ನ ತಡೆಯಲಾರೆನೆಂದನು. ಆಗ ಎಲ್ಲರೂ ಲೋಲುಪರಾಗಿ ಕಲ್ಯಾಣಿಯೂ ಅವಳ ಮಗುವೂ ಮಲಗಿದ್ದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ತಾಯಿಯೂ ಇರಲಿಲ್ಲ, ಮಗುವೂ ಇರಲಿಲ್ಲ. ಕಳ್ಳರು ಪರಸ್ಪರ ಜಗಳವಾಡುತ್ತಿದ್ದಾಗ ಕಲ್ಯಾಣಿಯು ಮಗುವನ್ನೆತ್ತಿಕೊಂಡು ಅದಕ್ಕೆ ಸ್ತನ್ಯವನ್ನು ಕೊಡುತ ವನಮಧ್ಯದಲ್ಲಿ ಓಡಿಹೋಗಿದ್ದಳು. ಶಿಕಾರಿಯು ಓಡಿಹೋಯಿತು, ಹೊಡಿ, ಬಡಿ, ಕಡಿ ಎಂದಂದುಕೊಂಡು ಆ ಪ್ರೇತಮೂರ್ತಿಗಳಾದ ಕಳ್ಳರು ನಾಲ್ಕು ದಿಕ್ಕಿಗೂ ಓಡಿದರು. ಅವಸ್ಥಾವಿಶೇಷದಲ್ಲಿ ಮನುಷ್ಯನು ಅರಣ್ಯದ ಹಿಂಸ್ರ ಜಂತುವೇ ಹೊರತು ಮತ್ತೆ ಬೇರೆ ಅಲ್ಲವು.

---

# ನಾಲ್ಕನೆಯ ಪರಿಚ್ಛೇದ

ಅರಣ್ಯವು ಅತ್ಯಂತ ಅಂಧಕಾರಮಯ, ಅದರಲ್ಲಿ ಕಲ್ಯಾಣಿಗೆ ಮಾರ್ಗ ಸಿಕ್ಕಲಿಲ್ಲ. ವೃಕ್ಷಲತಾಕಂಟಕಾದಿಗಳು ಅತ್ಯಂತ ಒತ್ತಾಗಿ ಬೆಳದಿದ್ದುದರಿಂದ ಅದರಲ್ಲಿ ಮಾರ್ಗವೊಂದೂ ಇಲ್ಲ; ಅದರಲ್ಲಿಯೂ ಗಾಢಾಂಧಕಾರ. ಕಲ್ಯಾಣಿಯು ವೃಕ್ಷಲತಾಕಂಟಕಗಳನ್ನು ಭೇದಿಸಿಕೊಂಡು ವನಮಧ್ಯದಲ್ಲಿ ಪ್ರವೇಶಮಾಡಿದಳು. ಮಗುವಿನ ಮೈಯಲ್ಲಿ ಮುಳ್ಳುಗಳು ಚುಚ್ಚಿಕೊಂಡು ಮಧ್ಯೆ ಮಧ್ಯೆ ಅಳುವುದಕ್ಕೆ ತೊಡಗಿತು. ಇದನ್ನು ಕೇಳಿ ಕಳ್ಳರು ಮತ್ತಷ್ಟು ಗದ್ದಲ ಮಾಡಲಾರಂಭಿಸಿದರು. ಕಲ್ಯಾಣಿಯು ಉಪಾಯಾಂತರವಿಲ್ಲದೆ ಮೈಯಲ್ಲಿ ರಕ್ತ ಸುರಿಸಿಕೊಳ್ಳುತ್ತ ವನದಲ್ಲಿ ಬಹಳ ದೂರ ಪ್ರವೇಶಮಾಡಿಬಿಟ್ಟಳು. ಸ್ವಲ್ಪಹೊತ್ತಿನಮೇಲೆ ಚಂದ್ರೋದಯವಾಯಿತು. ಇದುವರೆಗೆ ಕಲ್ಯಾಣಿಯು ಕತ್ತಲೆಯಲ್ಲಿ ಎಲ್ಲಾದರೂ ಕಳ್ಳರ ಕೈಗೆ ಸಿಕ್ಕದಹಾಗೆ ಅವಿತುಕೊಳ್ಳಬಹುದಾಗಿತ್ತೆಂಬ ಭರವಸೆಯುಳ್ಳವಳಾಗಿದ್ದಳು. ಚಂದ್ರೋದಯವಾದ ಮೇಲೆ ಆ ಭರವಸೆಯು ಹೋಯಿತು. ಚಂದ್ರನು ಆಕಾಶದಲ್ಲಿ ಏರಿದ ಹಾಗೆ ಬೆಳದಿಂಗಳು ಮರಗಳ ತಲೆಯಮೇಲೆ ಬಿದ್ದಿತು—ಕೆಳಗೆ ಅಂಧಕಾರ—ಸ್ವಲ್ಪಹೊತ್ತಿನಲ್ಲೇ ಕೆಳಗೂ ಬೆಳಕಾಯಿತು. ಅಲ್ಲಲ್ಲಿ ಎಲೆಗಳ ಸಂದುಗಳಿಂದ ಬೆಳಕು ವನಮಧ್ಯದಲ್ಲಿ ಇಣಿಕಿಣಿಕಿ ನೋಡುತ್ತ ಪ್ರವೇಶಮಾಡಿತು. ಚಂದ್ರನು ಮೇಲಕ್ಕೆ ಬಂದ ಹಾಗೆ ವನಮಧ್ಯದಲ್ಲಿ ಬೆಳಕು ಹೆಚ್ಚಾಗುತ್ತ ಬಂದು ಕತ್ತಲೆಯು ಮತ್ತೆಲ್ಲಿಯೋ ವನದಲ್ಲಿ ಅವಿತುಕೊಂಡಿತು. ಕಲ್ಯಾಣಿಯು ಮಗುವನ್ನು ಎತ್ತಿಕೊಂಡು ನಿಬಿಡವಾದ ವನಕ್ಕೆ ಹೋಗಿ ಅಲ್ಲಿ ಕತ್ತಲೆಯಲ್ಲಿ ಮರೆಮಾಡಿಕೊಳ್ಳಲುದ್ಯುಕ್ತಳಾದಳು. ಆಗ ಕಳ್ಳರು ಹೆಚ್ಚು ಚೀತ್ಕಾರ ಮಾಡುತ ನಾಲ್ಕು ದಿಕ್ಕುಗಳಿಂದಲೂ ಬರುತಲಿದ್ದರು. ಮಗುವಿಗೆ ವಿಶೇಷ ಭಯ ಉಂಟಾಗಿ ಗಟ್ಟಿಯಾಗಿ ಅಳುವದಕ್ಕೆ ತೊಡಗಿತು. ಆಗ ಕಲ್ಯಾಣಿಯು ನಿರಸ್ತಳಾಗಿ ಮುಂದೆ ಓಡಿಹೋಗುವುದಕ್ಕೆ ಪ್ರಯತ್ನಪಡಲಿಲ್ಲ. ಒಂದು ದೊಡ್ಡದಾದ ಮರದ ಬುಡದಲ್ಲಿ ಮುಳ್ಳು ಇಲ್ಲದೆ ಹುಲ್ಲು ಬೆಳದಿದ್ದ ಸ್ಥಳದಲ್ಲಿ ಕುಳಿತು ತೊಡೆಯಮೇಲೆ ಮಗುವನ್ನು ಮಲಗಿಸಿಕೊಂಡು, ದೇವರೆ! ನೀನೆಲ್ಲಿ! ಯಾರನ್ನು ನಾನು ನಿತ್ಯದಲ್ಲಿಯೂ ಪೂಜಿಸುತ್ತೇನೋ, ಯಾರಿಗೆ ನಿತ್ಯವು ನಮಸ್ಕಾರ ಮಾಡುತ್ತೇನೊ, ಯಾರ ಬಲದಮೇಲೆ ಈ ವನಮಧ್ಯದಲ್ಲಿ ಪ್ರವೇಶಮಾಡಿ ಬರಲು ಸಮರ್ಥಳಾದೆನೋ ಆ ಮಧುಸೂದನ! ನೀನೆಲ್ಲಿ! ಹಾ! ಮಧುಸೂದನ! ಹಾ! ಕೃಷ್ಣ! ನೀನೆಲ್ಲಿ! ಎಂದು ಹಾರೈಸುತಲಿದ್ದಳು. ಆ ಸಮಯದಲ್ಲಿ ಭಯದಿಂದಲೂ, ಭಕ್ತಿಯ ಪ್ರಗಾಢತೆಯಿಂದಲೂ ಹೊಟ್ಟೆಯಲ್ಲಿ ಅನ್ನರಸವಿಲ್ಲದ ಸಂಕಟದಿಂದಲೂ ಕಲ್ಯಾಣಿಯು ಕ್ರಮೇಣ ಬಾಹ್ಯಜ್ಞಾನ ಶೂನ್ಯಳಾಗಿ ಅಂತಃಕರಣ ಶುದ್ಧಿಯಿಂದ ಅಂತರ್ಸ್ವದಲ್ಲಿ ಚೈತನ್ಯಮಯಳಾಗಿ ಅಂತರಿಕ್ಷದಲ್ಲಿ ಏನೋ ಒಂದು ದಿವ್ಯವಾದ ಸ್ವರದಿಂದ ಹಾಡುತಲಿದ್ದ ಸಂಗೀತವನ್ನು ಕೇಳಿದಳೇನಂದರೆ—

ಹರೆ ಮುರಾರೆ ಮಧುಕೈಟಭಾರೆ।
ಗೋಪಾಲ ಗೋವಿಂದ ಮುಕುಂದಶೌರೆ ॥
ಹರೆ ಮುರಾರೆ ಮಧುಕೈಟಭಾರೆ।

ಕಲ್ಯಾಣಿಯು ಬಾಲ್ಯದಿಂದಲೂ ಪುರಾಣಗಳಲ್ಲಿ, ದೇವರ್ಷಿಯು ಗಗನ ಮಾರ್ಗದಲ್ಲಿ ವೀಣಾಹಸ್ತನಾಗಿ ಹರಿನಾಮವನ್ನು ಹಾಡುತ ಹಾಡುತ ಪ್ರಪಂಚಗಳನ್ನೆಲ್ಲಾ ಸಂಚರಿಸುವನೆಂದು ಕೇಳಿದ್ದಳು. ಆ ಭಾವನೇ ಅವಳ ಮನಸ್ಸಿನಲ್ಲಿ ಜಾಗರಿತವಾಗುತ ಬಂದಿತು. ಅವಳು ಮನಸ್ಸಿನಲ್ಲಿಯೇ, ಶುಭ್ರ ಶರೀರ, ಶುಭ್ರ ಕೇಶ, ಶುಭ್ರ ಶ್ಮಶ್ರು, ಶುಭ್ರ ವಸನ, ಮಹಾಶರೀರವುಳ್ಳಾ ಮಹಾಮುನಿಯೇ ವೀಣಾಹಸ್ತನಾಗಿ ಆ ಚಂದ್ರಾಲೋಕದಿಂದ ಪ್ರದೀಪ್ತವಾದ ನೀಲಾಕಾಶ ಮಾರ್ಗದಲ್ಲಿ, ಹರೆ ಮುರಾರೆ ಮಧುಕೈಟಭಾರೆ ಎಂದು ಹಾಡುತ್ತಾನೆಂದು ಭಾವಿಸಿಕೊಂಡಳು.

ಕ್ರಮಕ್ರಮವಾಗಿ ಗೀತವು ಹತ್ತಿರದಿಂದ ಕೇಳಿಸಲಾರಂಭವಾಗಿ ಸ್ಪಷ್ಟ ಸ್ಪಷ್ಟವಾಗಿ ಕೇಳಿದಳು.

ಹರೆ ಮುರಾರೆ ಮಧುಕೈಟಭಾರೆ!

ಮತ್ತಷ್ಟು ಹತ್ತಿರವಾಗಿ ಇನ್ನೂ ಸ್ಪಷ್ಟತರವಾಗಿ ಕೇಳಿದಳು—

ಹರೆ ಮುರಾರೆ ಮಧುಕೈಟಭಾರೆ।

ಕಡೆಗೆ ಕಲ್ಯಾಣಿಯ ತಲೆಯಮೇಲೆ ವನಸ್ಥಲಿಯು ಪ್ರತಿಧ್ವನಿತವಾಗಿ ಸಂಗೀತವಾಯಿತು.

ಹರೆ ಮುರಾರೆ ಮಧುಕೈಟಭಾರೆ।

ಆಗ ಕಲ್ಯಾಣಿಯು ಕಣ್ಣುಗಳನ್ನು ಮುಚ್ಚಿಕೊಂಡಳು. ಆ ಅರ್ಧಸ್ಫುಟವಾದ ವನಾಂಧಕಾರದಿಂದ ಮಿಶ್ರವಾದ ಚಂದ್ರಕಿರಣದಲ್ಲಿ ಎದುರಿಗೆ ಆ ಶುಭ್ರ ಶರೀರ, ಶುಭ್ರ ಕೇಶ, ಶುಭ್ರ ಶ್ಮಶ್ರು, ಶುಭ್ರ ವಸನಧಾರಿಯಾದ ಋಷಿಮೂರ್ತಿಯನ್ನು ನೋಡಿದಳು. ಅನನ್ಯಮನಸ್ಕಳಾಗಿ ತಥಾಭೂತ ಚೇತನದಲ್ಲಿ ಪ್ರಣಾಮ ಮಾಡುವೆನೆಂದು ಭಾವಿಸಿದಳು. ಆದರೆ ಪ್ರಣಾಮವನ್ನು ಮಾಡಲಾರದೆ ತಲೆಯನ್ನು ಬೊಗ್ಗಿಸಲು ಚೇತನ ಶೂನ್ಯಳಾಗಿ ಭೂತಲಶಾಯಿನಿಯಾದಳು.

---

## ಐದನೆಯ ಪರಿಚ್ಛೇದ

ಆ ವನಮಧ್ಯದಲ್ಲಿ ಒಂದು ಪ್ರಕಾಂಡವಾದ ಭೂಖಂಡದಲ್ಲಿ ಭಗ್ನವಾದ ಶಿಲಾಖಂಡಗಳಿಂದ ಪರಿವೇಷ್ಟಿತವಾಗಿರುವ ಒಂದು ದೊಡ್ಡ ಮಠವುಂಟು. ಪುರಾತತ್ವವನ್ನು ತಿಳಿದವರು ನೋಡಿದರೆ, ಇದು ಪೂರ್ವಕಾಲದಲ್ಲಿ ಬೌದ್ಧರ ವಿಹಾರವಾಗಿದ್ದು ಅನಂತರ ಹಿಂದುಗಳ ಮಠವಾಗಿದೆ ಎಂದು ಹೇಳಬಲ್ಲರು. ಆದು

ಎರಡುಪ್ಪರಿಗೆಯುಳ್ಳದ್ದು, ಮಧ್ಯೆ ಬಹು ವಿಧವಾದ ದೇವಮಂದಿರಗಳು, ಮುಂದುಗಡೆ, ನಾಟ್ಯಶಾಲೆ—ಎಲ್ಲವೂ ಒಂದು ದೊಡ್ಡ ಕೋಟೆಯಿಂದ ಸುತ್ತುವರಿಯಲ್ಪಟ್ಟು, ಅದರ ಆಚೆ ದೊಡ್ಡ ದೊಡ್ಡ ಅನೇಕ ಮರಗಳಿಂದ ಮರೆಮಾಡಲ್ಪಟ್ಟಿರುವದರಿಂದ ಹಗಲುಹೊತ್ತಿನಲ್ಲಿಯೂ ಸಮೀಪದಿಂದಹೊರತು ಅಲ್ಲಿ ಕೋಟೆಯಿದೆ ಎಂದು ಯಾರಿಗೂ ಗೊತ್ತಾಗಲಾರದು. ಉಪ್ಪರಿಗೆಗಳು ಅನೇಕ ಸ್ಥಳದಲ್ಲಿ ಶಿಥಿಲವಾಗಿದ್ದುದು ಈಗ ಅದೆಲ್ಲ ಜೀರ್ಣೋದ್ಧಾರವಾಗಿರುವಹಾಗೆ ಕಾಣುತ್ತದೆ. ನೋಡಿದ ಮಾತ್ರದಿಂದಲೇ ಈ ಗಂಭೀರವಾದ ದುರ್ಭೇದ್ಯವಾದ ಅರಣ್ಯ ಮಧ್ಯದಲ್ಲಿಯೂ ಜನರು ವಾಸಮಾಡುತ್ತಾರೆಂದು ಗೊತ್ತಾಗುತ್ತದೆ. ಈ ಮಠದಲ್ಲಿ ಒಂದು ಕೊಟಡಿ, ಅಲ್ಲಿ ಒಂದು ದೊಡ್ಡದಾದ ದೀಪಾರ್ತಿಯು ಜ್ವಲಿಸುತಲಿರುವುದು. ಆ ಕೊಟಡಿಯಲ್ಲಿ ಕಲ್ಯಾಣಿಯು ಮೊದಲು ಚೈತನ್ಯವುಳ್ಳವಳಾಗಿ ನೋಡಲು, ಎದುರಿಗೆ ಆ ಶುಭ್ರ ಶರೀರಿಯಾದ ಶುಭ್ರ ವಸನಧಾರಿಯಾದ ಮಹಾಪುರುಷನು ಕಂಡುಬಂದನು.

ಕಲ್ಯಾಣಿಯು ವಿಸ್ಮಿತಲೋಚನಳಾಗಿ ಪುನಃ ಹಾಗೇ ದೃಷ್ಟಿಸಿ ನೋಡಿದಳು. ಅವಳಿಗೆ ಸ್ಮೃತಿಯು ಇನ್ನೂ ಸರಿಯಾಗಿ ಬಂದಿರಲಿಲ್ಲ. ಆಗ ಆ ಮಹಾಪುರುಷನು, ಅಮ್ಮಾ! ಇದು ದೇವರುಗಳು ಇರುವ ಸ್ಥಾನ, ಅನುಮಾನ ಪಟ್ಟುಕೊಳ್ಳಬೇಡ, ಸ್ವಲ್ಪ ಹಾಲು ಇದೆ, ಅದನ್ನು ಪಾನಮಾಡು, ಅನಂತರ ನಿನ್ನ ಸಂಗಡ ಮಾತನಾಡುವೆನು ಎಂದನು. ಕಲ್ಯಾಣಿಗೆ ಮೊದಲು ಏನೇನೂ ಗೊತ್ತಾಗದೆ, ಸ್ವಲ್ಪ ಹೊತ್ತಿನ ಮೇಲೆ ಕ್ರಮಕ್ರಮವಾಗಿ ಮನಸ್ಸು ಸ್ಥಿರವಾಗುತ್ತ ಬರುತ್ತಲೆ ಸೀರೆಯನ್ನು ಸರಿಮಾಡಿಕೊಂಡು ಆ ಮಹಾಪುರುಷನಿಗೆ ಪ್ರಣಾಮವನ್ನು ಮಾಡಿದಳು. ಅವನು ಸುಮಂಗಲಾಶೀರ್ವಾದವನ್ನು ಮಾಡಿ, ಬೇರೆ ಕೊಟಡಿಗೆ ಹೋಗಿ ಒಂದು ಸುಗಂಧವಾದ ಮೃತ್ಪಾತ್ರವನ್ನು ತಂದು ಅದರಲ್ಲಿ ಆ ಹಾಲನ್ನು ಕಾಸಿದನು. ಕಾದ ಹಾಲನ್ನು ಕಲ್ಯಾಣಿಗೆ ಕೊಟ್ಟು, ಅಮ್ಮಾ! ಮಗುವಿಗೆ ತುಸ ಹಾಲನ್ನು ಹಾಕಿ ನೀನೂ ತೆಗೆದುಕೊ, ಅನಂತರ ನಿನ್ನ ಸಂಗಡ ಮಾತನಾಡುವೆನೆಂದನು. ಕಲ್ಯಾಣಿಯು ಹೃಷ್ಟಚಿತ್ತಳಾಗಿ ಮಗುವಿಗೆ ಹಾಲು ಹಾಕಲಾರಂಭಿಸಿದಳು. ಆ ಮಹಾಪುರುಷನು, ನಾನು ಹೋಗಿಬರುತ್ತೇನೆ, ಚಿಂತಿಸಬೇಡ, ಭಯವೇನೂ ಇಲ್ಲವೆಂದು ಹೇಳಿ ಹೊರಟುಹೋದನು. ಸ್ವಲ್ಪ ಹೊತ್ತಿಗೆ ಪುನಃ ಬಂದು ನೋಡಲಾಗಿ, ಕಲ್ಯಾಣಿಯು ಮಗುವಿಗೆ ಹಾಲುಹಾಕಿ, ತಾನು ಮಾತ್ರ ಏನೂ ತೆಗೆದುಕೊಂಡಿರಲಿಲ್ಲವೆಂದು ಕಂಡಿತು. ಆಗ ಅವನು, ಅಮ್ಮಾ! ನೀನು ಏತಕ್ಕೆ ತೆಗೆದುಕೊಳ್ಳಲಿಲ್ಲ ನಾನು ಪುನಃ ಹೊರಗೆ ಹೋಗುತ್ತೇನೆ, ನೀನು ತೆಗೆದುಕೊಂಡು ಪೂರೈಸುವವರೆಗೂ ನಾನು ಬರುವದಿಲ್ಲವೆಂದು ಹೇಳಿ ಆ ಋಷಿ ಸಮಾನನಾದ ಪುರುಷನು ಹೊರಗೆ ಹೋಗಲುದ್ಯುಕ್ತನಾಗುತ್ತಲೇ, ಕಲ್ಯಾಣಿಯು ಅವನಿಗೆ ಪುನಃ ನಮಸ್ಕಾರಮಾಡಿ ಕೈಮುಗಿದುಕೊಂಡು ಹೇಳತೊಡಗಿದಳು. ಅಷ್ಟರೊಳಗೆ, ವನವಾಸಿಯು, ಏನು ಹೇಳುತ್ತೀ? ಎಂದನು.

ಕಲ್ಯಾಣಿಯು, ನನಗೆ ಹಾಲು ತೆಗೆದುಕೊಳ್ಳುವಂತೆ ಅಪ್ಪಣೆಮಾಡಕೂಡದು. ಒಂದು ಆತಂಕವಿದೆ, ನಾನು ತೆಗೆದುಕೊಳ್ಳಲಾರೆ ಎಂದಳು.

ಆಗ ವನವಾಸಿಯು ಅತ್ಯಂತ ಕರುಣೆಯಿಂದ, ಏನು ಆತಂಕ, ನನಗೆ ಹೇಳು, ನಾನು ವನವಾಸಿ, ಬ್ರಹ್ಮಚಾರಿ, ನೀನು ನನಗೆ ಮಗಳು, ನನಗೆ ಹೇಳಕೂಡದ್ದು ಏನೂ ಇರಲಾರದು. ನಾನು ನಿನ್ನನ್ನು ಅರಣ್ಯದಿಂದ ಕರೆತಂದಾಗ ನೀನು ಕೇವಲ ಅಜ್ಞಾನಾವಸ್ಥೆಯಲ್ಲಿದ್ದೆ, ಆಗ ನೀನು ಅತ್ಯಂತವಾಗಿ ಕ್ಷುತ್ಪಿಪಾಸಾಪೀಡಿತಳಾಗಿದ್ದಹಾಗೆ ಕಂಡಿತು. ನೀನು ಸ್ವಲ್ಪ ಹಾಲನ್ನು ತೆಗೆದುಕೊಳ್ಳದಿದ್ದರೆ ಹೇಗೆತಾನೇ ಪ್ರಾಣವುಳಿಯುವದೆಂದು ಹೇಳಿದನು.

ಆಗ ಕಲ್ಯಾಣಿಯು ಕಣ್ಣೀರು ಸುರಿಸುತ್ತಾ, ತಾವೇ ದೇವರು ತಮಗೆ ಹೇಳದೆ ಉಂಟೆ? ನನ್ನ ನಾಥನು ಇನ್ನೂ ಉಪವಾಸ. ಅವನನ್ನು ನೋಡದೆ ಅಥವಾ ಅವನು ಭೋಜನಮಾಡಿದ ಸಮಾಚಾರವನ್ನು ತಿಳಿಯದೆ ನಾನು ಹೇಗೆ ಊಟಮಾಡಲೆಂದಳು.

ಬ್ರಹ್ಮಚಾರಿಯು ನಿನ್ನ ಸ್ವಾಮಿಯು ಎಲ್ಲಿದ್ದಾನೆಂದು ಕೇಳಿದನು.

ಕಲ್ಯಾಣಿಯು, ಅದು ನನಗೆ ಗೊತ್ತಿಲ್ಲ, ಅವನು ಹಾಲು ತರುವದಕ್ಕೆ ಹೊರಟುಹೋಗುತ್ತಲೇ ಕಳ್ಳರು ನನ್ನನ್ನು ಎತ್ತಿಕೊಂಡು ಬಂದುಬಿಟ್ಟರು ಎಂದು ಹೇಳಿದಳು. ಬ್ರಹ್ಮಚಾರಿಯು ಒಂದೊಂದು ಮಾತಾಗಿ ಪ್ರಶ್ನೆಮಾಡಿ ಕಲ್ಯಾಣಿ ಮತ್ತು ಅವಳ ಸ್ವಾಮಿಯ ವೃತ್ತಾಂತವನ್ನೆಲ್ಲ ತಿಳಿದುಕೊಂಡನು. ಕಲ್ಯಾಣಿಯು ಗಂಡನ ಹೆಸರು ಹೇಳಲಿಲ್ಲ, ಹೇಳುವದು ನಿಷಿದ್ಧ; ಆದರೆ ಇನ್ನೂ ಏನೇನೋ ಪರಿಚಯವನ್ನು ಹೇಳಿದ್ದರಮೇಲೆ ಬ್ರಹ್ಮಚಾರಿಯು ತಿಳಿದುಕೊಂಡು, ನೀನು ಮಹೇಂದ್ರನ ಪತ್ನಿಯೊ? ಎಂದು ಕೇಳಿದನು. ಕಲ್ಯಾಣಿಯು ನಿರುತ್ತರಳಾಗಿ ತಲೆ ಬೊಗ್ಗಿಸಿಕೊಂಡು, ಹಾಲು ಕಾಸಿದ್ದ ಬೆಂಕಿಯಲ್ಲಿನ ಕಟ್ಟಿಗೆಯನ್ನ ಸರಿಮಾಡುತ ಸುಮ್ಮನಿದ್ದಳು. ಬ್ರಹ್ಮಚಾರಿಯು ಪ್ರಶ್ನೆಗೆ ಉತ್ತರ ಬಂತೆಂದು ತಿಳಿದು, ನಾನು ಹೇಳುವಹಾಗೆ ಮಾಡು, ಹಾಲು ತೆಗೆದುಕೊ, ನಿನ್ನ ಸ್ವಾಮಿಯ ಸಮಾಚಾರವನ್ನು ತರುತ್ತೇನೆ, ನೀನು ಹಾಲನ್ನು ತೆಗೆದುಕೊಳ್ಳದಿದ್ದರೆ ನಾನು ಹೋಗಲಾರೆನೆಂದನು. ಕಲ್ಯಾಣಿಯು, ಇಲ್ಲಿ ತುಸ ನೀರು ಸಿಕ್ಕುವದೆ ಎಂದು ಕೇಳಿದಳು. ಬ್ರಹ್ಮಚಾರಿಯು ಒಂದು ಜೊಂಬನ್ನ ತೋರಿಸಿದನು. ಕಲ್ಯಾಣಿಯು ಕೈ ಬೊಗಸೆ ಹಿಡಿದಳು. ಬ್ರಹ್ಮಚಾರಿಯು ಬೊಗಸೇ ತುಂಬ ನೀರು ಹಾಕಿದನು. ಕಲ್ಯಾಣಿಯು, ಈ ನೀರಿಗೆ ತಮ್ಮ ಪಾದರೇಣುವನ್ನು ದಯಪಾಲಿಸಿರಿ ಎಂದು ಕೇಳಿದ ಪ್ರಕಾರ ಬ್ರಹ್ಮಚಾರಿಯು ತನ್ನ ಅಂಗುಷ್ಟದಿಂದ ಜಲವನ್ನು ಸ್ಪರ್ಶಮಾಡಿದ್ದರಮೇಲೆ ಕಲ್ಯಾಣಿಯು ಆ ಜಲವನ್ನು ಪಾನಮಾಡಿ, ನಾನು ಅಮೃತವನ್ನು ಪಾನಮಾಡಿದ್ದೇನೆ, ಮತ್ತೇನನ್ನು ತೆಗೆದುಕೊಳ್ಳುವಂತೆ ಅಪ್ಪಣೆ ಕೊಡಕೂಡದು, ನನ್ನ ಸ್ವಾಮಿಯ ಸಮಾಚಾರವನ್ನು ಕೇಳದೆ ನಾನೇನೂ ತೆಗೆದುಕೊಳ್ಳಲಾರೆನೆಂದಳು.

ಬ್ರಹ್ಮಚಾರಿಯು, ನೀನು ನಿರ್ಭಯವಾಗಿ ಈ ದೇವಸ್ಥಾನದಲ್ಲಿದ್ದುಕೊಂಡಿರು, ನಾನು ನಿನ್ನ ಸ್ವಾಮಿಯನ್ನು ಹುಡುಕಿಕೊಂಡು ಬರುತ್ತೇನೆಂದನು.

---

## ಆರನೆಯ ಪರಿಚ್ಛೇದ

ರಾತ್ರಿ ಬಹಳ ಹೊತ್ತಾಗಿತ್ತು. ಚಂದ್ರನು ತಲೇಮೇಲೆ ಬಂದಿದ್ದನು. ಪೂರ್ಣಚಂದ್ರನಲ್ಲ. ಬೆಳದಿಂಗಳು ಅಷ್ಟು ಪ್ರಖರವಾಗಿರಲಿಲ್ಲ. ಒಂದು ದೊಡ್ಡ ಮೈದಾನ. ಆ ಮೈದಾನದ ಮೇಲೆ ಆ ಅಂಧಕಾರದ ಛಾಯಾವಿಶಿಷ್ಟವಾದ ಅಸ್ಪಷ್ಟವಾದ ಬೆಳದಿಂಗಳು ಬಿದ್ದಿತ್ತು. ಆ ಬೆಳಕಿನಿಂದ ಮೈದಾನದ ಆ ಕೊನೆ ಈ ಕೊನೆ ಕಾಣಿಸುತ್ತಿರಲಿಲ್ಲವಲ್ಲದೆ, ಮೈದಾನದಲ್ಲಿ ಏನಿದೆ, ಯಾರಿದ್ದಾರೆಂಬುವದು ಸಹ ಗೊತ್ತಾಗುತ್ತಿರಲಿಲ್ಲ. ಮೈದಾನವಾದರೋ, ಅನಂತವಾದದ್ದು, ಜನಶೂನ್ಯವಾದದ್ದು, ಭಯಕ್ಕೆ ಆವಾಸಭೂಮಿಯಾಗಿತ್ತು. ಸಹರಾ ಎಂಬ ಸೈಕತ ಸಮುದ್ರಕ್ಕೆ ಸಮಾನವಾದ ಆ ಮೈದಾನದಲ್ಲಿಯೇ ಮುರಶಿದಾಬಾದಿಗೂ ಕಲಕತ್ತೆಗೂ ಹೋಗುವ ಭಾಟಾಮಾರ್ಗ. ಆ ಮಾರ್ಗದ ಪಕ್ಕದಲ್ಲಿ ಒಂದು ಸಣ್ಣ ಗುಡ್ಡ. ಗುಡ್ಡದ ಮೇಲೆ ಅನೇಕ ದೊಡ್ಡ ದೊಡ್ಡ ಮರಗಳ ಕಾಡು. ಮರಗಳ ತಲೆಮೇಲಿನ ಎಲೆಯು ಚಂದ್ರಕಿರಣದಿಂದುಜ್ವಲವಾಗಿ ಥಳಕುತ್ತ ಸರಸರ ಎನ್ನುತ ಕಂಪಿತವಾಗುತಲಿತ್ತು. ಅದರ ಛಾಯೆಯು ಕಪ್ಪಾದ ಕಲ್ಲುಬಂಡೇಮೇಲೆ ಬಿದ್ದು ಕತ್ತಲೆಯಾಗಿ ತರತರ ಎನ್ನುವಹಾಗಿತ್ತು. ಬ್ರಹ್ಮಚಾರಿಯು ಆ ಗುಡ್ಡದ ಮೇಲೆ ಹತ್ತಿ ನಿಂತುಕೊಂಡು ಶಿಖರದಲ್ಲಿ ಸ್ತಬ್ಧನಾಗಿ ಹಾಗೇ ಕಿವಿಕೊಟ್ಟು ಕೇಳುತ್ತ ನಿಂತನು. ಏನು ಕೇಳುತ್ತ ನಿಂತನೋ ಹೇಳುವದಕ್ಕಾಗುವದಿಲ್ಲ. ಆ ಅಂತವಿಲ್ಲದ ಪ್ರಾಂತರದಲ್ಲಿ ಎಲ್ಲೆಲ್ಲಿಯೂ ಒಂದು ಶಬ್ದವಿಲ್ಲ. ಕೇವಲ ವೃಕ್ಷಾದಿಗಳ ಮರ್ಮರ ಶಬ್ದ ಹೊರತು ಬೇರೆ ಇಲ್ಲ. ಒಂದು ಸ್ಥಳದಲ್ಲಿ ಗುಡ್ಡದ ಕಿಬ್ಬರಿ. ಹತ್ತಿರ ಒಂದು ದೊಡ್ಡ ಕಾಡು. ಮೇಲೆ ಗುಡ್ಡ, ಕೆಳಗೆ ಭಾಟಾಮಾರ್ಗ. ಮಧ್ಯೇ ಆ ಕಾಡು. ಅಲ್ಲಿ ಏನು ಶಬ್ದವಾಯಿತೊ ಹೇಳುವದಕ್ಕಾಗುವದಿಲ್ಲ. ಬ್ರಹ್ಮಚಾರಿಯು ಅತ್ತಾಗಡೆ ಹೋಗಿ ಆ ನಿಬಿಡವಾದ ಕಾಡಿನೊಳಗೆ ಪ್ರವೇಶಿಸಿ ನೋಡಲಾಗಿ, ವೃಕ್ಷರಾಜಿಯ ಅಂಧಕಾರದಲ್ಲಿ ಗುಂಪು ಗುಂಪಾಗಿ ಮರಗಳ ಬುಡದಲ್ಲಿ ಮನುಷ್ಯರು ಕುಳಿತಿದ್ದರು. ಕುಳಿತುಕೊಂಡಿದ್ದವರು ಬಹು ಕಪ್ಪಾದ ದೀರ್ಘಾಕಾರವಾದ ಮನುಷ್ಯರಾಗಿಯೂ ಮರೆಮಾಜಿದುದರಿಂದ ಮರೆಮೊಗವುಳ್ಳವರಾಗಿಯೂ ಇದ್ದರಲ್ಲದೆ ಅವರ ಹರಿತವಾದ ಆಯುಧಗಳು ಆ ಬೆಳದಿಂಗಳಲ್ಲಿ ಪ್ರಜ್ವಲವಾಗಿ ಪ್ರಕಾಶಿಸುತಲಿತ್ತು. ಇಂಥವರು ಇನ್ನೂರು ಮುನ್ನೂರು ಮಂದಿ ಕುಳಿತಿದ್ದರು. ತುಟಿ ಪಿಟಿಕಿಸದೆ ನಿಶ್ಶಬ್ದವಾಗಿ ಕುಳಿತಿದ್ದರು. ಬ್ರಹ್ಮಚಾರಿಯು ಮೆಲ್ಲಮೆಲ್ಲನೆ ಅವರ ಮಧ್ಯೆ ಹೋಗಿ ಏನೋ ಒಂದು ಸಂಜ್ಞೆಯನ್ನು ಮಾಡಿದನು. ಯಾರೂ ಏಳಲಿಲ್ಲ.

ಯಾರೂ ಮಾತನಾಡಲಿಲ್ಲ. ಶಬ್ದಕೂಡ ಮಾಡಲಿಲ್ಲ. ಅಂಧಕಾರದಲ್ಲಿ ಯಾರನ್ನೋ ಹುಡುಕುವವನ ಹಾಗೆ ಮುಖವನ್ನೂ ನೋಡಿಕೊಂಡು ಹೋದನು. ಹೀಗೆ ಹುಡುಕುತ್ತ ಒಬ್ಬನನ್ನು ಕಂಡು ಅವನ ಮೈ ಮುಟ್ಟಿ ಏನೋ ಸಂಜ್ಞೆಯನ್ನು ಮಾಡಿದನು. ಅವನು ಎದ್ದನು. ಅವನನ್ನು ಸಂಗಡ ಕರೆದುಕೊಂಡು ದೂರ ಹೋದನು. ಆ ಮನುಷ್ಯನು ಯುವಾಪುರುಷನಾಗಿ ಕಪ್ಪಾದ ಕೂದಲಿನಿಂದ ಅವನ ಚಂದ್ರವದನವು ಆವೃತವಾಗಿತ್ತು. ಅವನು ಅತಿ ಬಲಿಷ್ಠಕಾಯನಾಗಿದ್ದನಲ್ಲದೆ, ಅತಿ ಸುಂದರಪುರುಷನಾಗಿದ್ದನು. ಕಾವಿಶಾಟಿಯುಡುಪನ್ನು ಧಾರಣೆ ಮಾಡಿದ್ದನು. ಸರ್ವಾಂಗವು ಚಂದನದಿಂದ ಶೋಭಿಸುತಲಿತ್ತು. ಬ್ರಹ್ಮಚಾರಿಯು ಅವನನ್ನು ಕುರಿತು, ಭವಾನಂದ! ಮಹೇಂದ್ರಸಿಹ್ಮನ ಸಮಾಚಾರವೇನಾದರೂ ತಿಳಿದಿರುವೆಯಾ? ಎಂದು ಕೇಳಿದನು.

ಭವಾನಂದ—ಮಹೇಂದ್ರಸಿಹ್ಮನು ಈಹೊತ್ತು ಬೆಳಿಗ್ಗೆ ಗೃಹವನ್ನು ತ್ಯಾಗ ಮಾಡಿ ಹೆಂಡತಿ ಮಗುವನ್ನು ಸಂಗಡ ಕರೆದುಕೊಂಡು ಮುರಶಿದಾಬಾದು ಮಾರ್ಗವಾಗಿ ಪ್ರಯಾಣವಾಗಿ ಬಂದು ಆ ಹಳ್ಳಿಯಲ್ಲಿ—ಅಷ್ಟರೊಳಗೆ ಬ್ರಹ್ಮಚಾರಿ ಆ ಹಳ್ಳಿಯಲ್ಲಿ ನಡೆದುದೆಲ್ಲ ಬಲ್ಲೆ, ಯಾರು ಹಾಗೆ ಮಾಡಿದವರು?

ಭವಾನಂದ—ಯಾರೋ ಹಳ್ಳಿ ರೈತರೆಂದು ಕಾಣುತ್ತದೆ. ಈ ಕಾಲದಲ್ಲಿ ಹಳ್ಳಿಗಾಡು ರೈತ ಮುಂತಾದವರೆಲ್ಲ ಹೊಟ್ಟೆಗಿಲ್ಲದೆ ದರೋಡೆ ರಹಜನಿ ಮಾಡುವವರಾಗಿದ್ದಾರೆ. ಈ ಕಾಲದಲ್ಲಿ ಯಾರು ತಾನೇ ಡಕಾಯಿತನಲ್ಲ? ನಾವು ಸಹ ಲೂಟಿ ಮಾಡಿ ತಿನ್ನಬೇಕಾಗಿದೆ. ಕೊತ್ವಾಲ ಸಾಹೇಬರ ಎರಡು ಭಂಡಿ ಅಕ್ಕಿ ಹೋಗುತಲಿತ್ತು. ಅದನ್ನು ತಂದು ಬ್ರಾಹ್ಮಣರಿಗೆಲ್ಲ ಭೋಜನಮಾಡಿಸಿದೆ.

ಬ್ರಹ್ಮಚಾರಿಯು ನಕ್ಕು—ಕಳ್ಳರ ಕೈಯಿಂದ ಅವನ ಹೆಂಡತಿ ಮಗುವನ್ನು ಜೀವದಿಂದುಳಿಸಿಕೊಂಡು ಕರೆದುಕೊಂಡು ಬಂದೆ. ಅವರಿಬ್ಬರನ್ನು ಮಠದಲ್ಲಿರಿಸಿ ಬಂದಿದ್ದೇನೆ. ಈಗ ನೀನು ಮಹೇಂದ್ರನನ್ನ ಹುಡುಕಿ ಅವನ ಹೆಂಡತಿ ಮಗುವನ್ನು ಸಹ ಅವನ ವಶಮಾಡಬೇಕಾದದ್ದು ನಿನ್ನನ್ನು ಕೂಡಿದೆ. ಇಲ್ಲಿ ಜೀವಾನಂದನು ಇದ್ದರೆ ಸಾಕು; ಕೆಲಸವು ಪೂರೈಸುತ್ತದೆ.

ಭವಾನಂದನು ಆಗಲೆಂದು ಒಪ್ಪಿಕೊಂಡನು. ಬ್ರಹ್ಮಚಾರಿಯು ಬೇರೇಕಡೆಗೆ ಹೊರಟುಹೋದನು.

## ಏಳನೆಯ ಪರಿಚ್ಛೇದ

ಮಹೇಂದ್ರಸಿಹ್ಮನು ಹಳ್ಳಿಯಲ್ಲಿ ಕೂತು ಯೋಚಿಸಿದರೆ ಫಲೋದಯವಾಗಲಾರದೆಂದು ಎದ್ದು, ರಾಜನಗರಕ್ಕೆ ಹೋಗಿ ಅಲ್ಲಿ ಪೋಲೀಸಿನವರ ಸಹಾಯ ತೆಗೆದುಕೊಂಡು ಹೆಂಡತಿ ಮಗುವನ್ನು ಪತ್ತೆಮಾಡಬೇಕೆಂದು ಭಾವಿಸಿ

ಆ ಮಾರ್ಗವಾಗಿ ಹೊರಟನು. ಸ್ವಲ್ಪದೂರ ಹೋಗುತ್ತಲೇ ಒಂದು ಎತ್ತಿನ ಬಂಡಿಯ ಸುತ್ತಲು ಪಹರೆಯಾಗಿ ಅನೇಕಮಂದಿ ಶಿಪಾಯಿಗಳು ಹೋಗುತ್ತಿದ್ದವರು ಸಿಕ್ಕಿದರು. ರಾಜನಗರ ಅಥವಾ ನಗರವು ಯಾವದೆಂಬದನ್ನ ಈಗ ತಿಳಿಸುತ್ತೇವೆ.

ಸನ್ ಸಾವಿರದ ಏಳುನೂರು ಎಪ್ಪತ್ತಾರನೇ ಸಾಲಿನಲ್ಲಿ ವೀರಭೂಮಿ (Birbhoom) ಮುಂತಾದ ಪ್ರದೇಶಗಳು ಇಂಗ್ಲೀಷರ ಶಾಸನಾಧೀನವಾಗಿರಲಿಲ್ಲ. ಇಂಗ್ಲೀಷರು ಆಗ ಬಂಗಾಳಾ ದಿವಾನರಾಗಿದ್ದರು. ಫೌಜದಾರಿಯು ಅವರಿಗೆ ಸೇರಿರಲಿಲ್ಲ. ಅವರು ಕೇವಲ ಹುಟ್ಟುವಳಿಯಾದ ಹಣಕ್ಕೆ ಅಧಿಕಾರಿಗಳಾಗಿದ್ದರೇ ವಿನಾ, ಬಂಗಾಳಾ ದೇಶದ ಸಿವಿಲ್, ಕ್ರಿಮಿನಲ್, ಪೋಲೀಸ ಇಲಾಖೆಗಳ ಕಾರಭಾರವನ್ನು ವಹಿಸಿರಲಿಲ್ಲ. ಹಣ ವಸೂಲ್ಮಾಡಿಕೊಳ್ಳುವ ಭಾರ ಇಂಗ್ಲೀಷರದಾಗಿಯೂ ಜನಗಳ ಆಸ್ತಿ ಪ್ರಾಣ ಮುಂತಾದ್ದರ ರಕ್ಷಣಾವೇಕ್ಷಣೆಯ ಭಾರವು ಆ ಪಾಪಿಷ್ಠನಾದ, ನರಾಧಮನಾದ, ವಿಶ್ವಾಸಘಾತಕನಾದ, ಮನುಷ್ಯ ಕುಲಕ್ಕೆ ಕಳಂಕನಾದ ಮೀರಜಾಫರನ ಅದಳಿತಕ್ಕೆ ಸೇರಿತ್ತು. ಮೀರಜಾಫರನು ಆತ್ಮರಕ್ಷಣೆಯಲ್ಲಿಯೇ ಅಸಮರ್ಥನಾದವನು ಬಂಗಾಳಾ ದೇಶವನ್ನು ಹೇಗೆ ರಕ್ಷಣೆಮಾಡುವನು? ಮೀರಜಾಫರನಿಗೆ ಗಾಂಜಾ ಅಫೀಂ ತಿನ್ನುವದು, ಮಲಗುವದು ಇದೆರಡು ಕೆಲಸವಾಗಿತ್ತು. ಇಂಗ್ಲೀಷರಿಗೆ ಹಣ ವಸೂಲ್ಮಾಡಿಕೊಳ್ಳುವದು, ಡೆಸ್ಪ್ಯಾಚ್ (Despatch) ಬರೆಯುವದು ಇದೆರಡು ಕೆಲಸವಾಗಿದ್ದಿತು. ಬಂಗಾಳಾ ದೇಶದಲ್ಲಿರುವವರಿಗೆ ಅಳುವದು ಹಾಳಾಗುವದು, ಇದೆರಡು ಕೆಲಸವಾಗಿದ್ದಿತು.

ಬಂಗಾಳಾ ದೇಶದಲ್ಲಿ ಇದು ಸಾಧಾರಣ ನಿಯಮವಾಗಿತ್ತು. ವೀರಭೂಮಿ ಮುಂತಾದ ಪ್ರದೇಶದಲ್ಲಿ ಸ್ವತಂತ್ರವಾದ ರಾಜ್ಯಪ್ರಣಾಳಿಯಿತ್ತು. ಅದು ವೀರಭೂಮಿಯ ರಾಜನ ಅಧೀನವಾಗಿತ್ತು. ರಾಜನಗರ ಅಥವಾ ನಗರವು ಆ ದೇಶಕ್ಕೆ ರಾಜಧಾನಿಯಾಗಿತ್ತು. ವೀರಭೂಮಿಯ ರಾಜರು ಪೂರ್ವದಲ್ಲಿ ಸ್ವತಂತ್ರರಾಗಿದ್ದು ಪ್ರಕೃತದಲ್ಲಿ ಮುರಷಿದಾಬಾದಿಗೆ ಅಧೀನವಾಗಿದ್ದರು. ಪೂರ್ವದಲ್ಲಿ ವೀರಭೂಮಿಯಲ್ಲಿ ಸ್ವತಂತ್ರರಾದ ಹಿಂದು ರಾಜರಾಳುತ್ತಿದ್ದರು. ಈಚಿನ ರಾಜವಂಶದವರು ಮುಸಲಮಾನರು. ನಾವು ಯಾವ ಕಾಲದ ಕಥೆಯನ್ನು ಪ್ರಾರಂಭಿಸಿದ್ದೇವೋ ಅದಕ್ಕೆ ಪೂರ್ವ ಇದ್ದ ರಾಜನಾದ ಅಸ್ಲಿ ನಕ್ಕಿಜಾನ್ ಬಹದುರನು ಸಿರಾಜ ಉದ್ದೌಲಾ ಸಹಾಯದಿಂದ ದೇಶವನ್ನು ವೃದ್ಧಿಮಾಡಿ ಕಲಕತ್ತೆಯನ್ನು ಲೂಟಿಮಾಡಿಕೊಂಡು ಬಂದಿದ್ದನು. ಅದರ ಮೇಲೆ ಕ್ಲೈವು ಬಂದು ಕಾಲಿಟ್ಟ ಕೂಡಲೆ ಮುಸಲಮಾನರು ಜನ್ಮಸಾರ್ಥಕಕ್ಕೋಸ್ಕರ ಬೇಹಸ್ತಿಗೆ (ಸ್ವರ್ಗಕ್ಕೆ) ಪ್ರಯಾಣೋನ್ಮುಖರಾದರು. ಬಂಗಾಳೆಯ ಇತರ ಪ್ರದೇಶಗಳಂತೆ ವೀರಭೂಮಿಯ ಹುಟ್ಟುವಳಿಯನ್ನು ಸಹ ಇಂಗ್ಲೀಷರು ತೆಗೆದುಕೊಳ್ಳಲಾರಂಭಿಸಿದರು. ಆದರೆ ಶಾಸನದ ಭಾರವು ರಾಜನಲ್ಲಿ ಉಳಿದಿತ್ತು. ಇಂಗ್ಲೀಷರು ಎಲ್ಲೆಲ್ಲಿ ಹುಟ್ಟುವಳಿಯನ್ನು ವಸೂಲ್ಮಾಡಿಕೊಳ್ಳುತ್ತಿದ್ದರೋ ಅಲ್ಲಲ್ಲಿ ಒಬ್ಬೊಬ್ಬ ಕಲೆಕ್ಟರನ್ನ

ಮೊಕರರೂರು ಮಾಡಿದ್ದರು. ಆದರೆ ವೀರಭೂಮಿಗೆ ಕಲೆಕ್ಟರನ್ನು ಇನ್ನೂ ಮೊಕರರೂರ್ಮಾಡಿರಲಿಲ್ಲ. ರಾಜನೇ ಅವರಿಗೋಸ್ಕರ ಹುಟ್ಟುವಳಿಯನ್ನು ತೆಗೆದುಕೊಂಡು ಅದನ್ನು ಕಲಕತ್ತೆಕ್ಕೆ ಕಳುಹಿಸುತ್ತಲಿದ್ದನು. ಅದುಕಾರಣ ವೀರಭೂಮಿಯ ಹುಟ್ಟುವಳಿಯು ಕಲಕತ್ತೆಗೆ ಇರಸಾಲು ಆಗುವುದು. ಜನರು ಹೊಟ್ಟೆಗೆ ಇಲ್ಲದೆ ಸತ್ತರೂ ಇರಸಾಲು ಆಗುವುದು ನಿಲ್ಲದು. ಆಗ ಅಷ್ಟು ಹುಟ್ಟುವಳಿಯಾಗುತ್ತಿರಲಿಲ್ಲ. ಏತಕ್ಕೆಂದರೆ, ಭೂಮಿಯು ಧನವನ್ನು ಪ್ರಸವಮಾಡದಿದ್ದರೆ ಯಾರು ಸಂಪಾದಿಸಲಾದೀತು? ಅದು ಹೇಗಾದರೂ ಇರಲಿ, ಹುಟ್ಟುವಳಿಯಾದುದು ಅಲ್ಪಸ್ವಲ್ಪವಾದರೂ ಅದನ್ನು ಭಂಡೀಮೇಲೆ ಹಾಕಿ ಶಿಪಾಯಿಗಳ ಪಹರೆಯೊಡನೆ ಕಲಕತ್ತೆಯಲ್ಲಿ ಕುಂಪಣೀ ಖಜಾನೆಗೆ ಸಾಗಿಸುತಲಿದ್ದರು. ಆಗಿನಕಾಲದಲ್ಲಿ ಕಳ್ಳರ ಭಯವು ಬಹಳವಿದ್ದುದರಿಂದ ಐವತ್ತುಮಂದಿ ಶಿಪಾಯಿಗಳು ಆಯುಧಪಾಣಿಗಳಾಗಿ ಗಾಡಿಯ ಹಿಂದೆ ಮುಂದೆ ಸಾಲುಸಾಲಾಗಿ ಪಹರೆ ಹೋಗುತಲಿರುವರು. ಇವರಿಗೆ ಯಜಮಾನನಾಗಿ ಒಬ್ಬ ಕೆಂಪು ಮುಖದವನು ಇರುವನು. ಅವನು ಕುಂಪಣಿಯವರ ನೌಕರನಲ್ಲ. ಆಗ ದೇಶೀಯ ರಾಜರುಗಳ ಸೈನ್ಯಗಳಲ್ಲಿ ಅನೇಕ ಕೆಂಪು ಜನರು ಯಜಮಾನರಾಗಿರುವರು. ಕೆಂಪುಮುಖದವನು ಎಲ್ಲರಿಗಿಂತಲೂ ಹಿಂದೆ ಕುದುರೆಮೇಲೆ ಸವಾರನಾಗಿ ಹೋಗುತಲಿದ್ದನು. ಬಿಸಿಲು ಬಹಳವಾದಕಾರಣ ಶಿಪಾಯಿಗಳು ಹಗಲು ಪ್ರಯಾಣಮಾಡದೆ ರಾತ್ರೆ ಕಾಲದಲ್ಲಿ ಪ್ರಯಾಣಮಾಡುತ್ತಲಿದ್ದರು. ಹೋಗ ಹೋಗುತ ಇರಸಾಲಿನ ಗಾಡಿ ಸಂಗಡ ಹೋಗುತ್ತಲಿದ್ದ ಶಿಪಾಯಿಗಳು ಮಹೇಂದ್ರನಿಗೆ ಸಿಕ್ಕಿದರು. ಮಹೇಂದ್ರನು ಅವರಿಗೆ ದಾರಿಬಿಡುವದಕ್ಕೋಸ್ಕರ ರಸ್ತೆಬಿಟ್ಟು ಒಂದು ಪಾರ್ಶ್ವದಲ್ಲಿ ನಿಂತುಕೊಂಡನು. ಆದರೂ ಶಿಪಾಯಿಗಳು ಅವನ ಮೈಮೇಲೆ ಬೀಳುವದಕ್ಕೆ ಬಂದರು. ಅದನ್ನು ನೋಡಿ ಮಹೇಂದ್ರನು ಇದು ಜಗಳಕ್ಕೆ ಸಮಯವಲ್ಲವೆಂದು ಪಾರ್ಶ್ವದಲ್ಲಿದ್ದ ಕಾಡಿನ ಅಂಚಿನಲ್ಲಿ ಹೋಗಿ ನಿಂತನು.

ಒಬ್ಬ ಶಿಪಾಯಿಯು, ಇವನೊಬ್ಬ ಕಳ್ಳನು, ಓಡಿಹೋಗುತ್ತಾನೆಂದು ಕೂಗಿದನು. ಮಹೇಂದ್ರನ ಕೈಲಿ ಬಂದೂಕು ಇದ್ದದ್ದು ನೋಡಿ ಅವರಿಗೆ ಅವನು ಕಳ್ಳನೆಂಬ ಸಂಜಿಕೆಯು ದೃಢವಾಯಿತು. ಆ ಶಿಪಾಯಿಯು ಅಟ್ಟಿಕೊಂಡು ಹೋಗಿ ಅವನನ್ನು ಹಿಡಿದುಕೊಂಡು, ಕಳ್ಳಸೂಳೇಮಗನೆ ಎಂದು ಬೈದು ಒಂದು ಗುದ್ದು ಹಾಕಿ ಬಂದೂಕನ್ನು ಕಿತ್ತುಕೊಂಡನು. ಮಹೇಂದ್ರನು ಬರೀ ಕೈಯಾದ ಕಾರಣ ಶಿಪಾಯಿಗೆ ಗುದ್ದಿಗೆ ಪ್ರತಿಯಾಗಿ ಒಂದು ಗುದ್ದು ಹಾಕಿದನು. ಆಗ ಮಹೇಂದ್ರನ ಕೋಪವು ಅತಿಯಾಗಿ ರೇಗಿತ್ತೆಂದು ಹೇಳಬೇಕಾದ್ದೇ ಇಲ್ಲ. ಪೆಟ್ಟುತಿಂದ ಶಿಪಾಯಿಸಾಬನು ಅಚೇತನನಾಗಿ ನೆಲಕ್ಕೆ ಬಿದ್ದನು. ಆಗ ನಾಲ್ಕುಮಂದಿ ಶಿಪಾಯಿಗಳು ಬಂದು ಮಹೇಂದ್ರನನ್ನು ಹಿಡಿದೆಳೆದು ಸೇನಾಪತಿಯಾದ ಸಾಹೇಬರ ಹತ್ತಿರ ಕರೆದುಕೊಂಡು ಹೋಗಿ ಇವನು ಒಬ್ಬ ಶಿಪಾಯಿಯನ್ನು ಖೂನಿಮಾಡಿದ್ದಾನೆಂದು

ರಪ್ಪಟ್ಟು (Report) ಮಾಡಿದರು. ಆಗ ಸಾಹೇಬರು ಪೈಪು (Pipe ಅಂದರೆ ಹೊಗೆಬತ್ತಿ ಸೇದುವ ನಳಿಗೆಗೆ ಹೆಸರು.) ಕುಡಿಯುತ್ತಲಿದ್ದರಲ್ಲದೆ ಮದ್ಯಪಾನ ದಿಂದ ಸ್ವಲ್ಪ ವಿಹ್ವಲರಾಗಿದ್ದವರು ಕಳ್ಳಸೂಳೇಮಗನನ್ನು ಹಿಡಿದು "ಷಾದಿ" (ಅಂದರೆ ಮುಸಲ್ಮಾನಿಯಲ್ಲಿ ಮದುವೆಗೆ ಹೆಸರು. ಪ್ರಕೃತದಲ್ಲಿ, "ಕೈದಿ"ಯನ್ನುವ ದಕ್ಕೆ ಬದಲಾಗಿ ಷಾದಿ ಎಂದು ಸಾಹೇಬರ ಬಾಯಿಯಿಂದ ಹೊರಟಿತು.) ಮಾಡಿರೆಂದು ಹುಕುಂ ಮಾಡಿದರು. ಶಿಪಾಯಿಗಳಿಗೆ ಇವನಿಗೂ ಪೆಟ್ಟುತಿಂದ ಶಿಪಾಯಿಗೂ ಹೇಗೆ ಮದುವೆ ಮಾಡಬೇಕೊ ಅದು ಗೊತ್ತಾಗಲಿಲ್ಲ. ನಾಲ್ಕು ಶಿಪಾಯಿಗಳು ಸಾಹೇಬರಿಗೆ ಷರಾಬು ಇಳಿದರೆ, ಇದು ಮದುವೆಯಾಗತಕ್ಕದ್ದಲ್ಲ ವೆಂದು ತಿಳಿದು ಹುಕುಂ ಬದಲಾಯಿಸುವರೆಂದು ಆಲೋಚಿಸಿಕೊಂಡು, ಎತ್ತಿನ ಹಗ್ಗದಿಂದ ಮಹೇಂದ್ರನನ್ನು ಕೈಕಾಲುಕಟ್ಟಿ ಬಂಡಿಯಮೇಲೆ ಹಾಕಿದರು. ಮಹೇಂದ್ರನು ಇಷ್ಟು ಜನರೊಂದಿಗೆ ಜಗಳವಾಡುವದು ವ್ಯರ್ಥವೆಂದು ತಿಳಿದು ಕೊಂಡು ಸುಮ್ಮನಾದನು. ಸಾಹಸಮಾಡಿ ಬಿಡಿಸಿಕೊಂಡರೂ ಆಗುವದೇನು? ಹೆಂಡತಿ ಮಗು ಹೋದ ವ್ಯಸನದಿಂದ ಖೇದದಿಂದಿರುವದಕ್ಕೂ ಅವನಿಗೆ ಇಷ್ಟ ವಿರಲಿಲ್ಲ. ಶಿಪಾಯಿಗಳು ಮಹೇಂದ್ರನನ್ನು ಬಂಡಿಯ ಗೂಟಕ್ಕೆ ಭದ್ರವಾಗಿ ಕಟ್ಟಿದರು. ಅನಂತರ ಮೊದಲಿನಂತೆ ಇರಸಾಲು ತೆಗೆದುಕೊಂಡು ಸ್ವಲ್ಪ ಗಂಭೀರವಾದ ನಡಿಗೆಯಿಂದ ಮುಂದೆ ಸಾಗಿದರು.

---

## ಎಂಟನೆಯ ಪರಿಚ್ಛೇದ

ಬ್ರಹ್ಮಚಾರಿಯ ಅಪ್ಪಣೆಯನ್ನು ಪಡೆದು ಭವಾನಂದನು ದೇವರನಾಮ ವನ್ನು ಹೇಳುತ್ತ ಮಹೇಂದ್ರನು ಇದ್ದ ಹಳ್ಳಿಕಡೆಗೆ ಹೊರಟನು. ಅತ್ತಕಡೆಯಲ್ಲಿಯೇ ಅವನ ಸಮಾಚಾರ ಸಿಕ್ಕುತ್ತದೆಂದು ಯೋಚಿಸಿ, ಆ ಮಾರ್ಗ ವಾಗಿ ಹೋದನು.

ಇಲ್ಲಿ ವಾಚಕ ಮಹಾಶಯರು ಸ್ವಲ್ಪ ಬುದ್ಧಿ ಯೋಜನೆಯನ್ನು ಮಾಡಿಕೊಳ್ಳ ಬೇಕು. ಏತಕ್ಕೆಂದರೆ, ದಿಕ್ಕು ತೋಚದೆ ಹೋದರೆ ನಾವು ಹೇಳುವ ವಿಚಾರವಾಗಿ ನಡೆದ ಸಂಗತಿಯಲ್ಲಿ ಸಂಶಯ ಹುಟ್ಟಬಹುದು. ರಾಜನಗರದಿಂದ ಕಲಕತ್ತೆಗೆ ಹೋಗಬೇಕಾದರೆ ಮುಸಲ್ಮಾನ ರಾಜರಿಂದ ನಿರ್ಮಿತವಾದ ದಾರಿಯಿಂದ ಹೋಗಬೇಕು. ಮಹೇಂದ್ರನಿದ್ದನು ಪದಚಿಹ್ನ ಗ್ರಾಮದಿಂದ ರಾಜನಗರಕ್ಕೆ ಹೋಗಲು ದಕ್ಷಿಣದಿಕ್ಕಿನಿಂದ ಉತ್ತರದಿಕ್ಕಿಗೆ ಹೋಗುತ್ತಿದ್ದನು. ಅದುಕಾರಣ ಇರಸಾಲಿನ ಸಂಗಡ ಹೋಗುತ್ತಿದ್ದ ಶಿಪಾಯಿಗಳನ್ನು ಸಂಧಿಸಿದನು. ಭವಾ ನಂದನು ಆ ಗುಡ್ಡದಿಂದ ಹಳ್ಳಿಕಡೆಗೆ ಹೋಗುತ್ತಿದ್ದನು, ಅವನು ದಕ್ಷಿಣದಿಂದ ಉತ್ತರಕ್ಕೆ ಹೋಗಬೇಕಾಯಿತು. ಹೋಗಹೋಗುತ ಸ್ವಲ್ಪ ಹೊತ್ತಿನಲ್ಲಿ

ಧನರಕ್ಷಕಾರಿಗಳಾದ ಶಿಪಾಯಿಗಳನ್ನು ಅವಶ್ಯಕವಾಗಿ ಸಂಧಿಸಿದನು. ಅವನೂ ಮಹೇಂದ್ರನಹಾಗೆ ಶಿಪಾಯಿಗಳಿಗೆ ದಾರಿಬಿಟ್ಟು ಪಾರ್ಶ್ವದಲ್ಲಿ ನಿಂತುಕೊಂಡನು. ಶಿಪಾಯಿಗಳು ಈ ರೀತಿಯಾಗಿ ಒಬ್ಬೊಬ್ಬನೆ ರಾತ್ರಿಹೊತ್ತು ಬರುವದನ್ನು ನೋಡಿ ಸಹಜವಾಗಿ ಇವರೆಲ್ಲರೂ ಕಳ್ಳರೆಂದು ತಿಳಿದುಕೊಂಡರು. ಆ ನಂಬಿಕೇಮೇಲೆ ಒಬ್ಬನನ್ನು ಹಿಡಿದು ಹಾಕಿದ್ದರು. ಭವಾನಂದನು ಒರೆಯಾಗಿ ಹೋಗಿ ನಿಂತದ್ದನ್ನು ಕಂಡು, ಕೂಡಲೆ ಅವನನ್ನು ದಸ್ತಗಿರಿ ಮಾಡಿದರು.

ಭವಾನಂದನು ಹುಸಿನಗುನಗುತ—ಏತಕ್ಕೆ ಸಾಬರೆ? ಅಂದನು.

ಶಿಪಾಯಿ—ನೀನು ಕಳ್ಳತಾಯಿಗಂಡನಾಗಿದ್ದೀ.

ಭವಾನಂದ—ಕಾವೀಶಾಟಿ ಬಟ್ಟೆಯನ್ನುಟ್ಟುಕೊಂಡಿದ್ದೇನೆ, ಕಾಣುವದಿಲ್ಲವೆ? ನಾನು ಬ್ರಹ್ಮಚಾರಿ. ಡಕಾಯಿತರು ಹೀಗಿದ್ದಾರೆಯೆ?

ಶಿಪಾಯಿ—ಅನೇಕ ಕಳ್ಳಸೂಳೇಮಕ್ಕಳು ಬ್ರಹ್ಮಚಾರಿ ಸನ್ಯಾಸಿಗಳು ದರೋಡೆ ಮಾಡುತ್ತಾರೆಂದು ಹೇಳಿ ತಲೆಯಮೇಲೆ ಒಂದು ಪೆಟ್ಟು ಹೊಡೆದು ಕುತ್ತಿಗೆ ಹಿಡಿದು ತಳ್ಳಿ ಎಳೆದುಕೊಂಡು ಬಂದನು. ಭವಾನಂದನ ಕಣ್ಣುಗಳು ಬೆಂಕಿ ಕಿಡಿಗಳಹಾಗೆ ಜ್ವಲಿಸಿದವು. ಆದರೆ ಮತ್ತೇನೂ ಹೇಳದೆ ಅತಿ ವಿನೀತಭಾವದಿಂದ, ಸಾಬರೇ! ಏನು ಮಾಡಬೇಕು, ಹೇಳಿರಿ ಎಂದನು.

ಶಿಪಾಯಿಯು ಭವಾನಂದನ ವಿನಯದಿಂದ ಸಂತುಷ್ಟನಾಗಿ, ತೆಕೊ ಸೂಳೇಮಗನೇ, ಈ ಗಂಟನ್ನು ತಲೇಮೇಲೆ ಹೊತ್ತುಕೊ, ಎಂದು ಹೇಳಿ ಒಂದು ತಲೆದಿಂಬಿನ ಗಂಟನ್ನು ಕೊಟ್ಟನು. ಮತ್ತೊಬ್ಬ ಶಿಪಾಯಿಯು, ಬೇಡ, ಗಂಟು ಹೋದೀತು, ಸೂಳೇಮಗ, ಓಡಿಹೋದಾನು, ಒಬ್ಬ ಕಳ್ಳಲವಡಿಮಗನನ್ನ ಭಂಡೀಮೇಲೆ ಕಟ್ಟಿಹಾಕಿದ್ದೇವೆ, ಹಾಗೆಯೇ ಈ ತಾಯಿಗಂಡನನ್ನು ಭಂಡಿಯಮೇಲೆ ಹಾಕೋಣವೆಂದನು. ಭವಾನಂದನಿಗೆ, ಭಂಡಿಯಮೇಲೆ ಯಾರನ್ನು ಕಟ್ಟಿಹಾಕಿದ್ದಾರೋ ತಿಳಿಯಬೇಕೆಂದು ಕುತೂಹಲವುಂಟಾಗಿ ಅವನು ಗಂಟನ್ನ ಬಿಸಾಟು ಗಂಟನ್ನು ಕೊಟ್ಟ ಶಿಪಾಯಿಗೆ ಪೂರಾ ಬಲವಾದ ಒಂದು ಗುದ್ದನ್ನು ಕೊಟ್ಟನು. ಆದಕಾರಣ ಶಿಪಾಯಿಗಳು ಭವಾನಂದನನ್ನು ಹಿಡಿದು ಕಟ್ಟಿ ಮಹೇಂದ್ರನು ಇದ್ದ ಗಾಡಿಯ ಮೇಲೆ ಹಾಕಿದರು. ಭವಾನಂದನಿಗೆ ಅವನು ಮಹೇಂದ್ರಸಿಹ್ಮನೆಂದು ಗೊತ್ತಾಯಿತು. ಶಿಪಾಯಿಗಳು ಯಥಾಪ್ರಕಾರ ಅನ್ಯಮನಸ್ಕರಾಗಿ ಕೋಲಾಹಲ ಮಾಡಿಕೊಳ್ಳುತ್ತ ಮುಂದಕ್ಕೆ ಹೊರಟರು. ಎತ್ತಿನಗಾಡಿಯು ಪುನಃ ಕಚಕಚ, ಗಡಗಡ ಎಂದು ಶಬ್ದಮಾಡಲಾರಂಭಿಸಿತು. ಆಗ ಭವಾನಂದನು ಮೆಲ್ಲ ಮೆಲ್ಲಗೆ ಮಹೇಂದ್ರನು ಕೇಳುವಹಾಗೆ, ಮಹೇಂದ್ರಸಿಹ್ಮ! ನಾನು ನಿನ್ನನ್ನು ಬಲ್ಲೆ, ನಿನ್ನ ಸಹಾಯಕ್ಕೋಸ್ಕರವೇ ನಾನು ಇಲ್ಲಿಗೆ ಬಂದೆ, ನಾನು ಯಾರೆಂಬದು ಈಗ ನೀನು ತಿಳಿಯಬೇಕಾದ ಅವಶ್ಯಕವಿಲ್ಲ, ನಾನು ಏನು ಹೇಳುತ್ತೇನೋ ಅದನ್ನು ಮಾಡು, ನಿನ್ನನ್ನು ಕಟ್ಟಿರುವ ಗೂಟದ ಹತ್ತಿರ ಕೈಯನ್ನು ಇರಿಸು ಎಂದನು.

ಮಹೇಂದ್ರನು ವಿಸ್ಮಿತನಾದನು. ಹೆಚ್ಚು ಮಾತು ಖರ್ಚುಮಾಡದೆ ಭವಾನಂದನು ಹೇಳಿದಪ್ರಕಾರ ಮಾಡಿದನು. ಭವಾನಂದನು ಕತ್ತಲೆಯಲ್ಲಿ ಮಹೇಂದ್ರನ ಕೈಗೆ ಕಟ್ಟಿದ್ದ ಹಗ್ಗವನ್ನು ಚಕ್ರದ ಕಬ್ಬಿಣದ ಹಳಿಗೆ ಹಿಡಿದನು. ಚಕ್ರದ ಘರ್ಷಣದಿಂದ ಕೈ ಹಗ್ಗವು ಹರಿದುಹೋಯಿತು. ಕಾಲಿಗೆ ಕಟ್ಟಿದ್ದ ಹಗ್ಗವನ್ನು ಸಹ ಅದರಂತೆ ಕೊಯಿದುಬಿಟ್ಟನು. ಅನಂತರ ಬಂಧನದಿಂದ ಬಿಡಲ್ಪಟ್ಟವನಾಗಿ ಮಹೇಂದ್ರನು ಭವಾನಂದನು ಹೇಳಿದಪ್ರಕಾರ ಅಲ್ಲಾಡದೆ ಭಂಡೀಮೇಲೆ ಬಿದ್ದಿದ್ದನು. ಭವಾನಂದನು ಸಹ ಅದೇರೀತಿಯಾಗಿ ಬಂಧನದಿಂದ ಬಿಡಿಸಿಕೊಂಡು, ಇಬ್ಬರೂ ಶಬ್ದಮಾಡದೆ ನಿಸ್ತಬ್ಧರಾಗಿದ್ದರು.

ಬ್ರಹ್ಮಚಾರಿಯು ನಿಂತು ನೋಡುತ್ತಲಿದ್ದ ಗುಡ್ಡದ ಪಾರ್ಶ್ವದಲ್ಲಿ ಹೋಗುವ ರಸ್ತೆಯೇ ಶಿಪಾಯಿಗಳು ಹೋಗುವ ಮಾರ್ಗವಾಗಿದ್ದಿತು. ಶಿಪಾಯಿಗಳು ಆ ಗುಡ್ಡದ ಹತ್ತಿರ ಹೋದರು. ಅಲ್ಲಿ ಒಂದು ಟೇಕಡೇಮೇಲೆ ಒಬ್ಬ ಮನುಷ್ಯನು ನಿಂತಿದ್ದನು. ಚಂದ್ರಕಿರಣದಿಂದ ದೀಪ್ತವಾದ ನೀಲಾಕಾಶದಲ್ಲಿ ಅವನ ಕಪ್ಪಾದ ಶರೀರವು ಚಿತ್ರವಾಗಿದ್ದುದನ್ನು ಕಂಡು, ಶಿಪಾಯಿಗಳ ಹವಾಲದಾರನು, ಅದೋ! ಇನ್ನೊಬ್ಬ ಕಳ್ಳ ನಿಂತಿದ್ದಾನೆ, ಅವನನ್ನು ಹಿಡಿದುಕೊಂಡುಬನ್ನಿ, ಮೂಟೆ ಹೊರಿಸೋಣವೆಂದನು. ಶಿಪಾಯಿಗಳಲ್ಲೊಬ್ಬನು ಅವನನ್ನು ಹಿಡಿದು ತರಲು ಹೋದನು. ಆದರೂ ಆ ಮನುಷ್ಯನು ನಿಂತಿದ್ದವನು ಕದಲದೆ ಹಾಗೇ ನಿಂತಿದ್ದನು. ಶಿಪಾಯಿಯು ಹೋಗಿ ಅವನನ್ನು ಹಿಡಿದುಕೊಂಡನು. ಅವನು ಏನೂ ಮಾತನಾಡಲಿಲ್ಲ. ಹಿಡಿದು ಹವಾಲದಾರನ ಬಳಿಗೆ ಕರೆತರಲ್ಪಟ್ಟನು. ಆದರೂ ಅವನು ಮಾತನಾಡಲಿಲ್ಲ. ಹವಾಲದಾರನು, ಅವನ ತಲೆಮೇಲೆ ಮೂಟೆ ಹೊರಿಸಿ ಎಂದು ಹೇಳಿದ ಪ್ರಕಾರ ಮೂಟೆಯು ಅವನ ತಲೆಮೇಲೆ ಹೊರಿಸಲ್ಪಟ್ಟಿತು. ಮೂಟೆ ಹೊತ್ತುಕೊಂಡು ಮುಂದೆ ಹೋದನು. ಹವಾಲದಾರನು ಹಿಂದಕ್ಕೆ ಒಂದು ಗಾಡಿಯ ಸಂಗಡ ನಡೆಯುತ್ತಿದ್ದನು. ಹೋಗುತ್ತಿದ್ದಹಾಗೆ ಹಟಾತ್ತಾಗಿ ಒಂದು ಪಿಸ್ತೂಲಿನ ಶಬ್ದವು ಕೇಳಿಸಿತು. ಹವಾಲದಾರನ ತಲೆಗೆ ಗುಂಡು ತಗಲಿ ಅವನು ನೆಲಕ್ಕೆ ಬಿದ್ದು ಪ್ರಾಣತ್ಯಾಗಮಾಡಿದನು. ಶಿಪಾಯಿಯೊಬ್ಬನು, ಈ ಸೂಳೇಮಗ, ಹವಾಲದಾರನನ್ನು ಗುಂಡುನಿಂದ ಹೊಡೆದವನೆಂದು ಹೇಳಿ, ಮೂಟೆಯನ್ನು ಹೊತ್ತಿದ್ದವನ ಕೈಯನ್ನು ಹಿಡಿದುಕೊಂಡನು. ಮೂಟೆ ಹೊತ್ತಿದ್ದವನ ಕೈಲಿ ಪಿಸ್ತೂಲು ಇತ್ತು. ಅವನು ತಲೆಮೇಲೆ ಇದ್ದ ಹೊರೆಯನ್ನು ಬಿಸಾಟು, ಪಿಸ್ತೂಲನ್ನು ತಿರುಗಿಸಿಕೊಂಡು ಆ ಶಿಪಾಯಿಯ ತಲೆಮೇಲೆ ಒಂದು ಪೆಟ್ಟು ಹಾಕಿದನು. ಶಿಪಾಯಿಗೆ ತಲೆಯು ಒಡೆದುಹೋಯಿತು. ಆ ಸಮಯದಲ್ಲಿ ಹರಿ, ಹರಿ ಎಂದು ಕೂಗುತ್ತ ಇನ್ನೂರುಮಂದಿ ಶಸ್ತ್ರಧಾರಿಗಳು ಬಂದು ಶಿಪಾಯಿಗಳನ್ನು ಮುತ್ತಿಕೊಂಡರು. ಶಿಪಾಯಿಗಳು ಸಾಹೇಬರ ಆಗಮನವನ್ನು ಇದುರುನೋಡುತ್ತಿದ್ದಹಾಗೆ ಸಾಹೇಬರು ಗಾಡಿಹತ್ತಿರ ಬಂದು ಲೈನ್‌ಫಾರಂ (To form the Line)

ಮಾಡುವುದಕ್ಕೆ ಕಮಾನ್ ಕೊಟ್ಟರು. ಇಂಗ್ಲೀಷರಿಗೆ ವಿಪತ್ಕಾಲದಲ್ಲಿ ನಿಷ್ಠಾ ವಿರಿದ್ದರೂ ಚಿಂತೆ ಇಲ್ಲ. ಶಿಪಾಯಿಗಳು ನಾಲ್ಕುದಿಕ್ಕಿಗೂ ಮುಖ ಮಾಡಿಕೊಂಡು ಚತುಷ್ಕೋಣ ವ್ಯೂಹಾಕಾರವಾಗಿ ನಿಂತರು. ಪುನಃ ಸಾಹೇಬರು ಕಮಾನ್ ಹೇಳಿದ ಪ್ರಕಾರ ಬಂದೂಕಗಳನ್ನು ಎತ್ತಿ ಹಿಡಿದುಕೊಂಡರು. ಅಷ್ಟು ಹೊತ್ತಿಗೆ ಯಾರೋ ಒಬ್ಬನು ಸಾಹೇಬರ ಕಮ್ಮರ ಬಂದಿಯಾಗಿದ್ದ ಕತ್ತಿಯನ್ನು ಹಟಾ ತ್ತಾಗಿ ಕಸದುಕೊಂಡು ಕಣ್ಣುಮುಚ್ಚಿ ತೆಗಿಯುವದರೊಳಗಾಗಿ ಅವರ ಮಸ್ತಕ ಛೇದನ ಮಾಡಿಬಿಟ್ಟನು. ಸಾಹೇಬರ ತಲೆಯು ಹೋಗಿ ಸಾಹೇಬರು ಕುದುರೆ ಯಿಂದ ಕೆಳಗೆ ಬಿದ್ದದ್ದರಿಂದ ಮುಂದೆ ಫೈರ್ (Fire) ಹುಕುಮನ್ನು ಕೊಡುವದಕ್ಕೆ ಅವಕಾಶವಾಗಲಿಲ್ಲ. ಆಗ ಒಬ್ಬನು ಭಂಡಿಯಮೇಲೆ ನಿಂತು ಕೈಯಲ್ಲಿ ಕತ್ತಿಯನ್ನು ಹಿಡಿದು ಪಟ್ಟಾ ತಿರಿಗಿಸುತ್ತ ಹರಿ! ಹರಿ! ಎಂದು ಕೂಗುತ್ತ ಶಿಪಾಯಿಗಳನ್ನು ಹೊಡಿ, ಕಡಿ ಎಂದು ಗದ್ದಲಮಾಡಿದನು. ಅವನು ಭವಾನಂದನಾಗಿದ್ದನು.

ಇದ್ದಕ್ಕಿದ್ದಹಾಗೆ ಅಧ್ಯಕ್ಷನು ಛಿನ್ನ ಶಿರಸ್ಕನಾಗಿ ಹೋದದ್ದನ್ನ ಕಂಡು ಮುಂದೆ ಏನುಮಾಡುವುದಕ್ಕೂ ಹುಕುಂ ಕೊಡುವವರು ಇಲ್ಲದೆ ಶಿಪಾಯಿ ಗಳು ಏನೂ ತೋರದೆ ನಿಶ್ಚೇಷ್ಟರಾಗಿ ಕೆಲವು ಕ್ಷಣಗಳು ಭಯದಿಂದ ಕುಂದಿ ನಿಂತಿದ್ದರು. ಅಷ್ಟರೊಳಗೆ ಧೈರ್ಯಶಾಲಿಗಳಾದ ಕಳ್ಳರು ಶಿಪಾಯಿಗಳಲ್ಲನೇಕರನ್ನ ಹತ ಆಹತರನ್ನಾಗಿ ಮಾಡಿ ಗಾಡಿಯ ಹತ್ತಿರ ಬಂದು ಇರಸಾಲ ಪೆಟ್ಟಿಗೆಗಳನ್ನು ಕೈವಶಮಾಡಿಕೊಂಡರು. ಶಿಪಾಯಿಗಳು ಭಗ್ನೋತ್ಸಾಹಿಗಳಾಗಿ ಪರಾಭೂತರಾಗಿ ಪಲಾಯನಪರರಾದರು.

ಮೊದಲು ಟೇಕಡಿಮೇಲೆ ನಿಂತಿದ್ದು ಕಡೆಗೆ ಯುದ್ಧದಲ್ಲಿ ಯಾಜಮಾನ್ಯವನ್ನು ವಹಿಸಿದಾತನು ಭವಾನಂದನ ಬಳಿಗೆ ಬಂದನು. ಇಬ್ಬರೂ ಪರಸ್ಪರ ಆಲಿಂಗನೆ ಯನ್ನು ಮಾಡಿಕೊಂಡರು. ಆಗ ಭವಾನಂದನು, ಜೀವಾನಂದ! ಕೈಗೊಂಡ ವ್ರತವು ಸಾರ್ಥಕವಾಯಿತೆಂದನು.

ಜೀವಾನಂದನು, ಭವಾನಂದ! ನಿನ್ನ ಹೆಸರು ಸಾರ್ಥಕವಾಗಲಿ ಎಂದುತ್ತರ ವನ್ನು ಕೊಟ್ಟನು. ಅಪಹೃತವಾದ ಧನವು ಯಥಾಸ್ಥಾನಕ್ಕೆ ಸಾಗಿಸಲು ಜೀವಾ ನಂದನು ನೇಮಿಸಲ್ಪಟ್ಟು, ಅವನು ಅವನ ಅನುಚರರೊಡನೆ ಶೀಘ್ರವಾಗಿ ಸ್ಥಾನಾಂ ತರಕ್ಕೆ ಹೊರಟುಹೋದನು. ಭವಾನಂದನೊಬ್ಬನೇ ನಿಂತಿದ್ದನು.

---

## ಒಂಭತ್ತನೆಯ ಪರಿಚ್ಛೇದ

ಮಹೇಂದ್ರನು ಭಂಡಿಯಿಂದ ಇಳಿದು ಒಬ್ಬ ಶಿಪಾಯಿಯ ಕತ್ತಿಯನ್ನು ಕಿತ್ತುಕೊಂಡು ಯುದ್ಧದಲ್ಲಿ ತಾನೂ ಸೇರಬೇಕೆಂದು ಪ್ರಯತ್ನ ಪಟ್ಟನು. ಆದರೆ ಇವರು ಕಳ್ಳರು, ಧನಾಪಹರಣಕ್ಕೆ ಶಿಪಾಯಿಗಳನ್ನು ಹೊಡಿ

ಯುತ್ತಾರೆಂದು ತಿಳಿದವನಾಗಿ ಯುದ್ಧಸ್ಥಾನದಿಂದ ಸರಿದು ನಿಂತುಕೊಂಡನು. ಏತಕ್ಕೆಂದರೆ, ಕಳ್ಳರಿಗೆ ಸಹಾಯಮಾಡಿದರೆ ಅವರು ಮಾಡುವ ಪಾಪಕ್ಕೆ ಭಾಗಿಯಾಗಬೇಕೆಂದು ತಿಳಿದು ಕತ್ತಿಯನ್ನು ಬಿಸಾಟು ಅಲ್ಲಿಂದ ಮೆಲ್ಲಮೆಲ್ಲಗೆ ಹೋಗುತಲಿದ್ದನು. ಆಗ ಭವಾನಂದನು ಬಂದು ಅವನ ಹತ್ತಿರ ನಿಂತನು. ಮಹೇಂದ್ರನು, ನೀವು ಯಾರು ಸ್ವಾಮಿ? ಎಂದು ಕೇಳಿದನು.

ಭವಾನಂದ—ನಿಮಗೆ ಅದರಿಂದ ಪ್ರಯೋಜನವೇನು?

ಮಹೇಂದ್ರ—ನನಗೆ ಸ್ವಲ್ಪ ಅವಶ್ಯಕವಿದೆ. ಈ ಹೊತ್ತು ನಿಮ್ಮಿಂದ ವಿಶೇಷವಾಗಿ ಉಪಕೃತನಾದೆನು.

ಭವಾನಂದ—ಆ ರೀತಿ ನೀವು ಉಪಕೃತರಾದೆವೆಂಬ ತಿಳುವಳಿಕೆಯು ನಿಮಗೆ ಇರಲಾರದೆಂದು ನಾನು ನಂಬಿದ್ದೆನು. ಕೈಲಿ ಖಡ್ಗವಿದ್ದು ಕೂಡ ದೂರ ನಿಂತು ಬಿಟ್ಟಿರಿ. ಜಮೀನ್‌ದಾರ್ರ ಮಕ್ಕಳು ರಂಗನಹಾಗೆ ಹಾಲು ಬೆಣ್ಣೆ ತಿಂದು, ಕೈಗೆ ಸಿಕ್ಕಿದ್ದು ಖರ್ಚುಮಾಡಿ ಶ್ರಾದ್ಧಮಾಡುವುದಕ್ಕೆ ಮಜಬೂತೇ ಹೊರ್ತು ಕೆಲಸ ಬಿದ್ದವೇಳೆಯಲ್ಲಿ ಮಂಗನೇ ಸರಿ.

ಭವಾನಂದನ ಮಾತು ಮುಗಿಯುವದರೊಳಗಾಗಿ ಮಹೇಂದ್ರನು ಬೇಸರಗೊಂಡು, ಈ ಕೆಲಸ ಕೆಟ್ಟಕೆಲಸ—ದರೋಡೆ ಎಂದನು. ಭವಾನಂದನು, ಆಗಲಿ, ದರೋಡೆಯೇ ಆಗಲಿ, ನನ್ನಿಂದ ನೀವು ಉಪಕೃತರಾಗಿದ್ದೀರಿ, ಇನ್ನೂ ಉಪಕಾರವನ್ನು ಹೊಂದುವರಾಗಿದ್ದೀರಿ; ಇನ್ನೂ ಉಪಕಾರವನ್ನು ಮಾಡಬೇಕೆಂದು ಇದ್ದೇನೆಂದನು.

ಮಹೇಂದ್ರ—ನೀವು ನನಗೆ ಉಪಕಾರವನ್ನು ಮಾಡಿರುವದು ನಿಜ, ಆದರೆ ಮತ್ತೇನುಪಕಾರವನ್ನು ಮಾಡಲಾಪಿರಿ? ಕಳ್ಳರ ಕೈಯಿಂದ ಇಷ್ಟು ಉಪಕೃತರಾಗುವದಕ್ಕಿಂತ ನಾನು ಅನುಪಕೃತನಾಗಿರುವದು ಒಳ್ಳೇದು.

ಭವಾನಂದ—ಉಪಕಾರವನ್ನು ಗ್ರಹಣಮಾಡಿದರೆ ಮಾಡಿ, ಅದು ನಿಮ್ಮ ಇಷ್ಟ—ನಿಮಗೆ ಇಷ್ಟವಿದ್ದರೆ ನನ್ನ ಸಂಗಡ ಬರಬಹುದು. ನಿಮ್ಮ ಹೆಂಡರು ಮಗಳನ್ನ ಸಹ ತೋರಿಸುತ್ತೇನೆ.

ಮಹೇಂದ್ರನು ಮುಖತಿರುಗಿಸಿ ನಿಂತುಕೊಂಡು—ಅದು ಹೇಗೆ?

ಭವಾನಂದನು ಉತ್ತರ ಕೊಡದೆ ನಡೆದನು, ನಿರ್ವಾಹವಿಲ್ಲದೆ, ಮಹೇಂದ್ರನೂ ಅವನ ಸಂಗಡ ಹೋದನು—ಹೋಗುತ ಮನಸ್ಸಿನಲ್ಲಿ, ಇದೆಂತಹ ಕಳ್ಳರೆಂದಂದುಕೊಂಡನು.

# ಹತ್ತನೆಯ ಪರಿಚ್ಛೇದ

ಆ ಜ್ಯೋತ್ಸ್ನಾಮಯಿಯಾದ ರಜನಿಯಲ್ಲಿ ಇಬ್ಬರೂ ನಿಶ್ಶಬ್ದವಾಗಿ ಪ್ರಾಂತರವನ್ನು ಪಾರಾದರು. ಮಹೇಂದ್ರನು ನೀರವನಾಗಿ ಶೋಕಕಾತರನಾಗಿ ಗರ್ವಿತನಾಗಿ ಸ್ವಲ್ಪ ಕೌತೂಹಲವಿಶಿಷ್ಟನಾಗಿಯೂ ಇದ್ದನು.

ಭವಾನಂದನು ಬೇರೆ ಭಾವವನ್ನು ತಾಳಿದನು. ಅವನಾ ಸ್ಥಿರಮೂರ್ತಿಯಾದ ಧೀರಪ್ರಕೃತಿಯನುಳ್ಳ ಸನ್ಯಾಸಿಯಾಗಿರಲಿಲ್ಲ. ಆ ಸೈನ್ಯಾಧ್ಯಕ್ಷನಾದ ಮುಂಡಘಾತಿಯ ಮೂರ್ತಿಯುಳ್ಳವನಾಗಿರಲಿಲ್ಲ. ಈಗ ಕೆಲ ನಿಮಿಷಗಳ ಮುಂಚೆ ಮಹೇಂದ್ರನನ್ನು ತಿರಸ್ಕಾರಮಾಡಿದ ಆ ಗರ್ವಿತಭಾವವು ಇರಲಿಲ್ಲ. ಆ ಜ್ಯೋತ್ಸ್ನಾಮಯಿಯಾದ ಶಾಂತಶಾಲಿನಿಯಾದ ಪೃಥಿವಿಯ ಪ್ರಾಂತರ—ಕಾನನ ನಗ—ನದಿಯ ಶೋಭಾಕಾಂತಿಯನ್ನು ನೋಡಿ ಅವನ ಮನಸ್ಸು ಸಮುದ್ರವು ಚಂದ್ರೋದಯದಲ್ಲಿ ಆಹ್ಲಾದದಿಂದ ಹಾಸಮಾಡುವಂತೆ ವಿಶೇಷ ಸ್ಫೂರ್ತಿಯನ್ನು ತಾಳಿತು. ಭವಾನಂದನು ಹಸನ್ಮುಖನಾಗಿ ವಾಙ್ಮಯನಾಗಿ ಪ್ರಿಯ ಸಂಭಾಷಿಯಾದನು—ಮಾತು ಕಥೆಯನ್ನಾಡುವದಕ್ಕೆ ಉತ್ಸುಕನಾದನು. ಅವನು ಮಾತು ನಾಡಲು ಅನೇಕ ಪ್ರಯತ್ನಪಟ್ಟನು, ಆದರೆ ಮಹೇಂದ್ರನು ಮಾತುನಾಡಲಿಲ್ಲ. ಆಗ ಭವಾನಂದನು ನಿರುಪಾಯನಾಗಿ ತನ್ನಷ್ಟಕ್ಕೆ ತಾನೇ ಹಾಡುವದಕ್ಕೆ ಪ್ರಾರಂಭಿಸಿದನು. ಏನೆಂದರೆ:—

## ವಂದೇ ಮಾತರಂ

ಸುಜಲಾಂ ಸುಫಲಾಂ ಮಲಯಜ ಶೀತಲಾಂ,
ಸಸ್ಯಶ್ಯಾಮಲಾಂ ಮಾತರಂ;

ಮಹೇಂದ್ರನು ಸಂಗೀತವನ್ನು ಕೇಳಿ ವಿಸ್ಮಿತನಾದನು, ಏನೂ ಗೊತ್ತಾಗಲಿಲ್ಲ—ಸುಜಲಾ, ಸುಫಲಾ, ಮಲಯಜ ಶೀತಲಾ—ಇಂತಾ ಗುಣವಿಶಿಷ್ಟಳಾದ ಮಾತೆಯು ಯಾರೆಂದು ಪ್ರಶ್ನೆಮಾಡಿದನು?

ಭವಾನಂದನು ಪ್ರಶ್ನೆಗೆ ಉತ್ತರವನ್ನೀಯದೆ ಸಂಗೀತವನ್ನು ಹಾಡುತಲಿದ್ದನು:—

**ಶುಭ್ರಜ್ಯೋತ್ಸ್ನಾ—ಪುಲಕಿತ—ಯಾಮಿನೀಂ ; ಫುಲ್ಲಕುಸುಮಿತದ್ರುಮದಳ**
**ಶೋಭಿನೀಂ ಸುಮಧುರಭಾಷಿಣೀಂ ಸುಖದಾಂ ವರದಾಂ ಮಾತರಂ ॥**

**ದೇಶೀರಾಗ—ಕಾವಾಳತಾಳ.**

ಸ್ವರ॥ ಸಾ— — ಸಾ— —। ನೀ— (ಸಾ ರಿ ಸ) — — ನಿ—ಂ ಧಾಂ।
ವ ನ್ದೆ

ಪಾ— —ಧಾಂ— ಪಾಂ ಮಂ ಗಾಂ। ರಿ— — — —॥ ಮ— ರಿ — ಮ— —।
ಮಾ ರಂ ಮಾ

ಪಾ— —ಧಾ— —। ನಿ—ಸಾ—(ನಿ—ಸಾ ರಿ)—ಂ ಸಾಂ। (ಸಾ ರಿ ಸಾ) —ನಿ—
ತ ರಂ

(ಧಾ ಪಾ ಮ)—ಪಾ—॥ಸಾ— —ಸಾ — —।
ವನ ದೆ

ಮಹೇಂದ್ರನು ಕೇಳಿ, ಇದು ದೇಶದ ವರ್ಣನೆಯಾಗಿದೆ, ಮಹಾಶಕ್ತಿಮಾತೆ ದುರ್ಗಾದೇವಿಯಲ್ಲವೆಂದನು.

ಭವಾನಂದನು, ನಾವು ಬೇರೆ ಮಾತೆಯನ್ನು ಒಪ್ಪುವದಿಲ್ಲ—ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ—ನಾವು ಹೇಳುವದೇನಂದರೆ:—ಜನ್ಮಭೂಮಿಯೇ ಜನನಿ, ನಮಗೆ ಬೇರೆ ತಾಯಿಯಿಲ್ಲ, ತಂದೆಯಿಲ್ಲ, ಅಣ್ಣತಮ್ಮಂದಿರಿಲ್ಲ, ಹೆಂಡತಿಯಿಲ್ಲ, ಮಕ್ಕಳಿಲ್ಲ, ಮನೆಯಿಲ್ಲ, ಸಂಸಾರವಿಲ್ಲ, ನಮಗೆ ಇರುವದು ಕೇವಲಾ ಸುಜಲಾ, ಸುಫಲಾ, ಮಲಯಜ ಶೀತಲಾ, ಸಸ್ಯಶ್ಯಾಮಲಾ ಎಂದನು.

ಆಗ ಮಹೇಂದ್ರನು ಅರ್ಥ ತಿಳಿದವನಾಗಿ, ಮುಂದೆ ಹಾಡೆಂದನು. ಭವಾನಂದನು ಸಂಗೀತವನ್ನು ತೊಡಗಿದನು :—

ಸುಜಲಾಂ ಸುಫಲಾಂ ಮಲಯಜ ಶೀತಲಾಂ
ಸಸ್ಯಶ್ಯಾಮಲಾಂ ಮಾತರಂ—
ಶುಭ್ರಜ್ಯೋತ್ಸ್ನಾ ಪುಳಕಿತಯಾಮಿನೀಂ
ಫುಲ್ಲಕುಸುಮಿತದ್ರುಮದಳಶೋಭಿನೀಂ
ಸುಹಾಸಿನೀಂ ಸುಮಧುರಭಾಷಿಣೀಂ
ಸುಖದಾಂ ವರದಾಂ ಮಾತರಂ।

ಸಪ್ತಕೋಟಿಕಂಠ—ಕಲಕಲನಿನಾದ ಕರಾಳೆ
ದ್ವಿಸಪ್ತಕೋಟಿಭುಜೈರ್ಧೃತಖರ ಕರವಾಲೆ
ಬಹುಬಲಧಾರಿಣೀಂ ನಮಾಮಿ ತಾರಿಣೀಂ
ರಿಪುಬಲವಾರಿಣೀಂ ಮಾತರಂ।

ತ್ವಂಹಿದುರ್ಗಾ ದಶಪ್ರಹರಣಧಾರಿಣೀ
ಕಮಲಾ ಕಮಲದಳವಿಹಾರಿಣೀ
ವಾಣೀ ವಿದ್ಯಾದಾಯಿನೀ
ನಮಾಮಿ ತ್ವಾಂ
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸುಫಲಾಂ ಮಾತರಂ
ವಂದೇ ಮಾತರಂ
ಶ್ಯಾಮಲಾಂ ಸರಳಾಂ ಸುಸ್ಮಿತಾಂ ಭೂಷಿತಾಂ
ಧರಣೀಂ ಭರಣೀಂ ಮಾತರಂ।

ಮಹೇಂದ್ರನು—ಕಳ್ಳನು ಗಾನವಮಾಡುಮಾಡುತ್ತ ಹಾಗೇ ಕಣ್ಣೀರು ಬಿಟ್ಟಿದ್ದನ್ನು ಕಂಡನು. ಮಹೇಂದ್ರನು ಅತ್ಯಂತ ಆಶ್ಚರ್ಯಪಟ್ಟು, ನೀವು ಯಾರು? ಎಂದು ಕೇಳಿದನು.

ಭವಾನಂದ—ನಾವು ಸಂತಾನರು.

ಮಹೇಂದ್ರ—ಸಂತಾನರೆಂದರೇನು? ಯಾರ ಸಂತಾನರು?

ಭವಾನಂದ—ಮಹಾತಾಯಿಯ ಸಂತಾನರು.

ಮಹೇಂದ್ರ—ಒಳ್ಳೇದು, ಸಂತಾನರು ಚೋರಿ ದರೋಡೆಮಾಡಿ ಮಹಾ ತಾಯಿಯನ್ನು ಪೂಜೆಮಾಡಬೇಕೇನು? ಅದೆಂತಹ ಮಾತೃಭಕ್ತಿ?

ಭವಾನಂದ—ನಾವು ಚೋರಿ ದರೋಡೆ ಮಾಡುವದಿಲ್ಲ.

ಮಹೇಂದ್ರ—ಈಗತಾನೇ ಒಂದು ಭಂಡಿ ಹಣವನ್ನು ಲೂಟಿಮಾಡಿದರಲ್ಲ?

ಭವಾನಂದ—ಅದೇನು, ಚೋರಿ ದರೋಡೆ ಆಯಿತೆ? ಲೂಟಿಮಾಡಿದ್ದು ಯಾರ ಹಣ?

ಮಹೇಂದ್ರ—ಏನು? ರಾಜನ ದ್ರವ್ಯವಲ್ಲವೆ?

ಭವಾನಂದ—ರಾಜನದೆ? ಈ ಹಣವನ್ನು ಯಾರು ಈಗ ತೆಗೆದುಕೊಳ್ಳು ತ್ತಾನೋ ಅವನಿಗೆ ಈ ಹಣದಮೇಲೆ ಏನು ಅಧಿಕಾರ?

ಮಹೇಂದ್ರ—ರಾಜನ ರಾಜಭಾಗ.

ಭವಾನಂದ—ಯಾವನು ರಾಜ್ಯವನ್ನು ಪರಿಪಾಲನ ಮಾಡುವದಿಲ್ಲವೋ ಅಂತಹವನು ರಾಜನಾಗುವದು ಹೇಗೆ?

ಮಹೇಂದ್ರ—ಒಂದು ದಿನವಿಲ್ಲದಿದ್ದರೆ ಒಂದು ದಿನ ನೀವು ಶಿಪಾಯಿಗಳ ಗುಂಡಿಗೆ ಗುರಿಯಾಗುತ್ತೀರಿ.

ಭವಾನಂದ—ಅನೇಕ ಶಿಪಾಯಿ ಸೂಳೇಮಕ್ಕಳನ್ನ ನೋಡಿದ್ದೇನೆ. ಈ ದಿನವೂ ನೋಡಿದೆ.

ಮಹೇಂದ್ರ—ಚೆನ್ನಾಗಿ ನೋಡಿದೆ. ಇನ್ನೊಂದು ದಿನ ನೋಡುವೆ.

ಭವಾನಂದ—ಏತಕ್ಕೆ ಆಗಬಾರದು. ನೋಡುವೆನು. ಒಂದುಸಲ ಹೊರತು ಎರಡುಸಲ ಬೇರೆ ಸಾಯುವದಿಲ್ಲ.

ಮಹೇಂದ್ರ—ಬೇಕುಬೇಕೆಂದು ಸತ್ತರೆ ಪ್ರಯೋಜನವೇನು?

ಭವಾನಂದ—ಮಹೇಂದ್ರಸಿಂಹ! ನಿನ್ನನ್ನು ಮನುಷ್ಯರಂತೆ ಮನುಷ್ಯ ನೆಂದು ಭಾವಿಸಿಕೊಂಡಿದ್ದೆನು. ಆದರೆ ಈಗ ನೋಡಿದರೆ ನೀನೇನಾಗಿದ್ದೀ; ಕೇವಲ ಹಾಲು ಸಕ್ಕರೆ ಬೆಣ್ಣೆಗೆ ಯಮಸ್ವರೂಪನೇ ಹೊರತು ಮತ್ತೆ ಬೇರೆ ಅಲ್ಲ. ಈಗ ಹಾವನ್ನು ನೋಡು, ಅದಕ್ಕೆ ಕಾಲು ಕೂಡ ಇಲ್ಲ, ಹೊಟ್ಟೆಯಿಂದಲೇ ದೇಗುತ್ತದೆ; ಅದಕ್ಕಿಂತಲೂ ನೀಚವಾದ ಹೀನವಾದ ಜೀವಜಂತುವನ್ನು ನಾನು ನೋಡಿಲ್ಲ; ಯಾರಾದರೂ ಕಾಲುನಿಂದ ತುಳಿದರೆ ಹೆಡೆಯನ್ನೆತ್ತಿಕೊಂಡು ಏಳು

ತ್ತದೆ; ನಿನ್ನ ತಾಳ್ಮೆಯು ಇನ್ನೂ ಹೋಗಿಲ್ಲವಲ್ಲ; ಅದೆಂತಹ ತಾಳ್ಮೆಯೋ ದೇವರು ಬಲ್ಲ. ಎಷ್ಟು ದೇಶವಿದೆ, ಯೋಚಿಸು; ಹಾಗೇ ನೋಡು,—ಮಗಧ, ಮಿಥಿಲಾ, ಕಾಶಿ, ಕಾಂಚಿ, ದಿಲ್ಲೀ, ಕಾಶ್ಮೀರ—ಇನ್ನೂ ಎಷ್ಟೋ ದೇಶಗಳವೆ. ಯಾವ ದೇಶದಲ್ಲಿ ಇಂತಾ ದುರ್ದಶೆಯುಂಟು? ಯಾವ ದೇಶದಲ್ಲಿ ಮನುಷ್ಯರು ಹೊಟ್ಟೆಗೆ ಇಲ್ಲದೆ ಹುಲ್ಲನ್ನು ತಿಂದಾರು? ಮುಳ್ಳು ಸೊಪ್ಪನ್ನು ತಿಂದು ಗೆದ್ದಲು ತಿಂದಾರೆ? ಕಾಡುಸೊಪ್ಪು ತಿಂದಾರೆ? ಯಾವ ದೇಶದಲ್ಲಿ ಮನುಷ್ಯರು ನರೀ ನಾಯಿ ತಿನ್ನುವರು? ಸತ್ತ ಹೆಣವನ್ನು ತಿನ್ನುವರು? ಯಾವ ದೇಶದಲ್ಲಿ ಮನೆಯಲ್ಲಿ ಗುಪ್ತವಾಗಿ ಧನವಿಟ್ಟುಕೊಂಡಿದ್ದರೂ ಬಾಳಕೆ ಇಲ್ಲವಾಗಿದೆ? ಸಾಲಗ್ರಾಮಕ್ಕೂ ಕೂಡ ಶಾಂತಿ ಇಲ್ಲವಾಗಿದೆ. ಹೆಣ್ಣುಮಕ್ಕಳು, ಹೆಂಡಂದಿರು ಯಾರೂ ನೆಮ್ಮದಿಯಾಗಿರುವದಕ್ಕೆ ಮಾರ್ಗವಿಲ್ಲವಾಗಿದೆ. ಹೊಟ್ಟೆಯಲ್ಲಿದ್ದ ಮಕ್ಕಳಿಗೂ ಸಹ ನೆಮ್ಮದಿಯಿಲ್ಲವಾಗಿದೆ. ಇದಕ್ಕಿಂತಲೂ ಅನ್ಯಾಯವುಂಟೆ? ಎಲ್ಲಾ ದೇಶದಲ್ಲಿಯೂ ರಾಜರಿಗೆ ಪ್ರಜೆಗಳ ರಕ್ಷಣಾವೇಕ್ಷಣೆ ಮಾಡುವದೇ ಪರಸ್ಪರ ಸಂಬಂಧ—ಅದು ಇಲ್ಲದಿದ್ದರೆ ಅವರವರಿಗೆ ಏನು ಸಂಬಂಧ? ನಮ್ಮ ದೇಶದಲ್ಲಿ ರಾಜನು ಪ್ರಜೆಗಳನ್ನು ಏನು ರಕ್ಷಣೆ ಮಾಡುತ್ತಾನೆ? ಧರ್ಮ ಹೋಯಿತು, ಜಾತಿ ಹೋಯಿತು, ಮಾನ ಹೋಯಿತು, ಕುಲ ಹೋಯಿತು, ಇನ್ನೀಗ ಪ್ರಾಣಕೂಡ ಹೋಗುವದಾಗಿದೆ. ಈ ನಿಶಾಚೋರರಾದ ನೀಚರನ್ನು ಓಡಿಸಿದಹೊರತು ಹಿಂದುಗಳಿಗೆ ಹಿಂದುಗಳಾಗಿರಲು ಸಾಧ್ಯವೆ?

ಮಹೇಂದ್ರ—ಅವರನ್ನು ದೇಶಬಿಟ್ಟು ಹೊರಡಿಸುವದು ಹೇಗೆ? ಯಾರು ಹೊರಡಿಸುವವರು?

ಭವಾನಂದ—ನಾನು.

ಮಹೇಂದ್ರ—ನೀನು ಒಬ್ಬನೇ ಹೊರಡಿಸುವೆಯಾ? ಒಬ್ಬನ ಕೈಲಿ ಆದೀತೆ?

ಇದನ್ನು ಕೇಳಿ, ಕಳ್ಳನು ಸಂಗೀತವನ್ನು ಹಾಡತೊಡಗಿದನು—

"ಸಪ್ತಕೋಟಿ ಕಂಠ ಕಲಕಲನಿನಾದ ಕರಾಳೆ
ದ್ವಿಸಪ್ತಕೋಟಿ ಭುಜೈರ್ಧೃತಖರ ಕರವಾಲೆ."

ಇಂತಾ ತಾಯಿಯನ್ನು ಯಾರು ಅಬಲೆಯನ್ನುವರು?

ಮಹೇಂದ್ರ—ಆದರೆ, ನೋಡಿದರೆ ನೀನು ಒಬ್ಬನೇ?

ಭವಾನಂದ—ಏತಕ್ಕೆ ಈಗತಾನೆ ಇನ್ನೂರು ಜನರನ್ನ ನೋಡಲಿಲ್ಲವೆ?

ಮಹೇಂದ್ರ—ಅಷ್ಟುಮಂದಿಯೂ ಸಂತಾನರೆ (ಸನ್ಯಾಸಿಗಳೆ)?

ಭವಾನಂದ—ಎಲ್ಲರೂ ಸಂತಾನರೇ ಹೌದು.

ಮಹೇಂದ್ರ—ಇನ್ನೆಷ್ಟುಮಂದಿ ಇದ್ದಾರೆ?

ಭವಾನಂದ—ಇಂತವರು ಸಹಸ್ರ ಸಹಸ್ರ ಜನವಿದ್ದಾರೆ, ಇನ್ನೂ ಆಗುವವರೂ ಇದ್ದಾರೆ.

ಮಹೇಂದ್ರ—ಹತ್ತು ಇಪ್ಪತ್ತುಸಾವಿರವಾದೀತೆ? ಅಷ್ಟು ಜನರಿಂದಲಾದರೂ ಮುಸಲಮಾನರನ್ನು ರಾಜ್ಯಚ್ಯುತರನ್ನಾಗಿ ಮಾಡಲು ಸಾಧ್ಯವೆ?

ಭವಾನಂದ—ಪಲಾಶಿ (Plassy) ಯುದ್ಧದಲ್ಲಿ ಇಂಗ್ಲೀಷರಿಗೆ ಎಷ್ಟು ಸೈನ್ಯ ವಿತ್ತು?

ಮಹೇಂದ್ರ—ಇಂಗ್ಲೀಷರು ಬಂಗಾಳಿಗಳೇನು?

ಭವಾನಂದ—ಆಗಲಿ. ಏನುಕಡಮೆ? ಮೈಯಲ್ಲಿ ಹೆಚ್ಚಾದ ಬಲವಿದ್ದರೆ ಸಾಲದೆ? ಗುಂಡು ಏನು ಲಕ್ಷ್ಯ? ಅದು ಅಲ್ಪವೆ.

ಮಹೇಂದ್ರ—ಆದರೆ ಇಂಗ್ಲೀಷರಿಗೂ ಮುಸಲಮಾನರಿಗೂ ಏತಕ್ಕೆ ಇಷ್ಟು ವೆತ್ಯಾಸ?

ಭವಾನಂದ—ಮೊದಲನೆಯದು, ಇಂಗ್ಲೀಷರಲ್ಲಿ ಒಬ್ಬ ಸತ್ತರೆ ಎಲ್ಲರೂ ಓಡಿ ಹೋಗುವುದಿಲ್ಲ; ಮುಸಲಮಾನರು ಮೈಮೇಲೆ ಒಂದು ಪೆಟ್ಟುಬಿದ್ದರೆ ಎಲ್ಲರೂ ಪಲಾಯನಪರರಾಗುತ್ತಾರೆ; ಷರಬತ್ತು ಹುಡುಕಿಕೊಂಡು ಹೋಗುತ್ತಾರೆ; ಎರಡನೆಯದು, ಇಂಗ್ಲೀಷರಿಗೆ ಮುಷ್ಕರವಿದೆ, ಹಿಡಿದದ್ದನ್ನ ಬಿಡುವದಿಲ್ಲ, ಮಾಡಿ ಪೂರೈಸುತ್ತಾರೆ; ಮುಸಲಮಾನರು ಇದಕ್ಕೆ ವಿಪರೀತ; ವೇತನಾಪೇಕ್ಷಿಗಳು; ದುಡ್ಡಿಗೋಸ್ಕರ ಪ್ರಾಣಬಿಡುವವರು; ಅದೂ ಸರಿಯಾಗಿ ಬರುವದಿಲ್ಲ—ಶಿಪಾಯಿ ಗಳಿಗೆ ಸರಿಯಾಗಿ ತಿಂಗಳುಗಟ್ಲೆ ಸಂಬಳ ಸಿಕ್ಕುವದಿಲ್ಲ. ಕಡೇಮಾತು; ಸಾಹಸ, ಪಿರಂಗಿಗುಂಡು ಒಂದು ಸ್ಥಳದಲ್ಲಿ ಹೊರತು ಹತ್ತು ಸ್ಥಳಗಳಲ್ಲಿ ಬೀಳುವದಿಲ್ಲ. ಆದ್ದರಿಂದ ಒಂದು ಗುಂಡು ನೋಡಿ ಹತ್ತು ಜನ ಓಡಿಹೋಗಬೇಕಾದ ಅವಶ್ಯಕವಿಲ್ಲ. ಆದರೆ ಒಂದು ಗುಂಡನ್ನು ನೋಡಿದರೆ ಮುಸಲಮಾನರ ಗುಂಪೆಲ್ಲ ಫರಾರಿ—ಮತ್ತು ಗುಂಪಿನಲ್ಲೆಲ್ಲ ಗುಂಡು ಬಿದ್ದರೂ ಇಂಗ್ಲೀಷರಲ್ಲಿ ಒಬ್ಬನಾದರೂ ಓಡಿಹೋಗುವದಿಲ್ಲ.

ಮಹೇಂದ್ರ—ಹಾಗಾದರೆ, ನಿಮಗೆ ಈ ಗುಣಗಳೆಲ್ಲ ಉಂಟೊ?

ಭವಾನಂದ—ಇಲ್ಲ. ಗುಣಗಳು ಹಣ್ಣುಗಳ ಹಾಗೆ ಮರದಿಂದ ಬೀಳುವದಿಲ್ಲ. ಅಭ್ಯಾಸಮಾಡಿದರೆ ಬರುತ್ತೆ.

ಮಹೇಂದ್ರ—ನೀವು ಅಭ್ಯಾಸಮಾಡುತ್ತೀರೇನು?

ಭವಾನಂದ—ಕಾಣುವದಿಲ್ಲವೆ? ನಾವು ಸನ್ಯಾಸಿಗಳೆಂಬುವದು? ನಮ್ಮ ಸನ್ಯಾಸವೆಲ್ಲ ಈ ಅಭ್ಯಾಸಕ್ಕೋಸ್ಕರವೇ—ಕಾರ್ಯಸಾಧನವಾದರೆ—ಅಂದರೆ ಅಭ್ಯಾಸವು ಸಂಪೂರ್ಣವಾದರೆ—ನಾವು ಪುನಃ ಗೃಹಸ್ಥರಾಗುತ್ತೇವೆ. ನನಗೂ ಹೆಂಡರಮಕ್ಕಳು ಉಂಟು.

ಮಹೇಂದ್ರ—ನಿಮ್ಮ ಸನ್ಯಾಸವೆಲ್ಲ ಜನರಿಗೆ ಮೋಸಮಾಡುವದಕ್ಕಲ್ಲವೆ?

ಭವಾನಂದ—ಸಂತಾನರು ಸುಳ್ಳು ಹೇಳುವದಿಲ್ಲ. ನಿನ್ನಲ್ಲಿ ಸುಳ್ಳು ಜಂಭ ಮಾಡುವದಿಲ್ಲ. ಮೋಸಗೊಳಿಸುವವರು ಯಾರು? ಮೋಸಗೊಳಿಸುವದುಂಟೆಂದು ಒಪ್ಪಿಕೊಳ್ಳುವರಾದ ನಮಗೆ ಮೋಸ ತಿಳಿಯದು, ಮೊದಲೂ ಇರಲಿಲ್ಲ. ನಾವು

ಮೋಸಗೊಳಿಸುವದಿಲ್ಲ. ನಾವು ಮಾಡಿಕೊಂಡಿರುವ ವ್ರತವನ್ನು ಕಾಪಾಡುತ್ತೇವೆ—ನೀನೂ ಸಂತಾನನಾಗುವಿಯಾ?

ಮಹೇಂದ್ರ—ನಾನು ನನ್ನ ಹೆಂಡತಿ ಮಗಳನ್ನು ನೋಡದೆ ಯಾವ ಮಾತನ್ನೂ ಹೇಳಲಾರೆ.

ಭವಾನಂದ—ಹಾಗಾದರೆ, ನಡೆ, ನಿನ್ನ ಹೆಂಡತಿಯನ್ನೂ ಮಗುವನ್ನೂ ತೋರಿಸುತ್ತೇನೆ. ಹೀಗೆ ಹೇಳುತ, ಇಬ್ಬರೂ ಹೋಗುತಲಿದ್ದರು. ಭವಾನಂದನು ಪುನಃ, 'ವಂದೇ ಮಾತರಂ' ಎಂದು ಹಾಡುವದಕ್ಕೆ ತೊಡಗಿದನು. ಮಹೇಂದ್ರನಿಗೂ ಕಂಠವು ಬಹಳ ಚನ್ನಾಗಿತ್ತು. ಅವನೂ ಸಂಗಡ ಹಾಡುವುದಕ್ಕೆ ತೊಡಗಿದನು. ಹಾಗೇ ಹಾಡು ಹಾಡುತ್ತ ಅವನ ಕಣ್ಣಿನಲ್ಲಿ ನೀರು ತುಂಬಿತು. ಆಗವನು, ಹೆಂಡರು ಮಕ್ಕಳನ್ನು ಬಿಡದಿರುವದಾದರೆ ನನಗೂ ಈ ವ್ರತವನ್ನು ಹೇಳಿಕೊಡೆಂದು ಕೇಳಿದನು.

ಭವಾನಂದ—ಈ ವ್ರತವನ್ನು ಕೈಕೊಂಡವರು ಹೆಂಡರು ಮಕ್ಕಳನ್ನು ಬಿಡಬೇಕು. ನೀನು ಈ ವ್ರತವನ್ನು ಗ್ರಹಣಮಾಡಿದರೆ ಹೆಂಡರು ಮಕ್ಕಳನ್ನು ನೋಡಕೂಡದು. ಅವರು ಸುಖವಾಗಿರುವದಕ್ಕೆ ಬೇಕಾದ ಏರ್ಪಾಡುಗಳಾದೀತು; ಆದರೆ ವ್ರತ ಪೂರೈಸುವವರೆಗೆ ಅವರ ಮುಖದರ್ಶನವು ನಿಷೇಧವಾದದ್ದು.

ಮಹೇಂದ್ರ—ಹಾಗಾದರೆ, ನಾನು ಈ ವ್ರತವನ್ನು ಮಾಡುವದಿಲ್ಲ; ನನಗೆ ಬೇಡ.

---

## ಹನ್ನೆರಡನೆಯ ಪರಿಚ್ಛೇದ

ರಾತ್ರಿಯು ಪ್ರಭಾತವಾಯಿತು. ಆ ಜನವಿಹೀನವಾದ ಕಾನನ—ಇದುವರೆಗೂ ಅಂಧಕಾರವಾಗಿ ಶಬ್ದಹೀನವಾಗಿದ್ದದ್ದು—ಈಗ ಆಲೋಕಮಯವಾಯಿತು. ಪಕ್ಷಿಗಳ ಧ್ವನಿಯಿಂದ ಶಬ್ದಿತವಾಗಿ ಆನಂದಮಯವಾಯಿತು. ಆ ಆನಂದಮಯವಾದ ಪ್ರಭಾತದಲ್ಲಿ ಆ ಆನಂದಮಯವಾದ ಕಾನನದಲ್ಲಿ "ಆನಂದ ಮಠದಲ್ಲಿ" ಸತ್ಯಾನಂದಠಾಕೂರನು ಹರಿಣ ಚರ್ಮದ ಮೇಲೆ ಕುಳಿತುಕೊಂಡು ಸಂಧ್ಯಾಹ್ನಿಕವನ್ನು ಮಾಡುತಲಿದ್ದನು. ಅವನ ಪಾರ್ಶ್ವದಲ್ಲಿ ಜೀವಾನಂದನು ಕುಳಿತಿದ್ದನು. ಈ ಸಮಯದಲ್ಲಿ ಭವಾನಂದನು ಮಹೇಂದ್ರಸಿಹ್ಮನನ್ನು ಸಂಗಡ ಕರೆದುಕೊಂಡು ಬಂದು ನಿಂತನು. ಬ್ರಹ್ಮಚಾರಿಯು ಮಾತುನಾಡದೆ ಸಂಧ್ಯಾಹ್ನಿಕ ಮಾಡುತಲಿದ್ದನು. ಯಾರೂ ಮಾತುನಾಡಲು ಸಮರ್ಥರಾಗಲಿಲ್ಲ. ಸಂಧ್ಯಾಹ್ನಿಕವು ಮುಗಿದನಂತರ, ಭವಾನಂದನು ಜೀವಾನಂದನು ಸಹ ಅವನಿಗೆ ಕಾಲು ಮುಟ್ಟಿ ಪ್ರಣಾಮವನ್ನು ಮಾಡಿ ವಿನೀತಭಾವದಿಂದ ಕುಳಿತುಕೊಂಡರು. ಆಗ ಸತ್ಯಾನಂದನು ಭವಾನಂದನಿಗೆ ಏನೋ ಸಂಜ್ಞೆಯನ್ನು ಮಾಡಿ ಹೊರಗೆ ಕರೆದು

ಕೊಂಡು ಹೋದನು. ಅವರವರು ಏನು ಮಾತುನಾಡಿಕೊಂಡರೋ ಅದು ನಮಗೆ ತಿಳಿಯದು. ಆಮೇಲೆ ಇಬ್ಬರೂ ಮಂದಿರಕ್ಕೆ ಹಿಂದಿರುಗಿ ಬಂದು, ಬ್ರಹ್ಮಚಾರಿಯು ನಗುಮುಖನಾಗಿ ಸಕರುಣದಿಂದ ಮಹೇಂದ್ರನನ್ನು ಕುರಿತು, ಅಣ್ಣ! ನಿನ್ನ ದುಃಖದಲ್ಲಿ ನಾನೂ ಕಾತರನಾಗಿದ್ದೇನೆ; ಸಾಕ್ಷಾತ್ ಆ ದೀನಬಂಧುವಿನ ಕೃಪೆಯಿಂದ ನಿನ್ನ ಹೆಂಡತಿಯನ್ನು ಮಗಳನ್ನು ಸಹ ನಿನ್ನೆ ರಾತ್ರಿ ರಕ್ಷಿಸಲು ಸಮರ್ಥನಾದೆನೆಂದು ಹೇಳಿ, ಅದರ ವೃತ್ತಾಂತವನ್ನೆಲ್ಲ ವಿಶದವಾಗಿ ತಿಳಿಸಿ, ಅನಂತರ, ನಡೆ, ಅವರಿರುವ ಸ್ಥಳಕ್ಕೆ ಕರೆದುಕೊಂಡು ಹೋಗುವೆನೆಂದನು.

ಹೀಗೆ ಹೇಳಿ ಬ್ರಹ್ಮಚಾರಿಯು ಮುಂದುಗಡೆ ಹೋಗುತ್ತ ಮಹೇಂದ್ರನು ಅವನ ಬೆನ್ನಟ್ಟುತ್ತ ಇಬ್ಬರೂ ದೇವಾಲಯದೊಳಗೆ ಪ್ರವೇಶಿಸಿದರು. ಪ್ರವೇಶ ಮಾಡುತ್ತಲೇ ಮಹೇಂದ್ರನಿಗೆ ಒಂದು ವಿಸ್ತಾರವಾದ ಅತಿ ಉಚ್ಚವಾದ ಕೊಠಡಿಯು ಕಣ್ಗೊಳಿಸಿತು. ಆ ನವಾರುಣೋದಿತವಾದ ಪ್ರಾತಃಕಾಲದಲ್ಲಿ ಸಮೀಪದಲ್ಲಿದ್ದ ಕಾನನವು ಸೂರ್ಯಕಿರಣಗಳಿಂದ ವಜ್ರಖಚಿತವಾಗಿರ್ಪಂತೆ ಜ್ವಲಿಸುತಲಿದ್ದರೂ ಈ ವಿಶಾಲವಾದ ಗೃಹದಲ್ಲಿ ಪ್ರಾಯಶಃ ಅಂಧಕಾರವಾಗಿಯೇ ಇತ್ತು. ಆ ಗೃಹದಲ್ಲಿ ಏನಿತ್ತೋ ಮೊದಲು ಮಹೇಂದ್ರನಿಗೆ ಅದು ಗೊತ್ತಾಗಲಿಲ್ಲ. ಹಾಗೆಯೇ ನೋಡುತ ನೋಡುತ, ಒಂದು ದೊಡ್ಡದಾದ ಚತುರ್ಭುಜಗಳುಳ್ಳ ಮೂರ್ತಿಯು ಕಣ್ಗೊಳಿಸಿತು—ಶಂಖಚಕ್ರಗದಾಪದ್ಮಧಾರಿಯಾಗಿಯೂ, ಕೌಸ್ತುಭಶೋಭಿತ ಹೃದಯವುಳ್ಳದ್ದಾಗಿಯೂ ಇದ್ದುದಲ್ಲದೆ, ಸಮ್ಮುಖದಲ್ಲಿ ಸುದರ್ಶನಚಕ್ರವು ಘೂರ್ಣ್ಯಮಾನಪ್ರಾಯವಾಗಿ ಸ್ಥಾಪಿತವಾಗಿತ್ತು. ಮಧುಕೈಟಭರ ಸ್ವರೂಪಗಳೆರಡು ಬೃಹದಾಕಾರವಾದ ಛಿನ್ನಮಸ್ತಕ ಮೂರ್ತಿಗಳು ರಕ್ತದಿಂದ ಪ್ಲಾವಿತವಾದ ಹಾಗೆ ಚಿತ್ರಿತವಾಗಿ ಎದುರಿಗೆ ಇದ್ದವು. ಎಡಪಾರ್ಶ್ವದಲ್ಲಿ ಲಕ್ಷ್ಮೀದೇವಿಯ ಮೂರ್ತಿಯು ಕೆದರಿಹೋದ ಕುಂತಲವುಳ್ಳದ್ದಾಗಿಯೂ ಶತದಳಮಾಲಾಮಂಡಿತವಾಗಿಯೂ ಭಯದಿಂದ ಭೀತವಾಗಿರುವವದರೋಪಾದಿಯಲ್ಲಿ ನಿಂತಿತ್ತು. ದಕ್ಷಿಣಪಾರ್ಶ್ವದಲ್ಲಿ ಸರಸ್ವತಿಯು ಪುಸ್ತಕಹಸ್ತಳಾಗಿ ವೀಣಾಯಂತ್ರ ಸಹಿತವಾಗಿ ಮೂರ್ತಿಮತ್ತಾದ ರಾಗರಾಗಿಣೀ ಮುಂತಾದವರಿಂದ ಸುತ್ತುವರಿಯಲ್ಪಟ್ಟಂತೆ ನಿಂತಿದ್ದಳು. ಎಲ್ಲದಕ್ಕಿಂತ ಮೇಲ್ಗಡೆ ಎತ್ತರವಾದ ಮಂಚದಮೇಲೆ ಬಹುರತ್ನಮಂಡಿತವಾದ ಆಸನದಲ್ಲಿ ಕುಳಿತಿದ್ದ ಒಂದು ಮೋಹಿನೀಮೂರ್ತಿ—ಲಕ್ಷ್ಮೀ ಸರಸ್ವತಿಗಳಿಗಿಂತಲೂ ಐಶ್ವರ್ಯಾನ್ವಿತವಾದ ಮೂರ್ತಿಯು ಇತ್ತು. ಗಂಧರ್ವರು ಕಿನ್ನರರು ದೇವತೆಗಳು ಯಕ್ಷರಕ್ಷರೆಲ್ಲರೂ ಆ ಮೂರ್ತಿಗೆ ಪೂಜೆಮಾಡುತಲಿದ್ದಾರೆ. ಬ್ರಹ್ಮಚಾರಿಯು ಅತಿಗಂಭೀರವಾದ ಭೀತವಾದ ಸ್ವರದಿಂದ ಮಹೇಂದ್ರನನ್ನು ಕುರಿತು, ಎಲ್ಲಾ ನೋಡಿಪ್ಪಾಯಿತೆ? ಎಂದನು. ಮಹೇಂದ್ರನು ನೋಡಲಾಯಿತೆಂದನು.

ಬ್ರಹ್ಮಚಾರಿ—ಮೇಲೆ ಇರುವದೇನು, ನೋಡಿದಿಯಾ?

ಮಹೇಂದ್ರ—ನೋಡಿದೆ, ಅದು ಯಾರು?

ಬ್ರಹ್ಮಚಾರಿ—ಮಹಾತಾಯಿ.

ಮಹೇಂದ್ರ—ತಾಯಿಯು ಯಾರು ?

ಬ್ರಹ್ಮಚಾರಿ—ನಾವು ಯಾರಿಗೆ ಸಂತಾನರೋ ಆ ತಾಯಿ.

ಮಹೇಂದ್ರ—ಅದು ಯಾರು ?

ಬ್ರಹ್ಮಚಾರಿ—ಸಮಯ ಬಂದಾಗ ತಿಳಿಯುವೆ. ಈಗ ಹೇಳು—"ವಂದೇ ಮಾತರಂ" ಮುಂದೆ ನಡೆ, ನೋಡುವೆ.

ಅಲ್ಲಿಂದ ಬ್ರಹ್ಮಚಾರಿಯು ಮಹೇಂದ್ರನನ್ನು ಬೇರೆ ಕೊಠಡಿಗೆ ಕರೆದು ಕೊಂಡು ಹೋದನು. ಅಲ್ಲಿ ಮಹೇಂದ್ರನು, ಒಂದಪರೂಪವಾದ ಸರ್ವಾಂಗ ಸಂಪನ್ನವಾದ ಸರ್ವಾಭರಣಭೂಷಿತವಾದ ಜಗದ್ಧಾತ್ರಿಯ ಮೂರ್ತಿಯನ್ನು ನೋಡಿ, ಇದು ಯಾವದೆಂದು ಕೇಳಿದನು.

ಬ್ರಹ್ಮಚಾರಿ—ಮಹಾತಾಯಿಯು ಮೊದಲು ಇದ್ದ ಸ್ಥಿತಿ.

ಮಹೇಂದ್ರ—ಅದೇನು ?

ಬ್ರಹ್ಮಚಾರಿ—ಇವಳು ಮೊದಲು ಕುಂಜರಕೇಸರಿ ಮುಂತಾದ ವನದ ಪಶುಗಳನ್ನೆಲ್ಲ ಪದತಲದಲ್ಲಿ ಮೆಟ್ಟಿ ವನಪಶುಗಳ ಆವಾಸಭೂಮಿಯಲ್ಲಿ ತನ್ನ ಪದ್ಮಾ ಸನವನ್ನು ಸ್ಥಾಪಿಸಿದ್ದಳು. ಆಗ ಸರ್ವಾಲಂಕಾರಪರಿಭೂಷಿತಳಾಗಿ ಹಾಸಮಯಿ ಯಾದ ಸುಂದರಿಯಾಗಿದ್ದಳು. ಇವಳು ಬಾಲಾರ್ಕವರ್ಣಾಭಳಾದ ಐಶ್ವರ್ಯಶಾಲಿನಿ. ಇವಳಿಗೆ ಪ್ರಣಾಮವನ್ನು ಮಾಡು.

ಮಹೇಂದ್ರನು ಭಕ್ತಿಭಾವದಿಂದ ಜಗದ್ಧಾತ್ರಿರೂಪಿಣೀ ಮಾತೃಭೂಮಿಗೆ ಪ್ರಣಾಮವನ್ನು ಮಾಡಿದ ಮೇಲೆ, ಬ್ರಹ್ಮಚಾರಿಯು ಅವನಿಗೆ ಒಂದು ಸುರಂಗ ವನ್ನು ತೋರಿಸಿ ಆ ಮಾರ್ಗವಾಗಿ ಬರುವಂತೆ ಹೇಳಿ ಬ್ರಹ್ಮಚಾರಿಯು ಮುಂದೆ ಆ ಮಾರ್ಗವಾಗಿ ಹೋದನು. ಮಹೇಂದ್ರನು ಭಯದಿಂದ ಹಿಂದೆ ಹಿಂದೆ ಹೋದನು. ಆ ಭೂಗರ್ಭಸ್ಥವಾದ ಅಂಧಕಾರಮಯವಾದ ಕೊಠಡಿಯಲ್ಲಿ ಎಲ್ಲಿಂದಲೋ ಸಾಮಾನ್ಯವಾದ ಬೆಳಕು ಬರುತ್ತಲಿತ್ತು. ಆ ಮಸಕಾದ ಬೆಳಕಿನಿಂದ ಒಂದು ಕಾಳಿಯ ಮೂರ್ತಿಯು ಕಣ್ಗೊಳಸಿತು.

ಬ್ರಹ್ಮಚಾರಿ—ನೋಡು, ತಾಯಿಯು ಹೇಗಾಗಿಹೋಗಿದ್ದಾಳೆ.

ಮಹೇಂದ್ರ—ಭಯದಿಂದ ಕಾಳೀ.

ಬ್ರಹ್ಮಚಾರಿ—ಕಾಳೀ—ಅಂಧಕಾರಸಮಾಚ್ಛನ್ನವಾದ ಕಾಲಿಮಾಮಯೀ. ಹೃತಸರ್ವಸ್ವಳಾದಕಾರಣ ನಗ್ನಳಾಗಿದ್ದಾಳೆ. ಈಗ ದೇಶವೆಲ್ಲ ಸ್ಮಶಾನವಾಗಿ ಹೋಗಿದೆ. ಅದುಕಾರಣ ಮಾತೆಯು ಕಂಕಾಳಮಾಲಿನಿಯಾಗಿದ್ದಾಳೆ. ತನ್ನ ಮಂಗಳವನ್ನು ತನ್ನ ಕಾಲಡಿಯಲ್ಲಿ ತುಳಿದುಕೊಂಡಿದ್ದಾಳೆ. ಹಾ ! ತಾಯಿ !

ಬ್ರಹ್ಮಚಾರಿಯ ಕಣ್ಣುಗಳಿಂದ ದರದರ ಧಾರೆಯು ಬೀಳಲಾರಂಭವಾಯಿತು. ಮಹೇಂದ್ರನು, ಕೈಯಲ್ಲಿ ಖೇಟಕಖರ್ಪರಗಳು ಏತಕ್ಕೆ ? ಎಂದು ಕೇಳಿದನು.

ಬ್ರಹ್ಮಚಾರಿ—ನಾವು ಸಂತಾನರು, ಇವುಗಳನ್ನು ತಾಯಿಯ ಕೈಯಲ್ಲಿ ಅಸ್ತ್ರವಾಗಿ ಕೊಟ್ಟಿದ್ದೇವೆ. ಹೇಳು, ವಂದೇ ಮಾತರಂ.

ಮಹೇಂದ್ರನು, "ವಂದೇ ಮಾತರಂ" ಹೇಳಿ ಕಾಳಿಯ ಮೂರ್ತಿಗೆ ಪ್ರಣಾಮವನ್ನು ಮಾಡಿದನು. ಅನಂತರ ಬ್ರಹ್ಮಚಾರಿಯು, ಈ ಮಾರ್ಗವಾಗಿ ಬಾ ಎಂದು ಹೇಳಿ ಎರಡನೇ ಸುರಂಗಕ್ಕೆ ಹತ್ತಿದನು. ಹತ್ತಿ ಹೋಗುತಲಿರುವಾಗ ಅವರಿಬ್ಬರಮೇಲೂ ಪ್ರಾತಃಸೂರ್ಯನ ಕಿರಣರಾಶಿಯು ಬಿತ್ತು. ನಾಲ್ಕು ದಿಕ್ಕು ಗಳಲ್ಲಿಯೂ ಪಕ್ಷಿಕುಲಗಳ ಕಂಠಸ್ವರವು ಎದ್ದಿತು. ಅಲ್ಲಿ ನೋಡಲಾಗಿ ಒಂದು ಮರ್ಮರಪ್ರಸ್ತರನಿರ್ಮಿತವಾದ ಪ್ರಶಸ್ತವಾದ ಮಂದಿರ ಮಧ್ಯದಲ್ಲಿ ಸುವರ್ಣ ನಿರ್ಮಿತವಾದ ದಶಭುಜವುಳ್ಳ ಪ್ರತಿಮೆಯು ನವಾರುಣಕಿರಣದಲ್ಲಿ ಜ್ಯೋತಿರ್ಮಯ ವಾಗಿ ನಗುಮುಖವುಳ್ಳದ್ದಾಗಿ ಹೊಳೆಯುತಲಿತ್ತು. ಬ್ರಹ್ಮಚಾರಿಯು ಪ್ರಣಾಮ ವನ್ನು ಮಾಡಿ, ಇವಳು ತಾಯಿ, ಮುಂದೆ ಹೇಗೆ ಆಗಬೇಕೋ ಆ ಸ್ವರೂಪವನ್ನು ತೋರುವಳು. ದಶಭುಜಗಳು ದಶದಿಕ್ಕಿಗೂ ಪ್ರಸಾರಿತವಾಗಿವೆ. ಆ ದಶಭುಜ ಗಳಲ್ಲಿಯೂ ನಾನಾವಿಧ ಆಯುಧರೂಪವಾಗಿ ನಾನಾಶಕ್ತಿ ಶೋಭಿತಳು, ಪದತಲ ದಲ್ಲಿ ಶತ್ರುವಿಮರ್ದಿತ, ಪದಾಶ್ರಿತವಾದ ವೀರಕೇಸರಿಗಳು ಶತ್ರುನಿಪೀಡನದಲ್ಲಿ ನಿಯುಕ್ತರಾಗಿದ್ದಾರೆ. ದಿಗ್ಭುಜೆ—ಹೇಳುತ ಹೇಳುತ ಸತ್ಯಾನಂದನು ಗದ್ಗದ ಕಂಠ ದಿಂದ ಅಳಲಾರಂಭಿಸಿದನು. ದಿಗ್ಭುಜೆ–ನಾನಾಪ್ರಹರಣಧಾರಿಣೀ ಶತ್ರುಮರ್ದನೀ, ವೀರೇಂದ್ರಪೃಷ್ಠ ವಿಹಾರಿಣೀ, ದಕ್ಷಿಣದಲ್ಲಿ ಲಕ್ಷ್ಮೀಭಾಗ್ಯಸ್ವರೂಪಿಣೀ, ಎಡದಲ್ಲಿ ವಾಣೀ ವಿದ್ಯಾ, ವಿಜ್ಞಾನದಾಯಿನೀ, ಜತೆಯಲ್ಲಿ ಬಲರೂಪಿಯಾದ ಕಾರ್ತಿ ಕೇಯನು, ಕಾರ್ಯಸಿದ್ಧರೂಪಿಯಾದ ಗಣೇಶ, ಬಾ, ನಾವಿಬ್ಬರೂ ಮಹಾತಾಯಿಗೆ ಪ್ರಣಾಮವನ್ನು ಮಾಡೋಣವೆಂದು ಹೇಳಿ ಇಬ್ಬರೂ ಕೈಜೋಡಿಸಿಕೊಂಡು ಊರ್ಧ್ವ ಮುಖರಾಗಿ ಏಕಕಂಠದಿಂದ, "ಸರ್ವಮಂಗಳ ಮಾಂಗಲ್ಯೇ ಶಿವೆ ಸರ್ವಾರ್ಥಸಾಧಿಕೆ! ಶರಣ್ಯೇ ತ್ರ್ಯಂಬಕೆ ಗೌರಿ ನಾರಾಯಣಿ ನಮೋಸ್ತುತೆ" ಎಂದು ಸ್ತವಮಾಡಿದರು.

ಇಬ್ಬರೂ ಭಕ್ತಿಭಾವದಿಂದ ಸಾಷ್ಟಾಂಗಪ್ರಣಾಮವಂ ಗೈದು ಎದ್ದನಂತರ ಮಹೇಂದ್ರನು ಗದ್ಗದಕಂಠಸ್ವರವುಳ್ಳವನಾಗಿ, ಮಹಾತಾಯಿಯ ಇಂಥಾ ಮೂರ್ತಿ ಯನ್ನು ಯಾವಾಗ ನೋಡಬಲ್ಲೆವು ಎಂದು ಕೇಳಿದನು.

ಬ್ರಹ್ಮಚಾರಿ—ಯಾವಾಗ ತಾಯಿಯ ಸಂತಾನರೆಲ್ಲರೂ ತಾಯಿಯನ್ನು ತಾಯಿಯೆಂದು ಕರೆಯುವರೋ ಆಗ ನೋಡಬಲ್ಲೆವು. ಆಗವಳು ಪ್ರಸನ್ನ ಳಾಗುವಳು.

ಮಹೇಂದ್ರ—ನನ್ನ ಹೆಂಡತಿ ಮಗಳೂ ಎಲ್ಲಿ?

ಬ್ರಹ್ಮಚಾರಿ—ನಡೆ, ನೋಡುವೆ, ಮುಂದೆ ಬಾ.

ಮಹೇಂದ್ರ—ಅವರನ್ನು ಒಂದು ತಡವೆ ಮಾತ್ರ ನೋಡಿ, ಹೇಳಿಬಿಟ್ಟು ಬರುವೆನು.

ಬ್ರಹ್ಮಚಾರಿ—ಏತಕ್ಕೆ ಹೇಳಿಬಿಟ್ಟು ಬರಬೇಕು?

ಮಹೇಂದ್ರ—ನಾನೂ ಈ ಮಹಾಮಂತ್ರವನ್ನು ಗ್ರಹಣಮಾಡುವೆನು.,

ಬ್ರಹ್ಮಚಾರಿ—ಅವರನ್ನು ಎಲ್ಲಿಗೆ ಕಳುಹಿಸಿಬಿಡುವೆ?

ಮಹೇಂದ್ರನು ಸ್ವಲ್ಪ ಯೋಚಿಸಿ, ನನ್ನ ಮನೆಯಲ್ಲಿ ಯಾರೂ ಇಲ್ಲ. ನನಗೆ ಮತ್ತೆಲ್ಲಿಯೂ ಸ್ಥಳವಿಲ್ಲ. ಈ ಅತ್ಯನಾಯಿಕವಾದ ಸಮಯದಲ್ಲಿ ಎಲ್ಲಿತಾನೇ ಸ್ಥಳವು ಸಿಕ್ಕೀತು?

ಬ್ರಹ್ಮಚಾರಿ—ನಾವು ಬಂದ ಮಾರ್ಗವಾಗಿ ಹಿಂದಿರುಗಿ ಮಂದಿರಕ್ಕೆ ಹೋದರೆ ಅಲ್ಲಿ ಬಾಗಿಲಿನಲ್ಲಿ ನಿನ್ನ ಹೆಂಡತಿ ಮಗಳೂ ಸಹ ಕುಳಿತಿರುವರು. ಕಲ್ಯಾಣಿಯು ಇನ್ನೂ ಉಪವಾಸ. ಅವರಿರುವಲ್ಲಿಯೇ ಭಕ್ಷ್ಯಸಾಮಗ್ರಿಗಳು ಸಿದ್ಧವಾಗಿವೆ. ಅವರಿಗೆ ಊಟಮಾಡಿಸಿ ನಿನ್ನ ಇಷ್ಟಬಂದಹಾಗೆ ಮಾಡು, ಪ್ರಕೃತ ನನ್ನನ್ನು ಕಾಣಲಾರೆ, ನಾನು ಹೋಗುತ್ತೇನೆ. ನಿನ್ನ ಮನಸ್ಸು ಹಾಗೆ ಇದ್ದರೆ, ಉಪಯುಕ್ತ ಸಮಯದಲ್ಲಿ ನಿನ್ನನ್ನು ನೋಡುವೆ.

ಇಷ್ಟು ಹೇಳಿ ಬ್ರಹ್ಮಚಾರಿಯು ಯಾವುದೋ ಬೇರೆ ಮಾರ್ಗದಲ್ಲಿ ಹೋಗಿ ಅದೃಶ್ಯನಾದನು. ಮಹೇಂದ್ರನು ಮೊದಲು ಬಂದ ಮಾರ್ಗವಾಗಿ ಹೋಗಿ ನೋಡಲಾಗಿ ಮಂದಿರದ ಮುಂಭಾಗದಲ್ಲಿ ತನ್ನ ಹೆಂಡತಿಯು ಮಗಳನ್ನೆತ್ತಿಕೊಂಡು ಕುಳಿತಿದ್ದಳು.

ಇತ್ತ ಸತ್ಯಾನಂದನು ಬೇರೆ ಸುರಂಗದಿಂದಿಳಿದು ಮತ್ತೊಂದು ಭೂಗರ್ಭಸ್ಥವಾದ ಕೊಠಡಿಗೆ ಹೋದನು. ಅಲ್ಲಿ ಜೀವಾನಂದನೂ ಭವಾನಂದನೂ ಕೂತುಕೊಂಡು ಹಣವನ್ನೆಣಿಸಿ ಸಾಲುಸಾಲಾಗಿ ಇರಿಸುತಲಿದ್ದರು. ಆ ಕೊಠಡಿಯಲ್ಲಿ ಸ್ತೂಪಾಕಾರವಾಗಿ ಬೆಳ್ಳಿ, ಭಂಗಾರ, ತಾಮ್ರ ನಾಣ್ಯಗಳೂ, ವಜ್ರ ವೈಡೂರ್ಯ ಪ್ರವಾಳ ಮುತ್ತು ಮುಂತಾದ ನವರತ್ನಗಳೂ ಸಹ ರಾಶಿ ರಾಶಿಯಾಗಿ ಏರಿಸಲ್ಪಟ್ಟಿದ್ದವು. ನೆನ್ನೇ ರಾತ್ರಿಯಲ್ಲಿ ಇವರು ಲೂಟಿಮಾಡಿಕೊಂಡು ತಂದ ಹಣವನ್ನು ಎಣಿಸಿ ಸರಿಯಾಗಿಡುತಲಿದ್ದರು. ಸತ್ಯಾನಂದನು ಆ ಕೊಠಡಿಗೆ ಹೋಗಿ, ಜೀವಾನಂದ! ಮಹೇಂದ್ರನು ಬರುವನು, ಬಂದರೆ ಸಂತಾನರಾದ ನಮಗೆ ವಿಶೇಷ ಉಪಕಾರವಾಗುವುದು. ಏತಕ್ಕಂದರೆ, ಹಾಗೆ ಬಂದರೆ ಅವನ ಹಿರಿಯರವರ ತಲೆಯಾಂತರದಿಂದ ಘಳಿಸಿಟ್ಟಿರುವ ಧನರಾಶಿಯು ತಾಯಿಯ ಸೇವೆಗೆ ಅರ್ಪಿತವಾಗುವುದು; ಆದರೆ ಅವನು ಎಷ್ಟು ದಿನ ಕಾಯಮನೋವಾಕ್ಕಾಗಿ ಮಾತೃಭಕ್ತನಾಗುವದಿಲ್ಲವೋ ಅದುವರೆಗೆ ಅವನನ್ನು ಗ್ರಹಣಮಾಡಕೂಢದು. ನಿಮ್ಮ ಕೈಲಿರುವ ಕೆಲಸವು ಪೂರೈಸಿದನಂತರ ನೀವು ಭಿನ್ನಭಿನ್ನ ಸಮಯದಲ್ಲಿ ಅವನನ್ನನುಸರಿಸಿ ಹೋಗಿ, ಸಮಯ ಒದಗಿದಾಗೆಲ್ಲ ಅವನನ್ನು ಶ್ರೀ ವಿಷ್ಣುಮಂಟಪಕ್ಕೆ ಕರದುಕೊಂಡುಹೋಗಬೇಕು; ಮತ್ತು ಎಂತಹ ಸಮಯದಲ್ಲಿಯೂ ಅವನ ಪ್ರಾಣರಕ್ಷಣೆಯನ್ನು ಮಾಡಬೇಕು. ಏತಕ್ಕಂದರೆ, ಸಂತಾನರಿಗೆ ದುಷ್ಟ ಶಾಸನವು

ಹೇಗೆ ಕರ್ತವ್ಯವಾದ ಧರ್ಮವೊ ಹಾಗೆ ಶಿಷ್ಟರ ರಕ್ಷಣೆಯೂ ಸಹ ಕರ್ತವ್ಯವಾದ ಧರ್ಮವಾಗಿದೆ ಎಂದು ಹೇಳಿದನು.

---

## ಹನ್ನೆರಡನೆಯ ಪರಿಚ್ಛೇದ

ಬಹು ಕಷ್ಟಾನುಭವವಾಡಿದಮೇಲೆ ಮಹೇಂದ್ರನು ಕಲ್ಯಾಣಿಯನ್ನು ಕಂಡನು. ಕಲ್ಯಾಣಿಯು ಬಹಳ ಅತ್ತಳು. ಮಹೇಂದ್ರನೂ ಅತ್ತನು. ಅತ್ತು ಗೋಳಾಡಿದಮೇಲೆ ಕಣ್ಣುಗಳನ್ನೊರಸಿಕೊಂಡರು. ಎಷ್ಟುಸಲ ಒರಸಿಕೊಂಡರೂ ಅಷ್ಟುಸಲ ಜಲಧಾರೆಯು ತಪ್ಪಲಿಲ್ಲ. ಕಣ್ಣೀರು ನಿಲ್ಲುವದಕ್ಕಾಗಿ ಕಲ್ಯಾಣಿಯು ಊಟಮಾಡುವ ಪ್ರಸ್ತಾಪವನೆತ್ತಿದಳು. ಬ್ರಹ್ಮಚಾರಿಯ ಅನುಚರನೊಬ್ಬನು ಭಕ್ಷ್ಯಪದಾರ್ಥಗಳನಿಟ್ಟು ಹೊರಟುಹೋಗಿದ್ದನು. ಅದನ್ನು ತೆಗೆದುಕೊಳ್ಳ ಬೇಕೆಂದು ಕಲ್ಯಾಣಿಯು ಮಹೇಂದ್ರನಿಗೆ ಹೇಳಿದಳು. ದುರ್ಭಿಕ್ಷಕಾಲವಾದುದ ರಿಂದ ಅನ್ನವ್ಯಂಜನಾದಿಗಳು ಸಿಕ್ಕುವ ಸಂಭವವಿಲ್ಲ; ಆದರೆ ದೇಶದಲ್ಲಿದ್ದದ್ದು ಸಂತಾನರಿಗೆ ಸುಲಭವಾಗಿ ಸಿಕ್ಕುವುದು; ಇಲ್ಲದ್ದು ಯಾರಿಗೂ ಸಿಕ್ಕಲಾರದು. ಆ ಕಾನನವು ಸಾಧಾರಣ ಮನುಷ್ಯರಿಗೆ ಅಗಮ್ಯವಾದುದು. ಯಾವ ಮರದಮೇಲೆ ಯಾವ ಹಣ್ಣುಬಿಟ್ಟರೂ ಅನ್ನವಿಲ್ಲದವರು ಅದನ್ನು ಕಿತ್ತು ತಿಂದುಬಿಡುವರು. ಆದರೆ ಈ ಅಗಮ್ಯವಾದ ಅರಣ್ಯದಲ್ಲಿ ಮರದ ಹಣ್ಣುಗಳು ಯಾರಿಗೂ ಸಿಕ್ಕಿಲ್ಲವಾಗಿ ಬ್ರಹ್ಮಚಾರಿಯ ಅನುಚರನು ಅನೇಕವಿಧವಾದ ಹಣ್ಣುಹಂಪಲುಗಳನ್ನೂ ಸ್ವಲ್ಪ ಹಾಲನ್ನೂ ಸಹ ತಂದಿಟ್ಟು ಹೋಗಿದ್ದನು. ಸನ್ಯಾಸಿಯ ಸಂಪತ್ತಿಯಲ್ಲಿ ಅನೇಕ ಕರೆಯುವ ಹಸುಗಳಿದ್ದವು. ಕಲ್ಯಾಣಿಯು ಬಹುವಿಧವಾಗಿ ಬೇಡಿಕೊಂಡದ್ದರ ಮೇಲೆ ಮಹೇಂದ್ರನು ಕೆಲವು 'ಫಲಗಳನ್ನು ತೆಗೆದುಕೊಂಡನು. ಅನಂತರ ಭುಕ್ತಾವಶೇಷವನ್ನು ಕಲ್ಯಾಣಿಯು ಬೇರೆ ವಿರಳವಾದ ಸ್ಥಳದಲ್ಲಿ ಕೂತು ಸ್ವಲ್ಪ ತಿಂದಳು. ಹಾಲನ್ನು ಮಗುವಿಗೆ ತುಸ ಕುಡಿಸಿ ಮಿಕ್ಕದ್ದನ್ನು ಪುನಃ ಮಗುವಿಗೆ ಕೊಡಲು ಇಟ್ಟಳು. ಅನಂತರ ಇಬ್ಬರೂ ನಿದ್ರಾಪೀಡಿತರಾಗಿ ನಿದ್ರೆಯಿಂದ ಶ್ರಮ ವನ್ನು ದೂರಮಾಡಿಕೊಂಡರು. ಎಚ್ಚರವಾದಮೇಲೆ ಇಬ್ಬರೂ ಈಗ ಎಲ್ಲಿಗೆ ಹೋಗಬೇಕೋ ಅದನ್ನು ಕುರಿತು ಆಲೋಚಿಸಿದರು. ಕಲ್ಯಾಣಿಯು ಮನೆಯ ಲ್ಲಿದ್ದರೆ ವಿಪತ್ತುಂಟಾದೀತೆಂದು ಗೃಹತ್ಯಾಗಮಾಡಿ ಬಂದೆವು. ಈಗ ನೋಡಿದರೆ ಮನೆಗಿಂತಲೂ ಹೊರಗೆ ವಿಪತ್ತು ಅಧಿಕವಾಗಿದೆ; ಪುನಃ ಮನೆಗೇನೆ ಹೋಗೋಣ ವೆಂದಳು. ಮಹೇಂದ್ರನಿಗೂ ಅದೇ ಅಭಿಪ್ರಾಯವಿತ್ತು. ಅವನಭಿಪ್ರಾಯದಲ್ಲಿ ಕಲ್ಯಾಣಿಯನ್ನು ಮನೆಯಲ್ಲಿರಿಸಿ ಯಾವನಾದರೂ ಒಬ್ಬ ಕ್ಷೇಮಚಿಂತಕನನ್ನು ನೋಡಿಕೊಳ್ಳುವದಕ್ಕೆ ಗೊತ್ತುಮಾಡಿ ಇಟ್ಟುಬಿಟ್ಟು, ಈ ಪರಮ ರಮಣೀಯ ವಾದ ಅಪಾರ್ಥಿವವಾದ ಪವಿತ್ರವಾದ ಮಾತೃಸೇವಾವ್ರತದಲ್ಲಿ ದೀಕ್ಷಿತನಾಗ

ಬೇಕೆಂದು ಯೋಚಿಸಿದ್ದನು. ಅದುಕಾರಣ ಅವನು ಕಲ್ಯಾಣಿಯು ಹೇಳಿದ್ದಕ್ಕೆ ಸಮ್ಮತಿಸಿದನು. ಅನಂತರ ಇಬ್ಬರೂ ಆಯಾಸಪರಿಹಾರವನ್ನು ಮಾಡಿಕೊಂಡು ಮಗುವನೆತ್ತಿಕೊಂಡು ಪದಚಿಹ್ನಗ್ರಾಮಾಭಿಮುಖವಾಗಿ ಹೊರಟರು.

ಆದರೆ ಪದಚಿಹ್ನಗ್ರಾಮಕ್ಕೆ ಯಾವ ಮಾರ್ಗವಾಗಿ ಹೋಗಬೇಕೋ ಅದು ಆ ದುರ್ಭೇದ್ಯವಾದ ಅರಣ್ಯಾನೀ ಮಧ್ಯದಲ್ಲಿ ಸ್ವಲ್ಪವೂ ಗೊತ್ತಾಗದೆಹೋಯಿತು. ಅವರು ಅರಣ್ಯಬಿಟ್ಟು ಹೊರಗಾದರೆ ಮಾರ್ಗವು ಸಿಕ್ಕುವದೆಂದು ತಿಳಿದಿದ್ದರು. ಆದರೆ ಅರಣ್ಯವನ್ನು ಬಿಟ್ಟು ಹೊರಗಾಗುವ ಮಾರ್ಗವೇ ತಿಳಿಯಲಿಲ್ಲ. ಹಿಂದು ಮುಂದು ನೋಡದೆ ಆ ಅರಣ್ಯದಲ್ಲಿ ತಿರುಗಿ ಆ ಆನಂದಮಠವನ್ನೇ ಸುತ್ತುಹಾಕುತ ಲಿದ್ದರು. ಹೊರಗೆ ಹೋಗುವ ಮಾರ್ಗವು ಗೊತ್ತಾಗಲಿಲ್ಲ. ಅಲ್ಲಿ ಎದುರಿಗೆ ಒಬ್ಬ ಅಪರಿಚಿತನಾದ ವೈಷ್ಣವ ವೇಷಧಾರಿಯಾದ ಬ್ರಹ್ಮಚಾರಿಯು ನಗುತ್ತ ನೋಡಿಕೊಂಡು ನಿಂತಿದ್ದನು. ಅವನನ್ನು ನೋಡಿ ಮಹೇಂದ್ರನು ಖತಿಗೊಂಡು ಏತಕ್ಕೆ ನಗುತ್ತೀ ಎಂದು ಕೇಳಿದನು.

ಸನ್ಯಾಸಿ—ನೀವು ಈ ವನದೊಳಗೆ ಹೇಗೆ ಬಂದಿರಿ?

ಮಹೇಂದ್ರ—ಹೇಗಾದರೂ ಆಗಲಿ, ಪ್ರವೇಶವೇನೋ ಮಾಡಿದೆವು.

ಸನ್ಯಾಸಿ—ಪ್ರವೇಶವೇನೋ ಮಾಡಿದಿರಿ, ಹೊರಗೆ ಏತಕ್ಕೆ ಹೋಗಲಾರರಿ? ಎಂದು ಹೇಳಿ ವೈಷ್ಣವನು ಪುನಃ ನಕ್ಕನು.

ಮಹೇಂದ್ರನು ಕೋಪಗೊಂಡು, ನೀನು ನಗುವವನು ಹೊರಗೆ ಹೋಗ ಬಲ್ಲೆಯಾ ಎಂದು ಕೇಳಿದನು.

ವೈಷ್ಣವ—ನನ್ನ ಜತೆಯಲ್ಲಿ ಬಂದರೆ ಮಾರ್ಗವನ್ನು ತೋರಿಸುವೆನು. ನೀನು ಯಾರೋ ಸನ್ಯಾಸಿಯ ಸಂಗಡ ಈ ಅರಣ್ಯಕ್ಕೆ ಪ್ರವೇಶಮಾಡಿರಬೇಕು. ಇಲ್ಲ ದಿದ್ದರೆ ಈ ಮಠಕ್ಕೆ ಬರುವುದಕ್ಕೂ ಹೊರಗೆ ಹೋಗುವುದಕ್ಕೂ ಯಾರಿಂದಲೂ ಆಗದು.

ಮಹೇಂದ್ರ—ನೀನು ಸಂತಾನನೆ?

ವೈಷ್ಣವ—ಹೌದು, ನಾನೂ ಸಂತಾನನು. ನನ್ನ ಸಂಗಡ ಬಾ; ನಿನಗೆ ಮಾರ್ಗವನ್ನು ತೋರಿಸುವದಕ್ಕೋಸ್ಕರವೇ ನಾನು ಇಲ್ಲಿ ನಿಂತಿದ್ದೇನೆ.

ಮಹೇಂದ್ರ—ನಿನ್ನ ಹೆಸರೇನು?

ವೈಷ್ಣವ—ನನ್ನ ಹೆಸರು ಧೀರಾನಂದಗೋಸ್ವಾಮಿ.

ಹೀಗೆ ಹೇಳಿ ಧೀರಾನಂದನು ಮುಂದೆ ಮುಂದೆ ನಡೆದನು. ಮಹೇಂದ್ರನೂ ಕಲ್ಯಾಣಿಯೂ ಸಹ ಹಿಂದೆ ಹಿಂದೆ ಹೋದರು. ಧೀರಾನಂದನು ಅವರನ್ನು ಒಂದತಿ ದುರ್ಗಮವಾದ ಮಾರ್ಗದಲ್ಲಿ ಕರೆದುಕೊಂಡುಹೋಗಿ ಹೊರಗೆ ಬಿಟ್ಟು ತಾನು ವನದಲ್ಲಿ ಪುನಃ ಪ್ರವೇಶವನ್ನು ಮಾಡಿದನು.

ಆನಂದಾರಣ್ಯದಿಂದ ಅವರು ಹೊರಗೆ ಬಂದು ಸ್ವಲ್ಪದೂರದಲ್ಲಿ ವೃಕ್ಷಗಳಿಂದಲಂ

ಕರಿಸಲ್ಪಟ್ಟ ಪ್ರಾಂತರವೊಂದು ಆರಂಭವಾಯಿತು. ಪ್ರಾಂತರವು ಒಂದು ಕಡೆಗೆ ಆಯಿತು. ವನದ ಪಕ್ಕದಲ್ಲಿಯೇ ರಾಜಮಾರ್ಗ. ಒಂದು ಸ್ಥಳದಲ್ಲಿ ಸಣ್ಣದಾದ ನದಿಯು ಅರಣ್ಯದಿಂದ ಕಲಕಲಶಬ್ದದೊಡನೆ ಪ್ರವಹಿಸುತಲಿತ್ತು. ಜಲವು ಅತಿ ಪರಿಷ್ಕಾರವಾಗಿ ನಿಬಿಡ ಮೇಘದೋಪಾದಿಯಲ್ಲಿ ಕಪ್ಪಾಗಿತ್ತು. ನದಿಯ ಎರಡು ಪಾರ್ಶ್ವದಲ್ಲಿಯೂ ಶ್ಯಾಮಲ ಶೋಭಾಮಯವಾಗಿ ನಾನಾಜಾತೀಯ ವೃಕ್ಷಗಳು ನದಿಗೆ ನೆಳಲನ್ನು ಹರಡುತಲಿದ್ದವು; ವೃಕ್ಷಗಳಲ್ಲಿ ನಾನಾಜಾತೀಯ ಪಕ್ಷಿಗಳು ನಾನಾವಿಧ ಧ್ವನಿಯನ್ನು ಮಾಡುತಲಿದ್ದುವು. ಆ ಧ್ವನಿಯು—ಅದೂ ಮಧುರ ವಾದದ್ದೆ—ನದಿಯ ಮಧುರವಾದ ರವದೊಂದಿಗೆ ಮಿಶ್ರವಾಗಿ ಹೋಗುತಲಿತ್ತು. ಹಾಗೇ ವೃಕ್ಷಗಳ ಛಾಯೆಯೂ ಜಲದ ವರ್ಣವೂ ಸಹ ಸೇರಿಹೋಗುತಲಿತ್ತು. ಕಲ್ಯಾಣಿಯ ಮನಸ್ಸು ಸಹ ಆ ಛಾಯೆಯ ಜತೆಗೆ ಸೇರಿಹೋದಹಾಗೆ ಕಾಣು ತ್ತದೆ. ಕಲ್ಯಾಣಿಯು ನದೀತೀರದಲ್ಲೊಂದು ವೃಕ್ಷಮೂಲದಲ್ಲಿ ಕುಳಿತುಕೊಂಡು, ತನ್ನ ಸ್ವಾಮಿಯನ್ನು ಸಮೀಪದಲ್ಲಿ ಕುಳಿತುಕೊಳ್ಳುವಂತೆ ಹೇಳಿದಳು. ಸ್ವಾಮಿಯು ಕುಳಿತುಕೊಂಡನು. ಅವನ ಕೊಂಕಳಲ್ಲಿದ್ದ ಮಗುವನ್ನು ಕರೆದುಕೊಂಡ್ಡಳು. ಅನಂತರ ಗಂಡನ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ಇಂದು ನೀವು ಬಹಳ ವಿಮರ್ಷವುಳ್ಳವರಾಗಿ ಕಾಣುತ್ತದೆಯಲ್ಲವೆ? ಇದ್ದ ವಿಪತ್ತಿನಿಂದ ಉದ್ಧಾರ ವಾಗಿ ಬಂದೆವು—ಈಗ ಇಷ್ಟು ವಿಷಾದವೇತಕ್ಕೆ? ಎಂದಳು.

ಮಹೇಂದ್ರನು ನಿಟ್ಟುಸಿರುಬಿಟ್ಟು, ಇನ್ನು ನಾನು ನಿನ್ನವನಲ್ಲ—ನಾನೇನು ಮಾಡಬೇಕೋ ತಿಳಿಯಲಾರೆನೆಂದನು.

ಕಲ್ಯಾಣಿ—ಏತಕ್ಕೆ?

ಮಹೇಂದ್ರ—ನಿನ್ನನ್ನು ಕಳೆದುಕೊಂಡಮೇಲೆ ನಡೆದುದೆಲ್ಲ ಹೇಳುತ್ತೇನೆ, ಕೇಳು ಎಂದು ಹೇಳಿ, ಅದುವರೆಗೆ ನಡೆದ ವೃತ್ತಾಂತವನ್ನೆಲ್ಲ ಸವಿಸ್ತಾರವಾಗಿ ಹೇಳಿದನು.

ಕಲ್ಯಾಣಿಯು, ನನಗೂ ಅನೇಕ ಕಷ್ಟವುಂಟಾಯಿತು; ಅನೇಕ ವಿಪತ್ತಿ ಗೊಳಗಾದೆನು. ನೀನು ಕೇಳಿ ಏನುಮಾಡುವಿಯೊ? ಬಹಳ ಕಷ್ಟದೆಶೆಯಲ್ಲಿಯೂ ಕೂಡ ನಿದ್ರೆ ಬಂದಿತ್ತು. ಹೇಗೆ ಬಂತೋ ಹೇಳಲಾರೆ. ನೆನ್ನೇ ರಾತ್ರಿ ನಿದ್ರೆಯೇನೋ ಬಂದಿತ್ತು. ನಿದ್ರಾವಸ್ಥೆಯಲ್ಲಿ ಒಂದು ಸ್ವಪ್ನವನ್ನು ಕಂಡೆನು. ಏನು ಪುಣ್ಯಬಲ ದಿಂದಾ ಸ್ವಪ್ನವಾಯಿತೋ ಹೇಳಲಾರೆನು. ಸ್ವಪ್ನದಲ್ಲಿ ನಾನೊಂದು ಅಪೂರ್ವ ಸ್ಥಳಕ್ಕೆ ಹೋಗಿದ್ದೆನು. ಅಲ್ಲಿ ಭೂಮಿ ಇಲ್ಲ, ಬರೀ ಬೆಳಕು, ಅದು ಅತಿ ರಮ ಣೀಯವಾದ ಬೆಳಕು. ಅಲ್ಲಿ ಮನುಷ್ಯರಿಲ್ಲ, ಎಲ್ಲರೂ ಜ್ಯೋತಿರ್ಮಯವಾದ ಮೂರ್ತಿಗಳು. ಅಲ್ಲಿ ಶಬ್ದವಿಲ್ಲ, ಎಲ್ಲೋ ದೂರದಲ್ಲಿ ಮಧುರವಾದ ಗೀತವಾದ್ಯ ವಾದಹಾಗೆ ಒಂದು ಶಬ್ದ. ಯಾವಾಗಲೂ ಹೊಸದಾಗಿ ಅರಳಿದ ಲಕ್ಷ ಲಕ್ಷ ಮಲ್ಲಿಕೆ, ಮಾಲತಿ, ಸುಗಂಧರಾಜ ಮುಂತಾದ ಕುಸುಮಗಳ ಸುಗಂಧ. ಅಲ್ಲಿ ಎಲ್ಲದ

ಕ್ಕಿಂತ ಮೇಲೆ ಎಲ್ಲರಿಗೂ * ಕಾಣುವಹಾಗೆ, ನೀಲವಾದ ಪರ್ವತವು ಅಗ್ನಿಮಯ ವಾದಹಾಗೆ ಜ್ವಲಿಸುತ್ತ ಯಾರೋ ಒಬ್ಬರು ಕುಳಿತಿರುವರು. ತಲೇಮೇಲೆ ಅಗ್ನಿಮಯವಾದ ದೊಡ್ಡದೊಂದು ಕಿರೀಟ. ಚತುರ್ಭುಜ. ಅದರ ಉಭಯ ಪಾರ್ಶ್ವದಲ್ಲಿಯೂ ಯಾವದೋ ಎರಡು ಸ್ತ್ರೀಮೂರ್ತಿಗಳು. ಆ ರೂಪ ಆ ಜ್ಯೋತಿ ಆ ಸೌರಭ ನೋಡತೀರದು. ಆ ಚತುರ್ಭುಜ ಮೂರ್ತಿಯ ಮುಂದುಗಡೆ ಮತ್ತೊಂದು ಸ್ತ್ರೀಮೂರ್ತಿಯನ್ನು ನೋಡುವದಕ್ಕಾಗದೆ ಹೋಯಿತು. ಅದು ಜ್ಯೋತಿರ್ಮಯಿಯಾದುದು. ಆದರೆ ನಾಲ್ಕು ದಿಕ್ಕಿನಲ್ಲಿಯೂ ಮೇಘಾಛನ್ನ ವಾಗಿತ್ತು. ಚೆನ್ನಾಗಿ ದೃಷ್ಟಿಗೆ ಹೊರಪಡಲಿಲ್ಲ; ಅಸ್ಪಷ್ಟವಾಗಿ ಕಂಡದ್ದರಲ್ಲಿ, ಅತಿ ಶೀರ್ಣವಾಗಿದ್ದರೂ ಅತಿ ರೂಪವುಳ್ಳದ್ದಾಗಿ ಏನೋ ಅಳುವಹಾಗೆ ಕೇಳಿ ಸಿತು. ನಾನು ಆ ಸುಗಂಧವಾದ ಮಂದಪವನದ ಅಲೆಗಳಿಂದ ಹೊಡೆಯಲ್ಪಟ್ಟವ ಳಾಗಿ ಮೆಲ್ಲಮೆಲ್ಲಗೆ ಆ ಚತುರ್ಭುಜ ಮೂರ್ತಿಯ ಸಿಹ್ಮಾಸನದ ಪಾದಗಳ ಹತ್ತಿರ ಹೋಗಿಬಿದ್ದೆ. ಅಲ್ಲಿ ಆ ಮೇಘಮಂಡಿತಳಾದ ಶೀರ್ಣವಾದ ಸ್ತ್ರೀಮೂರ್ತಿಯು ನನ್ನನ್ನ ತೋರಿಸುತ್ತ, ಇವಳೇ ಅವಳು. ಇವಳಿಗೋಸ್ಕರವೇ ಮಹೇಂದ್ರನು ನನ್ನ ತೊಡೆಯಮೇಲೆ ಬರಲಿಲ್ಲವೆಂದು ಹೇಳಿತು. ಆಗ ಒಂದು ಸುಮಧುರವಾದ ವೇಣುನಾದವು ಕೇಳಿಸಿತು. ಚತುರ್ಭುಜ ಮೂರ್ತಿಯು ನನ್ನನ್ನು ಕುರಿತು, ನಿನ್ನ ಸ್ವಾಮಿಯನ್ನು ಬಿಟ್ಟು ನನ್ನ ಹತ್ತಿರ ಬಂದು ಬಿಡು, ಇವಳೇ ನಿನ್ನೆ ತಾಯಿ, ನಿನ್ನ ಸ್ವಾಮಿಯು ಇವಳ ಸೇವೆಯನ್ನು ಮಾಡುವನು. ನೀನು ನಿನ್ನ ಸ್ವಾಮಿಯ ಹತ್ತಿರ ಇದ್ದರೆ ಇವಳ ಸೇವೆಯು ನಡೆಯುವದಿಲ್ಲ, ನೀನು ಹೊರಟುಬಂದುಬಿಡು ಎಂದು ಹೇಳಿತು. ನಾನು ಅಳುತ್ತ ಸ್ವಾಮಿಯನ್ನು ಬಿಟ್ಟು ಹೇಗೆ ಬರಲೆಂದೆನು. ಆಗ ಆ ವೇಣು ಧ್ವನಿಯಿಂದಲೇ, ನಾನೇ ಸ್ವಾಮಿ, ನಾನೇ ಮಾತೆ, ನಾನೇ ಪಿತನು, ನಾನೇ ಪುತ್ರ, ನಾನೇ ಕನ್ಯೆ, ನನ್ನಲ್ಲಿಗೆ ಬರಬೇಕೆಂದು ಶಬ್ದವಾಯಿತು. ನಾನದ ಕ್ಕೇನು ಹೇಳಿದೆನೋ ಜ್ಞಾಪಕವಿಲ್ಲ. ಇಷ್ಟಾದಮೇಲೆ ಎಚ್ಚರವಾಗಿಹೋಯಿತು, ಎಂದು ಹೇಳಿ ಕಲ್ಯಾಣಿಯು ಸುಮ್ಮನಾದಳು.

ಮಹೇಂದ್ರನು ವಿಸ್ಮಿತನಾಗಿ ಸ್ತಂಭಿತನಾಗಿ ಭೀತನಾಗಿ ಮಾತು ಹೊರಡದೆ ಸುಮ್ಮನಿದ್ದನು. ತಲೆಯಮೇಲೆ ಕೋಕಿಲವು ದಿಙ್ಮಂಡಲದಲ್ಲಿ ಪ್ರತಿಧ್ವನಿ ಯುಂಟುಮಾಡಿತು. ಭೃಂಗರಾಜವು ಕಲಕಂಠದಿಂದ ಕಾನನವನ್ನು ಕಂಪಿತವಾಗಿ ಮಾಡಿತು. ಬೇರೆ ಪಕ್ಷಿಗಳ ಸುಸ್ವರಗಳಿಂದ ಆಕಾಶವು ಪ್ಲಾವಿತವಾಯಿತು. ಪದತಲದಲ್ಲಿ ತಟಿನಿಯು ಮೃದುಕಲ್ಲೋಲ ಧ್ವನಿಯಂ ಮಾಡುತಲಿತ್ತು. ಮಂದ ಮಾರುತವು ವನ್ಯಪುಷ್ಪಗಳ ಸುಗಂಧವನ್ನು ಬೀಸುತಲಿತ್ತು. ಮಧ್ಯೆಮಧ್ಯೆ ನದಿಯ ಜಲದಲ್ಲಿ ಬಿಸಿಲಿನಿಂದ ಝಳಝಳಿಸುತ ಪ್ರಕಾಶವಾಗುತಲಿತ್ತು. ತಾಳಪತ್ರಗಳು ಮೃದುಪವನದಿಂದ ಮರ್ಮರಶಬ್ದಮಾಡುತಲಿದ್ದವು. ದೂರದಲ್ಲಿ ನೀಲವಾದ ಪರ್ವತವು ಕಣ್ಣೊಳಿಸುತಲಿತ್ತು. ಇಬ್ಬರೂ ಬಹಳ ಹೊತ್ತು ಮುಗ್ದರಾಗಿ ನೀರವ

ವಾಗಿದ್ದರು. ಬಹಳಹೊತ್ತಿನಮೇಲೆ ಕಲ್ಯಾಣಿಯು ಪುನಃ ಏನು ಯೋಚಿಸುತ್ತೀ ರೆಂದಳು.

ಮಹೇಂದ್ರ—ಮಾಡಬೇಕಾದ್ದೇನೋ ಅದನ್ನೇ ಯೋಚಿಸುತ್ತೇನೆ. ಸ್ವಪ್ನವು ಕೇವಲ ವಿಭೀಷಿಕವಾದದ್ದು ಮಾತ್ರ—ಮನಸ್ಸಿನಲ್ಲಿ ಹುಟ್ಟಿ ಅಲ್ಲಿಯೇ ಲಯವಾಗುತ್ತದೆ—ಜೀವನದ ಜಲಬಿಂಬ—ನಡೆ, ಮನೆಗೆ ಹೋಗೋಣ.

ಕಲ್ಯಾಣಿ—ದೇವತೆಯು ಹೋಗಬೇಕೆಂದು ಹೇಳಿದ ಕಡೆಗೆ ನೀವು ಹೋಗಿ —ಎಂದು ಹೇಳಿ ಮಗುವನ್ನು ಗಂಡನ ಕೈಗೆ ಕೊಟ್ಟಳು.

ಮಹೇಂದ್ರನು ಮಗುವನ್ನೆತ್ತಿಕೊಂಡು ನೀನೋ—ನೀನೆಲ್ಲಿಗೆ ಹೋಗುವೆ ಎಂದನು.

ಕಲ್ಯಾಣಿಯು ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ದೇವರು ಎಲ್ಲಿಗೆ ಬರಬೇಕೆಂದು ಹೇಳಿದನೋ ಅಲ್ಲಿಗೆ ಹೋಗುವೆನೆಂದಳು.

ಮಹೇಂದ್ರನು ಚಮಕಿತನಾಗಿ—ಅದೆಲ್ಲಿಗೆ? ಹೇಗೆ ಹೋಗುವೆ?

ಕಲ್ಯಾಣಿಯು ವಿಷದ ಭರಣಿಯನ್ನು ತೋರಿಸಿದಳು. ಮಹೇಂದ್ರನು—ಆಶ್ಚರ್ಯಪಟ್ಟು—ಅದೇನು? ವಿಷವನ್ನು ತೆಗೆದುಕೊಳ್ಳುತ್ತೀಯಾ?

ಕಲ್ಯಾಣಿ—ತೆಗೆದುಕೊಳ್ಳಬೇಕೆಂದು ಮಾಡಿಕೊಂಡಿದ್ದೆ, ಆದರೆ—

ಮುಂದೆ ಏನೂ ಹೇಳದೆ ಯೋಚಿಸುತಲಿದ್ದಳು. ಮಹೇಂದ್ರನು ಅವಳ ಮುಖವನ್ನು ನೋಡುತಲಿದ್ದನು. ಪ್ರತಿರೆಪ್ಪೆಮುಚ್ಚಿ ತೆಗೆಯುವದೂ ಒಂದೊಂದು ವರುಷವಾಗಿ ಬೋಧೆಯಾಯಿತು. ಕಲ್ಯಾಣಿಯು ಇನ್ನೂ ಮಾತು ಮುಗಿಸಿರಲಿಲ್ಲವಾಗಿ ಮಹೇಂದ್ರನು, ಆದರೆ ಎಂದು ಮುಂದೆ ಏನೋ ಹೇಳುತ್ತಿದ್ದೆ—ಏನು ಹೇಳುತಲಿದ್ದೆ? ಎಂದನು.

ಕಲ್ಯಾಣಿ-ತೆಗೆದುಕೊಳ್ಳಬೇಕೆಂದು ಮಾಡಿಕೊಂಡಿದ್ದೆ—ಆದರೆ ನೀನು ಇರುವಾಗ ಸುಕುಮಾರಿಯೂ ಇರುವಾಗ—ವೈಕುಂಠಕ್ಕೆ ಹೋಗುವದಕ್ಕೂ ನನಗೆ ಇಷ್ಟವಿಲ್ಲ. ನಾನು ಸಾಯುವದಿಲ್ಲ.

ಹೀಗೆ ಹೇಳಿ ಕಲ್ಯಾಣಿಯು ವಿಷದ ಭರಣಿಯನ್ನು ನೆಲದಮೇಲೆ ಇಟ್ಟು ಇಬ್ಬರೂ ಭೂತಭವಿಷ್ಯತ್ತಿನ ಸಂಬಂಧವಾಗಿ ಮಾತನಾಡತೊಡಗಿದರು. ಮಾತಿನಲ್ಲೇ ಇದ್ದು ಇಬ್ಬರೂ ಅನನ್ಯಮನಸ್ಕರಾಗಿದ್ದುಬಿಟ್ಟರು. ಈ ಅವಕಾಶದಲ್ಲಿ ಮಗುವು ಆಡುತಲಿದ್ದದ್ದು ವಿಷದ ಭರಣಿಯನ್ನು ತೆಗೆದುಕೊಂಡಿತು. ಯಾರೂ ನೋಡಲಿಲ್ಲ.

ಸುಕುಮಾರಿಯು ಪದಾರ್ಥವು ತಿನ್ನತಕ್ಕದ್ದೆಂದು ಭಾವಿಸಿ ಡಬ್ಬಿಯನ್ನು ಕೆಳಗೆ ಮೇಲೆ ಹಾಕುತ್ತ ಎಳೆದಾಡುತ್ತ ಇದ್ದದ್ದು ಅದರ ಮುಚ್ಚಳವು ಬಿಚ್ಚಿ ಹೋಯಿತು. ಅದರಲ್ಲಿದ್ದ ವಿಷದ ಗುಳಿಗೆಯು ಬೇರೆಯಾಗಿ ಬಿತ್ತು.

ತಂದೆಯ ಬಟ್ಟೆಯಮೇಲೆ ಒಂದು ಗುಳಿಗೆಯು ಬಿದ್ದಿದ್ದನ್ನ ನೋಡಿ

ಸುಕುಮಾರಿಯು ಅದೂ ಆಡುವ ಗೋಲಿಯೆಂದು ತಿಳಿದು ಭರಣಿಯನ್ನು ಬಿಸಾಟು ಅದನ್ನು ತೆಗೆದುಕೊಂಡಳು.

ಸುಕುಮಾರಿಯು ಭರಣಿಯನ್ನೇ ಏತಕ್ಕೆ ನುಂಗಲಿಲ್ಲವೋ ಅದನ್ನು ಹೇಳುವದಕ್ಕಾಗುವದಿಲ್ಲ—ಆದರೆ ಗುಳಿಗೆಯು ವಿಚಾರದಲ್ಲಿ ಕಾಲವಿಳಂಬವಾಗಲಿಲ್ಲ. 'ಪ್ರಾಪ್ತಮಾತ್ರೇಣ ಭೋಕ್ತವ್ಯಂ' ಎಂಬಂತೆ ಸುಕುಮಾರಿಯು ಗುಳಿಗೆಯನ್ನು ಬಾಯಿಗೆ ಹಾಕಿಕೊಂಡಳು. ಆಗವಳಮೇಲೆ ತಾಯಿಯ ದೃಷ್ಟಿಯು ಬಿತ್ತು.

ಹಾಳಾಯಿತು! ಏನು ತಿಂದೆ! ಏನು ತಿಂದೆ! ಎಂದು ಹೇಳುತ್ತ ಕಲ್ಯಾಣಿಯು ಮಗುವಿನ ಬಾಯಿಗೆ ಬೆರಳುಹಾಕಿದಳು. ಆಗ ಗಂಡಹೆಂಡಂದಿರಿಬ್ಬರೂ ಭರಣಿಯು ಬರಿದಾಗಿ ಬಿದ್ದಿರುವದನ್ನು ನೋಡಿದರು. ಸುಕುಮಾರಿಯೂ ತಮಾಷಿಯೆಂದು ಹಲ್ಲುಗಿಡಿದುಕೊಂಡು ಬಾಯಿತೆಗಿಯದೆ ತಾಯಿಯನ್ನು ನೋಡಿ ನಕ್ಕಳು. ವಿಷವು ನಾಲಿಗೆಗೆ ತಗಲಿ ರುಚಿಸದೆ ಬಾಯಿಬಿಟ್ಟಳು. ತಾಯಿಯು ವಿಷದ ಗುಳಿಗೆಯನ್ನು ತೆಗೆದು ಬಿಸಾಟಳು. ಮಗುವು ಅಳುವದಕ್ಕೆ ತೊಡಗಿತು.

ಗುಳಿಗೆ ನೆಲದಮೇಲೆ ಬಿದ್ದಿತ್ತು. ಕಲ್ಯಾಣಿಯು ನದಿಗೆ ಹೋಗಿ ಶೀರೆಯ ಶೆರಗನ್ನು ತೋಯಿಸಿಕೊಂಡು ಬಂದು ಮೊಗುವಿನ ಬಾಯಿಯನ್ನು ತೊಳದಳು. ಅತಿಕಾತರಳಾಗಿ ಗಂಡನನ್ನು ಕುರಿತು ಹೊಟ್ಟೆಗೆ ಏನಾದರೂ ಹೋಗಿರಬಹುದೆ? ಎಂದು ಕೇಳಿದಳು.

ಮೊದಲು ಕೆಟ್ಟದ್ದೇ ತಂದೆತಾಯಿಗಳ ಮನಸ್ಸಿಗೆ ಹೊಳೆಯುವದು—ಎಲ್ಲಿ ಹೆಚ್ಚು ಪ್ರೀತಿವಿಶ್ವಾಸವೋ ಅಲ್ಲಿಯೇ ಹೆಚ್ಚು ಭಯ—ಮಹೇಂದ್ರನು ಮೊದಲು ಗುಳಿಗೆ ಎಷ್ಟಿತ್ತೊ ನೋಡಿರಲಿಲ್ಲವಾಗಿ ನೆಲದಮೇಲೆ ಬಿದ್ದಿದ್ದ ಗುಳಿಗೆಯನ್ನು ಕೈಗೆ ತೆಗೆದುಕೊಂಡು ಸ್ವಲ್ಪಹೊತ್ತು ನೋಡಿ, ಬಹಳಮಟ್ಟಿಗೆ ಹೊಟ್ಟೆಗೆ ಹೋಗಿರುವ ಹಾಗೆ ಕಾಣುತ್ತದೆ ಎಂದನು.

ಕಲ್ಯಾಣಿಗೂ ಅದೇ ನಂಬಿಕೆ ಹುಟ್ಟಿತು. ಅವಳೂ ಗುಳಿಗೆಯನ್ನು ಕೈಗೆ ತೆಗೆದುಕೊಂಡು ಚೆನ್ನಾಗಿ ನೋಡಿದಳು. ಇತ್ತ ಮಗುವು ಒಂದೆರಡು ಗುಟುಕು ಹೊಟ್ಟೆಗೆ ಹೋಗಿದ್ದದ್ದಕ್ಕೆ ವಿಕೃತಾವಸ್ಥೆಗೆ ಬಂತು—ಸ್ವಲ್ಪ ಒದ್ದಾಡಿತು—ಅತ್ತಿತು—ಕಡೆಗೆ ಏನೂ ಇಲ್ಲದೆ ಬಿತ್ತು. ಆಗ ಕಲ್ಯಾಣಿಯು, ಇನ್ನೇನು ನೋಡುವದು? ದೇವರು ಯಾವ ಮಾರ್ಗವಾಗಿ ಬರಬೇಕೆಂದು ಹೇಳಿದ್ದನೋ ಸುಕುಮಾರಿಯು ಆ ಮಾರ್ಗವನ್ನು ಹಿಡಿದಳು—ನಾನೂ ಅದೇ ಮಾರ್ಗವಾಗಿ ಹೋಗಬೇಕೆಂದಳು.

ಹೀಗೆ ಹೇಳಿ ಕಲ್ಯಾಣಿಯು ವಿಷದ ಗುಳಿಗೆಯನ್ನು ಎತ್ತಿ ಬಾಯಿಗೆ ಹಾಕಿಕೊಂಡು ಒಂದು ಮುಹೂರ್ತದೊಳಗೆ ನುಂಗಿಬಿಟ್ಟಳು. ಮಹೇಂದ್ರನು ಅಳುತ್ತ ಏನುಮಾಡಿಬಿಟ್ಟೆ? ಕಲ್ಯಾಣಿ! ಅದೇತಕ್ಕೆ ಹಾಗೆ ಮಾಡಿದೆ? ಎಂದನು.

ಕಲ್ಯಾಣಿಯು ಏನುತ್ತರವನ್ನೂ ಹೇಳದೆ ಸ್ವಾಮಿಯ ಪಾದಧೂಳಿಯನ್ನು

ತೆಗೆದು ತಲೆಯಮೇಲಿಟ್ಟುಕೊಂಡು, ಪ್ರಭುವೆ! ಮಾತು ಹೇಳಿದರೆ ಹೆಚ್ಚಾಗು ತ್ತದೆ, ನಾನಿನ್ನು ಹೊರಟುಹೋಗುತ್ತೇನೆಂದಳು.

ಮಹೇಂದ್ರನು—ಕಲ್ಯಾಣಿ! ಏನುಮಾಡಿಬಿಟ್ಟೆ ಎಂದು ಗಟ್ಟಿಯಾಗಿ ಅಳುವ ದಕ್ಕೆ ಪ್ರಾರಂಭಿಸಿದನು. ಅತಿ ಮೃದುಸ್ವರದಿಂದ ಕಲ್ಯಾಣಿಯು, ನಾನು ಒಳ್ಳೇ ಕೆಲಸವನ್ನೇ ಮಾಡಿದ್ದೇನೆ. ಈ ಹಾಳು ಹೆಂಗಸರಿಗೋಸ್ಕರ ನೀವು ದೇವತಾ ಕಾರ್ಯದಲ್ಲಿ ಹಿಂಜರಿಯುತ್ತೀರಿ, ನಾನು ದೇವತಾ ವಾಕ್ಯವನ್ನು ಲಂಘನೆಮಾಡಿದ್ದಕ್ಕೆ ನನ್ನ ಮಗುವು ಹೋಯಿತು, ಇನ್ನೂ ಅವಹೇಳನೆ ಮಾಡಿದರೆ ಕಡೆಗೆ ನೀವೂ ಹೊರಟುಹೋಗುವಿರಿ ಎಂದಳು.

ಮಹೇಂದ್ರನು ಅಳುತ್ತ, ನಿನ್ನನ್ನು ಎಲ್ಲಿಯಾದರೂ ಇಟ್ಟುಬಂದು ಕಾರ್ಯ ಸಿದ್ಧಿಯಾದನಂತರ ಪುನಃ ನಿನ್ನನ್ನು ಹೊಂದಿ ಸುಖಿಯಾಗುತಲಿದ್ದೆ—ಕಲ್ಯಾಣಿ! ನನ್ನ ಸರ್ವಸ್ವವಾಗಿದ್ದೆ! ಏತಕ್ಕೆ ಈ ಕೆಲಸವನ್ನು ಮಾಡಿದೆ! ಯಾವ ಕೈಯಿಂದ ಕತ್ತಿಯನ್ನು ಜೋರಾಗಿ ಬೀಸುವೆನೋ ಆ ಕೈಹೋಯಿತು. ನೀನು ಹೋದ ಮೇಲೆ ನಾನೇತಕ್ಕೆ? ಎಂದನು.

ಕಲ್ಯಾಣಿ—ಎಲ್ಲಿ ಇರಿಸುತ್ತಿದ್ದಿರಿ? ಸ್ಥಳವೆಲ್ಲಿ? ಈ ಕಷ್ಟಕಾಲದಲ್ಲಿ ತಾಯಿ ತಂದೆ ಬಂಧುಬಳಗ ಎಲ್ಲರೂ ಹೋದರು. ಯಾರ ಮನೆಯಲ್ಲಿ ಸ್ಥಳವಿದೆ? ಎಲ್ಲಿ ಹೋಗುವದಕ್ಕೆ ಮಾರ್ಗ? ಎಲ್ಲಿಗೆ ಕರೆದುಕೊಂಡುಹೋಗುವಿರಿ? ನಾನು ನಿಮಗೆ ಗಳಗ್ರಹಳಾಗಿದ್ದೆ. ನಾನು ಸಾಯುವದೇ ಒಳ್ಳೇ ಕೆಲಸ; ನನಗೆ ಆಶೀರ್ವಾದ ವನ್ನು ಮಾಡಿ. ನಾನು ಆ ಜ್ಯೋತಿರ್ಮಯವಾದ ಪ್ರಪಂಚಕ್ಕೆ ಹೋಗಿ ಅಲ್ಲಿ ಪುನಃ ನಿಮ್ಮನ್ನು ನೋಡುವಹಾಗೆ ಆಶೀರ್ವಾದವನ್ನು ಮಾಡಿ, ಎಂದು ಹೇಳಿ ಕಲ್ಯಾ ಣಿಯು ಪುನಃ ಸ್ವಾಮಿಯ ಪಾದರೇಣುವನ್ನು ತೆಗೆದು ತಲೆಯಮೇಲಿಟ್ಟು ಕೊಂಡಳು. ಅವಳು ಪುನಃ ಅತಿಮೃದುವಾದ, ಅತಿಮಧುರವಾದ, ಅತಿಸ್ನೇಹ ಮಯವಾದ ಕಂಠದಿಂದ ಪುನಃ ನೋಡಿ, ದೇವತಾ ವಾಕ್ಯವು ಯಾರಿಂದಲೂ ಲಂಘ ನೀಯವಾದುದಲ್ಲ; ದೇವರು ನಾನು ಬರಬೇಕೆಂದು ಹೇಳಿದನು. ನಾನು ಉಲ್ಲಂ ಘಿಸಿದೆ, ಏನಾಯಿತು! ನಾನೊಬ್ಬಳು ಹೋಗುತಲಿದ್ದೆ, ನಾನು ಸತ್ತದ್ದು ಒಳ್ಳೇ ದಾಯಿತು. ತಾವು ಗ್ರಹಣಮಾಡಿರುವ ವ್ರತವನ್ನು ಕಾಯಮನೋವಾಕ್ಕಾಗಿ ಸಿದ್ಧಿಮಾಡಿಕೊಳ್ಳಿ, ಪುಣ್ಯವುಂಟು. ಅದರಿಂದ ನನಗೆ ಸ್ವರ್ಗಲಾಭವುಂಟು. ಇಬ್ಬರೂ ಏಕತ್ರ ಅನಂತವಾದ ಸ್ವರ್ಗಭೋಗವಮಾಡಬಹುದು.

ಇತ್ತಲಾಗಿ, ಮಗುವು ಹಾಲುಕುಡಿದು ಲಘುವಾಯಿತು. ಅದರ ಹೊಟ್ಟೆಗೆ ಹೋಗಿದ್ದ ವಿಷವು ಬಹಳ ಅಲ್ಪವಾಗಿದ್ದದ್ದರಿಂದ ಅದು ಮಾರಾತ್ಮಕವಾಗಲಿಲ್ಲ. ಆದರೆ ಮಹೇಂದ್ರನಿಗೆ ಅತ್ತಕಡೆ ದೃಷ್ಟಿಹೊಗಲಿಲ್ಲ. ಅವನು ಹೆಂಡತಿಯನ್ನು ಮಗುವನ್ನು ಸಹ ಆಲಿಂಗನೆಮಾಡಿಕೊಂಡು ಅಳುತ್ತಿದ್ದನು. ಆಗ ಅರಣ್ಯದಲ್ಲಿ ಮೃದುವಾದ ಮೇಘನಾದದ ಹಾಗೆ ಗಂಭೀರವಾದ ಸ್ವರದಿಂದ ಕೇಳಿಬಂತು :—

ಹರೆ ಮುರಾರೆ ಮಧುಕೈಟಭಾರೆ।
ಗೋಪಾಲ ಗೋವಿಂದ ಮುಕುಂದಶೌರೆ ॥ ಎಂದು.

ಕಲ್ಯಾಣಿಗೆ ಆಗ ವಿಷವು ಏರುತ್ತ ಬಂತು, ಚೇತನವು ಸ್ವಲ್ಪ ಸ್ವಲ್ಪ ಕಡಮೆಯಾಗುತಲಿತ್ತು. ಅವಳು ಪ್ರೇಮಭರಿತಳಾಗಿ ಆ ಸಾಕ್ಷಾತ್ ವೈಕುಂಠದಲ್ಲಿ ವೇಣುನಾದದಿಂದ ಕೇಳಿಸಿದಹಾಗೆ ಕೇಳಿದಳು.

ಹರೆ ಮುರಾರೆ ಮಧುಕೈಟಭಾರೆ।
ಗೋಪಾಲ ಗೋವಿಂದ ಮುಕುಂದಶೌರೆ ॥ ಎಂದು,

ಆಗ ಕಲ್ಯಾಣಿಯು ಅಪ್ಸರರ ಕಂಠವನ್ನು ನಿಂದಿಸುವ ಕಂಠದಿಂದ ತಾನೂ ಮೋಹಭರಿತಳಾಗಿ ಕರೆದಳು.

ಹರೆ ಮುರಾರೆ ಮಧುಕೈಟಭಾರೆ।
ಗೋಪಾಲ ಗೋವಿಂದ ಮುಕುಂದಶೌರೆ ॥
ಹರೆ ಮುರಾರೆ ಮಧುಕೈಟಭಾರೆ। ಎಂದು.

ಕಾನನದಿಂದ ಕೇಳಿಸಿಬಂದ ಸ್ವರಕ್ಕೂ ಕಲ್ಯಾಣಿಯು ಕಂಠ ಸ್ವರಕ್ಕೂ ಸಹ ವಿಮುಗ್ಧನಾಗಿ ಮಹೇಂದ್ರನು ಕಾತರ ಚಿತ್ತದಿಂದ ಈಶ್ವರ ಮಾತ್ರ ಸಹಾಯನೆಂದು ಕರೆದನು:—

ಹರೆ ಮುರಾರೆ ಮಧುಕೈಟಭಾರೆ।
ಗೋಪಾಲ ಗೋವಿಂದ ಮುಕುಂದಶೌರೆ।
ಹರೆ ಮುರಾರೆ ಮಧುಕೈಟಭಾರೆ । ಎಂದು,

ಆಗ ಪಕ್ಷಿಗಳೂ ಕೂಡ ಹಾಡಿದಹಾಗೆ ಆಯಿತು.

ಹರೆ ಮುರಾರೆ ಮಧುಕೈಟಭಾರೆ। ಎಂದು,

ನದಿಯು ಕಲಕಲ ಶಬ್ದದಲ್ಲಿಯೂ,

ಹರೆಮುರಾರೆ ಮಧುಕೈಟಭಾರೆ। ಎಂದು ಕೇಳಿಸಿತು.

ಆಗ ಮಹೇಂದ್ರನು ಶೋಕತಾಪವನ್ನು ಮರೆತುಬಿಟ್ಟನು. ಉನ್ಮತ್ತನಾಗಿ ಕಲ್ಯಾಣಿಯ ಜತೆಯಲ್ಲಿ ಅವಳ ಕಂಠದಲ್ಲಿ ಕಂಠವನ್ನು ಸೇರಿಸಿ.

ಹರೆ ಮುರಾರೆ ಮಧುಕೈಟಭಾರೆ। ಎಂದು ಕೂಗಿದನು.

ಕಾನನದಿಂದ ಅವರ ಕಂಠ ಸ್ವರ ಕೂಡಿ

ಹರೆ ಮುರಾರೆ ಮಧುಕೈಟಭಾರೆ। ಎಂದು ಶಬ್ದವಾಯಿತು.

ಕಲ್ಯಾಣಿಯ ಸ್ವರವು ಕಡಮೆಯಾಗುತ್ತ ಬಂತು. ಆದರೂ,

ಹರೆ ಮುರಾರೆ ಮಧುಕೈಟಭಾರೆ। ಎಂದು ಕರೆದಳು.

ಆಗ ಕ್ರಮ ಕ್ರಮವಾಗಿ ಅವಳ ಕಂಠಸ್ವರವು ನಿಸ್ತಬ್ಧವಾಯಿತು. ಅವಳ ಬಾಯಿಂದ ಶಬ್ದವು ನಿಂತುಹೋಯಿತು. ಕಣ್ಣುಗಳು ಮುಚ್ಚಿದವು; ಅಂಗಾಂಗಗಳು ಶೀತಳವಾದವು. ಮಹೇಂದ್ರನು, ಕಲ್ಯಾಣಿಯು ಹರೆ ಮುರಾರೆ ಎಂದು ಕೂಗುತ್ತ

ಕೂಗುತ್ತ ವೈಕುಂಠಧಾಮಕ್ಕೆ ಹೋದಳೆಂದು ತಿಳಿದನು. ಆಗ ಹುಚ್ಚನಹಾಗೆ ಉಚ್ಚಸ್ವರದಿಂದ ಕಾನನವನ್ನು ವಿಕಂಪಿತಮಾಡುತ್ತ, ಪಶುಪಕ್ಷಿಗಳು ಭಯ ಪಡುವಹಾಗೆ ಮಹೇಂದ್ರನು ಕೂಗುತಲಿದ್ದನು.

ಹರೆ ಮುರಾರೆ ಮಧುಕೈಟಭಾರೆ! ಎಂದು.

ಆಗ ಯಾರೋ ಬಂದು ಅವನನ್ನು ಗಾಢಾಲಿಂಗನೆಮಾಡಿಕೊಂಡು ಅವನ ಜತೆಗೆ ಉಚ್ಚಸ್ವರದಿಂದ—

ಹರೆ ಮುರಾರೆ ಮಧುಕೈಟಭಾರೆ! ಎಂದು ಕೂಗಿದರು.

ಆಗ ಆ ಅನಂತನ ಮಹಿಮೆಯಿಂದ ಆ ಅನಂತವಾದ ಅರಣ್ಯದ ಮಧ್ಯದಲ್ಲಿ ಅನಂತಪಥಗಾಮಿನಿಯಾದವಳ ಶರೀರದ ಸಮ್ಮುಖದಲ್ಲಿ ಅವರಿಬ್ಬರೂ ಅನಂತನ ನಾಮಕೀರ್ತನವನ್ನು ಮಾಡುತಿದ್ದರು. ಪಶುಪಕ್ಷಿಗಳು ನೀರವವಾದವು. ಪೃಥ್ವಿಯು ಅಪೂರ್ವ ಶೋಭಾಮಯಿ. ಈ ಚರಮ ಸಂಗೀತಕ್ಕೆ ಉಪಯುಕ್ತ ವಾದ ಮಂದಿರವಾಗಿತ್ತು. ಸತ್ಯಾನಂದನು ಮಹೇಂದ್ರನನ್ನು ತೊಡೆಯಮೇಲೆತ್ತಿ ಕೊಂಡು ಕುಳ್ಳಿರಿಸಿಕೊಂಡು ಕುಳಿತನು.

---

## ಹದಿಮೂರನೆಯ ಪರಿಚ್ಛೇದ

ಇತ್ತಲಾಗಿ ರಾಜಧಾನಿಯಲ್ಲಿ ಬಹಳ ಗದ್ದಲವಾಗಿ, ಕಲಕತ್ತಾಕ್ಕೆ ಬರುತ್ತಿದ್ದ ಸರ್ಕಾರದ ಇರಸಾಲನ್ನು ಸನ್ಯಾಸಿಗಳು ಹೊಡದು ಕಿತ್ತುಕೊಂಡು ಹೋದರೆಂದು ಪ್ರವಾದವು ಹುಟ್ಟಿತು. ಆಗ ರಾಜಾಜ್ಞಾನುಸಾರವಾಗಿ ಸನ್ಯಾಸಿ ಗಳನ್ನು ದಸ್ತಗಿರಿಮಾಡಲು ಬರಕಂದಾಜ ಮುಂತಾದವರನ್ನು ಕಳುಹಿಸಿದರು. ಆ ದುರ್ಭಿಕ್ಷಪೀಡಿತವಾದ ಪ್ರದೇಶದಲ್ಲಿ ಆ ಸಮಯದಲ್ಲಿ ನಿಜವಾದ ಸನ್ಯಾಸಿಗಳು ಬಹುಮಂದಿ ಇರಲಿಲ್ಲ. ಏತಕ್ಕಂದರೆ, ಅವರು ಭಿಕ್ಷೋಪಜೀವಿಗಳು. ಜನಗಳಿಗೆ ತಿನ್ನುವದಕ್ಕೇ ಇಲ್ಲದ ಸಮಯದಲ್ಲಿ ಸನ್ಯಾಸಿಗಳಿಗೆ ಭಿಕ್ಷವನೀಡುವವರು ಯಾರು? ಅದುಕಾರಣ ನಿಜವಾದ ಸನ್ಯಾಸಿಗಳೆಲ್ಲರೂ ಹೊಟ್ಟೆಕಾಲಕ್ಷೇಪಕ್ಕೆ ಕಾಶೀಪ್ರಯಾ ಗಾದಿ ಪ್ರದೇಶಗಳಿಗೆ ಪಲಾಯನವಾಗಿ ಹೋಗಿದ್ದರು. ಕೇವಲ ಸಂತಾನರು ಮಟ್ಟಿಗೆ ಇಚ್ಛಾನುಸಾರವಾಗಿ ಸನ್ಯಾಸಿ ಉಡುಪನ್ನು ಧಾರಣೆಮಾಡುವದು, ಬೇಡದ ವೇಳೆಯಲ್ಲಿ ಬಿಟ್ಟುಬಿಡುವದು ಹೀಗಿತ್ತು. ಈ ಗದ್ದಲವನ್ನು ಕೇಳಿ ಅನೇಕರು ಸನ್ಯಾಸಿ ಉಡುಪುಗಳನ್ನು ಪರಿತ್ಯಾಗಮಾಡಿಬಿಟ್ಟರು. ಆದಕಾರಣ ಹೊಟ್ಟೆಗೆ ಇಲ್ಲದ ರಾಜಾನುಚರರು ಎಲ್ಲಿಯೂ ಸನ್ಯಾಸಿಗಳನ್ನು ಕಾಣದೆ ಗೃಹಸ್ಥರ ಮಡಕೆ ಕುಡಿಕೆಗಳನ್ನು ಒಡಿಯುತ್ತ ಅರ್ಧಹೊಟ್ಟೆ ತುಂಬಿಸಿಕೊಂಡು ಹಿಂದಿರುಗಿ ಹೊರಟುಹೋದರು. ಸತ್ಯಾನಂದನೊಬ್ಬನು ಮಾತ್ರ ಯಾವ ಕಾಲದಲ್ಲಿಯೂ ಗೈರಿಕವಸನವನ್ನು ಪರಿತ್ಯಾಗಮಾಡಿರಲಿಲ್ಲ.

ಆ ಕೃಷ್ಣಕಲ್ಲೋಲಿನೀ ಅಲ್ಪ ನದೀತೀರದಲ್ಲಿ ಆ ಮಾರ್ಗದ ಪಾರ್ಶ್ವದಲ್ಲಿ ಮರದ ಬುಡದಲ್ಲಿ ಕಲ್ಯಾಣಿಯು ಬಿದ್ದಿದ್ದಳು. ಸತ್ಯಾನಂದನೂ ಮಹೇಂದ್ರನೂ ಪರಸ್ಪರ ಆಲಿಂಗನಮಾಡಿಕೊಂಡು ಸಾಶ್ರುಲೋಚನರಾಗಿ ಈಶ್ವರನನ್ನು ಕೂಗುತಲಿದ್ದರು. ನಜರದ್ದೀನ್ ಜಮಾದಾರನು ಶಿಪಾಯಿಗಳನ್ನು ತೆಗೆದುಕೊಂಡು ಈ ಸಮಯದಲ್ಲಿ ಅಲ್ಲಿಯೇ ಬಂದಿದ್ದವನು ಸತ್ಯಾನಂದನನ್ನು ನೋಡಿ ಈ ಘಟಿಂಗ, ಸನ್ಯಾಸಿ ಎಂದು ಬೈದು ಕುತ್ತಿಗೆಯಮೇಲೆ ಕೈಹಾಕಿದನು. ಮತ್ತೊಬ್ಬನು ಮಹೇಂದ್ರನನ್ನು ಹಿಡಿದನು. ಏತಕ್ಕಂದರೆ, ಸನ್ಯಾಸಿಯ ಜತೆಯಲ್ಲಿದ್ದವನೂ ಕೂಡ ಸನ್ಯಾಸಿಯಾಗಿರಬೇಕು. ಮತ್ತೊಬ್ಬನು ಹುಲ್ಲಿನಮೇಲೆ ಬಿದ್ದಿದ್ದ ಮೃತದೇಹವನ್ನು ಸಹ ಹಿಡಿದೆಳದನು. ಆದರೆ ನೋಡಲಾಗಿ ಹೆಂಗಸಿನ ಹೆಣವೆಂದು ಕಂಡು ಸನ್ಯಾಸಿಯಲ್ಲವೆಂದು ತಿಳಿದು ಬಿಟ್ಟುಬಿಟ್ಟನು. ಕಡೆಗೆ ಅವರು ಏನೂ ಮಾತುಕಥೆಯಾಡದೆ ಇಬ್ಬರನ್ನೂ ಹಿಂಗಟ್ಟುಮುರಿ ಕಟ್ಟಿ ತೆಗೆದುಕೊಂಡು ಹೋದರು. ಕಲ್ಯಾಣಿಯ ಮೃತದೇಹವೂ ಅವಳ ಮಗುವೂ ರಕ್ಷಕರು ಯಾರೂ ಇಲ್ಲದೆ ಆ ಮರದ ಬುಡದಲ್ಲಿ ಬಿದ್ದಿದ್ದವು.

ಮೊದಲು ಶೋಕಾಭಿಭೂತನಾಗಿ ಮತ್ತು ಈಶ್ವರ ಪ್ರೇಮದಿಂದ ಉನ್ಮತ್ತನಾಗಿ ಮಹೇಂದ್ರನು ಚೇತನಶೂನ್ಯನಾದವನ ಹಾಗಿದ್ದನು. ಏನಾಯಿತು, ಏನಾಗುತ್ತದೆ ಎಂಬುದನ್ನು ಅರಿಯಲಾರದವನಾಗಿ ತನ್ನ ಬಂಧನದಮೇಲೆ ದೃಷ್ಟಿ ಕೊಡಲಿಲ್ಲ. ಆದರೆ ಎರಡುಮೂರು ಹೆಜ್ಜೆಗಳು ಹೋದಮೇಲೆ ತನ್ನನ್ನು ಹಿಡಿದು ತೆಗೆದುಕೊಂಡು ಹೋಗುತ್ತಾರೆಂದು ತಿಳಿದನು. ಕಲ್ಯಾಣಿಯ ಶವವು ಬಿದ್ದಿತ್ತು, ಸತ್ಕಾರಮಾಡಲಿಲ್ಲ. ಮಗುವು ರಕ್ಷಕರಿಲ್ಲದೆ ಕಾಡುಮೃಗಗಳ ಪಾಲಾಗಬಹುದೆಂದು ಅವನ ಮನಸ್ಸಿಗೆ ಹೊಳೆಯಿತು. ಆ ರೀತಿ ಭಾವೋದಯವಾದಕೂಡಲೆ ಮಹೇಂದ್ರನು ಕಟ್ಟಿದ್ದ ಎರಡು ಕೈಗಳನ್ನು ಬಲವಾಗಿ ಎಳೆದನು. ಒಂದು ಸಲ ಎಳೆಯುವದರೊಳಗೆ ಕಟ್ಟಿದ್ದ ಹಗ್ಗವು ಪುಡಿಪುಡಿಯಾಗಿಹೋಯಿತು. ಆ ತತ್ಕ್ಷಣವೇ ಒಂದು ಒದೆಯಿಂದ ಜಮಾದಾರ ಸಾಹೇಬನನ್ನು ಭೂಶಯ್ಯೆಯನ್ನವಲಂಬನೆಮಾಡುವಹಾಗೆ ಮಾಡಿ, ಒಬ್ಬ ಶಿಪಾಯಿಯನ್ನು ಹೊಡಿಯುವದಕ್ಕೆ ಹೋದನು. ಆಗ ಇನ್ನೂ ಮೂರುಜನ ಬಂದು ಅವನನ್ನು ಹಿಡಿದು ಅಲ್ಲಾಡದ ಹಾಗೆ ಮಾಡಿದರು. ಆಗ ದುಃಖದಿಂದ ಕಾತರಗೊಂಡು ಮಹೇಂದ್ರನು ಸತ್ಯಾನಂದ ಬ್ರಹ್ಮಚಾರಿಯನ್ನು ಕುರಿತು, ತಾವು ಸ್ವಲ್ಪ ಸಹಾಯಮಾಡಿದರೆ ಈ ಐದುಮಂದಿ ದುರಾತ್ಮರನ್ನೂ ವಧೆಮಾಡುವೆನೆಂದನು. ಸತ್ಯಾನಂದನು ನನ್ನ ಈ ಪ್ರಾಚೀನ ಶರೀರದಲ್ಲಿ ಬಲವೇನಿದ್ದೀತು; ನಾನು ಯಾರನ್ನು ಕರೆಯುತಲಿದ್ದೇನೋ ಅವನನ್ನು ಹೊರತು ಮತ್ಯಾರೂ ನನಗೆ ಬಲವಿಲ್ಲ; ನಡೆಯುವದು ನಡೆಯಲಿ, ನೀನು ಅದಕ್ಕೆ ವಿರುದ್ಧಾಚರಣೆಯನ್ನು ಮಾಡಬೇಡ; ನಾವು ಈ ಐದು ಜನರನ್ನು ಜಯಿಸುವದಕ್ಕಾಗಲಾರದು. ಎಲ್ಲಿಗೆ ತೆಗೆದುಕೊಂಡು ಹೋಗುವರೋ ಹೋಗಲಿ,

ನಡೆ. ನಾವೂ ಹೋಗಿ ನೋಡೋಣ; ಜಗದೀಶ್ವರನು ಎಲ್ಲ ಕಡೆಯಲ್ಲಿಯೂ ರಕ್ಷಿಸುವನೆಂದು ಹೇಳಿದನು. ಇಬ್ಬರೂ ಬಿಡುಗಡೆಗೆ ಏನೂ ಪ್ರಯತ್ನಪಡದೆ ಶಿಪಾಯಿಗಳ ಜತೆಯಲ್ಲಿ ಹೋದರು. ಸ್ವಲ್ಪದೂರ ಹೋಗುತ್ತಲೇ ಸತ್ಯಾನಂದನು ಶಿಪಾಯಿಗಳನ್ನು ಕುರಿತು ಅಯ್ಯಾ, ನಾನು ಹರಿಕೀರ್ತನೆಯನ್ನು ಮಾಡುವ ದುಂಟು. ಅದಕ್ಕೆ ನಿಮ್ಮ ಆಕ್ಷೇಪಣೆ ಏನಾದರೂ ಉಂಟೊ? ಎಂದು ಕೇಳಿದನು. ಸತ್ಯಾನಂದನು ಒಳ್ಳೇ ಮನುಷ್ಯನೆಂದು ಜಮಾದಾರನು ತಿಳಿದಿದ್ದನಾಗಿ ನೀನು ಹರಿನಾಮವನ್ನು ಮಾಡು, ಅದಕ್ಕೆ ಯಾರೂ ಅಡ್ಡಿಮಾಡುವದಿಲ್ಲ, ನೀನು ಮುದಿ ಬ್ರಹ್ಮಚಾರಿ, ನಿನ್ನನ್ನು ಖುಲಾಸೆಮಾಡುವದಕ್ಕೆ ಹುಕುಂ ಆದೀತು, ಈ ಕೆಟ್ಟ ಮನುಷ್ಯನನ್ನು ಗಲ್ಲಿಗೆ ಹಾಕುವರೆಂದನು. ಆಗ ಬ್ರಹ್ಮಚಾರಿಯು ಮೃದುಮೃದು ವಾದ ಸ್ವರದಿಂದ ಗಾನಮಾಡಿದನು. ಹೇಗೆಂದರೆ:—

ಧೀರಸಮೀರೆ, ತಟಿನೀತೀರೆ,
ವಸತಿವನೆ ವರನಾರಿ
ಮಾಕುರುಧನುರ್ಧರ, ಗಮನವಿಳಂಬನ,
ಅತಿವಿಧುರಾ ವರನಾರಿ. —ಇತ್ಯಾದಿ.

ಅವರು ನಗರವನ್ನು ಸೇರುತಲೇ ಕೊತ್ವಾಲನ ಬಳಿಗೆ ಕರತರಲ್ಪಟ್ಟರು. ಕೊತ್ವಾಲನು ರಾಜಸರ್ಕಾರಕ್ಕೆ ರಿಪೋರ್ಟುಮಾಡಿ ಬ್ರಹ್ಮಚಾರಿಯನ್ನೂ ಮಹೇಂದ್ರನನ್ನೂ ಸಹ ತತ್ಕಾಲಕ್ಕೆ ಪಹರೆಯಲ್ಲಿಟ್ಟನು. ಆ ಕಾರಾಗಾರವು ಅತಿಭಯಂಕರವಾಗಿತ್ತು. ಅಲ್ಲಿಗೆ ಹೋದವನು ಹೊರಕ್ಕೆ ಬರುತ್ತಿರಲಿಲ್ಲ. ಏತಕ್ಕಂದರೆ ವಿಚಾರ ಮಾಡುವವರೇ ಇರಲಿಲ್ಲ. ಇಂಗ್ಲೀಷು ದೌಲತ್ತಿನ ಜೈಲಾಗಿರ ಲಿಲ್ಲ. ಆಗ ಇಂಗ್ಲೀಷರ ಅಧಿಕಾರವಿರಲಿಲ್ಲ. ಈಗ ಕಟ್ಲೆ ಕಾನೂನಿನ ಕಾಲ; ಆಗ ನಿಯಮವಿಲ್ಲದ ಕಾಲ; ನಿಯಮವಿರುವ ಕಾಲಕ್ಕೂ ನಿಯಮವಿಲ್ಲದಕಾಲಕ್ಕೂ ಮೊಕ್ಕಾಬಿಲೆ ಮಾಡಿನೋಡಿ.

---

## ಹದಿನಾಲ್ಕನೆಯ ಪರಿಚ್ಛೇದ

ರಾತ್ರಿಯಾಯಿತು. ಕಾರಾಗಾರದಲ್ಲಿ ಬದ್ಧನಾದ ಬ್ರಹ್ಮಚಾರಿಯು ಮಹೇಂದ್ರನನ್ನು ಕುರಿತು, ಇಂದು ಅತಿ ಆನಂದದ ದಿನವಾಗಿದೆ, ಏತಕ್ಕಂದರೆ, ನಾವು ಕಾರಾಗಾರದಲ್ಲಿ ಬದ್ಧರಾಗಿದ್ದೇವೆ; ಹರೆ ಮುರಾರೆ ಎಂದು ಹೇಳೆಂದನು. ಮಹೇಂದ್ರನು ಕಾತರಸ್ವರದಿಂದ ಹರೆ ಮುರಾರೆ ಎಂದು ಹೇಳಿದನು.

ಸತ್ಯಾನಂದ—ಕಾತರವೇತಕ್ಕೆ? ನೀನು ಈ ವ್ರತವನ್ನು ಗ್ರಹಣಮಾಡಿದರೆ ಹೆಂಡರು ಮಕ್ಕಳನ್ನು ಅಗತ್ಯವಾಗಿ ತ್ಯಾಗಮಾಡಬೇಕು. ಅವರಿಗೂ ನಿನಗೂ ಯಾವ ಸಂಬಂಧವಿರಕೂಡದು.

ಮಹೇಂದ್ರ—ತ್ಯಾಗವಮಾಡುವುದು ಮಹಾ ಯಮದಂಡಸ್ವರೂಪವಾಗಿದೆ. ಯಾವ ಬಲದಿಂದ ನಾನು ಈ ವ್ರತವನ್ನು ಗ್ರಹಣವಮಾಡಬೇಕೋ ಆ ಮಹಾ ಬಲವು ನನ್ನ ಹೆಂಡತಿ ಮಗುವಿನ ಸಂಗಡ ಹೋಗಿಬಿಟ್ಟಿತು.

ಸತ್ಯಾ—ಶಕ್ತಿಯು ಬರುವದು. ನಾನು ಶಕ್ತಿಯನ್ನು ಕೊಡುವೆನು. ಮಹಾ ಮಂತ್ರದಲ್ಲಿ ದೀಕ್ಷಿತನಾಗು, ಮಹಾವ್ರತವನ್ನು ಗ್ರಹಣಮಾಡು.

ಮಹೇಂದ್ರನು ವಿರಕ್ತನಾಗಿ ನಾನು ಹೆಂಡತಿ ಮಗುವನ್ನ ನಾಯಿ ನರಿಗಳಿಗೆ ಕೊಟ್ಟುಬಿಟ್ಟೆ. ನನಗೆ ಯಾವ ವ್ರತದ ಸಮಾಚಾರವನ್ನೂ ಹೇಳಬೇಡಿರಿ.

ಸತ್ಯಾ—ಆ ವಿಚಾರದಲ್ಲಿ ನಿಶ್ಚಿಂತನಾಗಿರು. ಸಂತಾನರು ನಿನ್ನ ಹೆಂಡತಿಯ ಸತ್ಕಾರವನ್ನು ಮಾಡಿದ್ದಾರೆ. ಮಗಳನ್ನು ಕರೆದುಕೊಂಡು ಹೋಗಿ ಸರಿಯಾದ ಸ್ಥಳದಲ್ಲಿಟ್ಟಿದ್ದಾರೆ.

ಮಹೇಂದ್ರನು ವಿಸ್ಮಿತನಾಗಿ ಈ ಮಾತನ್ನು ನಂಬದೆ, ನಿಮಗೆ ಹೇಗೆ ತಿಳಿಯ ಬಂತು; ನೀವು ನನ್ನ ಜತೆಯಲ್ಲಿಯೇ ಇದ್ದರಷ್ಟೆ ಎಂದನು.

ಸತ್ಯಾ—ನಾನು ಮಹಾವ್ರತದಲ್ಲಿ ದೀಕ್ಷಿತನಾದವನು. ದೇವರು ನನಗೆ ದಯಮಾಡಿ ಪರೋಕ್ಷಜ್ಞಾನವನ್ನು ಕೊಟ್ಟಿದ್ದಾನೆ. ಈ ರಾತ್ರಿಯೊಳಗೆ ನಿನಗೆ ಸಮಾಚಾರವು ಬರುವದು. ಈ ರಾತ್ರಿಯಲ್ಲಿಯೇ ನೀನು ಕಾರಾಗಾರದಿಂದ ಬಿಡುಗಡೆಯಾಗುವೆ.

ಮಹೇಂದ್ರನು ಯಾವ ಮಾತನ್ನೂ ಆಡಲಿಲ್ಲ. ಸತ್ಯಾನಂದನು ತಾನು ಹೇಳಿದ ಮಾತಿನಲ್ಲಿ ಮಹೇಂದ್ರನಿಗೆ ನಂಬಿಕೆಯು ಹುಟ್ಟಲಿಲ್ಲವೆಂದು ತಿಳಿದು ಕೊಂಡು ನೀನು ನಂಬಲಾರೆ. ಬೇಕಾದರೆ ಪರೀಕ್ಷೆಯನ್ನು ಮಾಡಿ ನೋಡೆಂದು ಹೇಳಿ ಕಾರಾಗಾರದ ಬಾಗಿಲಿನವರೆಗೆ ಬಂದನು. ಅಲ್ಲಿ ಏನು ಮಾಡಿದನೋ ಅದು ಮಹೇಂದ್ರನಿಗೆ ಗೊತ್ತಾಗಲಿಲ್ಲ. ಆದರೆ ಯಾರ ಸಂಗಡಲೋ ಮಾತನಾಡಿದಹಾಗೆ ತಿಳಿದುಕೊಂಡನು. ಸತ್ಯಾನಂದನು ಹಿಂದಿರುಗಿ ಬಂದನು. ಮಹೇಂದ್ರನು ಏನು ಪರೀಕ್ಷೆ ಮಾಡಬೇಕೆಂದನು.

ಸತ್ಯಾ—ನೀನು ಈಗ ಕಾರಾಗಾರದಿಂದ ಮುಕ್ತನಾಗುವೆ.

ಈ ಮಾತು ಹೇಳುತ್ತಿದ್ದಹಾಗೆ ಕಾರಾಗಾರದ ಬಾಗಲು ತೆರೆಯಲ್ಪಟ್ಟಿತು. ಒಬ್ಬ ಮನುಷ್ಯನು ಒಳಗೆ ಬಂದು, ಮಹೇಂದ್ರಸಿಹ್ಮನೆಂಬುವನು ಯಾರೆಂದು ಕೇಳಿದನು.

ಮಹೇಂದ್ರ—ನನ್ನ ಹೆಸರೆ?

ಆಗಂತುಕ—ನಿನಗೆ ಖುಲಾಸೆಗೆ ಹುಕುಂ ಆಗಿದೆ, ನೀನು ಹೋಗಬಹುದು.

ಮಹೇಂದ್ರನು ಮೊದಲು ವಿಸ್ಮಿತನಾದನು. ಅನಂತರ ಸುಳ್ಳೆಂದು ತಿಳಿದು ಕೊಂಡು ಪರೀಕ್ಷಿಸುವದಕ್ಕೋಸ್ಕರ ಹೊರಗೆ ಹೋದನು. ಯಾರೂ ಅವನನ್ನು ಅಡ್ಡಿಮಾಡಲಿಲ್ಲ. ಮಹೇಂದ್ರನು ಬೀದಿವರೆಗೂ ಹೋದನು.

ಆಗಂತುಕನು ಸತ್ಯಾನಂದನನ್ನು ಕುರಿತು, ಮಹಾರಾಜ! ತಾವೂ ಯಾತಕ್ಕೆ ಹೋಗುವದಿಲ್ಲ? ನಾನು ತಮಗೋಸ್ಕರವೇ ಬಂದದ್ದೆಂದನು.

ಸತ್ಯಾನಂದ—ನೀನ್ಯಾರು? ಧೀರಾನಂದ ಗೋಸ್ವಾಮಿಯೆ?

ಧೀರಾನಂದ—ಹೌದು, ಮಹಸ್ವಾಮಿ.

ಸತ್ಯಾನಂದ—ನೀನು ಪಹರೆದವನಾದುದು ಹೇಗೆ?

ಧೀರಾನಂದ—ಭವಾನಂದನು ನನ್ನನ್ನು ಕಳುಹಿಸಿಕೊಟ್ಟನು. ನಾನು ನಗರಕ್ಕೆ ಬಂದು, ತಾವು ಈ ಕಾರಾಗಾರದಲ್ಲಿರುವುದು ತಿಳಿದು ಕೆಲವು ದತ್ತೂರ ಮಿಶ್ರವಾದ ಗುಳಿಗೆಗಳೊಡನೆ ಇಲ್ಲಿಗೆ ಬಂದೆನು. ಪಹರೆ ಮೇಲಿದ್ದ ಖಾನ್ ಸಾಹೇಬನು ಅದನ್ನು ಸ್ವಲ್ಪ ತಿಂದು ಭೂಶಯ್ಯೆಯಲ್ಲಿ ನಿದ್ರಿತನಾಗಿ ಬಿದ್ದಿದ್ದಾನೆ. ನಾನು ಧರಿಸಿಕೊಂಡಿರುವ ಕೋಟು, ಷರಾಯಿ, ಟೋಪಿ, ಭಲ್ಲೆಯಲ್ಲ ಆ ಸಾಹೇಬರದಾಗಿವೆ.

ಸತ್ಯಾನಂದ—ನೀನಿದನ್ನು ಧರಿಸಿಕೊಂಡು ನಗರದಿಂದ ಹೊರಟುಹೋಗು. ನಾನು ಹೀಗೆ ಹೊರಗೆ ಹೋಗಲಾರೆನು.

ಧೀರಾನಂದ—ಏತಕ್ಕೆ? ಅದೇನು?

ಸತ್ಯಾನಂದ—ಈ ದಿನ ಸಂತಾನರ ಪರೀಕ್ಷೆ.

ಮಹೇಂದ್ರನು ಹಿಂದಿರುಗಿ ಬಂದನು. ಸತ್ಯಾನಂದನು ನೋಡಿ, ಏತಕ್ಕೆ ಹಿಂದಿರುಗಿದೆ ಎಂದನು.

ಮಹೇಂದ್ರ—ತಾವು ನಿಶ್ಚಯವಾಗಿ ಸಿದ್ಧಪುರುಷರು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವವನಲ್ಲ.

ಸತ್ಯಾನಂದ—ಹಾಗಾದರೆ ಇರು! ನಾವಿಬ್ಬರೂ ಬೇರೆ ವಿಧವಾಗಿ ಬಿಡುಗಡೆಯಾಗಿ ಹೋಗೋಣ.

ಧೀರಾನಂದನು ಹೊರಗೆ ಹೊರಟುಹೋದನು. ಸತ್ಯಾನಂದನೂ ಮಹೇಂದ್ರಸಿಂಹನೂ ಸಹ ಕಾರಾಗಾರದಲ್ಲಿರುತಿದ್ದರು.

---

## ಹದಿನೈದನೆಯ ಪರಿಚ್ಛೇದ

ಬ್ರಹ್ಮಚಾರಿಯ ಗಾನವನ್ನು ಅನೇಕರು ಕೇಳಿದರು. ಅವರಲ್ಲಿ ಜೀವಾನಂದನೂ ಆ ಗಾನವನ್ನು ಕೇಳಿದನು. ಮಹೇಂದ್ರನ ಅನುವರ್ತಿಯಾಗಿ ಅವನನ್ನು ನೋಡಿಕೊಳ್ಳಬೇಕೆಂದು ಅವನಿಗೆ ಬ್ರಹ್ಮಚಾರಿಯ ಅಪ್ಪಣೆಯೂ ಆಗಿತ್ತೆಂಬುದು ಪಾಠಕರ ಸ್ಮರಣೆಯಲ್ಲಿರಬಹುದು. ಮಾರ್ಗದಲ್ಲಿ ಒಬ್ಬ ಹೆಂಗಸನ್ನು ಅವನು ನೋಡಿದ್ದನು. ಅವಳು ಏಳು ದಿನಗಳಿಂದ ಅನ್ನವಿಲ್ಲದೆ ಉಪವಾಸವಿದ್ದವಳು ಮಾರ್ಗದ ಪಕ್ಕದಲ್ಲಿ ಬಿದ್ದಿದ್ದಳು. ಅವಳಿಗೆ ಜೀವದಾನ ಮಾಡುವದಕ್ಕೆ ಜೀವಾ

ನಂದನಿಗೆ ಎರಡುಘಂಟೆ ವಿಳಂಬವಾಯಿತು. ಹೆಂಗಸನ್ನು ಬದುಕಿಸಿ ಅವಳನ್ನು ಬಹಳ ಕೆಟ್ಟಮಾತಿನಿಂದ ಬೈದು (ಸಾವಕಾಶಕ್ಕೆ ಅವಳೇ ಕಾರಣ) ಕರೆದುಕೊಂಡು ಬರುತ್ತಿದ್ದನು. ಆಗ ಬರುವಾಗ ತನ್ನ ಪ್ರಭುವಾದ ಬ್ರಹ್ಮಚಾರಿಯನ್ನು ಮುಸಲ್ಮಾನರು ಕರೆದುಕೊಂಡು ಹೋಗುತ್ತಿದ್ದುದ್ದನ್ನು ನೋಡಿದನಲ್ಲದೆ ಪ್ರಭುವಿನ ಗಾನವೂ ಸಹ ಕಿವಿಗೆ ಬಿತ್ತು.

ಜೀವಾನಂದನಿಗೆ ಮಹಾಪ್ರಭುವಿನ ಸಂಕೇತಗಳೆಲ್ಲಾ ಗೊತ್ತಿತ್ತು.

"ಧೀರಸಮೀರೆ, ತಟಿನೀತೀರೆ,
ವಸತಿ ವನೆ ವರನಾರಿ."

ಪ್ರಭುವಿನ ಈ ಗೀತವನ್ನು ಕೇಳಿ, ನದೀತೀರದಲ್ಲಿ ಯಾರೋ ಹೆಂಗಸೊಬ್ಬಳು ಅನ್ನವಿಲ್ಲದೆ ಬಿದ್ದಿರಬೇಕಲ್ಲವೆ? ಎಂದು ಭಾವಿಸಿಕೊಂಡು ಜೀವಾನಂದನು ನದಿಯ ತೀರದಲ್ಲಿಯೇ ನಡೆದುಕೊಂಡು ಬಂದನು. ಬ್ರಹ್ಮಚಾರಿಯನ್ನು ಮುಸಲ್ಮಾನರು ಕರೆದುಕೊಂಡುಹೋದುದನ್ನ ಜೀವಾನಂದನು ಸ್ವಂತವಾಗಿ ಕಣ್ಣಿನಿಂದ ನೋಡಿದ್ದಾನೆ. ಮೊದಲು ಅವನನ್ನು ಬಿಡಿಸಿಕೊಂಡು ಉದ್ಧಾರಮಾಡುವುದು ಅವನಿಗೆ ಮುಖ್ಯವಾದ ಕರ್ತವ್ಯವಾಗಿತ್ತು. ಆದರೆ ಜೀವಾನಂದನು ಉಕ್ತ ಸಂಕೇತವಾದ ಗಾನದಿಂದ ಅದು ಮುಖ್ಯವಾದ ಕರ್ತವ್ಯವಲ್ಲವೆಂದು ಭಾವಿಸಿಕೊಂಡನು. ಬ್ರಹ್ಮಚಾರಿಯ ಪ್ರಾಣರಕ್ಷಣೆಯನ್ನು ಮಾಡುವುದಕ್ಕಿಂತಲೂ ಅವನಾಜ್ಞೆಯನ್ನು ಪರಿಪಾಲನೆಯಂ ಮಾಡುವುದು ಹೆಚ್ಚಾದ ಕಾರ್ಯವೆಂದು ಬ್ರಹ್ಮಚಾರಿಯಿಂದಲೇ ಅವನಿಗೆ ಉಪದೇಶವಾಗಿತ್ತು. ಅದುಕಾರಣ ಅವನಾಜ್ಞೆಯನ್ನು ನೆರವೇರಿಸಬೇಕೆಂದು ಸಂಕಲ್ಪಮಾಡಿಕೊಂಡನು.

ಜೀವಾನಂದನು ನದಿಯತೀರವನ್ನು ಹಿಡಿದು ಹೋದನು. ಹೋಗುತಹೋಗುತಾ ಮರದಡಿಯಲ್ಲಿ ಒಬ್ಬ ಹೆಂಗಸಿನ ಮೃತದೇಹವನ್ನೂ ಒಂದು ಬದುಕಿದ್ದ ಮಗುವನ್ನೂ ಸಹ ನೋಡಿದನು. ಜೀವಾನಂದನು ಮಹೇಂದ್ರನ ಹೆಂಡತಿಯನ್ನೂ ಮಗುವನ್ನೂ ಸಹ ಮೊದಲು ಯಾವಾಗಲೂ ನೋಡಿರಲಿಲ್ಲವೆಂಬುದು ಪಾಠಕರ ಸ್ಮರಣೆಯಲ್ಲಿರಬಹುದು. ಆದರೂ ಇವರೇ ಮಹೇಂದ್ರನ ಹೆಂಡತಿಯಾಗಿಯೂ ಮಗುವಾಗಿಯೂ ಇರಬಹುದೆಂದೂಹಿಸಿಕೊಂಡನು. ಏತಕ್ಕಂದರೆ, ಮಹೇಂದ್ರನು ಪ್ರಭುವಿನ ಜತೆಯಲ್ಲಿ ನೈಯ್ಯಲ್ಪಟ್ಟದ್ದನ್ನ ಅವನು ನೋಡಲಿಲ್ಲ. ಹೇಗಾದರೂ ಆಗಲಿ, ಮಾತೆಯು ಮೃತಳಾಗಿ ಕನ್ಯೆಯು ಜೀವಿತಳಾಗಿದ್ದಳು. ಜೀವಾನಂದನು ಮೊದಲು ಮಗುವನ್ನು ರಕ್ಷಿಸಬೇಕು, ಇಲ್ಲವಾದರೆ, ಹುಲಿಕರಡಿಯ ಪಾಲಾಗುವುದು; ಭವಾನಂದಠಾಕೂರನು ಇಲ್ಲಿಯೇ ಎಲ್ಲೋ ಇರಬೇಕು, ಅವನು ಬಂದು ಹೆಂಗಸಿನ ಸತ್ಕಾರವನ್ನು ಮಾಡುವನೆಂದು ಹೇಳಿಕೊಂಡು ಮಗುವನೆತ್ತಿಕೊಂಡು ಹೊರಟುಹೋದನು.

ಮಗುವನ್ನು ಎತ್ತಿಕೊಂಡು ಜೀವಾನಂದಗೋಸ್ವಾಮಿಯು ಆ ನಿಬಿಡವಾದ

ವನಮಧ್ಯದಲ್ಲಿ ಪ್ರವೇಶಮಾಡಿದನು. ಅರಣ್ಯವನ್ನು ದಾಟಿಹೋಗಿ ಒಂದು ಚಿಕ್ಕ ಗ್ರಾಮಕ್ಕೆ ಹೋದನು. ಗ್ರಾಮದ ಹೆಸರು ಭೈರವಪುರ; ಆದರೆ ಜನಗಳು ಭರಯಿಾಪುರವೆಂದು ಹೇಳುತ್ತಿದ್ದರು. ಭರಯಿಾಪುರದಲ್ಲಿ ಕೇವಲ ಸಾಮಾನ್ಯ ರಾದ ಕೆಲವುಮಂದಿ ವಾಸಮಾಡುತಲಿದ್ದರು. ಹತ್ತಿರದಲ್ಲಿ ಮತ್ಯಾವ ದೊಡ್ಡ ಗ್ರಾಮವಿರಲಿಲ್ಲ. ಗ್ರಾಮವನ್ನು ಬಿಟ್ಟು ಪಾರಾಗುತ್ತಲೇ ಪುನಃ ಕಾಡು, ನಾಲ್ಕು ಕಡೆಯಲ್ಲಿಯೂ ಕಾಡು, ಕಾಡಿನ ಮಧ್ಯೆ ಸಣ್ಣದಾದ ಗ್ರಾಮ, ಆದರೆ ಗ್ರಾಮ ವೇನೋ ಅತಿ ರಮಣೀಯವಾದ ಗ್ರಾಮ; ಕೋಮಲವಾದ ಗರಿಕೆಹುಲ್ಲು ಬೆಳದು ನಿಂತಿದ್ದ ಗೋಚಾರುಭೂಮಿ, ಕೋಮಲವಾದ ಶ್ಯಾಮಲ ಪಲ್ಲವ ಯುಕ್ತವಾದ ಮಾವು, ಮುಳ್ಳುಹಲಸು, ತಾಲವೃಕ್ಷಗಳ ತೋಪು, ಅದರ ಹಿಂದೆ ನೀಲಜಲ ಪರಿಪೂರ್ಣವಾದ ಸ್ವಚ್ಛಂದವಾದ ಕೆರೆ, ಕೆರೆಯಲ್ಲಿ ಬಕ, ಹಂಸ ಮುಂತಾದ ಜಲ ಚರ ಪಕ್ಷಿಗಳು, ತೀರದಲ್ಲಿ ಕೋಕಿಲ, ಚಕ್ರವಾಕಗಳು; ಸ್ವಲ್ಪ ದೂರದಲ್ಲಿ ಮಯೂರವು ಉಚ್ಚವಾದ ರವದಿಂದ ಕೇಕಾಧ್ವನಿಯನ್ನು ಮಾಡುತ್ತದೆ. ಮನೆ ಮನೆಯ ಮುಂಭಾಗದ ಅಂಗಳಗಳಲ್ಲಿ ದನಕರುಗಳು, ಒಳಂಗಳಗಳಲ್ಲಿ ಕಣಜ ಗೆರುಶೆ ಹಗೇವು, ಆದರೆ ದುರ್ಭಿಕ್ಷಕಾಲವಾದುದರಿಂದ ಅವುಗಳಲ್ಲಿ ಧಾನ್ಯವಿರಲಿಲ್ಲ. ಒಂದೊಂದು ಮನೆಯ ಸೂರಿಗೆ ಮೈನಾದ ಪಂಜರವು ನೇತುಹಾಕಿತ್ತು. ಕೆಲ ಮನೆಗಳ ಗೋಡೆಗೆ ಸುಣ್ಣ ಕೆಮ್ಮಣ್ಣುಪಟ್ಟೆ ಹಚ್ಚಿತ್ತು. ಕೆಲಮನೆಗಳ ಅಂಗಳ ದಲ್ಲಿ ಕಾಯಿಪಲ್ಯದ ಚಪ್ಪರ. ಊರಿನ ಜನರೆಲ್ಲರೂ ದುರ್ಭಿಕ್ಷದಿಂದ ಪೀಡಿತರಾಗಿ ಕೃಶರಾಗಿ ಶೀರ್ಣವಾಗಿ ಸಂತಾಪಿತರಾಗಿದ್ದರು. ಆದರೂ ಊರು ಸ್ವಲ್ಪ ಲಕ್ಷಣ ವಾಗಿತ್ತು. ಕಾಡಿನಲ್ಲಿ ಮನುಷ್ಯನ ಆಹಾರಕ್ಕೆ ತಕ್ಕ ಪದಾರ್ಥಗಳು ಬೆಳದಿದ್ದುದ ರಿಂದ ಆ ಗ್ರಾಮವಾಸಿಗಳು ಅವುಗಳನ್ನು ತಂದು ಪ್ರಾಣಾರೋಗ್ಯಗಳನ್ನು ಕಾಪಾಡಿಕೊಳ್ಳುತ್ತಿದ್ದರು.

ಒಂದು ದೊಡ್ಡದಾದ ಮಾವಿನ ತೋಪಿನಲ್ಲಿ ಒಂದು ಸಣ್ಣದಾದ ಮನೆ, ನಾಲ್ಕುಕಡೆಗೂ ಮಣ್ಣಿನಗೋಡೆ, ನಾಲ್ಕು ದಿಕ್ಕಿಗೂ ನಾಲ್ಕು ಚಿಕ್ಕಮನೆಗಳು, ಮನೆಯ ಯಜಮಾನನಿಗೆ ದನಕರಗಳಿದ್ದವು, ಕುರಿಮೇಕೆಗಳಿದ್ದವು, ಒಂದು ನವಿಲು ಇತ್ತು, ಒಂದು ಮೈನಾ ಇತ್ತು, ಒಂದು ಮಂಗ ಇತ್ತು; ಆದರೆ ಅದಕ್ಕೆ ತಿಂಡಿ ಹಾಕಲಾರದೆ ಬಿಟ್ಟುಬಿಟ್ಟಿದ್ದನು. ಒಂದು ಟಗರು ಇತ್ತು, ಹೊರಗೆ ಖಣವಿತ್ತು, ಅಂಗಳದಲ್ಲಿ ನಿಂಬೆಗಿಡ, ಮಲ್ಲಿಗೆ ಗಿಡ, ಆದರೆ ಈ ಸಲ ಅದರಲ್ಲಿ ಹೂವು ಇಲ್ಲ. ಪ್ರತಿ ಮನೆಯಲ್ಲಿಯೂ ಒಂದೊಂದು ನೂಲಿನ ರಾಟೆ; ಆದರೆ ಮನೆಗಳಲ್ಲಿ ಹೆಚ್ಚು ಜನವಿಲ್ಲ. ಜೀವಾನಂದನು ಮಗುವನೆತ್ತಿಕೊಂಡು ಮೇಲೆ ಹೇಳಿದ ಮನೆಯೊಳಗೆ ಹೋದನು.

ಮನೆಯೊಳಗೆ ಹೋಗಿ ಜೀವಾನಂದನು ಒಂದು ರಾಟೆಯನ್ನು ತಂದು ತಿರುಗಿಸುತ್ತ ಝುರಝುರ ಶಬ್ದವನ್ನು ಮಾಡಿದನು. ಆ ಸಣ್ಣ ಮಗುವು ರಾಟೆಯನ್ನು

ಯಾವಾಗಲೂ ನೋಡಿರಲಿಲ್ಲ; ಅದಲ್ಲದೆ ತಾಯಿಯನ್ನು ಬಿಟ್ಟವೊದಲು ಅಳುತಲೇ ಇತ್ತು. ರಾಟೆಯ ಶಬ್ದವನ್ನು ಕೇಳಿ ಭಯಪಟ್ಟು ಮತ್ತಿಷ್ಟು ಘಟ್ಟಿಯಾಗಿ ಅಳುವದಕ್ಕೆ ಪ್ರಾರಂಭಿಸಿತು. ಆಗ ಮನೆಯೊಳಗಣಿಂದ ಹದಿನೇಳು ಹದಿನೆಂಟು ವಯಸ್ಸಿನ ಹೆಂಗಸೊಬ್ಬಳು ಹೊರಗೆ ಬಂದಳು; ಹೊರಗೆ ಬಂದವಳು ಬಲ ಕೆನ್ನೆ ಮೇಲೆ ಬಲಗೈ ಬೆರಳಿಟ್ಟುಕೊಂಡು ಕುತ್ತಿಗೆಯನ್ನೋರೆ ಮಾಡಿಕೊಂಡು ನಿಂತು, ಇದೇನು ಇದು? ಅಣ್ಣಾ! ರಾಟೆಯನ್ನು ತಿರುಗಿಸುತ್ತಿ? ಮಗು ಎಲ್ಲಿ ಸಿಕ್ಕಿತು? ನಿನಗೆ ಮಕ್ಕಳೆ ಆಗಲಿಲ್ಲವಲ್ಲ? ತಿರುಗಿ ಬೇರೆ ಮದುವೆ ಮಾಡಿಕೊಂಡೆಯಾ ಏನು? ಎಂದಳು.

ಜೀವಾನಂದನು ಮಗುವನ್ನು ಆ ಯುವತಿಯ ಕೈಗೆ ಕೊಟ್ಟು ಅವಳಿಗೆ ಮೃದುವಾಗಿ ಒಂದು ಪೆಟ್ಟನ್ನು ಹೊಡೆದು, ಎಲೆ! ಮಂಗ, ನನಗೆ ಪುನಃ ಹೆಂಡತಿಯೇ? ನನಗೇತಕ್ಕೆ ಇಬ್ಬರು ಹೆಂಡಂದಿರ ಕಾಟ? ಮನೇಲಿ ಹಾಲು ಇದೆಯೆ? ಎಂದನು.

ಯುವತಿ—ಹಾಲು ಇಲ್ಲದೆ ಏನು, ತೆಗೆದುಕೊಳ್ಳುತ್ತೀಯಾ?

ಜೀವಾನಂದ—ಆಗಲಿ ತೆಗೆದುಕೊಳ್ಳುತ್ತೇನೆ.

ಆಗವಳು ಬೇಗನೆ ಹಾಲುಕಾಯಿಸುವದಕ್ಕೆ ಹೋದಳು. ಜೀವಾನಂದನು ಅದುವರೆಗೆ ರಾಟೆಯನ್ನು ತಿರುಗಿಸಿ ಶಬ್ದಮಾಡುತಲಿದ್ದನು. ಯುವತಿಯು ಎತ್ತಿಕೊಂಡಮೇಲೆ ಮಗುವು ಅಳುವುದನ್ನು ನಿಲ್ಲಿಸಿತು. ಮಗುವು ಏನು ತಿಳಿದುಕೊಂಡಿತೋ ಹೇಳಲಸಾಧ್ಯ. ಬಹುಶಃ ಆಗತಾನೆ ಅರಳಿದ ಪುಷ್ಪಸದೃಶಳಾದ ಆ ಸುಂದರಿಯನ್ನು ನೋಡಿ ತನ್ನ ಜನನಿಯೆಂದು ತಿಳಿಯಿತೋ ಏನೋ ನಾವು ಗೊತ್ತಾಗಿ ಹೇಳಲಾರೆವು. ಹಾಲು ಕಾಯಿಸುತ್ತಿರುವಾಗ, ಶಕೆ ತಗಲಿ ಮಗುವು ಮತ್ತೊಂದು ತಡವೆ ಅತ್ತಿತು. ಅಳುವದನ್ನು ಕೇಳುತ್ತಲೇ ಜೀವಾನಂದನು, ಎಲೆ! ನಿಮಿ! ಹಾಳಾದವಳೆ! ಮಂಗ! ನಿನ್ನ ಹಾಲು ಇನ್ನೂ ಬಿಸಿಯಾಗಲಿಲ್ಲವೆ? ಎಂದನು. ನಿಮಿಯು ಆಯಿತೆಂದು ಹೇಳಿ ಕಲ್ಲುಮಡಿಕೆಯಲ್ಲಿ ಹಾಲು ತಂದಳು. ಜೀವಾನಂದನು ಕೃತ್ರಿಮ ಕೋಪವನ್ನು ತಾಳಿ, ನೋಡು, ಈ ಸುಡುವ ಹಾಲನ್ನು ನಿನ್ನ ಮೈಮೇಲೆ ಸುರಿದುಬಿಡುತ್ತೇನೆ, ನಾನು ಹಾಲು ಕುಡಿಯುವೆನೆಂದು ತಿಳಿದಿಯಾ ಏನು? ಎಂದು ಹೇಳಿದನು.

ನಿಮಿ—ಹಾಗಾದರೆ ಯಾರಿಗೆ?

ಜೀವಾಂದ—ಈ ಮಗು ಕುಡಿಯುವದೋ ಏನೋ ಕೊಟ್ಟು ನೋಡು.

ನಿಮಿಯು ಆಗ ಮಗುವನ್ನು ಮಡಲುನಲ್ಲಿ ಮಲಗಿಸಿಕೊಂಡು ಒಳಲೆಯಿಂದ ಹಾಲು ಕುಡಿಸುವದಕ್ಕೆ ಕೂತಳು. ಇದ್ದಕ್ಕಿದ್ದಹಾಗೆ ಅವಳ ಕಣ್ಣುಗಳಿಂದ ನಾಲ್ಕುತೊಟ್ಟು ನೀರು ತೊಟಕಿತು. ಅವಳಿಗೆ ಒಂದು ಮಗುವಿತ್ತು, ಅದು ಹೋಯಿತು. ಒಳಲೆಯು ಆ ಮಗುವಿನದಾಗಿತ್ತು. ಕೂಡ್ಲೆ ನಿಮಿಯು ಕಣ್ಣೀರ

ನೊರಸಿಕೊಂಡು ನಗುನಗುತ ಜೀವಾನಂದನನ್ನು ನೋಡಿ ಅಣ್ಣಾ! ಇದು ಯಾರ ಮಗುವಣ್ಣಾ? ಎಂದು ಕೇಳಿದಳು.

ಜೀವಾನಂದ—ನಿನಗೆ ಏತಕ್ಕೆ, ಮೊಂಕುಮುಖಿ?

ನಿಮಿ—ಈ ಮಗುವನ್ನು ನನಗೆ ಕೊಡಲಾರೆಯಾ?

ಜೀವಾ—ನೀನು ಮಗುವನ್ನು ತೆಗೆದುಕೊಂಡು ಏನುಮಾಡುವೆ?

ನಿಮಿ—ನಾನು ಮಗುವಿಗೆ ಹಾಲು ಹಾಕುತ್ತೇನೆ, ಎತ್ತಿಕೊಳ್ಳುತ್ತೇನೆ, ದೊಡ್ಡವಳನ್ನಾಗಿ ಮಾಡುತ್ತೇನೆ. ಹೀಗೆ ಹೇಳುತ್ತಿರುವಾಗ ಕಣ್ಣುಗಳಿಂದ ಪುನಃ ನೀರು ಸುರಿಯಿತು. ನಿಮಿಯು ಕೈಯಿಂದೊರಿಸಿಕೊಂಡು ಪುನಃ ನಕ್ಕಳು.

ಜೀವಾ—ನೀನು ಕಟ್ಟಿಕೊಂಡು ಏನುಮಾಡುತ್ತಿ? ನಿನಗೆಷ್ಟೋ ಗಂಡು ಹೆಣ್ಣು ಆಗುತ್ತವೆ.

ನಿಮಿ—ಆದರೆ ಆಗಲಿ, ಈಗ ಈ ಮಗುವನ್ನು ಕೊಡು, ಕೊಡದಿದ್ದರೆ ತೆಗೆದು ಕೊಂಡು ಹೋಗು.

ಜೀವಾ—ಹಾಗಾಗುವದಿಲ್ಲ. ತೆಗೆದುಕೊಂಡು ಹೋದರೆ ಸತ್ತುಹೋಗು ವುದು. ನಾನು ಮಧ್ಯೆಮಧ್ಯೆ ಬಂದು ನೋಡಿಕೊಂಡು ಹೋಗುತ್ತೇನೆ, ಅದು ಕಾಯಿತ ಬ್ರಾಹ್ಮಣರ ಮಗು, ನಾನು ಹೋಗುತ್ತೇನೆ.

ನಿಮಿ—ಅದೇನು ಅಣ್ಣಾ! ಊಟಮಾಡುವದಿಲ್ಲವೆ? ಹೊತ್ತಾಗಿಹೋಗಿದೆ, ನನ್ನಾಣೆ, ಸ್ವಲ್ಪ ಏನಾದರೂ ತೆಗೆದುಕೊಂಡು ಹೋಗು.

ಜೀವಾ—ಸ್ವಲ್ಪ ಇಲ್ಲದಿದ್ದರೆ ಹೆಚ್ಚು ತಿನ್ನುತ್ತೇನೆ. ಏನೋ ಆಣೆ ಇಟ್ಟು ಬಿಟ್ಟೆ. ಹಾಗಾದರೆ ಏನಾದರೂ ಹಾಕು.

ನಿಮಿಯು ಮಗುವನ್ನ ಎತ್ತಿಕೊಂಡು ಅಡಿಗೆಮನೆಗೆ ಹೋದಳು. ಒಳ್ಳೆ ಮಲ್ಲಿಗೆ ಮೊಗ್ಗಿನಂತಹ ಅನ್ನ, ಸೊಗಸಾದ ಬೇಳೆಹುಳಿ, ಇನ್ನೂ ಇತರ ವ್ಯಂಜನ ಗಳು ಮತ್ತು ಹಾಲು, ಇದನೆಲ್ಲ ತಂದು ಜೀವಾನಂದನಿಗೆ ಬಡಿಸಿದಳು. ಜೀವಾ ನಂದನು ಊಟಮಾಡುತ್ತ, ತಂಗಿ, ನಿಮಿ! ಕ್ಷಾಮವೆಂದು ಯಾರುತಾನೇ ಹೇಳು ವದಕ್ಕಾದೀತು? ನಿನ್ನ ಮನೆಗೇನೋ ಕ್ಷಾಮ ಕಾಲಿಡಲಿಲ್ಲವೆಂದನು.

ನಿಮಿ—ಕಾಲಿಡದೆ ಏನು? ಬಹಳ ಕ್ಷಾಮ, ನಾವು ಇರುವರು ಹಕ್ಕಿಗಳ ಹಾಗೆ ಇಬ್ಬರು, ಮನೇಲಿರುವುದನ್ನು ಬಂದವರಿಗೆ ಕೊಟ್ಟು, ನಾವೂ ಊಟಮಾಡು ತ್ತೇವೆ, ನಮ್ಮ ಕಡೆ ಮಳೆ ಆಯಿತು, ಗೊತ್ತಿಲ್ಲವೆ?—ನೀನು ಹೇಳಿಹೋದಮೇಲೆ ವನದಲ್ಲಿ ಮಳೆ ಆಯಿತು. ನಮ್ಮ ಗದ್ದೆಗಳಲ್ಲಿ ಅಲ್ಪಸ್ವಲ್ಪ ಭತ್ತವಾಯಿತು, ಮಿಕ್ಕವರೆಲ್ಲ ನಗರಕ್ಕೆ ತೆಗೆದುಕೊಂಡು ಹೋಗಿ ಹಣದಾಶೆಗೆ ಮಾರಿಕೊಂಡರು, ನಾವು ಮಾತ್ರ ಮಾರಲಿಲ್ಲ, ಹಾಗೇ ಇಟ್ಟುಕೊಂಡೆವು.

ಜೀವಾ—ನಿಮ್ಮ ಅತ್ತಿಗೆ ಎಲ್ಲಿ?

ನಿಮಿಯು ತಲೆಯನ್ನು ಬೊಗ್ಗಿಸಿಕೊಂಡು ಮೆಲ್ಲಮೆಲ್ಲಗೆ—ಏನೋ ಎರಡು

ಮೂರು ಸೇರು ಅಕ್ಕಿ ತೆಗೆದುಕೊಂಡು ಹೋದಳು, ಅಕ್ಕಿ ಯಾರು ಕೊಟ್ಟಾರು ?

ಜೀವಾನಂದನ ಅದೃಷ್ಟದಲ್ಲಿ ಈ ಸಮಯದಲ್ಲಿ ಬಹಳ ದಿನಗಳಿಂದ ಇಂತಹ ಊಟ ಸಿಕ್ಕಿರಲಿಲ್ಲ, ಜೀವಾನಂದನು ವೃಥಾ ಮಾತಿನಲ್ಲಿ ಹೊತ್ತು ಕಳೆಯುವುದು ಬಿಟ್ಟು ಗವಗವನೆ ಸರಬರ ಶಬ್ದಮಾಡಿಕೊಂಡು ಕೆಲವು ನಿಮಿಷಗಳಲ್ಲಿಯೇ ಅನ್ನ ವ್ಯಂಜನಾದಿಗಳನ್ನು ಪೂರೈಸಿಬಿಟ್ಟನು. ಶ್ರೀಮತೀ ನಿಮಾಯಿಮಣಿಯು ತನಗೂ ತನ್ನ ಗಂಡನಿಗೆ ಆಗುವಷ್ಟು ಮಾತ್ರ ಅಡಿಗೆಯನ್ನು ಮಾಡಿದ್ದಳು. ಎಲೆಯಲ್ಲಿ ಎಲ್ಲ ಮುಗಿದುಹೋದುದನ್ನು ನೋಡಿ ಏನೂ ತೋಚದೆ ಗಂಡನಿಗಿಟ್ಟಿದ್ದದ್ದನ್ನೂ ಸಹ ತಂದು ಬಡಿಸಿದಳು. ಜೀವಾನಂದನು ಸಂಕೋಚಪಡದೆ ಅದನ್ನು ಸಹ ಉದರವೆಂಬ ದೊಡ್ಡ ಹಗೇವಿಗೆ ಹಾಕಿಬಿಟ್ಟನು. ಆಗ ನಿಮಾಯಿಮಣಿಯು, ಅಣ್ಣಾ! ಇನ್ನೇನಾದರೂ ತೆಗೆದುಕೊಳ್ಳುವಿಯಾ? ಎಂದಳು.

ಜೀವಾ—ಇನ್ನೇನು ಇದೆ?

ನಿಮಾಯಿಮಣಿಯು ಒಂದು ಒಳ್ಳೇ ಹಣ್ಣಾದ ಹಲಸಿನಹಣ್ಣು ಇದೆ, ಎಂದು ಹೇಳಿ ಅದನ್ನು ತಂದಿಟ್ಟಳು. ವಿಶೇಷವೇನೂ ಹೇಳದೆ ಜೀವಾನಂದ ಗೋಸ್ವಾಮಿಯು ಹಲಸಿನಹಣ್ಣನ್ನು ಪೂರ್ತಿಯಾಗಿ ಆ ಧ್ವಂಸಪುರಿಗೆ ಕಳುಹಿಸಿಬಿಟ್ಟನು. ಆಗ ನಿಮಾಯಿಮಣಿಯು ನಕ್ಕು, ಅಣ್ಣಾ! ಇನ್ನೇನೂ ಇಲ್ಲವೆಂದಳು.

ಅಣ್ಣನು—ಹಾಗಾದರೆ ಹೋಗು, ಮತ್ತೊಂದುದಿನ ಬಂದು ಊಟಮಾಡುತ್ತೇನೆ.

ಕಡೆಗೆ ಕೈ ತೊಳೆದುಕೊಳ್ಳುವದಕ್ಕೆ ನೀರು ಕೊಟ್ಟಳು. ಕೈಗೆ ನೀರು ಹಾಕುತ್ತಿರುವಾಗ ನಿಮಾಯಿಮಣಿಯು, ಅಣ್ಣಾ! ನಾನೊಂದುಮಾತು ಹೇಳುತ್ತೇನೆ, ನಡಿಸುವಿಯಾ? ಎಂದಳು.

ಜೀವಾ—ಏನು ಮಾತು ?

ನಿಮಿ—ನನ್ನಮೇಲೆ ಆಣೆ ಇಡು.

ಜೀವಾ—ಏನೆ? ಹೇಳೆ, ಮಂಗ!

ನಿಮಿ—ನಡಿಸುತ್ತೀಯಾ?

ಜೀವಾ—ಏನು, ಮೊದಲು ಹೇಳು.

ನಿಮಿ—ನೀನು ಆಣೆ ತೆಗೆದುಕೊ, ನಾನು ನಿನ್ನ ಕಾಲಿಗೆ ಬೀಳುತ್ತೇನೆ.

ಜೀವಾ—ಆಣೆ ಆಯಿತು, ಕಾಲಿಗೂ ಬೀಳು, ಆದರೆ ಹೇಳು, ಏನದು?

ಆಗ ನಿಮಾಯಿಮಣಿಯು ಒಂದು ಕೈಯಲ್ಲಿ ಮತ್ತೊಂದು ಕೈಯ ಬೆರಳುಗಳನ್ನು ಇಟ್ಟುಕೊಂಡು, ಕುತ್ತಿಗೆ ಸೊಟ್ಟುಮಾಡಿಕೊಂಡು, ಆ ಬೆರಳುಗಳನ್ನು ನೋಡಿ, ಮುಖವೆತ್ತಿ ಜೀವಾನಂದನನ್ನು ನೋಡಿ, ನೆಲದಮೇಲೆ ದೃಷ್ಟಿಸಿ ನೋಡಿ, ಕಡೆಗೆ ಮುಖವನೆತ್ತಿ ಬಾಯಿಬಿಟ್ಟು, ಒಂದು ತಡವೆ ಅತ್ತಿಗೆಯನ್ನು ಕರೆಯಲೆ? ಎಂದಳು.

ಜೀವಾನಂದನು ಶೀನುವದಕ್ಕೆ ನೆಟ್ಟಗೆ ಎದ್ದು ನಿಮಾಯಿಮಣಿಯನ್ನು ಹೊಡಿಯುವವನಹಾಗೆ ಉದ್ಯುತನಾಗಿ, ನನ್ನ ಹೆಂಡತಿಯನ್ನು ಪುನಃ ನನಗೆ ಕೊಟ್ಟರೆ, ನೀನು ಇಂದು ಇಟ್ಟ ಅನ್ನವನ್ನ ನಿನಗೆ ಹಿಂದಿರುಗಿಸುವೆನು; ನೀನು ಶುದ್ಧ ಹುಚ್ಚಿ, ನಿನ್ನ ಮುಖವೋ! ನೀನೋ! ನೀನು ಹೇಳಬಾರದ್ದನ್ನೇ ನನಗೆ ಹೇಳುತ್ತಿ ಎಂದನು.

ನಿಮಿಯು, ಹಾಗೇ ಆಗಲಿ, ನಾನೇ ಹುಚ್ಚು, ನನ್ನದು ಕೆಟ್ಟಬಾಯಿ, ಅತ್ತಿಗೆಯನ್ನು ಒಂದು ತಡವೆ ಕರೆಯಲೆ? ಎಂದು ಹೇಳಿದಳು.

ಜೀವಾ—ನಾನು ಹೊರಟೆ,—ಎಂದು ಹೇಳಿ, ಬಾಗಿಲುಕಡೆಗೆ ಹೋದನು—ನಿಮಾಯಿಯು ಹೋಗಿ ಬಾಗಿಲು ಹಾಕಿ ಬಾಗಲಿಗೆ ಅಡ್ಡವಾಗಿ ನಿಂತು, ಮೊದಲು ನನ್ನನ್ನು ಕೊಂದು ಮುಂದೆ ಹೋಗಬೇಕು, ಅತ್ತಿಗೆಯನ್ನು ನೋಡದೆ ನೀನು ಹೊರಗೆ ಹೋಗಲಾರೆ ಎಂದಳು.

ಜೀವಾ—ನಾನು ಎಷ್ಟು ಜನರನ್ನು ಕೊಂದುಹಾಕಿದ್ದೇನೊ ಅದು ನಿನಗೆ ತಿಳಿಯುವದೆ?

ನಿಮಾಯಿಯು ಅದನ್ನು ಕೇಳಿ ಕೋಪಗೊಂಡು, ಬಹಳ ಕೀರ್ತಿ ಬಂದ ಹಾಗಾಯಿತು, ಹೆಂಡರನ್ನು ಪರಿತ್ಯಾಗಮಾಡುವುದು ಕಂಡ ಜನರನ್ನು ಕೊಲ್ಲುವುದು, ನಾನು ನಿನಗೆ ಅಂಜುಬೇಕು, ನೀನು ಯಾವ ತಂದೆಯ ಮಗನೋ ನಾನೂ ಅದೇ ತಂದೆಗೆ ಮಗಳು; ಜನಗಳನ್ನು ಕೊಲ್ಲುವುದು ಒಂದು ಹೆಮ್ಮೆಯಾಗಿದ್ದರೆ ನನ್ನನ್ನು ಕೊಲ್ಲುವದೂ ಬಡಾಯಿಯೇ ಹೌದಾದೀತೆಂದಳು.

ಜೀವಾನಂದನು ನಕ್ಕು, ಕರೆದುಕೊಂಡು ಬಾ, ಯಾವ ಪಾಪಿಷ್ಠಳನ್ನು ಕರತರುವೆಯೊ ಬಾ, ಬರಲಿ; ಆದರೆ ಇಂತಹ ಮಾತು ಇನ್ನೊಂದುಸಲ ಹೇಳಿದರೆ ನಿನಗೆ ತಿಳಿಸದೆ ಅವಳಿಗೆ ತಲೆಬೋಳಿಸಿ ಕೆಸರು ಬಳಿದು ಕತ್ತೆಯ ಮೇಲೆ ಹಿಂದುಮುಖವಾಗಿ ಸವಾರಿಮಾಡಿಸಿ ಗಡೀಪಾರುಮಾಡಿಬಿಡುತ್ತೇನೆಂದನು.

ನಿಮಿಯು ಮನಸ್ಸಿನಲ್ಲಿ ನಾನೂ ಅದಕ್ಕೇ ಇರುವುದೆಂದಂದುಕೊಂಡು ನಗುನಗುತ ಹೊರಗೆ ಹೋದಳು; ಹತ್ತಿರದಲ್ಲಿದ್ದ ಒಂದು ಹುಲ್ಲುಗುಡಿಸಲಿಗೆ ಹೋದಳು. ಕುಟೀರದಲ್ಲಿ ಹರಕು ಚಿಂದಿಬಟ್ಟೆಯನ್ನುಟ್ಟು ಬಾಚಿಕೊಳ್ಳದೆ ತಲೆಕೂದಲು ಕೆದರಿದ್ದ ಒಬ್ಬ ಹೆಂಗಸು ರಾಟೆಯಲ್ಲಿ ನೂಲುಮಾಡಿಕೊಂಡು ಕುಳಿತಿದ್ದಳು. ನಿಮಾಯಿಮಣಿಯು ಹೋಗಿ ಎಲೆ ಅತ್ತಿಗೆ! ಬೇಗ ಏಳು, ಬೇಗ ಏಳು ಎಂದಳು. ಅತ್ತಿಗೆಯು ಏನು ಬೇಗ? ಅಳಿಯಂದರು ನಿನ್ನನ್ನ ಹೊಡದರೇನು? ಘಾಯಕ್ಕೆ ಎಣ್ಣೆ ಹಾಕಬೇಕೆ? ಎಂದಳು.

ನಿಮಿ—ಸ್ವಲ್ಪ ಹಾಗೆ ಹಾಗೆ, ಹೌದು, ಎಣ್ಣೆ ಇದಿಯೆ ಮನೇಲಿ?

ಆ ಹೆಂಗಸು ಎಣ್ಣೆ ಕುಡಿಕೆಯನ್ನು ತೆಗದಿಟ್ಟಳು. ನಿಮಾಯಿಮಣಿಯು ಕುಡಿಕೆಯಿಂದ ಜಾಗ್ರುತೆ ಜಾಗ್ರುತೆಯಾಗಿ ಬೆರಳುಗಳಿಂದ ಎಣ್ಣೆತೆಗದುಕೊಂಡು

ಆ ಹೆಂಗಸಿನ ತಲೇಕೂದಲಿಗೆ ಸವರಿ ಅವಸರದಲ್ಲಿ ಬಾಚಿ ಹೆರಳುಹಾಕಿದಳು. ಅನಂತರ ಅವಳ ಬೆನ್ನಿನಮೇಲೆ ಒಂದು ಪೆಟ್ಟುಕೊಟ್ಟು, ನಿನ್ನ ಆ ಹೊಸ ಶೀರೆ ಎಲ್ಲಿದೆ ಹೇಳೆಂದಳು. ಅದಕ್ಕವಳು ಆಶ್ಚರ್ಯಪಟ್ಟು, ಇದೇನೆ ನಿನಗೇನು ಬಂತು! ಸಾಕು ಬಿಡೆಂದಳು.

ನಿಮಾಯಿಯು ತಿರುಗಿ ಒಂದು ಏಟುಹಾಕಿ ನಿನ್ನ ಹೊಸ ಶೀರೆಯನ್ನು ತೆಗಿಯೆಂದಳು.

ತಮಾಷಿಗೆ ಆ ಹೆಂಗಸು ಶೀರೆಯನ್ನು ಹೊರಗೆ ತೆಗದಳು. ಇಷ್ಟು ಕಷ್ಟದಲ್ಲಿದ್ದರೂ ತಮಾಷೆಮಾಡುವ ವೃತ್ತಿಯು ಅವಳ ಹೃದಯದಲ್ಲಿ ಲುಪ್ತವಾಗಿ ಹೋಗಿರಲಿಲ್ಲ. ನವೀನ ಯೌವನ! ಫುಲ್ಲಕಮಲತುಲ್ಯವಾದ ಅವಳಾ ನವವಯಸ್ಸಿನ ಸೌಂದರ್ಯ; ಎಣ್ಣೆ ಇಲ್ಲ—ಉಡುಪು ಇಲ್ಲ—ಆದರೂ ಆ ಸೌಂದರ್ಯವು ಪ್ರದೀಪ್ತವಾಗಿತ್ತು, ಅನನುಮೇಯ ಸೌಂದರ್ಯವು, ಆ ಶತಗ್ರಂಥಿಯುಕ್ತವಾದ ವಸನಮಧ್ಯದಲ್ಲಿಯೂ ಪ್ರಕಾಶವಾಗಿ ಪ್ರಸ್ಫುಟಿತವಾಗಿತ್ತು. ವರ್ಣದಲ್ಲಿ ಶ್ಯಾಮಾಂಗಿ, ನಯನದಲ್ಲಿ ಕಟಾಕ್ಷ, ಅಧರದಲ್ಲಿ ಹಾಸ್ಯ, ಹೃದಯದಲ್ಲಿ ಧೈರ್ಯ, ಆಹಾರವಿಲ್ಲ. ಆದರೂ ಶರೀರವು ಲಾವಣ್ಯಮಯವಾಗಿತ್ತು. ಸರಿಯಾದ ಉಡುಪು ಇಲ್ಲ. ಸೌಂದರ್ಯವು ಸಂಪೂರ್ಣವಾಗಿ ಅಭಿವ್ಯಕ್ತವಾಗಿತ್ತು. ಹೇಗೆ ಮೇಘಮಧ್ಯದಲ್ಲಿ ಮಿಂಚೊ, ಹೇಗೆ ಮನೋಮಧ್ಯದಲ್ಲಿ ಪ್ರತಿಭೆಯೋ, ಹೇಗೆ ಜಗತ್ತಿನ ಶಬ್ದಮಧ್ಯದಲ್ಲಿ ಸಂಗೀತವೋ, ಹೇಗೆ ಮರಣದೊಳಗೆ ಸುಖವೋ—ಹಾಗೆ ಆ ರೂಪರಾಶಿಯಲ್ಲಿ ಅನಿರ್ವಚನೀಯವಾದುದು ಯಾವದೋ ಒಂದು ಇತ್ತು. ಅನಿರ್ವಚನೀಯವಾದ ಮಾಧುರ್ಯ, ಅನಿರ್ವಚನೀಯವಾದ ಉನ್ನತಭಾವ, ಅನಿರ್ವಚನೀಯವಾದ ಪ್ರೇಮ, ಅನಿರ್ವಚನೀಯವಾದ ಭಕ್ತಿ, ಅವಳು ನಗುತನಗುತ (ಆ ನಗುವನ್ನು ಯಾರೂ ಕಾಣರು) ಆ ಹೊಸ ಶೀರೆಯನ್ನು ತೆಗೆದು ಏನೇ ನಿಮಿ! ಏನಾಗಬೇಕಮ್ಮ? ಎಂದಳು. ನಿಮಿಯು ಶೀರೆಯನ್ನು ಉಟ್ಟುಕೋ ಎಂದಳು. ಅವಳು ನಾನುಟ್ಟು ಏನಾಗಬೇಕು? ಎಂದು ಕೇಳಿದಳು. ಆಗ ನಿಮಾಯಿಯು ಅವಳಾ ಕಮನೀಯವಾದ ಕಂಠದೇಶದಲ್ಲಿ ತನ್ನ ಕಮನೀಯವಾದ ಬಾಹುವನ್ನು ಹಾಕಿ, ಅಣ್ಣಾ ಬಂದಿದ್ದಾನೆ, ನಿನ್ನನ್ನು ಬರಹೇಳಿದನೆಂದಳು. ಅವಳು, ನನ್ನನ್ನು ಬರುವಹಾಗೆ ಹೇಳಿದರೆ! ಅದಕ್ಕೆ ಹೊಸ ಶೀರೆ? ಹೀಗೇ ಇದ್ದಹಾಗೆ ಏತಕ್ಕೆ ಹೋಗಕೂಡದು, ಹೇಳು ಎಂದಳು. ನಿಮಾಯಿಮಣಿಯು ಸ್ವಲ್ಪ ತಳ್ಳಿದ್ದರಮೇಲೆ ಅವಳು ನಿಮಾಯಿಮಣಿಯ ಹೆಗಲಿನಮೇಲೆ ಕೈ ಹಾಕಿಕೊಂಡು ಕುಟೀರದಿಂದ ಇಬ್ಬರೂ ಹೊರಟು, ನಡೇ, ಇದೇ ಹರಕುಬಟ್ಟೆ ಸಾಕು, ಇದರಿಂದಲೇ ನೋಡಿಬರೋಣವೆಂದಳು. ಬಟ್ಟೆಯನ್ನು ಬದಲಾಯಿಸದೆ ಇಬ್ಬರೂ ನಿಮಾಯಿಯ ಮನೆಯ ಬಾಗಿಲುವರೆಗೆ ಬಂದು, ಅವಳು ಒಳಗೆ ಹೋಗುತ್ತಲೇ ನಿಮಾಯಿಮಣಿಯು ಹೊರಗಿನಿಂದ ಬಾಗಿಲೆಳದು ಹಾಕಿಕೊಂಡು ಹೊರಗೆ ನಿಂತಳು.

## ಹದಿನಾರನೆಯ ಪರಿಚ್ಛೇದ

ಆ ಹೆಂಗಸಿಗೆ ಮುವ್ವತ್ತೈದುವರುಷ ವಯಸ್ಸು. ಆದರೆ ನೋಡಿದರೆ ನಿಮಾ... ಮಣಿಗಿಂತಲೂ ಹೆಚ್ಚು ವಯಸ್ಸುಳ್ಳವಳೆಂದು ಬೋಗ...ಾಗಲಿಲ್ಲ. ಮಲಿನ ವಾದ ಹರಕು ಶೀರೆಯನ್ನುಟ್ಟುಕೊಂಡು ಆ ಮನೆಯೊಳಗೆ ಪ್ರವೇಶಮಾಡಿದ ಕೂಡಲೇ ಮನೆಯಲ್ಲಿ ಬೆಳಕಾದಹಾಗಾಯಿತು; ಮರದಮೇಲೆ ಎಲೆಗಳಿಂದ ಮರೆ ಮಾಡಲ್ಪಟ್ಟಿದ್ದ ಹೂಗೊಂಚಲು ಇದ್ದಕಿದ್ದಹಾಗೆ ಅರಳಿದ ಹಾಗಾಯಿತು; ಎಲ್ಲಿಯೋ ಗುಲಾಬಿ ಅತ್ತರಿನ ಶೀಶೆಯಬಾಯಿ ಬಿಚ್ಚಿಟ್ಟಿದ್ದ ಹಾಗಾಯಿತು; ಆ ಶೀಶೆಯನ್ನು ಒಡೆದು ಸುಗಂಧವನ್ನು ಚಲ್ಲಿಬಿಟ್ಟ ಹಾಗಾಯಿತು; ಹೊಗೆಯಿಲ್ಲದೆ ಉರಿಯುತಲಿದ್ದ ಅಗ್ನಿಶಿಖೆಯಲ್ಲಿ ಗುಗ್ಗುಳದ ಪುಡಿಯನ್ನು ಹಾಕಿದಹಾಗಾಯಿತು. ಆ ರೂಪಸಿಯು ಗೃಹದೊಳಗೆ ಪ್ರವೇಶಮಾಡಿ ಅಲ್ಲಲ್ಲಿ ತನ್ನ ಸ್ವಾಮಿಯನ್ನು ಹುಡುಕಿದಳು; ಕಾಣಲಿಲ್ಲ. ಇನ್ನೂ ನೋಡಲಾಗಿ ಅಂಗಳದಲ್ಲಿ ಒಂದು ಚಿಕ್ಕದಾದ ಮಾವಿನಮರದ ಕೊಂಬೆಯ ಮೇಲೆ ತಲೆಯನ್ನಿಟ್ಟುಕೊಂಡು ಜೀವಾನಂದನು ಅಳುತ್ತಿದ್ದನು. ಆ ರೂಪಸಿಯು ಅವನ ಸಮೀಪಕ್ಕೆ ಹೋಗಿ ಮೆಲ್ಲಮೆಲ್ಲಗೆ ಅವನ ಕೈಯನ್ನು ಹಿಡಿದುಕೊಂಡಳು. ಜಗದೀಶ್ವರನೆ ಬಲ್ಲ, ಅವಳ ಕಣ್ಣುಗಳಲ್ಲಿ ನೀರುಬರಲಿಲ್ಲವೆಂದು ಹೇಳಲಾರೆವು. ಅವಳ ಕಣ್ಣುಗಳ ಪ್ರವಾಹವು ಹಾಗೇ ಹರಿದು ಹೋಗಿದ್ದರೆ ಆ ಪ್ರವಾಹದಲ್ಲಿ ಜೀವಾನಂದನೂ ಕೂಡ ತೇಲಿಹೋಗುತಲಿದ್ದನು. ಆದರೆ ಅವಳು ಪೂರಾ ನೀರನ್ನು ಹರಿಸಲಿಲ್ಲ. ಜೀವಾನಂದನ ಕೈಯನ್ನು ತನ್ನ ಕೈಯಲ್ಲಿಟ್ಟುಕೊಂಡು ಇದೇನು ಅನ್ಯಾಯ! ಅಳುತ್ತಿ, ಅಳಬೇಡ; ನೀನು ನನಗೋಸ್ಕರವಾಗಿ ಅಳುವುದು ಗೊತ್ತಿದೆ; ನನಗೋಸ್ಕರ ಅಳಬೇಡ; ನೀನು ನನ್ನನ್ನು ಹೇಗೆ ಇಟ್ಟಿದ್ದೀಯೋ ಆ ಸ್ಥಿತಿಯಲ್ಲಿಯೇ ನಾನು ಸುಖಿಯಾಗಿದ್ದೇನೆಂದಳು.

ಜೀವಾನಂದನು ಮುಖವನೆತ್ತಿ ಕಣ್ಣೊರಸಿಕೊಂಡು ಹೆಂಡತಿಯನ್ನು ಕುರಿತು, ಶಾನ್ತಿ! ನಿನಗೆ ಈ ಶತಗ್ರಂಥಿ ಮಲಿನವಸ್ತ್ರವು ಒಪ್ಪುವದೆ? ನಿನಗೆ ತಿನ್ನು ವದಕ್ಕೂ ಉಡುವದಕ್ಕೂ ಕಡಮೆ ಇಲ್ಲವೆಂದನು.

ಶಾಂತಿಯು ನಿನ್ನ ಧನವು ನಿನಗೋಸ್ಕರವಾಗಿಯೇ ಅದೆ; ನಾನು ಆ ದುಡ್ಡು ತೆಗದುಕೊಂಡು ಏನುಮಾಡಲಿ? ಗೊತ್ತಾಗುವದಿಲ್ಲ, ನೀನು ಹಿಂದಿರುಗಿ ಬಂದು ನನ್ನನ್ನು ಪುನಃ ಗ್ರಹಣಮಾಡಿದರೆ—

ಜೀವಾನಂದ—ಗ್ರಹಣಮಾಡುವೆ—ಶಾಂತಿ! ನಿನ್ನನ್ನು ಪರಿತ್ಯಾಗಮಾಡಿ ದ್ದೇನೇನು?

ಶಾಂತಿ—ತ್ಯಾಗವಲ್ಲ—ಯಾವಾಗ ನಿನ್ನ ವ್ರತವು ಸಾಂಗವಾಗುವುದೋ, ಯಾವಾಗ ನೀನು ನನ್ನನ್ನು ಪ್ರೀತಿಸುವೆಯೋ—

ಮಾತು ಪೂರೈಸುವದರೊಳಗಾಗಿ ಜೀವಾನಂದನು ಶಾಂತಿಯನ್ನು ಗಾಢಾ

ಲಿಂಗನೆಮಾಡಿಕೊಂಡು ಅವಳ ಭುಜದಮೇಲೆ ತಲೆಯನ್ನಿಟ್ಟುಕೊಂಡು ಬಹಳ ಹೊತ್ತು ನೀರವವಾಗಿದ್ದು ಕಡೆಗೆ ದೀರ್ಘನಿಶ್ವಾಸವನ್ನು ಬಿಟ್ಟು, ಏತಕ್ಕೆ ನಿನ್ನ ನ್ನೀಗ ನೋಡಿದೆನೊ! ಎಂದು ಪರಿತಾಪಪಟ್ಟನು.

ಶಾಂತಿ—ಏಕೆ ನೋಡಿದೆ? ನಿನ್ನ ವ್ರತವನ್ನು ಭಂಗಮಾಡಲಿಲ್ಲವೆ?

ಜೀವಾನಂದ—ವ್ರತಭಂಗವಾದರೆ ಆಗಲಿ—ಪ್ರಾಯಶ್ಚಿತ್ತವುಂಟು. ಅದಕ್ಕೆ ಯೋಚನೆಮಾಡಬೇಡ, ಆದರೆ ನಿನ್ನನ್ನು ನೋಡಿದಮೇಲೆ ತಿರುಗಿ ಹಿಂದಕ್ಕೆ ಹೋಗಲಾರೆನು. ನಾನದಕ್ಕೋಸ್ಕರವೇ ನಿಮಾಯಿಗೆ ಕರೆತರಬೇಡ, ನಿನ್ನನ್ನು ನೋಡಿದರೆ ಹಿಂದಿರುಗಿ ಹೋಗಲಾರೆನೆಂದು ಹೇಳಿದೆನು. ಒಂದುಕಡೆ ಧರ್ಮ, ಅರ್ಥ, ಕಾಮ, ಮೋಕ್ಷ, ಜಗತ್ಸಂಸಾರ, ಒಂದುಕಡೆ ವ್ರತ ಹೋಮಯಾಗ ಯಜ್ಞ; ಇದೆಲ್ಲ ಒಂದುಕಡೆ, ಮತ್ತೊಂದು ಕಡೆಯಲ್ಲಿ ನೀನು; ನೀನೇ, ನೀನೊ ಬ್ಬಳು ಮಾತ್ರ—ನಾನು ಅನೇಕಾವರ್ತಿ ಯೋಚಿಸಿದರೂ ಯಾವ ಕಡೆ ಭಾರವಾಗು ತ್ತದೋ ಗೊತ್ತುಮಾಡಲಾರದವನಾಗಿದ್ದೇನೆ. ದೇಶವೇನೋ ಶಾಂತಿಯಾಗಿದೆ, ದೇಶವನ್ನು ಕಟ್ಟಿಕೊಂಡು ನಾನೇನು ಮಾಡಲಿ? ದೇಶದಲ್ಲಿ ಒಂದು ಎಕರೆ ಭೂಮಿಯು ಇದ್ದರೆ ನಿನ್ನನ್ನು ಇಟ್ಟುಕೊಂಡು ಸ್ವರ್ಗಾನುಭವವನ್ನು ಮಾಡ ಬಲ್ಲೆನು, ನನಗೆ ದೇಶದಿಂದ ಕಾರ್ಯವೇನು? ದೇಶದ ಜನಗಳ ದುಃಖವಷ್ಟೆ? ನಿನ್ನಂ ತಹ ಹೆಂಗಸನ್ನು ಪಡೆದು ತ್ಯಾಗಮಾಡಿದೆ—ಅದಕ್ಕಿಂತಲೂ ದೇಶದಲ್ಲಿ ಯಾರು ತಾನೇ ದುಃಖಿಯಾಗುವನು? ನಿನ್ನ ಮೈಮೇಲೆ ಈ ಛಿಂದಿ ಛಿಂದಿ ಬಟ್ಟೆಗಳನ್ನು ನೋಡಿನೋಡಿ ಸುಮ್ಮನಿರುವವನಿಗಿಂತಲೂ ದೇಶದಲ್ಲಿ ದುರ್ಭಾಗ್ಯನಾದ ದುರ್ಬ ಲನು ಮತ್ತಾರು ಇರುವನು? ನನ್ನ ಸಕಲ ಧರ್ಮಗಳಿಗೂ ನೀನು ಸಹಾಯಕಳು. ಅದನ್ನೇ ತ್ಯಾಗಮಾಡಿದರೆ, ಅದರ ಮುಂದೆ ಇನ್ನು ಸನಾತನ ಧರ್ಮವೆಲ್ಲೀದು? ನಾನು ಯಾವ ಧರ್ಮಕ್ಕೋಸ್ಕರ ದೇಶದೇಶ, ವನವನ ಬಂದೂಕನ್ನು ಭುಜದ ಮೇಲೆ ಹೊತ್ತುಕೊಂಡು ಅಲೆದಲೆದು ಪ್ರಾಣಿಹತ್ಯೆಮಾಡುತ್ತ ಈ ಪಾಪದ ಭಾರವನ್ನು ಸಂಗ್ರಹಮಾಡಬೇಕು? ಪೃಥ್ವಿಯು ಸಂತಾನರ ಕೈವಶವಾಗುವದೋ ಇಲ್ಲವೋ ನಾನು ಹೇಳಲಾರೆನು; ನೀನೇನೋ ನನಗೆ ವಶಳಾಗಿರುತ್ತೀ; ನೀನು ಈ ಪೃಥ್ವಿಗಿಂತಲೂ ಹೆಚ್ಚು; ನೀನೇ ನನಗೆ ಸ್ವರ್ಗ; ನಡೆ, ಮನೆಗೆ ಹೋಗೋಣ. ನಾನಿನ್ನು ಹೋಗುವದಿಲ್ಲ.

ಶಾಂತಿಯು ಸ್ವಲ್ಪಹೊತ್ತು ಮಾತನಾಡದವಳಾಗಿದ್ದು, ಅನಂತರ, ಸರಿಯಲ್ಲ. ನೀನು ವೀರ, ನಾನು ವೀರಪತ್ನಿಯಾಗಿರುವುದು ನನಗೆ ಪರಮ ಸುಖವಾಗಿದೆ; ನೀನು ಈ ಅಧಮ ಸ್ತ್ರೀಗೋಸ್ಕರ ಧರ್ಮತ್ಯಾಗವನ್ನು ಮಾಡುವುದೆ? ನೀನು ನನ್ನನ್ನು ಪ್ರೀತಿಸಬೇಡ, ನಾನು ಆ ಸುಖವನ್ನು ಅಪೇಕ್ಷಿಸುವುದಿಲ್ಲ; ಈಗ ನನಗೊಂದು ಮಾತನ್ನು ಹೇಳಿ ಹೋಗು, ಏನೆಂದರೆ, ಈಗ ವ್ರತಭಂಗವಾದುದಕ್ಕೆ ಪ್ರಾಯಶ್ಚಿತ್ತವೇನು? ಎಂದಳು.

ಜೀವಾ—ಪ್ರಾಯಶ್ಚಿತ್ತ—ದಾನ —ಉಪವಾಸ —ಇಪ್ಪತ್ತೆರಡು ಕವಡೆ.

ಶಾಂತಿಯು ಸ್ವಲ್ಪ ನಕ್ಕು, ಪ್ರಾಯಶ್ಚಿತ್ತವೆಂಬುದೇನೋ ಅದು ನಾನರಿಯೆ. ಒಂದು ಅಪರಾಧಕ್ಕೇನು ಪ್ರಾಯಶ್ಚಿತ್ತವೋ ಶತಾಪರಾಧಕ್ಕೂ ಅದೇ ಪ್ರಾಯಶ್ಚಿತ್ತವೆ? ಎಂದು ಕೇಳಿದಳು.

ಜೀವಾನಂದನು, ವಿಸ್ಮಿತನಾಗಿ ವಿಷಣ್ಣನಾಗಿ, ಈ ಮಾತುಗಳೆಲ್ಲ ಏತಕ್ಕೆ? ಎಂದನು.

ಶಾಂತಿ—ನಾನು ನಿನ್ನನ್ನು ಬೇಡುವದೇನೆಂದರೆ—ಇನ್ನು ನೀನು ನನ್ನನ್ನು ನೋಡದೆ ಇದ್ದು ಪ್ರಾಯಶ್ಚಿತ್ತವನ್ನು ಮಾಡಿಕೊಬೇಡ.

ಜೀವಾನಂದನು ನಕ್ಕು, ಆ ವಿಚಾರದಲ್ಲಿ ನಿಶ್ಚಿಂತಳಾಗಿರು; ನಿನ್ನನ್ನು ನೋಡದೆ ನಾನು ಸಾಯುವದಿಲ್ಲ; ಸಾಯುವದಕ್ಕೆ ಅಷ್ಟು ಅವಸರವೂ ಇಲ್ಲ; ನಾನು ಇನ್ನು ಇಲ್ಲಿರುವದಿಲ್ಲ; ಆದರೆ ಕಣ್ಣುತುಂಬ ನಿನ್ನನ್ನು ನೋಡಲಾರೆನು, ಒಂದುದಿನವಿಲ್ಲದಿದ್ದರೆ—ಒಂದುದಿನ ಕಣ್ಣುತುಂಬ ನೋಡುವೆನು. ಈಗ ಹೊರಟು ಹೋಗುತ್ತೇನೆ, ಒಂದು ದಿನವಾದರೂ ನನ್ನ ಮನೋರಥವು ಸಫಲವಾಗುವುದು, ಈಗ ಹೊರಟೆ, ನೀನು ನನ್ನದೊಂದು ಮಾತನ್ನ ನಡಿಸಬೇಕು. ಈ ಬಟ್ಟೆಯನ್ನು ಬಿಸಾಟುಬಿಡು, ನಮ್ಮ ಹಿರೇರ ಮನೆಯಲ್ಲಿ ಹೋಗಿ ವಾಸಮಾಡು, ಎಂದನು.

ಶಾಂತಿ—ಈಗ ನೀನೆಲ್ಲಿಗೆ ಹೋಗುವೆ?

ಜೀವಾ—ಈಗ ಮಠಕ್ಕೆ ಬ್ರಹ್ಮಚಾರಿಯನ್ನು ಹುಡುಕುವದಕ್ಕೆ ಹೋಗುತ್ತೇನೆ, ಅವರು ನಗರಕ್ಕೆ ಹೋದ ಅವಸ್ಥೆಯನ್ನು ನೋಡಿ, ಸ್ವಲ್ಪ ಯೋಚನೆಯಾಗಿದೆ. ಮಠದ ಮಂದಿರದಲ್ಲಿ ಅವರಿಲ್ಲದಿದ್ದರೆ, ನಗರಕ್ಕೆ ಹೋಗುವೆನು.

---

## ಹದಿನೇಳನೆಯ ಪರಿಚ್ಛೇದ

ಭವಾನಂದನು ಮಠದಲ್ಲಿ ಕುಳಿತುಕೊಂಡು ಹರಿಗುಣಗಳನ್ನು ಗಾನಮಾಡುತಲಿದ್ದನು. ಆಗ ಧೀರಾನಂದನು ವಿಷಣ್ಣವದನನಾಗಿ ಅವನು ಇದ್ದಲ್ಲಿಗೆ ಬಂದನು. ಭವಾನಂದನು, ಏನು ಗೋಸಾಯಿ! ಮುಖವೇತಕ್ಕೆ ಭಾರವಾಗಿದೆ? ಎಂದನು.

ಧೀರಾನಂದ—ಏನೋ ಗದ್ದಲವಾದಹಾಗಿದೆ, ನೆನ್ನೇ ವಿಚಾರವಾಗಿ, ವೈಷ್ಣವ ಸಂತಾನರು ಕೆಂಪು ಉಡುಪಿನವರನ್ನು ನೋಡಿದರು, ಅವರು ದಸ್ತಗಿರಿಮಾಡುತಲಿದ್ದಾರೆ. ಸಂತಾನರನೇಕರು ಕಾವೀಶಾಟಿಗಳನ್ನು ಬಿಟ್ಟರು. ಸತ್ಯಾನಂದ ಪ್ರಭುಗಳೊಬ್ಬರು ಮಾತ್ರ ಗೈರಕ ಉಡುಪನ್ನು ಬಿಡದೆ ನಗರಾಭಿಮುಖವಾಗಿ ಹೋಗುತಲಿದ್ದರು. ಮುಸಲ್ಮಾನರ ಕೈಗೆ ಸಿಕ್ಕಿದರೇನೋ ಹೇಳಲಾರೆನು.

ಭವಾ—ಅವರನ್ನು ಹಿಡಿದಿಡುವ ವೀರರಾದ ಮುಸಲಮಾನರು ಭೂಮಿಯಲ್ಲಿ

ಹುಟ್ಟಿಲ್ಲ. ಆದರೂ ನಾನು ಒಂದುಸಲ ನಗರದಕಡೆ ಹೋಗಿ ತಿರುಗಾಡಿಕೊಂಡು ಬರುವೆನು. ನೀನು ಮಠದಕಡೆ ನೋಡಿಕೊಂಡಿರು.

ಹೀಗೆ ಹೇಳಿ, ಭವಾನಂದನು ಎದ್ದು ಒಂದು ಕೊಟಡಿಯೊಳಗೆ ಹೋಗಿ, ಒಂದು ದೊಡ್ಡದಾದ ಪೆಟ್ಟಿಗೆಯನ್ನು ತೆಗದು ಅದರಿಂದ ಕೆಲವು ಬಟ್ಟೆಗಳನ್ನು ತೆಗದುಕೊಂಡನು. ಇದ್ದಕಿದ್ದಹಾಗೆ ಭವಾನಂದನು ರೂಪಾಂತರವನ್ನು ಧರಿಸಿದನು. ಕಾವೀಶಾಟಿಗೆ ಬದಲಾಗಿ ಸೊಗಸಾದ ಪಾಯಿಜಾಮಾ, ಬಳಕವಚ, ಹೊರನಿಲುವಂಗಿ, ತಲೆಗೆ ಪೇಟಾ, ಕಾಲಿಗೆ ಚಪಾವು ಇವುಗಳಿಂದ ಶೋಭಿತನಾದನು. ಮುಖದಲ್ಲಿ ಚಂದನದ ಚಿಹ್ನೆಯು ಲುಪ್ತವಾಯಿತು. ಭ್ರುಮರದೋಪಾದಿಯಲ್ಲಿ ಕೃಷ್ಣವರ್ಣವುಳ್ಳ ಸ್ಮಶ್ರುಶೋಭಿತವಾದ ಸುಂದರವಾದ ಮುಖಮಂಡಲವು ಅಪೂರ್ವವಾದ ಕಾಂತಿಯನ್ನು ಹೊಂದಿತು. ಆ ಕಾಲದಲ್ಲಿ ಅವನು ಮೊಗಲ ಜಾತಿಯ ಯುವಾಪುರುಷನೆಂದು ಕಾಣಿಸುತಲಿದ್ದನು.

ಭವಾನಂದನು ಈ ಪ್ರಕಾರ ಮೊಗಲರವನಾಗಿ ಶಸ್ತ್ರಪಾಣಿಯಾಗಿ ಮಠದಿಂದ ಹೊರಟನು. ಅಲ್ಲಿಂದ ಒಂದು ಹರಿದಾರಿಯ ದೂರದಲ್ಲಿ ಚಿಕ್ಕದಾದ ಗುಡ್ಡಗಳೆರಡು ಇದ್ದವು. ಅಲ್ಲಿಂದ ಕಾಡು ಪ್ರಾರಂಭ. , ಆ ಗುಡ್ಡಗಳ ಮಧ್ಯದಲ್ಲಿ ಒಂದು ನಿಭೃತ ವಾದ ಸ್ಥಳ. ಅಲ್ಲಿ ಅನೇಕ ಕುದುರೆಗಳು ಕಟ್ಟಿಹಾಕಿದ್ದವು. ಇಲ್ಲಿಯೇ ಮಠವಾಸಿಗಳ ಅಶ್ವಶಾಲೆ. ಭವಾನಂದನು ಅವುಗಳಲ್ಲಿ ಒಂದು ಕುದುರೆಯನ್ನು ಬಿಚ್ಚಿ ತಡೀ ಲಗಾಮು ಹಾಕಿ ಸವಾರನಾಗಿ ನಗರಾಭಿಮುಖವಾಗಿ ದೌಡಾಯಿಸಿಕೊಂಡು ಹೋದನು.

ಹೋಗುತ್ತಿರುವಾಗ ಇದ್ದಕ್ಕಿದ್ದಹಾಗೆ ಅವನ ಗತಿರೋಧವಾಯಿತು. ಮಾರ್ಗದ ಒಂದು ಕಡೆಯಲ್ಲಿ ಕಲನಾದಿನಿಯಾದ ತರಂಗಿಣಿಯ ಕೂಲದಲ್ಲಿ ಗಗನ ದಿಂದ ಬಿದ್ದ ನಕ್ಷತ್ರದಹಾಗೆ ಕಾದಂಬಿನೀಚ್ಯುತ ವಿದ್ಯುತಿನಹಾಗೆ ಪ್ರದೀಪ್ತವಾದ ಸ್ತ್ರೀಮೂರ್ತಿಯು ಮಲಗಿರುವುದನ್ನು ನೋಡಿದನು. ನೋಡಿದರೆ ಜೀವಿತವಾಗಿರುವ ಲಕ್ಷಣಗಳೇನೂ ಕಾಣಬರಲಿಲ್ಲ. ಬರದಾದ ವಿಷದ ಭರಣಿಯೊಂದು ಬಿದ್ದಿತ್ತು. ಭವಾನಂದನು ಆಶ್ಚರ್ಯಪಟ್ಟು ಖಿನ್ನನಾಗಿ ಭೀತನಾದನು. ಜೀವಾನಂದನಹಾಗೆ ಭವಾನಂದನು ಮಹೇಂದ್ರನ ಹೆಂಡತಿಯನ್ನೂ ಮಗುವನ್ನೂ ಸಹ ನೋಡಿರಲಿಲ್ಲ. ಜೀವಾನಂದನು ಯಾವ ಕಾರಣಗಳಿಂದ ಮಹೇಂದ್ರನ ಹೆಂಡತಿ ಮತ್ತು ಮಗುವಾ ಗಿದ್ದರೂ ಇರಬಹುದೆಂದು ಊಹಿಸಿದನೋ, ಆ ಕಾರಣಗಳು ಭವಾನಂದನಿಗೆ ಗೋಚರವಿಲ್ಲ. ಅವನು ಬ್ರಹ್ಮಚಾರಿಯನ್ನೂ ಮಹೇಂದ್ರನನ್ನೂ ಸಹ ಬಂದಿಯಾಗಿ ಕರೆದುಕೊಂಡು ಹೋದುದನ್ನು ನೋಡಿರಲಿಲ್ಲ. ಮಗುವೂ ಅಲ್ಲಿ ಇರಲಿಲ್ಲ. ಭರಣಿ ಯನ್ನು ನೋಡಿ ಯಾರೋ ರಮಣಿಯು ವಿಷವನ್ನು ನುಂಗಿ ಪ್ರಾಣವನ್ನು ಬಿಟ್ಟಿದ್ದಾಳೆಂದು ತಿಳಿದುಕೊಂಡನು. ಭವಾನಂದನು ಆ ಶವದ ಹತ್ತಿರ ಕುಳಿತು ಕೊಂಡು ಅದರ ಕಪೋಲದಮೇಲೆ ಕೈಯಿಟ್ಟುಕೊಂಡು ಬಹಳಹೊತ್ತು ಯೋಚಿಸಿ,

ಅನಂತರ ತಲೆಯಮೇಲೆ, ಕೊಂಕಳಲ್ಲಿ, ಕೈಕಾಲುಗಳಮೇಲೆ ಕೈಯಿಟ್ಟು ಮುಟ್ಟಿ ನೋಡಿದನಲ್ಲದೆ, ಅನೇಕ ಪ್ರಕಾರವಾಗಿ ಇತರರಿಗೆ ತಿಳಿಯದ ಪರೀಕ್ಷೆಯನ್ನು ಮಾಡಿದನು. ಆಗ, ಇನ್ನೂ ಕೈಮೀರಿಲ್ಲವೆಂದಂದುಕೊಂಡು, ಆದರೆ ಬದುಕಿಸುವ ವಿಧಾನ ಹೇಗೆ? ಎಂದು ಪುನಃ ಯೋಚನೆಯಲ್ಲಿ ಮಗ್ನನಾಗಿ, ಅಲ್ಲಿಂದ ವನದೊಳಗೆ ಹೋಗಿ ಒಂದು ಮರದಿಂದ ಕೆಲ ಸೊಪ್ಪುಗಳನ್ನು ಕಿತ್ತುಕೊಂಡು ಬಂದನು. ಆ ಎಲೆಗಳನ್ನು ಕೈಯಲ್ಲಿ ಹಿಂಡಿ ರಸವನ್ನು ಮಾಡಿ ಅದನ್ನು ಶವದ ಬಾಯಿಬಿಡಿಸಿ ಬಾಯಿಗೆ ಬಿಟ್ಟು ಬೆರಳಿನಿಂದ ಗಂಟಲಿನವರೆಗೆ ತಳ್ಳಿ ಕಣ್ಣಿಗೂ ಮೂಗಿಗೂ ಸ್ವಲ್ಪ ಸ್ವಲ್ಪ ಆ ರಸವನ್ನು ಬಿಟ್ಟನು. ಅಂಗಾಂಗಗಳಿಗೂ ಹಚ್ಚಿದನು. ಹೀಗೆ ಬಾರಿ ಬಾರಿಗೂ ಮಾಡುತ್ತ ಮಧ್ಯೆಮಧ್ಯೆ ಮೂಗಿನ ಹತ್ತಿರ ಕೈಯಿಟ್ಟು ಶ್ವಾಸವಾಡು ವದೋ ಇಲ್ಲವೋ ನೋಡುತಲಿದ್ದನು. ಯತ್ನವು ವಿಫಲವಾಗುವಹಾಗೆ ತೋರಿತು. ಹೀಗೆ ಬಹಳ ಹೊತ್ತು ಪರೀಕ್ಷೆ ಮಾಡುತ್ತಿದ್ದಹಾಗೆ ಭವಾನಂದನ ಮುಖವು ಸ್ವಲ್ಪ ಪ್ರಫುಲ್ಲವಾಯಿತು. ಬೆರಳಿಗೆ ನಿಶ್ವಾಸದ ಕ್ಷೀಣವಾದ ಪ್ರವಾಹವು ಸ್ವಲ್ಪ ಅನುಭವ ವಾಯಿತು. ಆಗ ಪುನಃ ಪತ್ರರಸವನ್ನು ಹಿಂಡಿಹಿಂಡಿ ಹಾಕುತ್ತ ಬಂದನು. ನಿಶ್ವಾಸವು ಬರುತಬರುತ ಪ್ರಖರವಾಗುತ್ತ ಬಂತು. ಭವಾನಂದನು ಕೈಯಲ್ಲಿ ನಾಡಿಯನ್ನು ಹಿಡಿದು ನೋಡಿದನು. ನಾಡಿಯಲ್ಲಿ ಗತಿಯು ಕಂಡಿತು; ಕಡೆಗೆ ಕ್ರಮಕ್ರಮವಾಗಿ ಪ್ರಥಮ ಪೂರ್ವಪ್ರಭಾತರಾಗವು ವಿಕಾಸವಾಗುವಹಾಗೆ ಪ್ರಭಾತ ಪದ್ಮದ ಪ್ರಥಮೋನ್ಮೇಷದೋಪಾದಿಯಲ್ಲಿ ಪ್ರಥಮ ಪ್ರೇಮಾನುಭವದ ಹಾಗೆ ಕಲ್ಯಾಣಿಯ ಕಣ್ಣುಗಳು ತೆರೆಯಲಾರಂಭವಾಯಿತು. ನೋಡಿ ಭವಾನಂದನು ಅರ್ಧಜೀವಿತವಾದ ದೇಹವನ್ನು ಕುದುರೆಯಮೇಲೆ ಎತ್ತಿಟ್ಟು ತಾನೂ ಕುದುರೆಯಮೇಲೆ ಹತ್ತಿಕೊಂಡು ನಗರಕ್ಕೆ ಹೋದನು.

---

## ಹದಿನೆಂಟನೆಯ ಪರಿಚ್ಛೇದ

ಸಾಯಂಕಾಲವಾಗುವದರೊಳಗಾಗಿ ಸಂತಾನ ಸಂಪ್ರದಾಯದವರೆಲ್ಲರೂ ಸತ್ಯಾನಂದ ಬ್ರಹ್ಮಚಾರಿಯೂ, ಮಹೇಂದ್ರನೂ ಸಹ ಬಂದಿಯಾಗಿ ನಗರಕ್ಕೆ ಒಯ್ಯಲ್ಪಟ್ಟು ಕಾರಾಗಾರದಲ್ಲಿ ಆಬದ್ಧರಾಗಿದ್ದರೆಂದು ತಿಳಿದರು. ಆಗ ಒಬ್ಬೊಬ್ಬನಾಗಿ ಇಬ್ಬಿಬ್ಬರಾಗಿ ಹತ್ತತ್ತು ಮಂದಿಯಾಗಿ ನೂರುನೂರು ಮಂದಿಯಾಗಿ ಸಂತಾನ ಸಂಪ್ರದಾಯದವರೆಲ್ಲರೂ ಬಂದು ದೇವಾಲಯವನ್ನು ಸುತ್ತಲೂ ಮರೆಮಾಡಿಕೊಂಡಿದ್ದ ಆ ಅರಣ್ಯದಲ್ಲೆಲ್ಲೆಲ್ಲಿಯೂ ತುಂಬಿಕೊಂಡರು. ಎಲ್ಲರೂ ಶಸ್ತ್ರಪಾಣಿಗಳಾಗಿದ್ದರು. ಅವರುಗಳ ನಯನದಲ್ಲಿ ರೋಷಾಗ್ನಿಯು, ಮುಖದಲ್ಲಿ ದಂಭವು, ಅಧರದಲ್ಲಿ ಪ್ರತಿಜ್ಞೆಯು ತುಂಬಿತ್ತು. ಮೊದಲು ನೂರುಮಂದಿ, ಅನಂತರ ಸಾವಿರ, ಅನಂತರ ಎರಡುಸಾವಿರ ಜನ ಹೀಗೆ ಜನಸಂಖ್ಯೆಯು ವೃದ್ಧಿಯಾಗುತ ಬಂತು. ಆಗ ಮಠದ

ಬಾಗಿಲಿನಲ್ಲಿ ನಿಂತು ಕತ್ತಿಯನ್ನು ಕೈಲಿ ಹಿಡಿದುಕೊಂಡು ಭವಾನಂದನು ಉಚ್ಚಸ್ವರ ದಿಂದ, ನಾವು ಅನೇಕ ದಿವಸಗಳಿಂದ ಈ ಬಾಬುಗಿರಿಯ ಸುಖಜೀವನವೆಂದರೆ ನಮಗೆ ಸ್ವಭಾವವಾಗಿ ಬಂದಿದ್ದ ಅಜಗರ ವ್ರತವನ್ನು ಬಿಟ್ಟು ಈ ಯವನಪುರಿ ಯನ್ನು ಧೂಳೀಪಟಮಾಡಿ ಅಜಯ ನದೀಜಲದಲ್ಲಿ ಕದರಿಬಿಡಬೇಕೆಂತಲೂ, ಈ ಹಂದಿಗಳ ರೊಪ್ಪಗಳಿಗೆ ಬೆಂಕಿಹಾಕಿ ಸುಟ್ಟು ಮಾತೆಯಾದ ವಸುಮತಿಯನ್ನು ಪುನಃ ಪವಿತ್ರಳನ್ನಾಗಿ ಮಾಡಬೇಕೆಂತಲೂ ಸಂಕಲ್ಪವುಳ್ಳವರಾಗಿದ್ದೇವೆ, ನೀವು ಕೇಳಿರಿ! ಇಂದು ಆ ದಿನವು ಒದಗಿದೆ. ಯಾರು ನಮ್ಮಗಳ ಗುರುವಿಗೆ ಗುರುಗಳಾದ ಪರಮಗುರುಗಳಾಗಿದ್ದಾರೋ, ಯಾರು ಅನಂತಜ್ಞಾನಮಯರಾಗಿದ್ದಾರೋ, ಯಾರು ಸರ್ವದಾ ಶುದ್ಧಾಚಾರವುಳ್ಳವರಾಗಿದ್ದಾರೋ, ಯಾರು ಲೋಕಹಿತೈಷಿ ಗಳಾಗಿದ್ದಾರೋ, ಯಾರು ದೇಶಹಿತೈಷಿಗಳಾಗಿದ್ದಾರೋ, ಯಾರು ನಮ್ಮ ಸನಾತನ ಧರ್ಮವನ್ನು ಪುನಃಪುನಃ ಪ್ರಚಾರಮಾಡುವದಕ್ಕೋಸ್ಕರ ಸ್ವಶರೀರವ ನ್ನೊಪ್ಪಿಸಲು ಪ್ರತಿಜ್ಞೆಯಿಂದ ಸಿದ್ಧರಾಗಿದ್ದಾರೋ, ಯಾರನ್ನು ನಾವುಗಳು ಸಾಕ್ಷಾತ್ ವಿಷ್ಣುವಿನ ಅವತಾರವೆಂದು ತಿಳಿದು ಇದ್ದೇವೋ, ಯಾರು ನಮ್ಮ ಮುಕ್ತಿಗೆ ಉಪಾಯಭೂತರೆಂದು ತಿಳಿದಿದ್ದೇವೋ, ಅಂಥಾವರು ಇಂದು ಮುಸಲ ಮಾನರ ಕಾರಾಗಾರದಲ್ಲಿ ಬಂದಿಯಾಗಿದ್ದಾರೆ. ನಮ್ಮ ಕತ್ತಿಗಳಲ್ಲಿ ಹರತ ವಿಲ್ಲವೆ? ಎಂದು ಹೇಳಿ, ಎದೆಯನ್ನು ತಟ್ಟಿಕೊಂಡು, ಪುನಃ ಹೇಳತೊಡಗಿ ದನು :—ಈ ಹೃದಯದಲ್ಲಿ ಧೈರ್ಯ ಸಾಹಸಗಳಿಲ್ಲವೆ? ಭ್ರಾತೃಗಳಿರಾ! ಕರೆಯಿರಿ —"ಹರೆ ಮುರಾರೆ ಮಧುಕೈಟಭಾರೆ" ಎಂದು—ಯಾರು ಮಧುಕೈಟಭ ರನ್ನು ವಿನಾಶಮಾಡಿದನೋ, ಯಾರು ಹಿರಣ್ಯಕಶಿಪು, ಕಂಸ, ದಂತವಕ್ರ, ಶಿಶುಪಾಲ ಮುಂತಾದ ದುರ್ಜಯರಾದ ಅಸುರರ ಗುಂಪನ್ನು ನಿಧನ, ಸಾಧನ ಮಾಡಿದನೋ, ಯಾರ ಚಕ್ರಾಯುಧದ ಘರ್ಘರ ನಿರ್ಘೋಷದಿಂದ ಮೃತ್ಯುಂ ಜಯನಾದ ಶಂಭುವೂ ಕೂಡ ಭೀತನಾಗಿದ್ದನೋ, ಯಾರು ಅಜೇಯನೋ, ಯಾರು ರಣದಲ್ಲಿ ಜಯದಾತನೋ, ನಾವು ಅಂಥಾವನ ಉಪಾಸಕರು, ಅವನ ಬಲದಿಂದ ನಮ್ಮ ಬಾಹುಗಳಲ್ಲಿ ಬಹಳ ಬಲವಿದೆ. ಅವನು ಇಚ್ಛಾಮಯನಾಗಿದ್ದಾನೆ, ಅವನ ಇಚ್ಛಾಮಾತ್ರದಿಂದ ನಮಗೆ ರಣದಲ್ಲಿ ಜಯವಾಗುತ್ತದೆ, ನಡೀರಿ, ಆ ಯವನಪುರಿಯನ್ನು ಒಡದು ಸುಟ್ಟು ಭಸ್ಮರಾಶಿಯಾಗಿ ಮಾಡಿಬಿಡೋಣ. ಆ ಶೂಕರ ನಿವಾಸವನ್ನು ಅಗ್ನಿಸಂಸ್ಕಾರದಿಂದ ಅಜಯನದೀಜಲದಲ್ಲಿ ಹಾಕಿ ಬರೋಣ. ಹೇಳಿ, ಹರೆ ಮುರಾರೆ ಮಧುಕೈಟಭಾರೆ ಎಂದು—

ಆಗ ಆ ಕಾನನದಿಂದ ಅತಿಭೀಷಣವಾದ ಧ್ವನಿಯಿಂದ ಸಹಸ್ರ ಸಹಸ್ರ ಕಂಠಗಳು ಐಕ್ಯಕಂಠ್ಯವಾಗಿ—ಹರೆ ಮುರಾರೆ ಮಧುಕೈಟಭಾರೆ ಎಂದು ಧ್ವನಿತ ವಾಯಿತು. ಸಾವಿರಾರು ಕತ್ತಿಗಳು ಒಂದೇಸಲ ಝಣತ್ಕಾರ ಶಬ್ದವನ್ನು ಮಾಡಿ ದುವು. ಸಾವಿರಾರು ಭಲ್ಲೆಗಳು ಮೇಲಕ್ಕೆತ್ತಲ್ಪಟ್ಟವು. ಸಾವಿರಾರು ಭುಜಗಳ

ಮೇಲೆ ತಟ್ಟಿದ ಶಬ್ದವು ವಜ್ರನಿನಾದವಾಗಿ ಎದ್ದಿತು. ಸಾವಿರಾರು ಗುರಾಣಿಗಳು ಯೋದ್ಧೃಗಳ ಕರ್ಕಶವಾದ ಬೆನ್ನುಗಳಮೇಲೆ ತಡಬಡ ಶಬ್ದಮಾಡಿದವು. ಆ ಮಹಾ ಕೋಲಾಹಲದಲ್ಲಿ ಕಾಡುಮೃಗಗಳು ಕಾಡುಬಿಟ್ಟು ಓಡಿಹೋದವು. ಪಕ್ಷಿಗಳೆಲ್ಲ ಭಯದಿಂದ ಉಚ್ಚವಾದ ರವದಿಂದ ಹಾರಿ ಗಗನವನ್ನು ಕತ್ತಲೆಮಾಡಿದವು. ಆ ಸಮಯದಲ್ಲಿ ನೂರಾರು ಜಯಭೇರಿಗಳು ನಿನಾದಿತವಾದವು. ಆಗ ಹರೆ ಮುರಾರೆ ಮಧುಕೈಟಭಾರೆ ಎಂದು ಕಾನನದಿಂದ ಶ್ರೇಣೀಬದ್ಧರಾಗಿ ಸಂತಾನರು ದಳದಳ ವಾಗಿ ಹೊರಟರು. ನಿಧಾನವಾಗಿ ಹೊರಟರು. ನಿಧಾನವಾಗಿ ಗಂಭೀರವಾದ ಪದವಿಕ್ಷೇಪದಿಂದ ಬಾಯಿಯಲ್ಲಿ ಘಟ್ಟಿಯಾಗಿ ಹರಿನಾಮಗಳನ್ನು ಹೇಳುತ್ತ ಅವರು ಆ ಅಂಧಕಾರಮಯವಾದ ರಾತ್ರಿಯಲ್ಲಿ ನಗರಾಭಿಮುಖವಾಗಿ ಹೊರಟರು. ವಸ್ತ್ರಗಳ ಮರ್ಮರಶಬ್ದ, ಅಸ್ತ್ರಗಳ ಝುಸಝುಸಶಬ್ದ, ಕಂಠಗಳ ಅಸ್ಫುಟವಾದ ನಿನಾದ, ಮಧ್ಯೆಮಧ್ಯೆ ಘಟ್ಟಿಯಾಗಿ ಗೋವಿಂದ ಶಬ್ದ. ನಿಧಾನವಾಗಿ ಗಂಭೀರ ವಾಗಿ ರೋಷಯುಕ್ತವಾಗಿ ಸತೇಜವಾಗಿ ಆ ಸಂತಾನ ವಾಹಿನಿಯು ನಗರಕ್ಕೆ ಬಂದು ನಗರವನ್ನು ಭಯಪಡುವಹಾಗೆ ಮಾಡಿಬಿಟ್ಟಿತು. ಅಕಸ್ಮಾತ್ತಾಗಿ ಈ ಕೋಲಾಹಲದ ಗದ್ದಲವನ್ನು ನೋಡಿ ನಾಗರಿಕರನೇಕರು ಎಲ್ಲಿಯೋ ಪಲಾಯನ ವಾಗಿ ಹೋದರು. ಅವರ ಪತ್ತೆಯೇ ಇಲ್ಲ. ನಗರದ ರಕ್ಷಕರು ಹತಬುದ್ಧಿಗಳಾಗಿ ನಿಶ್ಚೇಷ್ಟರಾಗಿ ನಿಶ್ಚಲರಾಗಿದ್ದುಬಿಟ್ಟರು.

ಇತ್ತಲಾಗಿ ಸಂತಾನರು ಮೊದಲೇ ಕಾರಾಗಾರಕ್ಕೆ ಹೋಗಿ ಕಾರಾಗಾರ ವನ್ನು ಒಡದು ರಕ್ಷಕರನ್ನು ಹೊಡದುಹಾಕಿಬಿಟ್ಟರು. ಸತ್ಯಾನಂದನನ್ನೂ ಮಹೇಂದ್ರನನ್ನೂ ಬಿಡುಗಡೆಮಾಡಿ ತಲೆಯಮೇಲೆ ಹೊತ್ತುಕೊಂಡು ನೃತ್ಯಕ್ಕೆ ಆರಂಭಿಸಿದರು. ಗೋವಿಂದ ಶಬ್ದದ ಗದ್ದಲವು ಅತಿಯಾಯಿತು. ಸತ್ಯಾನಂದನನ್ನು ಮಹೇಂದ್ರನನ್ನು ಬಿಡುಗಡೆಮಾಡಿದಮೇಲೆ ಕಂಡ ಯವನರ ಮನೆಗೆ ಬೆಂಕಿಹಾಕಿ ಬಿಡುತಲಿದ್ದರು. ಆದರೆ ಈ ಕೆಲಸಗಳಲ್ಲಿ ಹೆಚ್ಚು ಕಾಲವನ್ನು ಕಳೆಯಲಿಲ್ಲ. ಇಷ್ಟ ರೊಳಗೆ ನಗರದಲ್ಲಿದ್ದ ರಾಜನಾದ ಅಸದುಲಜಮಾನನು ನಗರದಲ್ಲಿದ್ದ ಸೈನ್ಯವನ್ನು ಕೂಡುಹಾಕಿಕೊಂಡು ಫಿರಂಗಿ, ಗುಂಡು, ಬಂದೂಕು ತೆಗದುಕೊಂಡು ಸಂತಾನ ಸಂಪ್ರದಾಯದವರನ್ನು ಎದುರಿಸಿದನು. ಸಂತಾನರ ಆಯುಧಗಳು ಬರೀ ಗುರಾಣಿ, ಕತ್ತಿ, ಭಲ್ಲೆಗಳಾಗಿದ್ದವು. ಫಿರಂಗಿಗುಂಡು ಬಂದೂಕಗಳನ್ನು ನೋಡಿ ಅವರು ಸ್ವಲ್ಪ ಭೀತರಾದರು. ತೋಪಿನ ಗುಂಡುಗಳಿಂದ ಅನೇಕ ಸಂತಾನರು ಸತ್ತರು. ಆಗ ಸತ್ಯಾನಂದನು, ಹಿಂದಿರುಗಿರಿ, ಅನರ್ಥಕವಾಗಿ ವೈಷ್ಣವರ ವಧೆಯಿಂದ ಪ್ರಯೋಜನವಿಲ್ಲವೆಂದನು. ಆಗ ಸಂತಾನರೆಲ್ಲರೂ ಪರಾಜಿತರಾಗಿ ಮ್ಲಾನಮುಖ ರಾಗಿ ನಗರವನ್ನು ಬಿಟ್ಟು ಪುನಃ ಕಾಡುಗಳಲ್ಲಿ ಬಂದು ಪ್ರವೇಶಮಾಡಿದರು.

---

# ಹತ್ತೊಂಭತ್ತನೆಯ ಪರಿಚ್ಛೇದ

ಜೀವಾನಂದನು ಹೊರಟುಹೋದಮೇಲೆ ಶಾಂತಿಯು ನಿಮಾಯಿಮಣಿಯು ಜಗಲಿಯಮೇಲೆ ಬಂದು ಕುಳಿತುಕೊಂಡಳು. ನಿಮಾಯಿಯೂ ಮಗುವನ್ನು ಎತ್ತಿಕೊಂಡು ತೊಡೆಯಮೇಲೆ ಕುಳ್ಳಿರಿಸಿಕೊಂಡು ಕುಳಿತಳು. ಶಾಂತಿಯ ಕಣ್ಣುಗಳಲ್ಲಿ ಇನ್ನೂ ನೀರು ಇರಲಿಲ್ಲ; ಅವಳು ಅದನ್ನ ಒರಸಿಕೊಂಡಿದ್ದಳಲ್ಲದೆ ಮುಖವು ಪ್ರಫುಲ್ಲವಾಗಿತ್ತು. ಸ್ವಲ್ಪಸ್ವಲ್ಪ ನಗುತ್ತಲೂ ಇದ್ದಳು. ಗಂಭೀರವಾಗಿಯೂ ಸ್ವಲ್ಪ ಚಿಂತಾಯುಕ್ತಳಾಗಿಯೂ ಸ್ವಲ್ಪ ಅನ್ಯಮನಸಳಾಗಿಯೂ ಇದ್ದಳು. ನಿಮಾಯಿಯು ಹಾಗಾದರೆ ನೋಡಿದ್ದಾಯಿತು ಎಂದಳು.

ಶಾಂತಿಯು ಉತ್ತರವನ್ನು ಹೇಳದೆ ಸುಮ್ಮನಿದ್ದಳು. ನಿಮಾಯಿಯು ಶಾಂತಿಯು ತನ್ನ ಮನಸ್ಸನ್ನು ಹೊರಪಡಿಸಲಾರಳೆಂದು ತಿಳಿದಳು. ನಿಮಾಯಿಯು ಅದುಕಾರಣ ಪ್ರಯತ್ನಪುರಸ್ಸರವಾಗಿ ಬೇರೆ ಪ್ರಸ್ತಾಪವನ್ನೆತ್ತಿ, ನೋಡೆ, ಅತ್ತಿಗೆ! ಎಂತಹ ಮಗುವಿದು ? ಎಂದಳು.

ಶಾಂತಿ—ಮಗುವು ಎಲ್ಲಿ ಸಿಕ್ಕಿತು. ನಿನಗೆ ಯಾವಾಗಲೆ ಮಗುವಾದದ್ದು ?

ನಿಮಾ—ನೀನು ಹಾಳಾದೆ,—ಯಮಪುರಿಗೆ ಹೋಗು ! ಇದು ಅಣ್ಣನ ಮಗು.

ನಿಮಾಯಿಯು ಶಾಂತಿಯ ಹೊಟ್ಟೆ ಉರಿಸುವದಕ್ಕೆ ಈ ಮಾತನ್ನು ಹೇಳಲಿಲ್ಲ. ಅಣ್ಣನ ಮಗುವು ಅಂದರೆ ಅಣ್ಣನು ಕೊಟ್ಟ ಮಗುವೆಂದು ಹೇಳುವುದಕ್ಕೆ ಆ ಮಾತು ಹೇಳಿದಳು. ಶಾಂತಿಯು ಈ ಅರ್ಥವನ್ನು ತಿಳಿದುಕೊಳ್ಳದೆ ನಿಮಾಯಿಯು ಸೂಜಿಮುರಿಯುವ ಮಾತನಾಡುತ್ತಾಳೆಂದು ತಿಳಿದುಕೊಂಡು, ನಾನು ಮಗುವಿನ ತಂದೆಯ ವಿಚಾರವನ್ನು ಕೇಳಲಿಲ್ಲ. ಅದರ ತಾಯಿಯನ್ನು ಕುರಿತು ಕೇಳಿದೆನೆಂದಳು.

ನಿಮಾಯಿಯು ಉಚಿತವಾದ ಶಾಸ್ತಿಯನ್ನು ಹೊಂದಿ ಅಪ್ರತಿಭಳಾಗಿ, ಯಾರ ಮಗುವೊ ನಾನೇನು ಬಲ್ಲೆ, ಅಣ್ಣನು ಎಲ್ಲಿಂದಲೋ ಬಿದ್ದಿದ್ದದ್ದನ್ನು ಹುಡುಕಿ ಎತ್ತಿಕೊಂಡು ಬಂದನು, ಅದನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ಅವಕಾಶವಾಗಲಿಲ್ಲ. ಇದೇನೋ ಕ್ಷಾಮಕಾಲ, ಎಷ್ಟೋ ಜನ ಮಕ್ಕಳು ಮರಿಗಳನ್ನು ದಾರಿಯಲ್ಲಿ ಬಿಸಾಟು ಹೋಗಿಬಿಡುತ್ತಾರೆ, ನಮ್ಮ ಹತ್ತಿರಕ್ಕೇನೆ ಎಷ್ಟೋಜನ ಮಕ್ಕಳುಮರಿಗಳನ್ನು ಮಾರುವದಕ್ಕೆ ಬಂದಿದ್ದರು. ಕಂಡವರ ಮಕ್ಕಳನ್ನು ಯಾರುತಾನೇ ಕೊಂಬುವರು (ಆಗವಳ ಕಣ್ಣಿನಲ್ಲಿ ನೀರು ತುಂಬಿತು. ನಿಮಿಯು ಕಣ್ಣೊರಸಿಕೊಂಡು ಪುನಃ) ಮಗುವೇನೋ ದಿವ್ಯ ಸುಂದರವಾದದ್ದು ; ಮಗುವಿನ ಚಟವಟಿಗೆ ಚಲುವೆ ನೋಡಿ ಅಣ್ಣನಿಂದ ತೆಗೆದುಕೊಂಡೆನೆಂದಳು.

ಆಮೇಲೆ ಅವರಿಬ್ಬರೂ ಬಹಳಹೊತ್ತು ಅನೇಕ ಮಾತುಕಥೆಯನ್ನಾಡುತಲಿದ್ದರು. ಕಡೆಗೆ ನಿಮಾಯಿಯ ಗಂಡನು ಮನೆಗೆ ಬಂದದ್ದನ್ನು ನೋಡಿ,

ಶಾಂತಿಯು ಎದ್ದು ತನ್ನ ಕುಟೀರಕ್ಕೆ ಹೊರಟುಹೋದಳು. ಕುಟೀರಕ್ಕೆ ಹೋಗಿ ಬಾಗಿಲು ಹಾಕಿಕೊಂಡು, ಒಲೆಯಿಂದ ಕೆಲವು ಕೆಂಡವನ್ನು ತೆಗೆದಿಟ್ಟಳು. ಮಿಕ್ಕ ಕೆಂಡಗಳಲ್ಲಿ ತನಗೋಸ್ಕರ ಮಾಡಿಕೊಳ್ಳುತ್ತಿದ್ದ ಅನ್ನವು ಕುದಿಯುತಲಿತ್ತು. ಅದನ್ನು ತೆಗೆದು ಬಿಸಾಟು, ಹಾಗೆ ಸಿಂತಹಾಗೆ ಬಹಳ ಹೊತ್ತು ಯೋಚನೆಮಾಡಿ, ತನ್ನೊಳಗೆತಾನೇ, ಇಷ್ಟುದಿನ ಮಾಡಬೇಕೆಂದು ಇದ್ದದ್ದನ್ನ ಈ ದಿನ ಮಾಡಿಬಿಡುತ್ತೇನೆ; ಯಾವ ಆಸೆಯಿಂದ ಇದುವರೆಗೆ ಮಾಡಲಿಲ್ಲವೋ ಅದು ಸಫಲವಾಯಿತು. ಸಫಲವೋ ನಿಷ್ಫಲವೋ—ನಿಷ್ಫಲ! ಈ ಜೀವನವೇ ನಿಷ್ಫಲ! ಏನು ಸಂಕಲ್ಪ ಮಾಡಿದ್ದೆನೋ ಅದನ್ನು ಮಾಡಿಬಿಡುವೆನು. ಒಂದು ಸಲ ಏನು ಪ್ರಾಯಶ್ಚಿತ್ತವೋ ನೂರು ಸಲವೂ ಅದೇ ಪ್ರಾಯಶ್ಚಿತ್ತವೆಂದಂದುಕೊಂಡಳು.

ಈ ಪ್ರಕಾರ ಯೋಚಿಸಿಕೊಂಡು ಶಾಂತಿಯು ಅನ್ನವನ್ನು ಒಲೆಯಲ್ಲಿ ಹಾಕಿಬಿಟ್ಟು, ಹೋಗಿ ವನದಿಂದ ಕೆಲ ಹಣ್ಣುಹಂಪಲುಗಳನ್ನು ತಂದಳು. ಅನ್ನಕ್ಕೆ ಬದಲಾಗಿ ಅದನ್ನು ತಿಂದಳು. ಅನಂತರ ನಿಮಾಯಿಮಣಿಯು ಕಣ್ಣಿಟ್ಟಿದ್ದ ಅವಳ ಹೊಸ ಬಿಳೀಶೀರೆಯನ್ನು ತೆಗೆದು ಅದರ ಅಂಚನ್ನು ಹರಿದುಹಾಕಿ ಬಿಸಾಟು, ಶೀರೆಯನ್ನು ಕೆಮ್ಮಣ್ಣಿನ ನೀರುಮಾಡಿ ಅದರಲ್ಲಿ ಅದ್ದಿ ತೋಯಿಸಿದಳು. ಶೀರೆಯು ರಂಗಾಯಿತು. ಒಣಗಿಸುವದಕ್ಕೆ ಸಂಜೆಯಾಗಿತ್ತು. ಅದನ್ನು ಹಾಗೇ ಆರಿಹಾಕಿದಳು. ಸಾಯಂಕಾಲವಾಗಿ ಕತ್ತಲೆಯಾಗುತ್ತಲೇ ಬಾಗಿಲನ್ನು ಚನ್ನಾಗಿ ಹಾಕಿಕೊಂಡು ಒಳಗೆ ಒಂದತಿಚಮತ್ಕಾರವಾದ ಕಾರ್ಯದಲ್ಲಿ ಶಾಂತಿಯು ಪ್ರವೃತ್ತಳಾದಳು. ಬಾಚಿಕೊಳ್ಳದೆ ರುಕ್ಷವಾದ ಆಗುಲ್ಫಲಂಬಿತವಾದ ತಲೆಯ ಕೇಶರಾಶಿಯನ್ನು ಹಿಡಿಯಲ್ಲಿ ಹಿಡಿದುಕೊಂಡು ಕೊಂಚಮಟ್ಟಿಗೆ ಕತ್ತರಿಯಿಂದ ಕತ್ತರಿಸಿ ಇಟ್ಟುಕೊಂಡು ಅವಶಿಷ್ಟವಾದ ತಲೆಯ ಕೂದಲನ್ನು ಹೆರಳುಹಾಕಿ ಜಟೆಯ ಹಾಗೆ ಮಾಡಿದಳು. ಬಾಚಣಿಗೆಯನ್ನು ಕಾಣದ ಕೆದರಿದ್ದ ಕೂದಲು ಆ ಅಪೂರ್ವವಾದ ವಿನ್ಯಾಸದಿಂದ ಭಾರವಾದ ಜಟೆಯಾಗಿ ಪರಿಣಮಿಸಿತು. ಅನಂತರ ಆ ಗೈರಿಕ ರಂಗಿನ ಕಾವಿಶಾಟಿಯಾಗಿ ಪರಿಣಮಿಸಿದ್ದ ಹೊಸ ಶೀರೆಯನ್ನು ತೆಗೆದುಕೊಂಡು ಎರಡು ತುಂಡಾಗಿ ಹರಿದು ಒಂದನ್ನು ತನ್ನ ಮನೋಹರವಾದ ಅಂಗಕ್ಕೆ ಕಟ್ಟಿಕೊಂಡು, ಉಳಿದ ತುಂಡನ್ನು ಎದೆಗೆ ಬಿಗಿದೆಳದು ಕಟ್ಟಿಕೊಂಡಳು; ಮನೆಯಲ್ಲಿ ಒಂದು ಸಣ್ಣದಾದ ಕನ್ನಡಿಯು ಇತ್ತು. ಬಹುಕಾಲದಮೇಲೆ ಅದನ್ನು ಹೊರಗೆ ತೆಗದಳು. ಹೊರಗೆ ತೆಗೆದು ದರ್ಪಣದಲ್ಲಿ ತನ್ನ ವೇಷವನ್ನು ನೋಡಿಕೊಂಡಳು. ನೋಡಿಕೊಂಡು, ಅಯ್ಯೋ! ಏನುಮಾಡಿಬಿಟ್ಟೆ! ಎಂದಂದುಕೊಂಡಳು. ದರ್ಪಣವನ್ನು ಬಿಸಾಟು ಕತ್ತರಿಸಲ್ಪಟ್ಟು ಬಿದ್ದಿದ್ದ ಕೂದಲನ್ನು ತೆಗೆದುಕೊಂಡು ಸ್ಮಶ್ರುವನ್ನು ಕಲ್ಪಿಸಿದಳು. ಆ ಚಂದ್ರುಸದೃಶವಾದ ಮುಖವು ಹೊಸದಾದ ದಾಡಿ ಮೀಶೆಗಳಿಂದ ಶೋಭಿತವಾಯಿತು. ಅನಂತರ ಮನೆಯೊಳಗಿನಿಂದ ಒಂದು ದೊಡ್ಡದಾದ ಹರಿಣಚರ್ಮವನ್ನು ತಂದು ಕಂಠದಲ್ಲಿ ಕಟ್ಟಿಕೊಂಡಳು. ಅದು ಕಂಠದಿಂದ ಜಾನು

ಪರ್ಯಂತವು ಶರೀರವನ್ನು ಮುಚ್ಚಿತು. ಯಾರಾದರೂ ಕವಿಯಾದವನು ಆ ನವೀನ "ಕೃಷ್ಣತ್ವಚಂಗ್ರುಂಥಿಮತೀಂದಧಾನ"ಳನ್ನು ನೋಡಿದ್ದರೆ, ಈಗ ಮನ್ಮಥನ ವಿನಾಶವು ಹಾಗಿರಲಿ, ಆ ಮನ್ಮಥನ ಪುನರುಜ್ಜೀವನ ಶಂಕೆಯನ್ನು ಮಾಡುತ ಲಿದ್ದನು. ಈ ಪ್ರಕಾರ ಸುಸಜ್ಜೀಭೂತಳಾಗಿ, ಆ ಹೊಸ ಸನ್ಯಾಸಿಯು ಮನೆ ಯೊಳಗೆ ನಾಲ್ಕು ಕಡೆಯಲ್ಲಿಯೂ ಸಾವಧಾನವಾಗಿ ನೋಡಿ, ಯಾರೂ ಇಲ್ಲದ್ದನ್ನ ಕಂಡು ಅತಿ ಗೋಪ್ಯವಾಗಿ ರಕ್ಷಿತವಾಗಿದ್ದ ಒಂದು ಪೆಟ್ಟಿಗೆಯನ್ನು ತೆಗದು ಅದರ ಲ್ಲಿದ್ದ ಒಂದು ಗಂಟನ್ನು ತೆಗದಿಟ್ಟಳು. ಆ ಗಂಟನ್ನು ಬಿಚ್ಚಿ ಅದರಲ್ಲಿದ್ದದ್ದನ್ನು ತೆಗದು ನೆಲದಮೇಲಿಟ್ಟಳು. ಅವು ಕೇವಲ ಭಾರವಾದ ಪುಸ್ತಕಗಳು. ಮನಸ್ಸಿ ನಲ್ಲಿ ಇವುಗಳನ್ನು ಏನುಮಾಡೋಣ? ಸಂಗಡ ತೆಗದುಕೊಂಡು ಹೋಗಿ ಮಾಡುವದೇನು? ಈ ಭಾರವನ್ನು ಹೊರುವುದು ಹೇಗೆ? ಇಟ್ಟುಹೋದರೆ ಆಗುವದೇನು? ಪ್ರಯೋಜನತಾನೇ ಏನು? ಜ್ಞಾನದಿಂದ ಸುಖವಿಲ್ಲವೆಂಬುದು ಕಂಡಹಾಗೆ ಆಯಿತು. ಅದು ಕೇವಲ ಭಸ್ಮರಾಶಿ ಮಾತ್ರವಾಗಿದೆ. ಆ ಭಸ್ಮವು ಭಸ್ಮವಾಗಿ ಹೋಗಲೆಂದು ಹೇಳಿಕೊಂಡು, ಶಾಂತಿಯು ಆ ಗ್ರುಂಥಗಳನ್ನು ಒಂದೊಂದಾಗಿ ಉರಿಯುವ ಬೆಂಕಿಯಲ್ಲಿ ಹಾಕಿದಳು. ಕಾವ್ಯ, ಸಾಹಿತ್ಯ, ಅಲಂಕಾರ, ವ್ಯಾಕರಣ, (ಇನ್ನೂ ಏನೇನಿತ್ತೋ ಹೇಳಲಾರೆವು) ಎಲ್ಲ ಉರಿದು ಭಸ್ಮಾವಶಿಷ್ಟ ವಾಗಿಹೋಯಿತು. ರಾತ್ರಿ ಎರಡನೇ ಪ್ರಹರದಲ್ಲಿ ಶಾಂತಿಯು ಆ ಸನ್ಯಾಸಿ ವೇಷದಲ್ಲಿ ಬಾಗಿಲು ತೆರೆದುಕೊಂಡು ಅಂಧಕಾರದಲ್ಲಿ ಏಕಾಕಿನಿಯಾಗಿ ಗಂಭೀರ ವಾದ ವನಮಧ್ಯದಲ್ಲಿ ಪ್ರವೇಶ ಮಾಡಿದಳು. ಗ್ರಾಮವಾಸಿಗಳು ಆ ಅರ್ಧರಾತ್ರಿ ಯಲ್ಲಿ ಕಾನನ ಮಧ್ಯದಲ್ಲಿ ಅಪೂರ್ವವಾದ ಸಂಗೀತ ಧ್ವನಿಯನ್ನು ಕೇಳಿದರು.

---

## ಇಪ್ಪತ್ತನೆಯ ಪರಿಚ್ಛೇದ

ಮರುದಿನ ಆನಂದಮಠದಲ್ಲಿ ಏಕಾಂತವಾದ ಕೊಠಡಿಯಲ್ಲಿ ಕುಳಿತುಕೊಂಡು ಭಗ್ನೋತ್ಸಾಹರಾದ ಸಂತಾನ ನಾಯಕರಾದ ಮೂರುಮಂದಿಯು ಯೋಚಿಸುತ್ತಿದ್ದರು. ಜೀವಾನಂದನು ಸತ್ಯಾನಂದನನ್ನು ಕುರಿತು ಮಹಾ ಸ್ವಾಮಿ! ದೇವರು ನಮ್ಮಗಳಲ್ಲಿ ಏತಕ್ಕೆ ಹೀಗೆ ಅಪ್ರಸನ್ನನಾದನು?—ಯಾವ ದೋಷದಿಂದ ನಾವು ಮುಸಲಮಾನರಿಂದ ಪರಾಭೂತರಾದೆವು? ಎಂದನು.

ಸತ್ಯಾನಂದ—ದೇವರು ಅಪ್ರಸನ್ನನಾಗಿಲ್ಲ. ಯುದ್ಧದಲ್ಲಿ ಜಯಾಪಜಯ ಎರಡೂ ಉಂಟು. ಅಂದು ನಾವುಗಳು ಜಯಿಸಿದೆವು. ಇಂದು ಪರಾಭೂತ ರಾದೆವು. ಕಡೆಗೆ ಜಯವೇ ಆಗುವುದು. ಯಾರು ಇದುವರೆಗೆ ದಯೆಯನ್ನು ತೋರಿಸಿದ್ದಾನೋ ಆ ಶಂಖಚಕ್ರಗದಾಪದ್ಮಧಾರಿಯಾದ ವನಮಾಲಿಯು ದಯ ಮಾಡುವನೆಂದು ನನಗೆ ನಿಶ್ಚಿತವಾದ ಭರವಸೆಯುಂಟು. ಅವನ ಪಾದಸ್ಪರ್ಶ

ಮಾಡಿ ನಾವು ಯಾವ ವ್ರತವನ್ನು ಗ್ರಹಣಮಾಡಿದ್ದೇವೋ ಆ ವ್ರತವನ್ನು ನಾವು ಸಾಧನಮಾಡಲೇ ಬೇಕು. ಇಲ್ಲದೆ ವಿಮುಖರಾದರೆ ನಾವು ಅನಂತವಾದ ನರಕ ಭೋಗವನ್ನು ಮಾಡುವೆವು. ನಮ್ಮ ಮುಂದಿನ ಮಂಗಳ ವಿಚಾರದಲ್ಲಿ ನನ ಗೇನೇನೂ ಸಂದೇಹವಿಲ್ಲ. ಆದರೆ ಹೇಗೆ ದೈವಾನುಗ್ರಹವಿಲ್ಲದೆ ಯಾವ ಕಾರ್ಯವೂ ಸಿದ್ಧವಾಗಲಾರದೋ ಹಾಗೆಯೇ ಪುರುಷಾಕಾರವೂ ಬೇಕು. ನಾವು ಪರಾಭೂತ ರಾದ್ದಕ್ಕೆ ಕಾರಣವೇನೆಂದರೆ—ನಾವು ನಿರಸ್ತ್ರರಾಗಿದ್ದೆವು. ಗುಂಡು ತುಪಾಕಿ ಫಿರಂಗಿಗಳ ಎದುರಾಗಿ ದೊಣ್ಣೆ ಸೋಟಾ ಭಲ್ಲೆ ಏನುಮಾಡಬಲ್ಲದು? ಆದುದ ರಿಂದ ನಮಗೆ ಪುರುಷಕಾರದ ಲಾಘವದಿಂದ ಈ ಪರಾಭವವುಂಟಾಯಿತು. ಈಗ ಮಾಡತಕ್ಕದ್ದೇನೆಂದರೆ:—ನಮಗೂ ಅಂತಹ ಅಸ್ತ್ರಗಳು ಕಡಮೆಯಿಲ್ಲದ ಹಾಗೆ ಮಾಡಿಕೊಳ್ಳಬೇಕು.

ಜೀವಾನಂದ—ಅದು ಬಹಳ ಕಠಿಣವಾದ ವ್ಯಾಪಾರ.

ಸತ್ಯಾನಂದ—ಕಠಿಣ ವ್ಯಾಪಾರವೆ? ಜೀವಾನಂದ! ಸಂತಾನನಾಗಿದ್ದು ಇಂತಹ ಮಾತನ್ನು ಬಾಯಿಯಿಂದ ಹೇಳಬಹುದೆ? ಸಂತಾನರಿಗೆ ಕಠಿಣವಾದುದು ಯಾವ ಕಾರ್ಯವಿರುವುದು?

ಜೀವಾನಂದ—ಹೇಗೆ ಅವುಗಳ ಸಂಗ್ರಹಮಾಡಬೇಕೋ ಅಪ್ಪಣೆಕೊಡಿಸ ಬೇಕು.

ಸತ್ಯಾನಂದ—ಸಂಗ್ರಹಕ್ಕೋಸ್ಕರ ನಾನು ಈ ದಿನ ರಾತ್ರೆ ತೀರ್ಥಯಾತ್ರೆ ಹೊರಡುವೆನು. ನಾನು ಹಿಂದಿರುಗಿ ಬರುವವರೆಗೂ ನೀವು ಯಾವ ಹೆಚ್ಚು ಕೆಲಸ ಗಳಿಗೆ ಹೋಗಬೇಡಿ; ಆದರೆ ಸಂತಾನರಲ್ಲಿ ಐಕಮತ್ಯವನ್ನು ಕಾಪಾಡಿಕೊಂಡಿರ ಬೇಕು. ನೀವು ಅವರ ಗ್ರಾಸಾಚ್ಛಾದನಕ್ಕೆ ನೋಡಿಕೊಂಡಿರಬೇಕಲ್ಲದೆ ಮಾತೆಯ ರಣಜಯಕ್ಕೋಸ್ಕರ ಅರ್ಥಭಾಂಡಾರವನ್ನು ಪೂರ್ಣವಾಗಿ ಇಟ್ಟುಕೊಂಡಿರಬೇಕು. ಈ ಭಾರವು ನಿಮ್ಮಿಬ್ಬರಮೇಲೆ ಇರುವುದು.

ಭವಾನಂದ—ತೀರ್ಥಯಾತ್ರೆಯನ್ನು ಮಾಡಿ ಈ ಸಕಲ ಸಂಗ್ರಹವನ್ನು ಮಾಡುವ ಬಗೆ ಹೇಗೆ? ಗುಂಡು ಮದ್ದು ಬಂದೂಕ ಫಿರಂಗಿ ಮುಂತಾದ್ದನ್ನು ಬೆಲೆಗೆ ಕೊಂಡು ಕಳುಹಿಸುವುದು ಬಹಳ ಗದ್ದಲಕ್ಕೆ ಬೀಳುತ್ತದೆ. ಇಷ್ಟಕ್ಕೂ ಇಷ್ಟು ಸಿಕ್ಕುವದೆಲ್ಲಿ? ಮಾರುವವರು ಯಾರು? ತರುವವರು ಯಾರು?

ಸತ್ಯಾನಂದ—ಬೆಲೆಯನ್ನು ಕೊಟ್ಟು ತರುವ ಕೆಲಸವು ನನ್ನಿಂದ ಆಗಲಾರದು. ನಾನು ಕಾರೀಗಾರರನ್ನು ಕಳುಹಿಸುವೆನು. ಇಲ್ಲಿಯೇ ಅದೆಲ್ಲಾ ತಯಾರಾಗ ಬೇಕು.

ಜೀವಾನಂದ—ಅದು ಹೇಗೆ? ಈ ಆನಂದಮಠದಲ್ಲಿಯೆ?

ಸತ್ಯಾನಂದ—ಅದು ಎಲ್ಲಿ ಆದೀತು? ಇದರ ಉಪಾಯವನ್ನು ನಾನು ಬಹು ದಿನಗಳಿಂದ ಯೋಚನೆಮಾಡುತಲಿದ್ದೇನೆ. ಈಶ್ವರನು ಆದಕ್ಕೆ ಈಗ ಮಾರ್ಗವನ್ನು

ತೋರಿಸಿದ್ದಾನೆ. ದೇವರು ಪ್ರತಿಕೂಲನಾಗಿದ್ದಾನೆಂದು ನೀವು ಹೇಳಿದಿರಿ, ನಾನು ಅನುಕೂಲನಾಗಿದ್ದಾನೆಂದು ಹೇಳುತ್ತೇನೆ.

ಭವಾನಂದ—ಕಾರಖಾನೆಯನ್ನು ಎಲ್ಲಿಡಬೇಕು?

ಸತ್ಯಾನಂದ—ಪದಚಿಹ್ನಗ್ರಾಮದಲ್ಲಿ.

ಜೀವಾನಂದ—ಅಲ್ಲಿ ಹೇಗೆ? ಅಲ್ಲ ಹೇಗೆ ಆದೀತು?

ಸತ್ಯಾನಂದ—ಇಲ್ಲದಿದ್ದರೆ ಏತಕ್ಕೋಸ್ಕರ ಮಹೇಂದ್ರಸಿಂಹನು ಈ ಮಹಾವ್ರತವನ್ನು ಗ್ರಹಣಮಾಡಬೇಕೆಂದು ಆಕಿಂಚನ ಮಾಡಿದ್ದು?

ಭವಾನಂದ—ಮಹೇಂದ್ರಸಿಂಹನು ವ್ರತವನ್ನು ಗ್ರಹಣಮಾಡಿದನೆ?

ಸತ್ಯಾನಂದ—ವ್ರತವನ್ನು ಗ್ರಹಣಮಾಡಿಲ್ಲ, ಮಾಡುವನು. ಈ ದಿನ ರಾತ್ರಿ ಅವನನ್ನು ವ್ರತದಲ್ಲಿ ದೀಕ್ಷಿತನನ್ನಾಗಿ ಮಾಡುವೆನು.

ಜೀವಾನಂದ—ಮಹೇಂದ್ರಸಿಂಹನನ್ನು ದೀಕ್ಷಿತನನ್ನಾಗಿ ಮಾಡುವದಕ್ಕೆ ಏನು ಪ್ರಯತ್ನನಡೆದುದೆಯೊ ನಾನರಿಯೆ, ಅವನ ಹೆಂಡತಿ ಮಗು ಇಬ್ಬರ ಅವಸ್ಥೆ ಏನಾಗಿದೆಯೊ, ಅವರನ್ನು ಎಲ್ಲಿಟ್ಟಿದ್ದಾನೆ? ನಾನು ಈ ದಿನ ನದೀತೀರದಲ್ಲಿ ಒಂದು ಮಗುವನ್ನು ನೋಡಿದೆ, ಅದನ್ನು ತೆಗೆದುಕೊಂಡುಹೋಗಿ ನನ್ನ ತಂಗಿಯಬಳಿ ಬಿಟ್ಟು ಬಂದೆ. ಆ ಮಗುವಿನ ಹತ್ತಿರ ಒಬ್ಬಳು ಸುಂದರವಾದ ಹೆಂಗಸು ಸತ್ತುಬಿದ್ದಿದ್ದಳು. ಅವಳೇನೋ ಮಹೇಂದ್ರನ ಹೆಂಡತಿಯಲ್ಲವಷ್ಟೆ? ನಾನು ಹಾಗೆ ತಿಳಿದೆನು.

ಸತ್ಯಾನಂದ—ಅವರೇ ಮಹೇಂದ್ರನ ಹೆಂಡತಿ ಮತ್ತು ಮಗಳು.

ಭವಾನಂದನು ಚಮಕಿತನಾಗಿ, ತಾನು ಔಷಧಕೊಟ್ಟು ಬದುಕಿಸಿದ ಹೆಂಗಸು ಮಹೇಂದ್ರನ ಕಲ್ಯಾಣಿಯೆಂದು ತಿಳಿದುಕೊಂಡನು. ಆದರೆ ಆ ಸಮಯದಲ್ಲಿ ಯಾವ ಮಾತು ಹೇಳುವದೂ ಅವಶ್ಯವಿಲ್ಲವೆಂದು ಸುಮ್ಮನಿದ್ದನು.

ಜೀವಾನಂದ—ಮಹೇಂದ್ರನ ಹೆಂಡತಿಯು ಹೇಗೆ ಸತ್ತಳು.

ಸತ್ಯಾನಂದ—ವಿಷಯವನ್ನು ತಿಂದು ಸತ್ತಳು.

ಜೀವಾನಂದ—ಏತಕ್ಕೆ ವಿಷವನ್ನು ತಿಂದಳು?

ಸತ್ಯಾನಂದ—ಭಗವಂತನು ಅವಳಿಗೆ ಸ್ವಪ್ನದಲ್ಲಿ ಪ್ರಾಣತ್ಯಾಗಮಾಡೆಂದು ಅಪ್ಪಣೆಮಾಡಿದನು.

ಭವಾನಂದ—ಆ ಸ್ವಪ್ನಾದೇಶವು ಸಂತಾನರ ಕಾರ್ಯೋದ್ಧಾರಕ್ಕೋಸ್ಕರ ಆಯಿತೇನು?

ಸತ್ಯಾನಂದ—ಮಹೇಂದ್ರಸಿಹ್ಮನು ಹಾಗೆಂದು ಹೇಳಿದನು. ಈಗ ಸಾಯಂಕಾಲವಾಯಿತು. ನಾನು ಸಾಯಂಕೃತ್ಯಗಳನ್ನು ಮಾಡಲು ಹೊರಟೆ, ಅನಂತರ ನೂತನ ಸಂತಾನರನ್ನು ದೀಕ್ಷಿತರನ್ನಾಗಿ ಮಾಡುವೆನು.

ಭವಾನಂದ—ಸಂತಾನರು ಎಷ್ಟು ಮಂದಿ? ಮಹೇಂದ್ರಸಿಹ್ಮನು ಹೊರತು ಮತ್ಯಾರಾದರು ತಮ್ಮ ನಿಜಶಿಷ್ಯರಾಗಿ ಬಂದಿದ್ದಾರೇನು?

ಸತ್ಯಾನಂದ—ಹೌದು. ಮತ್ತೊಬ್ಬ ಹೊಸಬನು ಬಂದಿದ್ದಾನೆ. ಅವನನ್ನು ನಾನು ಯಾವಾಗಲೂ ನೋಡಿರಲಿಲ್ಲ. ಈ ದಿನವೇ ಅವನು ಬಂದದ್ದು. ಅವನು ಇನ್ನೂ ಚಿಕ್ಕವಯಸ್ಸಿನ ಯೌವನಪುರುಷನಾಗಿದ್ದಾನೆ. ಅವನ ಆಕಾರೇಂಗಿತಗಳನ್ನು ನೋಡಿ ಅವನ ಮಾತುಕಥೆಯನ್ನು ಕೇಳಿ ಬಹಳ ಪ್ರೀತನಾದೆನು. ಅವನಿನ್ನು ಶುದ್ಧ ಭಂಗಾರದ ಮುದ್ದೆಯಾಗಿದ್ದಾನೆ. ಅವನನ್ನು ಸಂತಾನರ ಕಾರ್ಯದಲ್ಲಿ ಶೀಕ್ಷಿತನಾಗಿಮಾಡುವ ಭಾರವು ಜೀವಾನಂದನಿಗೆ ಸೇರಿದೆ; ಏತಕ್ಕೆಂದರೆ, ಜೀವಾನಂದನು ಜನಗಳ ಚಿತ್ತಾಕರ್ಷಣೆಮಾಡುವುದರಲ್ಲಿ ಬಹು ದಕ್ಷನಾಗಿದ್ದಾನೆ. ನಾನು ಹೋಗುತ್ತೇನೆ. ನಾನು ಇನ್ನೊಂದು ಮಾತು ಹೇಳುವದಿದೆ. ಅದನ್ನು ಮನವಿಟ್ಟು ಕೇಳಬೇಕು. ಆಗ ಅವರಿಬ್ಬರೂ ಕೈಮುಗಿದುಕೊಂಡು ಆಜ್ಞೆಯಾಗಲೆಂದು ವಿಜ್ಞಾಪಿಸಿಕೊಂಡರು.

ಸತ್ಯಾನಂದ—ನೀವಿಬ್ಬರೂ ಏನಾದರೂ ಅಪರಾಧವನ್ನು ಮಾಡಿದ್ದರೂ ಅಥವಾ ನಾನು ಹಿಂದಿರುಗಿ ಬರುವುದರೊಳಗೆ ಮಾಡಿದರೂ ನಾನು ಬಂದ ಹೊರತು ಅದಕ್ಕೆ ಪ್ರಾಯಶ್ಚಿತ್ತವನ್ನು ನಡೆಸಕೂಡದು, ನಾನು ಬಂದಮೇಲೆ ಪ್ರಾಯಶ್ಚಿತ್ತವು ಅವಶ್ಯ ಕರ್ತವ್ಯ.

ಇಷ್ಟು ಹೇಳಿ ಸತ್ಯಾನಂದನು ಸ್ವಸ್ಥಾನಕ್ಕೆ ಪ್ರಸ್ಥಾನಮಾಡಿದನು. ಭವಾನಂದನೂ ಜೀವಾನಂದನೂ ಸಹ ಪರಸ್ಪರ ಹುಬ್ಬು ಎತ್ತಿಹಾಕಿ ತಲೆ ಅಲ್ಲಾಡಿಸಿದರು.

ಭವಾನಂದ—ನಿನ್ನಮೇಲಿನ ಮಾತಲ್ಲವೆ?

ಜೀವಾನಂದ—ಇರಬಹುದು. ತಂಗಿಯಮನೆಗೆ ಮಹೇಂದ್ರನ ಮಗಳನ್ನು ಕೊಟ್ಟುಬರುವುದಕ್ಕೆ ಹೋಗಿದ್ದೆನು.

ಭವಾನಂದ—ಅದರಲ್ಲಿ ದೋಷವೇನು? ಅದೇನು ನಿಷಿದ್ಧವಲ್ಲ; ಬ್ರಾಹ್ಮಣಿಯನ್ನು ನೋಡಿದಿಯಾ ಏನು?

ಜೀವಾನಂದ—ಗುರುದೇವನು ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬೇಕೆಂದು ತೋರುತ್ತದೆ.

---

## ಇಪ್ಪತ್ತೊಂದನೆಯ ಪರಿಚ್ಛೇದ

ಸಾಯಾಹ್ನ ಕೃತ್ಯವನ್ನು ಪೂರೈಸಿಕೊಂಡು ಮಹೇಂದ್ರನನ್ನು ಕರೆದು ಸತ್ಯಾನಂದನು ನಿನ್ನ ಕನ್ಯೆಯು ಜೀವಿತಳಾಗಿದ್ದಾಳೆಂದು ಹೇಳಿದನು.

ಮಹೇಂದ್ರ—ಎಲ್ಲಿ ಮಹಸ್ವಾಮಿ!

ಸತ್ಯಾನಂದ—ನೀನು ನನ್ನನ್ನು ಮಹಸ್ವಾಮಿಯೆಂದು ಹೇಳುವದೇತಕ್ಕೆ?

ಮಹೇಂದ್ರ—ಎಲ್ಲರೂ ಹೇಳುತ್ತಾರೆ, ಹಾಗೆ ಮಠಾಧಿಕಾರಿಗಳಿಗೆ ಮಹಸ್ವಾಮಿಗಳೆಂದು ಕರೆಯತಕ್ಕದ್ದು—ನನ್ನ ಮಗಳೆಲ್ಲಿ, ಮಹಸ್ವಾಮಿ?

ಸತ್ಯಾನಂದ—ಅದನ್ನು ತಿಳಿಯುವುದಕ್ಕೆ ಮೊದಲು ಒಂದು ಪ್ರಶ್ನೆಗೆ ಉತ್ತರವನ್ನು ಕೊಡು. ನೀನು ಸಂತಾನರ ಧರ್ಮವನ್ನು ಗ್ರಹಣಮಾಡುವೆಯಾ?

ಮಹೇಂದ್ರ—ಹಾಗೇ ಗ್ರಹಣಮಾಡಬೇಕೆಂದು ನಿಶ್ಚಯಮಾಡಿಕೊಂಡಿದ್ದೇನೆ.

ಸತ್ಯಾನಂದ—ಹಾಗಾದರೆ ಮಗಳೆಲ್ಲಿಂದು ಕೇಳಕೂಡದು.

ಮಹೇಂದ್ರ—ಏತಕ್ಕೆ ಮಹಸ್ವಾಮಿ?

ಸತ್ಯಾನಂದ—ಯಾರು ಈ ವ್ರತವನ್ನು ಗ್ರಹಣಮಾಡುವರೊ ಅವರು ಹೆಂಡತಿ ಮಕ್ಕಳು ಸ್ವಜನರು ಯಾರ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಹೆಂಡರ ಮಕ್ಕಳ ಮುಖವನ್ನು ನೋಡಿದರೆ ಪ್ರಾಯಶ್ಚಿತ್ತವುಂಟು. ಯಾವಕಾಲದವರೆಗೂ ಸಂತಾನರ ಕಾರ್ಯವು ಸಿದ್ಧಿಯಾಗುವುದಿಲ್ಲವೋ ಅದುವರೆಗೆ ನೀನು ನಿನ್ನ ಮಗಳನ್ನು ನೋಡಕೂಡದು. ಅದುಕಾರಣ ಸಂತಾನರ ಧರ್ಮವನ್ನು ಗ್ರಹಣಮಾಡುವುದು ಸ್ಥಿರವಾಗಿದ್ದರೆ ಮಗಳ ಸಮಾಚಾರವನ್ನು ಕಟ್ಟಿಕೊಂಡು ಏನುತಾನೇ ಮಾಡುವೆ? ನೋಡಿದರೂ ಹೊಂದಲಾರೆ.

ಮಹೇಂದ್ರ—ಪ್ರಭುವೆ! ಇಷ್ಟು ಕಠಿಣವಾದ ನಿಯಮವೇತಕ್ಕೆ?

ಸತ್ಯಾನಂದ—ಸಂತಾನರ ಕಾರ್ಯವು ಅತಿ ಕಠಿಣವಾದುದು. ಯಾರು ಸರ್ವ ತ್ಯಾಗಿಯಾಗಿದ್ದಾನೋ ಅಂತಹವನು ಹೊರತು ಮತ್ತ್ಯಾರೂ ಈ ಕೆಲಸಕ್ಕೆ ಉಪ ಯುಕ್ತರಾದವರಲ್ಲ. ಮಾಯಾರಜ್ಜುವಿನಿಂದ ಯಾರ ಚಿತ್ತವು ಬದ್ಧವಾಗಿದೆಯೋ ಅಂತಹವರು ನೂಲಿಗೆ ಕಟ್ಟಿದ ಗಾಳಿಪಟದಹಾಗೆ ಭೂಮಿಯನ್ನು ಬಿಟ್ಟು ಸ್ವರ್ಗಕ್ಕೆ ಏರಲಾರರು.

ಮಹೇಂದ್ರ—ಮಹಸ್ವಾಮಿ! ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಯಾರು ಹೆಂಡರುಮಕ್ಕಳ ಮುಖದರ್ಶನವನ್ನು ಮಾಡುವನೋ ಅಂಥಾವನು ಗುರುತರವಾದ ಕೆಲಸಕ್ಕೆ ಅಧಿಕಾರಿಯಾಗುವುದಿಲ್ಲವೆ?

ಸತ್ಯಾನಂದ—ಪುತ್ರಕಳತ್ರರ ಮುಖವನ್ನು ನೋಡಿದ ಮಾತ್ರಕ್ಕೆ ನಾವು ದೇವರ ಕೆಲಸವನ್ನು ಮರೆತುಬಿಡುವೆವು. ಸಂತಾನರ ನಿಯಮವೇನೆಂದರೆ, ಅವಶ್ಯಕ ಬಂದರೆ ಸಂತಾನರು ಪ್ರಾಣವನ್ನು ಕೊಟ್ಟುಬಿಡಬೇಕು. ಮಗಳ ಮುಖವು ಮನಸ್ಸಿಗೆ ಜ್ಞಾಪಕಬಂದರೆ ಅವಳನ್ನು ಬಿಟ್ಟು ಪ್ರಾಣತ್ಯಾಗ ಮಾಡುವುದಕ್ಕೆ ಸಿದ್ಧನಾಗುವಿಯಾ?

ಮಹೇಂದ್ರ—ನೋಡದಮಾತ್ರಕ್ಕೆ ಜ್ಞಾಪಕಹೋದೀತೆ?

ಸತ್ಯಾನಂದ—ಮರೆಯುವುದಕ್ಕೆ ಆಗದಿದ್ದರೆ ಈ ವ್ರತವನ್ನು ಗ್ರಹಣ ಮಾಡಬೇಡ.

ಮಹೇಂದ್ರ—ಸಂತಾನರೆಲ್ಲರೂ ಹೀಗೆ ಪುತ್ರಕಳತ್ರರನ್ನು ಮರೆತುಬಿಟ್ಟು ವ್ರತಗ್ರಹಣವನ್ನು ಮಾಡಿದ್ದಾರೇನು? ಹಾಗಿದ್ದರೆ ಸಂತಾನರ ಸಂಖ್ಯೆಯು ಅತ್ಯಲ್ಪ ವಾಗಿರುವುದು.

ಸತ್ಯಾನಂದ—ಸಂತಾನರಲ್ಲಿ ಎರಡು ವಿಧ. ದೀಕ್ಷಿತರಾದವರು, ದೀಕ್ಷಿತರಾಗದವರು. ಯಾರು ದೀಕ್ಷಿತರಾಗದವರೋ ಅಂಥಾವರು ಸಂಸಾರಿ, ಅಥವಾ ಭಿಕಾರಿಗಳು. ಅಂಥಾವರು ಕೇವಲ ಯುದ್ಧಕಾಲದಲ್ಲಿ ಮಾತ್ರ ಬರುವರು. ಲೂಟಿಯಲ್ಲಿ ಭಾಗವನ್ನಾಗಲಿ ಅಥವಾ ಬೇರೆ ಪುರಸ್ಕಾರವನ್ನು ಹೊಂದಿ ಹೊರಟುಹೋಗುವರು. ಯಾರು ದೀಕ್ಷಿತರೋ ಅಂಥಾವರು ಸರ್ವ ತ್ಯಾಗಿಗಳು. ಅಂಥಾವರೇ ಸಂತಾನರ ಸಂಪ್ರದಾಯಕ್ಕೆ ಕರ್ತರು. ನಿನ್ನನ್ನು ದೀಕ್ಷಿತನಾಗದ ಸಂತಾನನಾಗಬೇಕೆಂದು ಹೇಳಲಾರೆನು. ಯುದ್ಧಕ್ಕೆ ಕತ್ತಿ ಭಲ್ಲೆ ಸೋಟಾಗಳು ಅನೇಕವುಂಟು. ದೀಕ್ಷಿತನಾಗದಿದ್ದರೆ ನೀನು ಈ ಸಂಪ್ರದಾಯದವರ ಯಾವ ದೊಡ್ಡ ಕೆಲಸಕ್ಕೂ ಅಧಿಕಾರಿಯಾಗಲಾರೆ.

ಮಹೇಂದ್ರ—ದೀಕ್ಷೆ ಹೇಗೆ? ದೀಕ್ಷಿತನಾಗಲೇಬೇಕಾದ್ದೇನು? ನಾನು ಇದಕ್ಕೆ ಮೊದಲೇ ಮಂತ್ರಗ್ರಹಣವನ್ನು ಮಾಡಿದ್ದೇನೆ.

ಸತ್ಯಾನಂದ—ಆ ಮಂತ್ರವನ್ನು ಬಿಟ್ಟುಬಿಡಬೇಕು. ನನ್ನಿಂದ ಪುನಃ ಮಂತ್ರೋಪದೇಶವಾಗಬೇಕು.

ಮಹೇಂದ್ರ—ಮಂತ್ರವನ್ನು ತ್ಯಾಗಮಾಡುವುದು ಹೇಗೆ?

ಸತ್ಯಾನಂದ—ನಾನು ಆ ಪದ್ಧತಿಯನ್ನು ಹೇಳಿಕೊಡುವೆನು.

ಮಹೇಂದ್ರ—ಹೊಸದಾಗಿ ಮಂತ್ರೋಪದೇಶವೇತಕ್ಕಾಗಬೇಕು?

ಸತ್ಯಾನಂದ—ಸಂತಾನರು ವೈಷ್ಣವರು.

ಮಹೇಂದ್ರ—ಅದು ನನಗೆ ಗೊತ್ತಾಗಲಿಲ್ಲ. ಸಂತಾನರು ವೈಷ್ಣವರೇತಕ್ಕಾಗಬೇಕು? ವೈಷ್ಣವರಿಗೆ ಅಹಿಂಸೆಯು ಪರಮ ಧರ್ಮ.

ಸತ್ಯಾನಂದ—ಅದು ಚೈತನ್ಯದೇವನ ಸಂಪ್ರದಾಯದವರ ವೈಷ್ಣವ ಧರ್ಮ. ನಾಸ್ತಿಕರಾದ ಬೌದ್ಧರ ಧರ್ಮವನ್ನು ಅನುಕರಣೆಮಾಡಿ ಸ್ವಾಭಾವಿಕವಲ್ಲದ ವೈಷ್ಣವ ಮತವು ಉತ್ಪನ್ನವಾಗಿರುವದರ ಲಕ್ಷಣ. ಸ್ವಾಭಾವಿಕವಾದ ವೈಷ್ಣವ ಧರ್ಮದ ಲಕ್ಷಣವೇನೆಂದರೆ, ದುಷ್ಟರ ದಮನಮಾಡಿ ಧರಿತ್ರಿಯನ್ನು ಉದ್ಧಾರ ಮಾಡಬೇಕು. ಏತಕ್ಕೆಂದರೆ, ವಿಷ್ಣುವೇ ಜಗತ್ತಿಗೆ ರಕ್ಷಕನಾಗಿದ್ದಾನೆ; ಹತ್ತು ಸಲ ಅವತಾರವನ್ನೆತ್ತಿ ಪೃಥ್ವಿಯನ್ನು ಉದ್ಧಾರಮಾಡಿದನು. ಕೇಶಿ, ಹಿರಣ್ಯಕಶಿಪು, ಮಧುಕೈಟಭ, ಮುರ, ನರಕ ಮುಂತಾದ ದೈತ್ಯರನ್ನೂ, ರಾವಣಾದಿ ರಾಕ್ಷಸರ ಸಮೂಹವನ್ನೂ, ಕಂಸ ಶಿಶುಪಾಲ ಮುಂತಾದ ರಾಜರುಗಳನ್ನೂ ಅವನೇ ಸ್ವಯಂ ಯುದ್ಧದಲ್ಲಿ ಧ್ವಂಸಮಾಡಿದ್ದಾನೆ. ಅವನೇ ಜೇತನು, ಜಯದಾತನು, ಪೃಥ್ವಿಯ ಉದ್ಧಾರಕರ್ತನು, ಮತ್ತು ಸಂತಾನರ ಇಷ್ಟದೇವತೆ. ಚೈತನ್ಯದೇವನ ವೈಷ್ಣವ ಧರ್ಮವು ಪ್ರಕೃತವಾದ ವೈಷ್ಣವ ಧರ್ಮವಲ್ಲ. ಅದು ಅರ್ಧೇಕ ಧರ್ಮವಾಗಿದೆ; ಪೂರ್ತಿಯಾದ ವೈಷ್ಣವ ಧರ್ಮವಲ್ಲ. ಚೈತನ್ಯದೇವನ ವಿಷ್ಣುವು ಪ್ರೇಮಮಯನು, ಆದರೆ ಭಗವಂತನು ಕೇವಲ ಪ್ರೇಮಮಯನಲ್ಲ;

ಅವನು ಅನಂತ ಶಕ್ತಿಮಯನಾಗಿದ್ದಾನೆ. ಚೈತನ್ಯದೇವನ ವಿಷ್ಣುವು ಶುದ್ಧ ಪ್ರೇಮಮಯನು, ಸಂತಾನರ ವಿಷ್ಣುವು ಶುದ್ಧ ಶಕ್ತಿಮಯನು, ನಾವಿಬ್ಬರೂ ವೈಷ್ಣವರೇ ಹೌದು; ಆದರೆ ಇಬ್ಬರೂ ಅರ್ಧೇಕ ವೈಷ್ಣವರು. ಈಗ ಗೊತ್ತಾಯಿತೆ?

ಮಹೇಂದ್ರ—ಇಲ್ಲ, ಇದೇನೋ ಹೊಸ ಮಾತಾಗಿದೆ. ಕಾಶೀಂಬಜಾರನಲ್ಲಿ ಒಂದು ಪಾದರಿಯು ಸಂಗಡ ನಾನು ಮಾತುನಾಡಿದೆ. ಅವನು ಇಂಥಾ ಮಾತುಗಳನ್ನೇ ಹೇಳಿದನು. ಅಂದರೆ ಈಶ್ವರನು ಪ್ರೇಮಮಯನು. ನೀನು ಏಸುಕ್ರಿಸ್ತನನ್ನು ಪ್ರೀತಿಸು ಎಂದನು. ಇದೂ ಅಂಥಾ ಮಾತಾಗಿದೆ.

ಸತ್ಯಾನಂದ—ನಮಗೆ ನಮ್ಮ ಹದಿನಾಲ್ಕು ತಲೆಯಾಂತರದಿಂದ ಬಂದ ಮಾತು, ಅಂಥಾದ್ದನ್ನು ನಿನಗೆ ಹೇಳುತ್ತೇನೆ. ಈಶ್ವರನು ತ್ರಿಗುಣಾತ್ಮಕನು. ಅದನ್ನು ಬಲ್ಲೆಯಷ್ಟೆ?

ಮಹೇಂದ್ರ—ಹೌದು, ಸತ್ವ ರಜಃ ತಮಃ ಈ ಮೂರು ಗುಣಗಳು.

ಸತ್ಯಾನಂದ—ಒಳ್ಳೇದು, ಈ ಮೂರು ಗುಣಗಳಿಗೆ ಬೇರೆ ಬೇರೆ ಉಪಾಸನೆ, ಸತ್ವಗುಣದಿಂದ ಆ ಭಗವಂತನ ದಯಾದಾಕ್ಷಿಣ್ಯಾದಿಗಳ ಉತ್ಪತ್ತಿ, ಅದರ ಉಪಾಸನೆಯನ್ನು ಭಕ್ತಿಯಿಂದ ಮಾಡತಕ್ಕದ್ದು; ಚೈತನ್ಯ ಸಂಪ್ರದಾಯದವರು ಹಾಗೆ ಮಾಡುತ್ತಾರೆ. ರಜೋಗುಣದಿಂದ ಅವನ ಶಕ್ತಿಯ ಉತ್ಪತ್ತಿ, ಇದರ ಉಪಾಸನೆಯು ಯುದ್ಧದಿಂದಾಗಬೇಕು, ದೇವದ್ವೇಷಿಗಳ ನಿಧನದಿಂದಾಗಬೇಕು—ನಾವದನ್ನು ಮಾಡುತ್ತೇವೆ. ತಮೋಗುಣದಿಂದ ಭಗವಂತನು ಶರೀರಿಯಾಗುತ್ತಾನೆ. ಚತುರ್ಭುಜಾದಿ ರೂಪಗಳನ್ನು ಇಚ್ಛಾಕ್ರಮದಲ್ಲಿ ಧಾರಣೆಮಾಡುತ್ತಾನೆ. ಸ್ರಕ್ ಚಂದನಾದಿ ಉಪಹಾರಗಳಿಂದ ಈ ಗುಣದ ಪೂಜೆಯಾಗಬೇಕು.—ಸರ್ವಸಾಧಾರಣರು ಹಾಗೆ ಮಾಡುತ್ತಾರೆ. ಈಗ ಗೊತ್ತಾಯಿತೆ?

ಮಹೇಂದ್ರ—ಗೊತ್ತಾಯಿತು. ಸಂತಾನರು ಹಾಗಾದರೆ ಉಪಾಸಕ ಸಂಪ್ರದಾಯದವರಾಗಿ ಮಾತ್ರ ಇದ್ದಾರೆ?

ಸತ್ಯಾನಂದ—ಹೌದು. ನಮಗೆ ರಾಜ್ಯ ಬೇಡ—ಮುಸಲ್ಮಾನರು ಭಗವಂತನ ವಿದ್ವೇಷಿಗಳಾಗಿರುವಕಾರಣ ಅವರನ್ನು ಸವಂಶವಾಗಿ ನಿಪಾತಮಾಡುವ ಇಷ್ಟು ಒಂದೇ.

---

## ಇಪ್ಪತ್ತೆರಡನೆಯ ಪರಿಚ್ಛೇದ

ಸತ್ಯಾನಂದನು ಇದೆಲ್ಲ ಆದನಂತರ ಮಹೇಂದ್ರಸಿಹ್ಮನನ್ನು ಸಂಗಡ ಕರೆದುಕೊಂಡು ಮಠದಲ್ಲಿ ಆ ಅಪೂರ್ವವಾದ ಶೋಭಾಮಯವಾದ ಅದ್ಭುತವಾದ ಚತುರ್ಭುಜಮೂರ್ತಿಯು ನೆಲಗೊಂಡಿದ್ದ ದೇವಾಲಯದೊಳಗೆ ಪ್ರವೇಶ

ಮಾಡಿದನು. ಆಗಲ್ಲಿ ಅಪೂರ್ವವಾದ ಶೋಭಾಕಾಂತಿ—ರಜತ ಸ್ವರ್ಣರತ್ನಗಳಿಂದಲಂಕೃತವಾದ ಬಹುವಿಧ ದೀಪಗಳು ಉರಿಯುತಲಿದ್ದವು. ರಾಶಿರಾಶಿ ಪುಷ್ಪವು ಸ್ತೂಪಾಕಾರವಾಗಿ ಪ್ರಕಾಶಿಸುತ್ತ ಮಂದಿರವು ಆಮೋದಿತವಾಗಿತ್ತು. ಮಂದಿರದಲ್ಲಿ ಒಬ್ಬನು ಕುಳಿತುಕೊಂಡು ಮೆಲ್ಲಮೆಲ್ಲಗೆ ಹರೇಮುರಾರೆ ಎಂದು ಹೇಳುತಲಿದ್ದನು. ಸತ್ಯಾನಂದನು ಮಂದಿರದೊಳಗೆ ಪ್ರವೇಶಮಾಡುತ್ತಲೇ ಆ ಮನುಷ್ಯನು ಎದ್ದು ಪ್ರಣಾಮವನ್ನು ಮಾಡಿದನು. ಬ್ರಹ್ಮಚಾರಿಯು, ನೀನು ದೀಕ್ಷಿತನಾಗುತ್ತೀಯಾ? ಎಂದನು.

ಆ ಮನುಷ್ಯ—ನನಗೆ ದಯಪಾಲಿಸಬೇಕು.

ಆಗ ಅವನನ್ನೂ ಮಹೇಂದ್ರನನ್ನೂ ಸಂಬೋಧಿಸಿ ಸತ್ಯಾನಂದನು, ನೀವಿಬ್ಬರೂ ಯಥಾವಿಧಿಯಾಗಿ ಸ್ನಾತರಾಗಿ ಸಂಯತರಾಗಿ ಅನಶನರಾಗಿದ್ದೀರಷ್ಟೆ? ಎಂದು ಹೇಳಿದನು.

ಉತ್ತರ—ಆಗಿದ್ದೇವೆ.

ಸತ್ಯಾನಂದ—ನೀವಿಬ್ಬರೂ ಈ ಭಗವತ್ಸಾಕ್ಷಾತ್ತಾಗಿ ಸಂತಾನ ಧರ್ಮದ ಸಕಲ ನಿಯಮಗಳನ್ನು ಪಾಲನಮಾಡುವೆವೆಂದು ಪ್ರತಿಜ್ಞೆಯನ್ನು ಮಾಡಬಲ್ಲಿರಾ?

ಇಬ್ಬರು—ಮಾಡುವೆವು.

ಸತ್ಯಾನಂದ—ಎಷ್ಟು ದಿನದವರೆಗೆ ಮಾತೆಯ ಉದ್ಧಾರವಾಗುವದಿಲ್ಲವೋ ಅದುವರೆಗೆ ಗೃಹಧರ್ಮವನ್ನು ಪರಿತ್ಯಾಗಮಾಡುವಿರಾ?

ಇಬ್ಬರು—ಮಾಡುವೆವು.

ಸತ್ಯಾನಂದ—ತಾಯಿತಂದೆಗಳನ್ನು ತ್ಯಾಗಮಾಡುವಿರಾ?

ಉಭಯರು—ಮಾಡುವೆವು.

ಸತ್ಯಾನಂದ—ಭ್ರಾತಾಭಗಿನೀ?

ಉಭಯರು—ತ್ಯಾಗಮಾಡುವೆವು.

ಸತ್ಯಾನಂದ—ದಾರಾ ಸುತ?

ಉಭಯರು—ತ್ಯಾಗಮಾಡುವೆವು.

ಸತ್ಯಾನಂದ—ಆತ್ಮೀಯ ಸ್ವಜನರು? ದಾಸ ದಾಸಿಗಳು?

ಉಭಯರು—ಎಲ್ಲರನ್ನೂ ಬಿಟ್ಟೆವು.

ಸತ್ಯಾನಂದ—ಧನ, ಸಂಪತ್ತು, ಭೋಗ?

ಉಭಯರು—ಸಕಲವೂ ಪರಿತ್ಯಾಜ್ಯವಾಯಿತು!

ಸತ್ಯಾನಂದ—ಇಂದ್ರಿಯಗಳನ್ನು ಜಯಿಸುವಿರಾ? ಹೆಂಗಸರ ಜತೆಯಲ್ಲಿ ಯಾವಾಗಲೂ ಏಕಾಸನದಲ್ಲಿ ಕುಳಿತುಕೊಳ್ಳುವದಿಲ್ಲವೆ?

ಉಭಯರು—ಕುಳಿತುಕೊಳ್ಳುವದಿಲ್ಲ. ಇಂದ್ರಿಯವನ್ನು ಜಯಿಸುವೆವು.

ಸತ್ಯಾನಂದ—ಭಗವತ್ಸಾಕ್ಷಾತ್ಕಾರವಾಗಿ, ಸ್ವಂತಕ್ಕಾಗಿಯಾಗಲಿ ಅಥವಾ

ಸ್ವಜನರಿಗೋಸ್ಕರವಾಗಲಿ ಅರ್ಥೋಪಾರ್ಜನೆಯಂ ಮಾಡುವದಿಲ್ಲವೆಂದು ಪ್ರತಿಜ್ಞೆಯನ್ನು ಮಾಡುವಿರಾ? ಏನು ಉಪಾರ್ಜನೆಯಂ ಮಾಡುವಿರೋ ಅದನ್ನು ವೈಷ್ಣವ ಧನಾಗಾರಕ್ಕೆ ಕೊಡುವೆವೆಂದು ಪ್ರತಿಜ್ಞೆಯಂ ಗೈಯುವಿರಾ?

ಉಭಯರು—ಕೊಡುವೆವು.

ಸತ್ಯಾನಂದ—ಸನಾತನ ಧರ್ಮಕ್ಕೋಸ್ಕರ ಸ್ವಂತವಾಗಿ ಅಸ್ತ್ರಧಾರಣೆಯನ್ನು ಮಾಡಿ ಯುದ್ಧವನ್ನು ಮಾಡುವಿರಾ?

ಉಭಯರು—ಮಾಡುವೆವು.

ಸತ್ಯಾನಂದ—ರಣರಂಗದಲ್ಲಿ ಹಿಮ್ಮೆಟ್ಟುವದಿಲ್ಲವೆ?

ಉಭಯರು—ಇಲ್ಲ.

ಸತ್ಯಾನಂದ—ಪ್ರತಿಜ್ಞೆಯು ಭಂಗವಾದರೆ?

ಉಭಯರು—ಜ್ವಲಂತವಾದ ಚಿತಿಯಲ್ಲಿ ಪ್ರವೇಶಿಸುವೆವು. ಅಥವಾ ವಿಷವನ್ನು ತೆಗದುಕೊಂಡು ಪ್ರಾಣತ್ಯಾಗವನ್ನು ಮಾಡುವೆವು.

ಸತ್ಯಾನಂದ—ಇನ್ನೊಂದು ಮಾತು. ಜಾತಿ—ನೀವು ಯಾವ ಜಾತಿ? ಮಹೇಂದ್ರನು ಕಾಯಸ್ಥನೆಂದು ಗೊತ್ತಿದೆ. ಮತ್ತೊಬ್ಬ ಯಾವ ಜಾತಿ?

ಮತ್ತೊಬ್ಬ—ನಾನು ಬ್ರಾಹ್ಮಣ ಕುಮಾರ.

ಸತ್ಯಾನಂದ—ಒಳ್ಳೇದು. ನೀವು ಜಾತಿಯನ್ನು ಬಿಡುವಿರಾ? ಸಂತಾನರೆಲ್ಲ ಒಂದೇ ಜಾತಿ. ಈ ಮಹಾವ್ರತದಲ್ಲಿ ಬ್ರಾಹ್ಮಣ ಶೂದ್ರ ಭೇದವಿಲ್ಲ; ನೀವೇನು ಹೇಳುತ್ತೀರಿ?

ಉಭಯರು—ನಾವು ಆ ಭೇದವನ್ನು ನೋಡುವದಿಲ್ಲ. ನಾವೆಲ್ಲರೂ ಒಬ್ಬ ಮಾತೆಯ ಸಂತಾನರು.

ಸತ್ಯಾನಂದ—ಹಾಗಾದರೆ ನಿಮ್ಮನ್ನು ದೀಕ್ಷಿತರನ್ನಾಗಿ ಮಾಡುವೆನು. ನೀವು ಈಗ ಮಾಡಿರುವ ಪ್ರತಿಜ್ಞೆಗಳಲ್ಲಿ ಒಂದನ್ನಾದರೂ ಭಂಗಮಾಡಕೂಡದು. ಸಾಕ್ಷಾತ್ ಶ್ರೀ ಮುರಾರಿಯೇ ಇದಕ್ಕೆ ಸಾಕ್ಷಿ. ಯಾರು ರಾವಣ, ಕಂಸ, ಹಿರಣ್ಯಕಶಿಪು, ಜರಾಸಂಧ, ಶಿಶುಪಾಲ ಮುಂತಾದವರ ನಾಶಕ್ಕೆ ಹೇತುವಾಗಿದ್ದನೋ, ಯಾರು ಸರ್ವಾಂತರ್ಯಾಮಿಯಾಗಿದ್ದಾನೋ, ಸರ್ವಜಯಿಯೋ, ಸರ್ವಶಕ್ತಿಮಂತನೋ, ಸರ್ವನಿಯಂತನೋ, ಯಾರು ಇಂದ್ರನ ವಜ್ರದಲ್ಲಿಯೂ, ಮಾರ್ಜಾಲದ ನಖಗಳಲ್ಲಿಯೂ ಸಹ ತುಲ್ಯರೂಪವಾಗಿ ವಾಸಮಾಡುತ್ತಾನೋ, ಅಂಥವನು ಪ್ರತಿಜ್ಞಾಭಂಗಕಾರಿಯನ್ನು ವಿನಷ್ಟಮಾಡಿ ಅನಂತವಾದ ನರಕಕ್ಕೆ ಕಳುಹಿಸುವನು.

ಉಭಯರು—ತಥಾಸ್ತು.

ಸತ್ಯಾನಂದ—ನೀವು ಗಾನಮಾಡಿರಿ, 'ವಂದೇ ಮಾತರಂ' ಎಂದು. ಇಬ್ಬರೂ ಆ ನಿಭೃತವಾದ ಮಂದಿರದಲ್ಲಿ ಮಾತೃ ಸ್ತೋತ್ರವನ್ನು ಗಾನಮಾಡಿದರು. ಅನಂತರ ಬ್ರಹ್ಮಚಾರಿಯು ಅವರಿಗೆ ಯಥಾವಿಧಿಯಾಗಿ ದೀಕ್ಷೆಯನ್ನು ಕೊಟ್ಟನು.

## ಇಪ್ಪತ್ತುಮೂರನೆಯ ಪರಿಚ್ಛೇದ

ದೀಕ್ಷಾಸಮಾಪನಾಂತರದಲ್ಲಿ ಸತ್ಯಾನಂದನು ಮಹೇಂದ್ರನನ್ನು ಅತ್ಯಂತ ಏಕಾಂತವಾದ ಒಂದು ಸ್ಥಳಕ್ಕೆ ಕರೆದುಕೊಂಡುಹೋದನು. ಇಬ್ಬರೂ ಕುಳಿತುಕೊಂಡಮೇಲೆ ಸತ್ಯಾನಂದನು ಹೇಳತೊಡಗಿದನು. ನೋಡು, ಮಗುವೆ! ಈಗ ನೀನು ಈ ಮಹಾವ್ರತವನ್ನು ಗ್ರಹಣಮಾಡಿರುವದು ಭಗವಂತನು ನಮ್ಮ ಕಡೆಯಲ್ಲಿದ್ದಾನೆಂದು ತಿಳಿಯುತ್ತೇನೆ. ನಿನ್ನ ಮೂಲಕವಾಗಿ ಮಾತೆಯ ಮಹತ್ಕಾರ್ಯವು ಅನುಷ್ಠಿತವಾಗಬೇಕು. ನೀನು ಚೆನ್ನಾಗಿ ನನ್ನ ಆದೇಶವನ್ನು ಕಿವಿಕೊಟ್ಟು ಕೇಳು. ನೀನು ಭವಾನಂದ ಜೀವಾನಂದರೊಂದಿಗೆ ವನ ವನ ಅಲೆದು ಯುದ್ಧಮಾಡಬೇಕಾದ ಆವಶ್ಯಕವಿಲ್ಲ. ನೀನು ಪದಚಿಹ್ನಗ್ರಾಮಕ್ಕೆ ಹಿಂದಿರುಗಿ ಹೋಗು. ಸ್ವಂತ ಮನೆಯಲ್ಲಿದ್ದುಕೊಂಡು ಸನ್ಯಾಸ ಧರ್ಮವನ್ನು ಪಾಲನೆಮಾಡು.

ಮಹೇಂದ್ರನು ಕೇಳಿ ವಿಸ್ಮಿತನಾಗಿ ಸ್ವಲ್ಪ ವ್ಯಾಕುಲನಾದನು. ಏನುತ್ತರವನ್ನೂ ಹೇಳಲಿಲ್ಲ. ಬ್ರಹ್ಮಚಾರಿಯು ಮುಂದೆ ಹೇಳಲಾರಂಭಿಸಿದನು. “ ಈಗ ನಮಗೆ ಆಶ್ರಯವಿಲ್ಲ; ಪ್ರಬಲವಾದ ಸೇನೆಯು ಬಂದು ನಮ್ಮನ್ನು ಅವರೋಧಮಾಡಿದರೆ ನಾವು ಊಟದ ಸಾಮಗ್ರಿಯುಗಳನ್ನು ಸಂಗ್ರಹಮಾಡಿಕೊಂಡು ಬಾಗಿಲು ಹಾಕಿಕೊಂಡು ಹತ್ತುದಿನ ನಿರ್ವಿಘ್ನವಾಗಿರುವದಕ್ಕೆ ಅಂಥ ಸ್ಥಳವಿಲ್ಲ. ನಮಗೆ ಕೋಟೆ ಇಲ್ಲ. ನಿನಗೆ ದೊಡ್ಡ ಮಹಡಿಮನೆ ಇದೆ, ನಿನ್ನ ಗ್ರಾಮವು ನಿನ್ನ ಅಧಿಕಾರದಲ್ಲಿದೆ. ನನ್ನ ಇಷ್ಟವೇನೆಂದರೆ, ಅಲ್ಲಿಯೇ ಒಂದು ಕೋಟೆಯನ್ನು ಕಟ್ಟಬೇಕು. ಕೋಟೆ ಗೋಡೆಯಿಂದ ಪದಚಿಹ್ನಗ್ರಾಮವು ಸುತ್ತುವರಿಯಲ್ಪಟ್ಟು, ಅಲ್ಲಲ್ಲಿ ಬತೇರಿಯನ್ನು ಕಟ್ಟಿ ಅದರಮೇಲೆ ಫಿರಂಗಿಗಳನ್ನು ಏರಿಸಿದರೆ ಉತ್ತಮವಾದ ಕೋಟೆಯು ತಯಾರಾಗುತ್ತದೆ. ನೀನು ಮನೆಗೆ ಹೋಗಿ ಮನೆಯಲ್ಲಿಯೇ ವಾಸಮಾಡು. ಕ್ರಮಕ್ರಮವಾಗಿ ಅಲ್ಲಿ ಎರಡುಸಾವಿರ ಜನ ಸಂತಾನರು ಬಂದು ಸೇರುವರು. ಅವರುಗಳಿಂದ ಕೋಟೆ ಕೊತ್ತಲು ಮುಂತಾದವುಗಳನ್ನು ತಯಾರ್ಮಾಡಿಸುತ್ತಿರು. ಅಲ್ಲಿ ಒಂದು ಲೋಹನಿರ್ಮಿತವಾದ ಮನೆಯನ್ನು ಕಟ್ಟಿಸಬೇಕು. ಅದು ಸಂತಾನರ ಅರ್ಥಭಾಂಡಾರವಾಗುವುದು. ಭಂಗಾರದ ನಾಣ್ಯಗಳು ತುಂಬಿದ ಪೆಟ್ಟಿಗೆಗಳನ್ನು ಒಂದೊಂದಾಗಿ ಕಳುಹಿಸುವೆನು. ನೀನು ಆ ದ್ರವ್ಯದಿಂದ ಈ ಎಲ್ಲ ಕಾರ್ಯಗಳನ್ನು ನಿರ್ವಾಹ ಮಾಡಬೇಕು. ಮತ್ತು ನಾನು ನಾನಾದೇಶಗಳಿಂದ ಕೃತವಿದ್ಯರಾದ ಶಿಲ್ಪಿಗಳನ್ನೂ ಕಾರೆಗಾರರನ್ನೂ ಕರತರುವೆನು. ಶಿಲ್ಪಿಗಳು ಬರುತ್ತಲೇ ನೀನು ಪದಚಿಹ್ನಗ್ರಾಮದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿ ಅಲ್ಲಿ ಮದ್ದು, ಗುಂಡು, ಫಿರಂಗಿ, ಬಂದೂಕಗಳನ್ನು ತಯಾರ್ಮಾಡಿಸಬೇಕು! ಇದಕ್ಕೋಸ್ಕರ ನೀನು ಮನೆಗೆ ಹೋಗಿ ವಾಸವಾಗಿರಬೇಕೆಂದು ಹೇಳುತ್ತೇನೆಂದನು.

ಮಹೇಂದ್ರನು ಒಪ್ಪಿಕೊಂಡನು.

---

## ಇಪ್ಪತ್ತನಾಲ್ಕನೆಯ ಪರಿಚ್ಛೇದ

ಮಹೇಂದ್ರನು ಸತ್ಯಾನಂದನ ಪಾದಗಳಿಗೆರಗಿ ಅಪ್ಪಣೆಯನ್ನು ತೆಗದು ಕೊಂಡನು. ಅವನ ಜತೆಯಲ್ಲಿ ಮತ್ತೊಬ್ಬ ಶಿಷ್ಯನು ದೀಕ್ಷಿತನಾಗಿದ್ದನು. ಅವನೂ ಬಂದು ಸತ್ಯಾನಂದನಿಗೆ ಪ್ರಣಾಮವನ್ನು ಮಾಡಿದನು. ಸತ್ಯಾನಂದನು ಆಶೀರ್ವಾದವನ್ನು ಮಾಡಿ ಕೃಷ್ಣಾಜಿನದಮೇಲೆ ಕುಳಿತುಕೊಳ್ಳಲು ಅಪ್ಪಣೆಯನ್ನು ಕೊಟ್ಟನು. ಅನಂತರ ಬೇರೆ ಕ್ಷೇಮಲಾಭ ಮಾತುಗಳು ನಡೆದು, ಏನು ಕೃಷ್ಣ! ನಿನಗೆ ಸರಿಯಾದ ಭಕ್ತಿಯುಂಟೆ? ಎಂದು ಕೇಳಿದನು.

ಶಿಷ್ಯ—ಹೇಗೆ ಹೇಳಲಿ, ನಾವು ಯಾರನ್ನು ಭಕ್ತಿಯುಳ್ಳವನೆಂದು ಹೇಳುತ್ತೇವೋ ಅಂಥವನು ಶುದ್ಧ ಭಂಡನಾಗಿ ಆತ್ಮಪ್ರತಾರಣನಾಗಿರುವನು.

ಸತ್ಯಾನಂದನು ಸಂತೋಷಪಟ್ಟು, ಸರಿಯಾಗಿ ಹೇಳಿದೆ; ಭಕ್ತಿಯು ಹೇಗೆ ಹೆಚ್ಚಬೇಕೋ ಹಾಗೆ ಅನುಷ್ಠಾನವನ್ನು ಮಾಡು. ನಿನ್ನ ಪ್ರಯತ್ನವು ಸಫಲವಾಗಲೆಂದು ಆಶೀರ್ವದಿಸುವೆನು. ಏತಕ್ಕೆಂದರೆ, ನಿನಗೆ ಇನ್ನು ಚಿಕ್ಕ ವಯಸ್ಸು, ವತ್ಸ! ನಿನ್ನನ್ನು ಹೆಸರು ಏನು ಇಟ್ಟು ಕರೆಯಲಿ? ಅದನ್ನು ಕುರಿತು ನಾನು ಇದುವರೆಗೆ ಯೋಚಿಸಲಿಲ್ಲ.

ನೂತನ ಸಂತಾನ—ತಮ್ಮ ಮನಸ್ಸಿಗೆ ಯಾವದು ಅಭಿರುಚಿಯೋ ಆ ಹೆಸರನ್ನಿಡಬಹುದು. ನಾನು ವೈಷ್ಣವರ ದಾಸಾನುದಾಸನು.

ಸತ್ಯಾನಂದ—ನಿನ್ನ ನವೀನ ವಯಸ್ಸು ನೋಡಿ ನಿನಗೆ ನವೀನಾನಂದನೆಂದು ಹೆಸರಿಡಬೇಕೆಂದು ತೋರುತ್ತದೆ. ಆದ್ದರಿಂದ ನೀನು ಆ ಹೆಸರನ್ನು ಗ್ರಹಣ ಮಾಡು. ಆದರೆ ನಿನಗೆ ಮೊದಲು ಏನು ಹೆಸರು? ಹೇಳುವುದಕ್ಕೆ ಅಭ್ಯಂತರ ಏದ್ದರೂ ಹೇಳಬೇಕು. ನನಗೆ ಹೇಳಿದರೆ ಬೇರೆ ಕಿವಿಗೆ ಬೀಳುವದಿಲ್ಲ. ಸಂತಾನರ ಮರ್ಮವೇನೆಂದರೆ:—ಯಾವದೇ ಆಗಲಿ ಅದು ಅವಾಚ್ಯವಾಗಿದ್ದರೂ ಗುರುವಿನ ಸಮೀಪದಲ್ಲಿ ಹೇಳತಕ್ಕದ್ದು. ಹೇಳಿದರೆ ನಷ್ಟವೇನೂ ಇಲ್ಲ.

ಶಿಷ್ಯ—ನನ್ನ ಹೆಸರು ಶಾಂತಿರಾಮದೇವಶರ್ಮ.

ಸತ್ಯಾನಂದ—ನಿನ್ನ ಹೆಸರು ಶಾಂತಿಮಣಿ ಪಾಪಿಷ್ಠಳಲ್ಲವೆ?

ಹೀಗೆ ಹೇಳಿ ಸತ್ಯಾನಂದನು ನೇತಾಡುತಲಿದ್ದ ದಾಡಿಯನ್ನು ಹಿಡಿದೆಳದನು. ಅದು ಕಿತ್ತು ಬಂತು. ಆಮೇಲೆ ಸತ್ಯಾನಂದನು ಛೀ ತಾಯೆ! ನನ್ನಲ್ಲಿಯೂ ವಂಚನೆ, ನನಗೇನೇ ಈ ವಯಸ್ಸಿನಲ್ಲಿ ವಂಚಿಸುವದಾದರೆ ಇನ್ನೇನು? ದಾಡಿಯಿಟ್ಟುಕೊಂಡರೂ ಕಂಠಸ್ವರವೋ? ಕಣ್ಣಿನ ನೋಟವೋ? ಈ ಮುದುಕನ ಇದುರಿಗೆ ಮರೆಮಾಚುವುದಕ್ಕಾದೀತೆ? ನಾನು ಅಂಥ ಮುಠ್ಠಾಳನಾಗಿದ್ದರೆ ಈ ದೊಡ್ಡ ಕೆಲಸದಲ್ಲಿ ಕೈಹಾಕುತ್ತಿದ್ದೆನೆ? ಎಂದನು.

ಶಾಂತಿಯು ಕೆಟ್ಟಮೋರೆಹಾಕಿಕೊಂಡು ಎರಡು ಕಣ್ಣುಗಳನ್ನು ಮುಚ್ಚಿ

ಕೊಂಡು ಅಧೋವದನಳಾಗಿದ್ದಳು. ಉತ್ತರಕ್ಷಣದಲ್ಲಿಯೇ ಕೈತೆಗೆದು ವೃದ್ಧನ ಮೇಲೆ ವಿಲೋಲವಾದ ಕಟಾಕ್ಷವನ್ನು ಬೀರಿ, ಪ್ರಭುವೆ ! ಏನುತಾನೆ ದೋಷ ಮಾಡಿದೆನು. ಸ್ತ್ರೀಬಾಹುಗಳಲ್ಲಿ ಯಾವಾಗಲೂ ಬಲವಿಲ್ಲವೇನು ? ಎಂದಳು.

ಸತ್ಯಾನಂದ—ಗೋಷ್ಪದದಲ್ಲಿ ನೀರು ಇದ್ದಹಾಗೆ.

ಶಾಂತಿ—ಸಂತಾನರ ಬಾಹುವಿನ ಬಲವನ್ನು ತಾವು ಯಾವಾಗಲಾದರೂ ಪರೀಕ್ಷೆಮಾಡಿರೋಣವಾಗಿದೆಯೆ ?

ಸತ್ಯಾನಂದ—ಪರೀಕ್ಷೆಮಾಡಿದ್ದೇನೆ.

ಹೀಗೆ ಹೇಳಿ ಸತ್ಯಾನಂದನು ಒಂದು ಉಕ್ಕಿನ ಧನುಸ್ಸನ್ನೂ, ಒಂದು ಕಬ್ಬಿಣದ ತಂತಿಯನ್ನೂ ತಂದುಕೊಟ್ಟು ಯಾರು ಈ ಉಕ್ಕಿನ ಧನುಸ್ಸಿಗೆ ಆ ಕಬ್ಬಿಣದ ತಂತಿ ಯನ್ನು ಕಟ್ಟಿ ಬಿಲ್ಲನ್ನು ತಂತಿಯ ಅಳತೆಗೆ ಸರಿಯಾಗಿ ಬೊಗ್ಗಿಸಿ ಹೆದೆಗೊಳಿಸು ವರೋ ಅಂಥವನು ಬಲಿಷ್ಠನೆಂದು ಹೇಳಿದನು.

ಶಾಂತಿಯು ಬಿಲ್ಲನ್ನೂ ತಂತಿಯನ್ನೂ ಕೈಲಿ ತೆಗೆದುಕೊಂಡು ಚೆನ್ನಾಗಿ ನೋಡಿ ಸಂತಾನರೆಲ್ಲರೂ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆಯೆ ? ಎಂದಳು.

ಸತ್ಯಾನಂದ—ಇಲ್ಲ, ಇದರಿಂದ ಅವರಿಗೆ ಇರುವ ಬಲವು ಎಷ್ಟರಮಟ್ಟಿನ ದೆಂಬುದನ್ನು ಗೊತ್ತುಮಾಡಿಕೊಂಡಿದ್ದೇನೆ.

ಶಾಂತಿ—ಹಾಗಾದರೆ ಯಾರೂ ಈ ಪರೀಕ್ಷೆಯಲ್ಲಿ ಉತ್ತೀರ್ಣರಾಗಿಲ್ಲವೆ ?

ಸತ್ಯಾನಂದ—ಇಬ್ಬರು ಮಾತ್ರ.

ಶಾಂತಿ—ಯಾರ್‍ಯಾರೆಂದು ಕೇಳಬಹುದೆ ?

ಸತ್ಯಾನಂದ—ಹೇಳುವುದಕ್ಕೆ ನಿಷೇಧವೇನೂ ಇಲ್ಲ, ನಾನೊಬ್ಬನು.

ಶಾಂತಿ—ಎರಡನೇಯವರು ?

ಸತ್ಯಾನಂದ—ಜೀವಾನಂದ.

ಶಾಂತಿಯು ಬಿಲ್ಲನ್ನು ತೆಗದುಕೊಂಡಳು. ತಂತಿಯನ್ನು ತೆಗದುಕೊಂಡಳು. ಸ್ವಲ್ಪವೂ ಶ್ರಮವಿಲ್ಲದೆ ಬಿಲ್ಲನ್ನು ಬೊಗ್ಗಿಸಿ ಒಂದು ನಿಮಿಷಮಾತ್ರದಲ್ಲಿ ಹೆದೆಗೊಳಿಸಿ ಸತ್ಯಾನಂದನ ಕಾಲಿನ ಹತ್ತಿರ ಬಿಸಾಟಳು.

ಸತ್ಯಾನಂದನು ಆಶ್ಚರ್ಯಪಟ್ಟು ಭಯಪಟ್ಟು ಸ್ತಂಭಿತನಾಗಿದ್ದನು. ಕೆಲ ನಿಮಿಷಗಳಮೇಲೆ ಇದೇನು, ನೀನು ದೇವಿಯೇ, ಇಲ್ಲ ಮಾನವಿಯೇ ? ಎಂದನು.

ಶಾಂತಿಯು ಕೈಮುಗಿದುಕೊಂಡು, ನಾನು ಸಾಮಾನ್ಯಳಾದ ಮಾನವಿ. ಆದರೆ ನಾನು ಬ್ರಹ್ಮಚಾರಿ ಎಂದು ಹೇಳಿದಳು.

ಸತ್ಯಾನಂದ—ಆದರೆತಾನೇ ಏನು ? ನೀನೇನು ಬಾಲವಿಧವೆಯೇ ? ಹಾಗಾ ದರೂ ಇಷ್ಟು ಬಲವೆಲ್ಲೀದು ? ಅವಳು ಏಕಾಹಾರಿ ?

ಶಾಂತಿ—ನಾನು ಸಧವೆ.

ಸತ್ಯಾನಂದ—ನಿನ್ನ ಸ್ವಾಮಿಯು ನಿರುದ್ದಿಷ್ಟನೊ? ಯಾರು, ಹೇಳ ಬಹುದೊ?

ಶಾಂತಿ—ಉದ್ದಿಷ್ಟ—ಅವನ ಉದ್ದೇಶವಾಗಿಯೇ ಬಂದೆ.

ಇದ್ದಕ್ಕಿದ್ದಹಾಗೆ ಮೇಘವನ್ನು ಭೇದಿಸಿಕೊಂಡು ಹೊರಟುಬಂದ ಬಿಸಿಲಿನ ಹಾಗೆ ಸ್ಮೃತಿಯು ಸತ್ಯಾನಂದನ ಚಿತ್ತವನ್ನು ಬೆಳಕುಮಾಡಿತು. ಆಗವನು, ಜ್ಞಾಪಕಬಂತು, ಜೀವಾನಂದನ ಹೆಂಡತಿಯ ಹೆಸರು ಶಾಂತಿ, ನೀನು ಜೀವಾ ನಂದನ ಬ್ರಾಹ್ಮಣಿಯೆ? ಎಂದನು.

ಈ ಸಲ ಜಟಾಭಾರದಿಂದ ನವೀನಾನಂದನ ಮುಖವು ಮರೆಮಾಡಲ್ಪಟ್ಟಿತು. ಕೆಲ ಆನೆಗಳ ಸೊಂಡಿಲುಗಳು ರಾಜೀವರಾಜಿಯಮೇಲೆ ಬಿದ್ದಿವೆಯೋ ಎಂಬ ಹಾಗೆ ತೋರಿತು. ಸತ್ಯಾನಂದನು, ಏಕೆ ಈ ಪಾಪಾಚರಣೆಯನ್ನು ಮಾಡಲು ಬಂದೆ? ಎಂದು ಕೇಳಿದನು.

ಶಾಂತಿಯು ಕೂಡಲೆ ಜಟಾಭಾರವನ್ನು ಹಿಂದಕ್ಕೆ ಬೆನ್ನಿನಮೇಲೆ ಹಾಕಿ ಕೊಂಡು ಮುಖವನ್ನೆತ್ತಿಕೊಂಡು,

"ಪಾಪಾಚರಣೆ ಯಾವದು, ಪ್ರಭುವೆ? ಪತ್ನಿಯು ಪತಿಯನ್ನು ಅನುಸರಣ ಮಾಡುವುದು ಪಾಪಾಚರಣೆಯೆ? ಸಂತಾನರ ಧರ್ಮಶಾಸ್ತ್ರದಲ್ಲಿ ಇದನ್ನು ಪಾಪಾಚರಣೆಯೆಂದು ಹೇಳಿದ್ದರೆ, ಸಂತಾನರ ಧರ್ಮವು ಅಧರ್ಮವಾದುದು. ನಾನು ನನ್ನ ಸ್ವಾಮಿಯ ಸಹಧರ್ಮಿಣಿ, ಅವರು ಧರ್ಮಾಚರಣೆಯಲ್ಲಿ ಪ್ರವೃತ್ತ ರಾಗಿದ್ದಾರೆ, ನಾನವರ ಸಂಗಡ ಧರ್ಮಾಚರಣೆಯನ್ನು ಮಾಡುವುದಕ್ಕೆ ಬಂದಿದ್ದೇನೆ.

ಶಾಂತಿಯ ತೇಜಸ್ವಿನಿಯಾದ ವಾಣಿಯನ್ನು ಕೇಳಿ ಅವಳ ಉನ್ನತವಾದ ಗ್ರೀವವನ್ನೂ ಸ್ಫೀತವಾದ ವಕ್ಷಸ್ಥಳವನ್ನೂ ಕಂಪಿಸುತಲಿದ್ದ ಅಧರವನ್ನೂ ಉಜ್ವಲ ವಾದ ಮತ್ತು ಅಶ್ರುಪ್ಲುತವಾದ ನೇತ್ರಗಳನ್ನೂ ನೋಡಿ ಸತ್ಯಾನಂದನು ಪ್ರೀತ ನಾದನು, ಪುನಃ—

ಸತ್ಯಾನಂದ—ನೀನು ಸಾಧ್ವೀ—ಆದರೆ ನೋಡೆ, ತಾಯಿ!—ಪತ್ನಿಯು ಕೇವಲ ಗೃಹಧರ್ಮದಲ್ಲಿ ಸಹಧರ್ಮಿಣಿ—ವೀರಧರ್ಮದಲ್ಲಿ ರಮಣಿಯು ಎಲ್ಲಿ ಬಂದಾಳು?

ಶಾಂತಿ—ಯಾವ ಮಹಾವೀರನು ಅಪತ್ನೀಕನಾಗಿ ವೀರನಾಗಿದ್ದಾನೆ? ರಾಮನು ಸೀತೆಯಿಲ್ಲದಿದ್ದರೆ ವೀರನಾಗುತಲಿದ್ದನೆ? ಅರ್ಜುನನಿಗೆ ಎಷ್ಟು ಮದುವೆಗಳಾಗಿವೆ, ಎಣಿಸಿ ಹೇಳೋಣವಾಗಲಿ? ಭೀಮನಿಗೆ ಎಷ್ಟು ಬಲವೋ ಅಷ್ಟು ಹೆಂಡಂದಿರು. ಎಷ್ಟೆಂದು ಹೇಳಲಿ? ತಮಗೆ ಹೇಳಿ ಆಗುವುದುತಾನೇ ಏನು?

ಸತ್ಯಾನಂದ—ನೀನು ಹೇಳುವುದು ನಿಜ; ಆದರೆ ರಣಕ್ಷೇತ್ರದಲ್ಲಿ ಯಾವ ವೀರನು ಹೆಂಡತಿಯನ್ನು ಕರೆತಂದನು?

ಶಾಂತಿ—ಅರ್ಜುನನು ಯಾದವೀ ಸೇನೆಯೊಡನೆ ಅಂತರಿಕ್ಷದಿಂದ ಯುದ್ಧ ಮಾಡುತಲಿದ್ದಾಗ ಅವನ ರಥವನ್ನು ನಡೆಸಿದವರ್ಯಾರು ? ದ್ರೌಪದಿಯು ಜತೆಯಲ್ಲಿ ಇಲ್ಲದಿದ್ದರೆ ಪಾಂಡವರು ಕುರುಕ್ಷೇತ್ರ ಯುದ್ಧದಲ್ಲಿ ಕದನಮಾಡುತಲಿದ್ದರೆ?

ಸತ್ಯಾನಂದ—ಹಾಗಿರಬಹುದು. ಸಾಮಾನ್ಯ ಮನುಷ್ಯರ ಮನಸ್ಸು ಸ್ತ್ರೀಯರಲ್ಲಿ ಆಸಕ್ತವಾಗಿ ಕಾರ್ಯದಲ್ಲಿ ವಿರತವಾಗುತ್ತದೆ. ಅದುಕಾರಣ ಸಂತಾನರ ವ್ರತದಲ್ಲಿ ಹೆಂಗಸರ ಜತೆಯಲ್ಲಿ ಏಕಾಸನದಲ್ಲಿ ಕುಳಿತುಕೊಳ್ಳಬಾರದೆಂಬುವುದು ಒಂದಾಗಿದೆ. ಜೀವಾನಂದನು ನನ್ನ ಬಲಗೈಯಾಗಿದ್ದಾನೆ. ನೀನು ನನ್ನ ಬಲದ ಕೈಯನ್ನು ಮುರಿಯುವುದಕ್ಕೆ ಬಂದೆ.

ಶಾಂತಿ—ನಾನು ತಮ್ಮ ಬಲದ ಭುಜದಲ್ಲಿ ಬಲವನ್ನು ಹೆಚ್ಚಿಸುವುದಕ್ಕೆ ಬಂದಿದ್ದೇನೆ. ನಾನು ಬ್ರಹ್ಮಚಾರಿಣಿ, ಪ್ರಭುವಿನ ಸಂಗಡ ಬ್ರಹ್ಮಚಾರಿಣಿ ಯಾಗಿಯೇ ಇರುವೆನು. ನಾನು ಕೇವಲ ಧರ್ಮಾಚರಣೆಗಾಗಿ ಬಂದಿದ್ದೇನೆ; ಸ್ವಾಮಿ ಸಂದರ್ಶನಕ್ಕೆ ಅಲ್ಲ. ವಿರಹಯಂತ್ರಣೆಯಲ್ಲಿ ನಾನು ಕಾತರಳಲ್ಲ. ಸ್ವಾಮಿಯ ಧರ್ಮಚ್ಯುತಿಯಲ್ಲಿ ಕಾತರಳು. ಮಳೆಯಿಲ್ಲದೆ ಮಹಾ ದೊಡ್ಡದಾದ ಮರವೂ ಒಣಗಿಹೋಗುತ್ತದೆ. ನಾನು ಮಹಾಮಹೀರುಹದ ತಲದಲ್ಲಿ ವೃಷ್ಟಿಮಾಡು ತ್ತೇನೆ. ತಾವು ನಿಶ್ಚಿಂತರಾಗಿರೋಣವಾಗಲಿ.

ಸತ್ಯಾನಂದ—ಅದೇನು ? ಮಹಾಮಹೀರುಹಕ್ಕೂ ಅನಾವೃಷ್ಟಿಯ ಭಯ ವುಂಟೆ? ಜೀವಾನಂದನಿಗೆ ಧರ್ಮಚ್ಯುತಿಯೆ ?

ಶಾಂತಿ—ಆಗಿರುವುದನ್ನ ಆಗದೆ ಮಾಡಬಲ್ಲೆನೆ?

ಸತ್ಯಾನಂದ—ಏನಾಗಿದೆ? ಜೀವಾನಂದನಿಗೆ ಧರ್ಮಚ್ಯುತಿಯುಂಟಾ ಗಿದೆಯೇ? ಹಿಮಾಲಯವು ಹಳ್ಳದಲ್ಲಿ ಮುಳುಗಿಹೋಯಿತೆ ?

ಶಾಂತಿ—ಕೇವಲ ಸಹಧರ್ಮಿಣಿಯ ಸಹಾಯದ ಅಭಾವದಿಂದ.

ಸತ್ಯಾನಂದ—ಏನು ಹೇಳುತ್ತಿ ? ನನಗೆ ಸ್ವಲ್ಪವೂ ಗೊತ್ತಾಗುವುದಿಲ್ಲ.

ಶಾಂತಿ—ನೆನ್ನೆ ಮಧ್ಯಾಹ್ನದಲ್ಲಿ ಅವರು ಬಂದು ನೋಡಿದರು; ವ್ರತವು ಭಂಗವಾಗಿಹೋಯಿತು.

ಇದನ್ನು ಕೇಳಿ ಫಲಿತಕೇಶಿಯಾದಾ ಬ್ರಹ್ಮಚಾರಿಯು ಎರಡು ಕೈಗ ಳಿಂದಲೂ ಕಣ್ಣುಗಳನ್ನು ಮುಚ್ಚಿಕೊಂಡು ಅತ್ತನು. ಸತ್ಯಾನಂದನು ಅತ್ತಿದ್ದನ್ನು ಯಾರೂ ಯಾವಾಗಲೂ ನೋಡಿರಲಿಲ್ಲ.

ಶಾಂತಿ—ಪ್ರಭುವೆ ! ತಮ್ಮ ಕಣ್ಣುಗಳಲ್ಲಿ ನೀರು ಏತಕ್ಕೆ ?

ಸತ್ಯಾನಂದ—ಪ್ರಾಯಶ್ಚಿತ್ತವೇನು. ತಿಳಿದಿದ್ದೀಯಾ?

ಶಾಂತಿ—ತಿಳಿದಿದ್ದೇನೆ, ಆತ್ಮಹತ್ಯೆ.

ಸತ್ಯಾನಂದ—ಅದಕ್ಕಾಗಿ ಅಳುತ್ತೇನೆ. ಜೀವಾನಂದನ ಶೋಕಕ್ಕಾಗಿ ಅಳುತ್ತೇನೆ.

ಶಾಂತಿ—ನಾನೂ ಅದಕ್ಕಾಗಿಯೇ ಬಂದಿದ್ದೇನೆ. ಜೀವಾನಂದನ ಪ್ರಾಣವು ಹೋಗದಿರುವಹಾಗೆ ನೋಡಿಕೊಳ್ಳಲು ಬಂದಿದ್ದೇನೆ.

ಸತ್ಯಾನಂದ—ವತ್ಸೆ! ನಿನ್ನ ಅಭೀಷ್ಟವು ಸಿದ್ಧಿಯಾಗಲಿ, ನಿನ್ನ ಅಪರಾಧ ಗಳನೆಲ್ಲ ಮನ್ನಿಸಿದ್ದೇನೆ. ನೀನು ಸಂತಾನರಲ್ಲಿ ಪರಿಗಣಿತಳಾಗಿರುತ್ತಿ. ನಿನ್ನ ಮರ್ಮವನ್ನು ತಿಳಿಯುದವರೆಗೂ ನಿನ್ನನ್ನು ತಿರಸ್ಕರಿಸಿದೆನು. ನನಗೇನು ಗೊತ್ತು? ನಾನು ವನಚಾರಿಯಾದ ಬ್ರಹ್ಮಚಾರಿ ಹೊರತು ಬೇರೆ ಅಲ್ಲ. ನಾನು ಹೆಂಗಸರ ಹಾಗೆ ಆಗುವೆನೆ? ಹೇಗೆ ಆದೀತು? ಜೀವಾನಂದನು ಸಾಯಬೇಕು. ಬದು ಕಿಸುವುದಕ್ಕೆ ನನ್ನಿಂದಲೂ ಆಗದು. ನಿನ್ನಿಂದಲೂ ಆಗದು. ಜೀವಾನಂದನು ನನ್ನ ಪ್ರಾಣಾಧಿಕ ಪ್ರಿಯನು, ಈಗ ನೋಡು, ಬಲದಕೈ ಹೋಗಿಬಿಟ್ಟರೆ ದೇವರ ಕಾರ್ಯವು ನಡೆಯಲಾರದು. ಎಷ್ಟುದಿನ ಸಾಧ್ಯವೋ ಅಷ್ಟುದಿನ ಪರ್ಯಂತ ಜೀವಾ ನಂದನನ್ನು ಪೃಥ್ವಿಯಲ್ಲಿಡಲು ಪ್ರಯತ್ನಪಡುವೆನು. ನೀನು ಜತೆಯಲ್ಲಿದ್ದು ನಿನ್ನ ಬ್ರಹ್ಮಚರ್ಯವನ್ನು ಪಾಲನೆಮಾಡು. ನೀನು ನನ್ನ ಪ್ರಿಯಶಿಷ್ಯಳಾದೆ. ಸಂತಾನರೆಂದರೆ ನನಗೆ ಆನಂದ. ಆದ್ದರಿಂದ ಸಂತಾನರಿಗೆಲ್ಲ ಆನಂದ ಎಂದು ಹೆಸರಿಟ್ಟಿದೆ. ಇದು ಆನಂದಮಠ. ನೀನು ಆನಂದ ಎಂಬ ಹೆಸರನ್ನು ಧಾರಣೆ ಮಾಡು. ನಿನ್ನ ಹೆಸರು ನವೀನಾನಂದನೆಂದಿರಲಿ.

ಶಾಂತಿ—ನಾನು ಆನಂದಮಠದಲ್ಲಿರಬಹುದೆ?

ಸತ್ಯಾನಂದ—ಈ ದಿನವಿರು, ಇನ್ನುಮೇಲೆ ಮತ್ತೆಲ್ಲಿ ಹೋಗುತ್ತಿ?

ಶಾಂತಿ—ಆಮೇಲೆ?

ಸತ್ಯಾನಂದ—ತಾಯಿ ಭವಾನಿಯಹಾಗೆ ನಿನ್ನ ಲಲಾಟದಲ್ಲಿಯೂ ಅಗ್ನಿಯು ಇದೆ. ಸಂತಾನ ಸಂಪ್ರದಾಯದವರನ್ನೆಲ್ಲ ಸುಟ್ಟುಬಿಡುವೆಯೊ? ಎಂದು ಹೇಳಿ, ಶಾಂತಿಗೆ ಆಶೀರ್ವಾದವನ್ನು ಮಾಡಿ ಅಪ್ಪಣೆಯನ್ನು ಕೊಟ್ಟನು.

ಶಾಂತಿಯು ಮನಸ್ಸಿನಲ್ಲಿ, ಎಲೈ ಮುದಿಗೊಡ್ಡೆ! ನನ್ನ ಮುಖದಲ್ಲಿಯೆ, ಬೆಂಕಿ? ನಾನು ಸುಟ್ಟುಹೋರೆಯುವಳಲ್ಲ. ನಿನ್ನನ್ನ ಹಡದ ತಾಯಿ ಸುಟ್ಟು ಹೋರೆಯುವಳು! ಎಂದಂದುಕೊಂಡಿರಬಹುದು. ವಸ್ತುತಃ ಸತ್ಯಾನಂದನಿಗೆ ಆ ಅಭಿಪ್ರಾಯವಿಲ್ಲ. ನೇತ್ರಗಳ ವಿದ್ಯುತ್ಕಟಾಕ್ಷವನ್ನು ಕುರಿತು ಹೇಳಿದ ಮಾತಾ ಗಿದೆ. ಆದರೆ ಅದನ್ನು ಮುದುಕನು ಯುವತಿಗೆ ಬಿಚ್ಚಿ ಹೇಳಬಹುದಾದ ಮಾತೆ?

---

## ಇಪ್ಪತ್ತೈದನೆಯ ಪರಿಚ್ಛೇದ

ಶಾಂತಿಯು ಆ ರಾತ್ರಿಯಲ್ಲಿ ಮಠದಲ್ಲಿರುವದಕ್ಕೆ ಅಪ್ಪಣೆಯನ್ನು ಪಡೆದಿದ್ದಳಾದಕಾರಣ ಮಠದಲ್ಲೊಂದು ಕೊಠಡಿಯನ್ನು ನೋಡಿಕೊಳ್ಳುವದಕ್ಕೆ ಹೋದಳು. ಅನೇಕ ಕೊಠಡಿಗಳು ಬರಿದಾಗಿದ್ದವು. ಗೋವರ್ಧನ

ನೆಂಬ ಒಬ್ಬ ಪರಿಚಾರಕನಿದ್ದನು. ಅವನೂ ಒಬ್ಬ ಸಂತಾನನೇ, ಆದರೆ ಮೇಲಿನ ತರಗತಿಗೆ ಸೇರಿದವನಲ್ಲ. ಅವನು ಒಂದು ದೀಪವನ್ನು ಕೈಲಿ ಹಿಡಿದು ಕೊಂಡು ಕೊಠಡಿಗಳನ್ನು ತೋರಿಸುತ್ತ ಬಂದನು. ಯಾವ ಕೊಠಡಿಯನ್ನೂ ಶಾಂತಿಯು ಒಪ್ಪಲಿಲ್ಲ. ಹತಾಶನಾಗಿ ಗೋವರ್ಧನನು ಶಾಂತಿಯನ್ನು ಸತ್ಯಾನಂದನ ಬಳಿಗೆ ಕರೆದುಕೊಂಡು ಹೋಗುವದಕ್ಕೆ ಹೊರಟನು. ಆಗ ಶಾಂತಿಯು ಅಯ್ಯಾ ಸಂತಾನಣ್ಣ! ಇತ್ತಕಡೆ ಕೆಲಕೊಠಡಿಗಳಿವೆ, ಅವುಗಳನ್ನು ತೋರಿಸಲಿಲ್ಲವೆಂದಳು.

ಗೋವರ್ಧನ—ಆ ಕೊಠಡಿಗಳು ಸೊಗಸಾದವು, ಹೌದು, ಆದರೆ ಅವು ಗಳನ್ನು ನೋಡಕೂಡದು.

ಶಾಂತಿ—ಯಾರು ಇದ್ದಾರೆ?

ಗೋವರ್ಧನ—ದೊಡ್ಡದೊಡ್ಡ ಸೇನಾಪತಿಗಳು ಇದ್ದಾರೆ.

ಶಾಂತಿ—ದೊಡ್ಡದೊಡ್ಡ ಸೇನಾಪತಿಗಳು ಯಾರು?

ಗೋವರ್ಧನ—ಭವಾನಂದ, ಜೀವಾನಂದ, ಧೀರಾನಂದ, ಜ್ಞಾನಾನಂದ; ಆನಂದಮಠವು ಆನಂದಮಯವಾಗಿದೆ.

ಶಾಂತಿ—ಅವುಗಳನ್ನೂ ನೋಡಿಬಿಡೋಣ.

ಗೋವರ್ಧನನು ಶಾಂತಿಗೆ ಮೊದಲು ಧೀರಾನಂದನ ಮನೆಯನ್ನು ತೋರಿ ಸಿದನು. ಧೀರಾನಂದನು ಮಹಾಭಾರತದಲ್ಲಿ ದ್ರೋಣಪರ್ವವನ್ನು ಓದುತ ಲಿದ್ದನು. ಅಭಿಮನ್ಯನು ಯಾವಪ್ರಕಾರವಾಗಿ ಸಪ್ತರಥಿಗಳೊಡನೆ ಯುದ್ಧ ಮಾಡುತಲಿದ್ದನೋ, ಆ ಪ್ರಕರಣದಲ್ಲಿ ಮನಸ್ಸಿಟ್ಟವನಾಗಿದ್ದುದರಿಂದ, ಧೀರಾ ನಂದನು ಮಾತನಾಡಲಿಲ್ಲ. ಶಾಂತಿಯು ಮಾತು ಖರ್ಚುಮಾಡದೆ ಅಲ್ಲಿಂದ ಮುಂದಕ್ಕೆ ಹೊರಟಳು.

ಶಾಂತಿಯು ಅನಂತರ ಭವಾನಂದನ ಮನೆಗೆ ಹೋದಳು. ಭವಾನಂದನು ಆಗ ಊರ್ಧ್ವದೃಷ್ಟಿಯುಳ್ಳವನಾಗಿದ್ದನು. ಯಾರ ಮುಖವೋ ನಮಗೆ ತಿಳಿಯದು; ಆದರೆ ಮುಖವಾದರೊ, ಅತಿಸುಂದರವಾದುದು, ಕೃಷ್ಣವರ್ಣವುಳ್ಳ ಕುಂಚಿತ ವಾದ ಸುಗಂಧವುಳ್ಳ ಅಳಕರಾಶಿಯು ಆಕರ್ಣಪ್ರಸಾರಿಯಾದ ಭ್ರೂಯುಗ್ಮದ ಮೇಲೆ ಬಿದ್ದಿತ್ತು; ಮಧ್ಯದಲ್ಲಿ ತ್ರಿಕೋಣಾಕಾರವಾದ ಲಲಾಟದೇಶದಲ್ಲಿ ಮೃತ್ಯು ವಿನ ಕರಾಳವಾದ ಕಪ್ಪಾದ ಛಾಯೆಯು ಗಾಹುಕೊಂಡಿತ್ತು. ನೋಡಿದರೆ ಮೃತ್ಯುವೂ ಮೃತ್ಯುಂಜಯನೂ ಸಹ ಕದನಮಾಡುವ ಹಾಗೆ ತೋರುತಲಿತ್ತು. ಕಣ್ಣುಗಳು ಮುಚ್ಚಿದ್ದವು. ಭ್ರೂಯುಗ್ಮವು ಸ್ಥಿರವಾಗಿತ್ತು, ಓಷ್ಠವು ನೀಲ ವರ್ಣವಾಗಿತ್ತು. ಗಂಡಸ್ಥಳವು ಪಾಂಡುರವಾಗಿತ್ತು, ಮೂಗು ತಣ್ಣಗಾಗಿತ್ತು, ವಕ್ಷವು ಉನ್ನತವಾಗಿತ್ತು, ವಾಯುವು ವಸನವನ್ನು ವಿಕ್ಷಿಪ್ತಮಾಡುತಲಿತ್ತು. ಸ್ವಲ್ಪಹೊತ್ತಿನಮೇಲೆ ಹೇಗೆ ಶರತ್ಕಾಲದ ಮೇಘದಲ್ಲಿ ವಿಲುಪ್ತನಾದ ಚಂದ್ರನು ಕ್ರಮ ಕ್ರಮವಾಗಿ ಮೇಘರಾಶಿಯನ್ನು ಉದ್ಭಾಸಿತ ಮಾಡಿ ತನ್ನ ಸೌಂದರ್ಯವನ್ನು

ಹೊರಪಡಿಸುವನೋ, ಹೇಗೆ ಪ್ರಭಾತ ಸೂರ್ಯನು ತರಂಗಾಕೃತವಾದ ಮೇಘ ಮಾಲೆಯನ್ನು ಕ್ರಮಕ್ರಮವಾಗಿ ಸುವರ್ಣೀಕೃತಮಾಡಿ ತಾನು ಪ್ರದೀಪ್ತನಾಗಿ ದಿಙ್ಮಂಡಲವನ್ನು ಬೆಳಕುಮಾಡಿ ಸ್ಥಲ, ಜಲ, ಕೀಟಪತಂಗಗಳನ್ನು ಪ್ರಫುಲ್ಲ ಮಾಡುವನೋ ಹಾಗೆ ಆ ಶವದೇಹದಲ್ಲಿ ಪ್ರಾಣಸಂಚಾರದ ಕಾಂತಿಯು ಶೋಭಿಸುತ ಬಂತು, ಆಹಾ! ಎಂಥಾ ಕಾಂತಿ! ಭವಾನಂದನು ಅದರಲ್ಲಿ ದೃಷ್ಟಿಯುಳ್ಳವನಾಗಿದ್ದನು. ಅವನೂ ಮಾತನಾಡಲಿಲ್ಲ. ಕಲ್ಯಾಣಿಯರೂಪದಲ್ಲಿ ಅವನ ಹೃದಯವು ಕಾತರವಾಗಿತ್ತು. ಶಾಂತಿಯ ರೂಪದಮೇಲೆ ಅವನ ದೃಷ್ಟಿಯು ಹೋಗಲಿಲ್ಲ.

ಅಲ್ಲಿಂದ ಶಾಂತಿಯು ಬೇರೆ ಕೊಠಡಿಗೆ ಹೋದಳು. ಇದು ಯಾರ ಮನೆಯೆಂದು ಕೇಳಿದಳು.

ಗೋವರ್ಧನ—ಜೀವಾನಂದಠಾಕೂರರ ಮನೆ.

ಶಾಂತಿ—ಅವರೆಲ್ಲಿ? ಇಲ್ಲಿ ಯಾರೂ ಇಲ್ಲವಲ್ಲ?

ಗೋವರ್ಧನ—ಎಲ್ಲಿಯೋ ಹೋಗಿರಬೇಕು. ಈಗ ಬರುವರು.

ಶಾಂತಿ—ಇದು ಎಲ್ಲದಕ್ಕಿಂತ ಚೆನ್ನಾಗಿದೆ.

ಗೋವರ್ಧನ—ಈ ಕೊಠಡಿಯು ಆಗದು.

ಶಾಂತಿ—ಏತಕ್ಕೆ?

ಗೋವರ್ಧನ—ಜೀವಾನಂದಠಾಕೂರರು ಇಲ್ಲಿರುವರು.

ಶಾಂತಿ—ಅವರು ಇಲ್ಲ, ಬೇಕಾದರೆ ಬೇರೆ ಮನೆ ನೋಡಿಕೊಳ್ಳುತ್ತಾರೆ.

ಗೋವರ್ಧನ—ಅದು ಹೇಗಾದೀತು? ಯಾರು ಇಲ್ಲಿರುವರೋ ಅವರೇ ಅದಕ್ಕೆ ಯಜಮಾನರು. ಅವರು ಏನುಮಾಡಿದರೂ ಮಾಡುವರು.

ಶಾಂತಿ—ಒಳ್ಳೇದು, ನೀನು ಹೋಗು, ನನಗೆ ಸ್ಥಳ ಸಿಕ್ಕದಿದ್ದರೆ ಮರದ ಕೆಳಗಿರುವೆನು.

ಈ ಪ್ರಕಾರ ಹೇಳಿ ಗೋವರ್ಧನನಿಗೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿಬಿಟ್ಟು, ಶಾಂತಿಯು ಆ ಕೊಠಡಿಯೊಳಗೆ ಪ್ರವೇಶಮಾಡಿದಳು. ಪ್ರವೇಶಮಾಡಿ ಜೀವಾನಂದನು ಉಪಯೋಗಿಸಿಕೊಳ್ಳುತ್ತಿದ್ದ ಕೃಷ್ಣಾಜಿನವನ್ನು ಹಾಸಿಕೊಂಡು ಅದರಮೇಲೆ ಮಲಗಿಕೊಂಡಳು.

ಸ್ವಲ್ಪಹೊತ್ತಿನೊಳಗಾಗಿ ಜೀವಾನಂದಠಾಕೂರನು ಬಂದನು. ಹರಿಣ ಚರ್ಮದಮೇಲೆ ಮನುಷ್ಯನು ಮಲಗಿರುವುದು ದೀಪದ ಬೆಳಕು ಪ್ರಕಾಶವಾಗಿರಲಿಲ್ಲವಾಗಿ ಚೆನ್ನಾಗಿ ಗೊತ್ತಾಗಲಿಲ್ಲ. ಜೀವಾನಂದನು ಅದರಮೇಲೆ ಕೂಡುವದಕ್ಕೆ ಹೋಗಿ ಕುಳಿತುಕೊಳ್ಳುವದರಲ್ಲಿ ಶಾಂತಿಯ ಮೊಣಕಾಲಿನಮೇಲೆಕೂತುಕೊಂಡನು. ಇದ್ದಕ್ಕಿದ್ದಹಾಗೆ ಮೊಣಕಾಲು ಎತ್ತರವಾಗಿ ಜೀವಾನಂದನನ್ನು ತಳ್ಳಿಬಿಟ್ಟಿತು.

ಜೀವಾನಂದನಿಗೆ ಸ್ವಲ್ಪ ನೋವಾಯಿತು. ಅವನು ಎದ್ದು ಕ್ರುದ್ಧನಾಗಿ ಕೂತುಕೊಂಡು ಯಾರು ಅದು, ಹಾಳು ಗೂಬೆ? ಎಂದನು.

ಶಾಂತಿ—ನಾನು ಗೂಬೆ ಅಲ್ಲ, ನಿನಗೆ ಮನುಷ್ಯರ ಮೊಣಕಾಲಿನಮೇಲೆ ಕೂತುಕೊಳ್ಳುವುದಕ್ಕೆ ಸ್ಥಳ?

ಜೀವಾನಂದ—ಅದು ಯಾರಿಗೆ ಗೊತ್ತು? ನೀನು ಕಳ್ಳತನದಿಂದ ನನ್ನ ಮನೆಗೆ ಬಂದು ಮಲಗಿರುವುದು?

ಶಾಂತಿ—ನಿನ್ನ ಮನೆ ಹೇಗೆ?

ಜೀವಾನಂದ—ಮತ್ತೆ ಯಾರ ಮನೆ?

ಶಾಂತಿ—ನನ್ನ ಮನೆ.

ಜೀವಾನಂದ—ಸರಿಯಲ್ಲ, ನೀನ್ಯಾರು?

ಶಾಂತಿ—ನಿನ್ನ ತಂಗಿಯ ಗಂಡ.

ಜೀವಾನಂದ—ನೀನು ನನ್ನವನು ಹೌದೋ ಅಲ್ಲವೋ, ನಾನು ನಿನ್ನವನೆಂದು ತೋರುತ್ತದೆ. ನಿನ್ನ ಧ್ವನಿಯನ್ನು ಕೇಳಿದರೆ ನನ್ನ ಬ್ರಾಹ್ಮಣಿಯ ಕೊರಳಿನ ಹಾಗೆ ತೋರುತ್ತದೆ.

ಶಾಂತಿ—ಬಹಳಕಾಲ ನಿನ್ನ ಹೆಂಡತಿಗೂ ನನಗೂ ಸಹ ಏಕಾತ್ಮಭಾವವಿತ್ತು, ಆದರಿಂದ ಇಬ್ಬರ ಕೊರಳೂ ಒಂದಾಗಿರಬೇಕೆಂದು ತೋರುತ್ತದೆ.

ಜೀವಾ—ಏನು? ಬಹಳ ಹೆಚ್ಚು ಮಾತನಾಡುತ್ತೀ? ಏಕೆ? ಮಠದಲ್ಲಿಲ್ಲದೆ ಬೇರೆಕಡೆಯಾಗಿದ್ದರೆ, ಒಂದು ಘೂಸೆ ಕೊಟ್ಟು ಹಲ್ಲೆಲ್ಲಾ ಉದುರಿಸುತಲಿದ್ದೆ.

ಶಾಂತಿ—ಹಲ್ಲು ಉದುರಿಸುವದಕ್ಕೆ ಬಹಳ ಬೇಕು. ಸಾಮಾನ್ಯವಾಗ ಲಿಲ್ಲ. ನೆನ್ನೇದಿನ ನಗರದಲ್ಲಿ ಎಷ್ಟು ಜನರ ಹಲ್ಲುದುರಿಸಿದೆ, ಲೆಕ್ಕಮಾಡು. ಬೆರಳು ಮಡಿಸುತ್ತೇನೆ, ನೋಡೋಣ, ದಂಭದಲ್ಲಿ ಕೆಲಸವಾಗುವದಿಲ್ಲ. ನಾನು ಇಲ್ಲಿ ಮಲಗಿದ್ದೇನೆ, ನಿದ್ರೆಬರುತ್ತದೆ, ನೀವು ಸಂತಾನರ ಗುಂಪಿನವರು, ಗದ್ದಲೆದ್ದರೆ ಓಡಿಹೋಗಿ ಬ್ರಾಹ್ಮಣ ಹೆಂಗಸರ ಶರಗು ಹೊದ್ದುಕೊಂಡು, ಔತುಕೊಳ್ಳು ವವರು.

ಜೀವಾನಂದಠಾಕೂರನು ಕಿಡಿಕೋಪದಿಂದ ವ್ಯೆತುಂಬಿದವನಾದನು. ಸತ್ಯಾ ನಂದನು ಮಠದೊಳಗೆ ಸಂತಾನರು ಪರಸ್ಪರ ಮಾರಾಮಾರಿ ಮಾಡುವುದನ್ನು ನಿಷೇಧಿ ಸಿದ್ದನು. ಆದರೆ ಇವನ ಬಾಯಿ ಮುಚ್ಚದಿರಕೂಡದು. ನಾಲ್ಕು ಪೆಟ್ಟು ತಗಲಿಸ ಬೇಕಾಗಿದೆ ಎಂದಂದುಕೊಂಡನು. ಕೋಪದಿಂದ ಸರ್ವ ಶರೀರವು ಉರಿಯಲಾರಂಭ ವಾಯಿತು. ಆದರೆ ಕಂಠಸ್ವರವು ಅತಿ ಮನೋಹರವಾಗಿ ಸ್ವರ್ಗದ ಬಾಗಿಲೇ ಬಿಚ್ಚಿ ಹೋಗಿ ಬರುತ್ತದೋ ಎಂಬ ಹಾಗಿತ್ತು. ಆದರೆ ಕೇಳುವದಕ್ಕಾಗದ ಕಟೂಕ್ತಿಗಳು ಮರ್ಮಭೇದಿಯಾಗಿತ್ತು. ಜೀವಾನಂದನು ಏಳುವದಕ್ಕೂ ಇಷ್ಟವಿಲ್ಲದೆ ಕೂಡುವ ದಕ್ಕೂ ಇಷ್ಟವಿಲ್ಲದೆ ಇದ್ದನು. ಉಭಯಸಂಕಟವಾಗಿತ್ತು. ಕಡೆಗೆ, ಮಹಾಶಯ! ಈ ಮನೆ ನನ್ನದು, ಬಹುಕಾಲದಿಂದ ನನ್ನನುಭೋಗದಲ್ಲಿದೆ. ತಾವು ಹೊರಗೆ ಹೋಗಿ ಎಂದನು.

ಶಾಂತಿ—ಈ ಮನೆ ನನ್ನದು, ಈಗ ಅರ್ಧಘಂಟೆಯಿಂದ ನನ್ನ ಸುಭೋಗದಲ್ಲಿದೆ, ತಾವು ಹೊರಗೆ ಹೋಗಿ.

ಜೀವಾನಂದ ಮಠವಾಗಿರುವುದರಿಂದ ದೊಣ್ಣೆಯಿಂದ ಹೊಡದು ಕೆಡವಿ ನಿನ್ನನ್ನು ನರಕಕುಂಡಕ್ಕೆ ಕಳುಹಿಸಲಿಲ್ಲ. ಆದರೂ ಈಗ ಮಹಾಸ್ವಾಮಿಗಳ ಅಪ್ಪಣೆಯನ್ನು ಪಡೆದು ನಿನ್ನನ್ನು ಹೊರಡಿಸುತ್ತೇನೆ.

ಶಾಂತಿ—ನಾನು ಮಹಾಸ್ವಾಮಿಗಳ ಅಪ್ಪಣೆಯನ್ನು ಪಡೆದೇ ನಿನ್ನನ್ನು ಹೊರಡಿಸಿದ್ದೇನೆ, ನೀನು ದೂರಹೋಗು.

ಜೀವಾ—ಒಳ್ಳೇದು, ಈ ಮನೆ ನಿನ್ನದಲ್ಲವೆ? ಸ್ವಾಮಿಗಳನ್ನೇ ಕೇಳಿಕೊಂಡು ಬರುತ್ತೇನೆ; ನಿನ್ನ ಹೆಸರೇನು? ಹೇಳು.

ಶಾಂತಿ—ನನ್ನ ಹೆಸರು ನವೀನಾನಂದಗೋಸ್ವಾಮಿ. ನಿನ್ನ ಹೆಸರೇನು?

ಜೀವಾನಂದ—ನನ್ನ ಹೆಸರು ಜೀವಾನಂದಗೋಸ್ವಾಮಿ.

ಶಾಂತಿ—ನೀನೇ ಜೀವಾನಂದಗೋಸ್ವಾಮಿ? ಅದಕ್ಕೆ ಹೀಗೆ?

ಜೀವಾನಂದ—ಹೇಗೆ?

ಶಾಂತಿ—ಜನರು ಹೇಳಿಕೊಳ್ಳುತ್ತಾರೆ, ನಾನೇನು ಮಾಡಲಿ?

ಜೀವಾನಂದ—ಜನರು ಏನು ಹೇಳುತ್ತಾರೆ?

ಶಾಂತಿ—ಅದನ್ನ ಹೇಳುವದಕ್ಕೆ ನನಗೇನು ಭಯ? ಜನರು ಜೀವಾನಂದನು ಭಂಡ ಮೂರ್ಖನೆಂದು ಹೇಳುತ್ತಾರೆ.

ಜೀವಾನಂದ—ಭಂಡ ಮೂರ್ಖ, ಒಂದು, ಇನ್ನೇನು ಹೇಳುತ್ತಾರೆ?

ಶಾಂತಿ—ಧಡ್ಡ, ಬೆಟ್ಟದಂಥ ಬುದ್ಧಿ.

ಜೀವಾನಂದ—ಇನ್ನೇನು ಹೇಳುತ್ತಾರೆ?

ಶಾಂತಿ—ಯುದ್ಧದಲ್ಲಿ ಹೇಡಿ.

ಜೀವಾನಂದನ ಶರೀರವೆಲ್ಲ ಕೋಪದಿಂದ ಕಿಡಿಕಿಡಿಯಾಗಿ, ಇನ್ನೇನಾದರೂ ಉಂಟೊ? ಎಂದನು.

ಶಾಂತಿ—ಇದೆ, ಇನ್ನು ಎಷ್ಟೋ ಹೇಳಿಕೊಳ್ಳುತ್ತಾರೆ. ನಿಮಾಯಿಮಣಿಯು ತಮಗೆ ತಂಗಿ ಎಂದು ಹೇಳುತ್ತಾರೆ.

ಜೀವಾನಂದ—ನೀನು ಗೂಬೆ.

ಶಾಂತಿ—ನೀನು ಭಲ್ಲೂಕ.

ಜೀವಾನಂದ—ನೀನು ಉಲ್ಲೂಕ, ಅರ್ವಾಚೀನ, ನಾಸ್ತಿಕ, ವಿಧರ್ಮಿ, ಭಂಡ, ಪಾಮರ,

ಶಾಂತಿ—ನೀನು ಯಲಾಯುವಾಯುವೊಚೀಚಃ, ನೀನು ಸ್ತುತಿಶ್ಚುಭಿಶ್ವಚ ಶಾತ್, ನೀನು ಷ್ಟುಭಿಷ್ಟ್ವಯಾದಾಂತಯೋ.*

* ವ್ಯಾಕರಣ ಸೂತ್ರಗಳು ಸ್ವಲ್ಪ ವಿಕೃತವಾಗಿರಬಹುದು.

ಜೀವಾನಂದ—ಎಲೊ! ಇಲ್ಲಿಂದ—ನಿನ್ನ ದಾಡಿ ಕಿತ್ತುಹಾಕುತ್ತೇನೆ.

ಶಾಂತಿಯು ದಾಡಿ ಹಿಡಿದರೆ ಪ್ರಮಾದವಾದೀತೆಂದು ಯೋಚಿಸಿ, ಇದ್ದಕ್ಕಿದ್ದಹಾಗೆ ಯುದ್ಧಾಂಗಣವನ್ನು ಬಿಟ್ಟು ಪಲಾಯನತತ್ಪರಳಾದಳು.

ಜೀವಾನಂದನು ಹಿಂದೆ ಹಿಂದೆ ಓಡಿಹೋದನು. ಮನಸ್ಸಿನಲ್ಲಿ ಇನ್ನು ಮಠ ಬಿಟ್ಟು ಹೊರಗೆ ಹೋದರೆ ಎರಡು ಒದೆ ಕೊಡಬೇಕೆಂದು ಓಡಿದನು. ಶಾಂತಿಯು ಎಷ್ಟಾದರೂ ಹೆಂಗಸು. ಓಡುವ ಅಭ್ಯಾಸವಿಲ್ಲ. ಜೀವಾನಂದನು ಇಂಥಾದ್ದರಲ್ಲಿ ನಿಪುಣ. ಬೇಗನೆ ಹೋಗಿ ಶಾಂತಿಯನ್ನು ಹಿಡಿದುಕೊಂಡನು. ಹಿಡಿದುಕೊಂಡು ನೆಲಕ್ಕೆ ಕೆಡುವಿ ಹೊಡಿಯಬೇಕೆಂದು ಹಿಡಿದುಕೊಂಡನು. ಅವಳನ್ನು ಮುಟ್ಟಿದ ಮಾತ್ರದಿಂದ ಜೀವಾನಂದನು ಚಮಕಿತನಾಗಿ ಬಿಟ್ಟುಬಿಟ್ಟನು. ಆದರೆ ಶಾಂತಿಯು ಜೀವಾನಂದನ ಕುತ್ತಿಗೆಗೆ ತೋಳು ಹಾಕಿ ಬಿಚಿ ಹಿಡಿದುಕೊಂಡಳು.

ಜೀವಾನಂದನು, ಇದೇನು, ನೀನು ಹೆಂಗಸು! ಬಿಡು! ಬಿಡು! ಎಂದನು. ಆದರೆ ಶಾಂತಿಯು ಅದನ್ನು ಕಿವಿಯಮೇಲೆ ಹಾಕಿಕೊಳ್ಳದೆ, ಗಟ್ಟಿಯಾಗಿ, ಯಾರೂ ಇಲ್ಲವೆ, ನೋಡಿ, ನೋಡಿ, ಒಬ್ಬ ಸಂತಾನನು ಬಲವಂತವಾಗಿ ಹೆಂಗಸಿನ ಸತೀತ್ವವನ್ನು ನಷ್ಟಮಾಡುತ್ತಾನೆ, ಎಂದು ಕೂಗಿಕೊಂಡಳು.

ಜೀವಾನಂದನು, ಕೈಯಿಂದ ಅವಳ ಬಾಯಿಯನ್ನು ಮುಚ್ಚಿ, ಸರ್ವನಾಶ! ಅಂಥ ಮಾತು ಹೇಳಬೇಡ. ಬಿಡು, ಬಿಡು, ನನಗೆ ನೋಯುತ್ತದೆ, ಬಿಡೆಂದನು.

ಶಾಂತಿಯು ಬಿಡಲಿಲ್ಲ. ಇನ್ನು ಗಟ್ಟಿಯಾಗಿ ಕೂಗಿದಳು. ಶಾಂತಿಯ ಹಿಡಿತದಿಂದ ಬಿಡಿಸಿಕೊಳ್ಳುವದು ಸಾಮಾನ್ಯವಲ್ಲ. ಜೀವಾನಂದನು ಎರಡು ಕೈಯೂ ಮುಗಿದುಕೊಂಡು, ನಿನ್ನ ಕಾಲಿಗೆ ಬೀಳುತ್ತೇನೆ, ಬಿಡು, ಎಂದು ಬೇಡಿಕೊಂಡನು. ಅಷ್ಟುಹೊತ್ತಿಗೆ ಹೆಂಗಸಿನ ಆರ್ತನಾದದಿಂದ ಅರಣ್ಯವು ಪರಿಪೂರ್ಣವಾಗಿ ತುಂಬಿಕೊಂಡಿತು.

ಇತ್ತಲಾಗಿ ಮಠದ ಗೋಸಾಯಿಗಳು ಹೆಂಗಸಿನ ಮೇಲೆ ಅತ್ಯಾಚಾರವು ನಡೆಯುತ್ತದೆಂದು ಕೇಳಿ, ಅನೇಕರು ಧೂಪಾರ್ತಿಯಲ್ಲಿ ದೀಪವನ್ನು ಹಚ್ಚಿಸಿಕೊಂಡು ದೊಣ್ಣೇ ಸೋಟಾ ತೆಗೆದುಕೊಂಡು ಹೊರಟರು. ನೋಡಿ ಜೀವಾನಂದನು ಥರಥರ ನಡುಗಲಾರಂಭಿಸಿದನು. ಶಾಂತಿಯು, ಏತಕ್ಕೆ ಇಷ್ಟು ನಡುಗು? ನೀನು ಅತ್ಯಂತ ಭೀತಪುರುಷ! ಜನರು ನೀನು ಮಹಾವೀರನೆಂದು ಹೊಗಳುತ್ತಾರೆಂದಳು.

ಗೋಸಾಯಿಗಳು ಬೆಳಕು ತೆಗದುಕೊಂಡು ಹತ್ತಿರ ಹತ್ತಿರ ಬಂದರು. ಅದನ್ನು ಕಂಡು, ನಾನು ಕಾಪುರುಷ, ನೀನು ಬಿಟ್ಟುಬಿಡು, ನಾನು ಓಡಿಹೋಗುತ್ತೇನೆಂದನು.

ಶಾಂತಿ—ಜೋರುಮಾಡಿ ಬಿಡಿಸಿಕೊ.

ಜೀವಾನಂದನು ಲಜ್ಜೆಯಿಂದ ಹೆಂಗಸಿನ ಕೈಯಿಂದ ಬಿಡಿಸಿಕೊಳ್ಳಲಾರೆನೆಂದು ಹೇಳಲಾರದೆ ಹೋಗಿ, ನೀನು ಬಹಳ ಪಾಪಿಷ್ಠಳೆಂದು ಹೇಳಿದನು.

ಶಾಂತಿಯು, ಹುಸಿನಗು ನಗುತ್ತ, ವಿಲೋಲವಾದ ಕಟಾಕ್ಷವನ್ನು ಹಾಕುತ್ತ, ಪ್ರಾಣಾಧಿಕ! ನಾನು ನಿನ್ನಲ್ಲಿ ಬಹಳ ಆಸಕ್ತಳಾಗಿದ್ದೇನೆ, ನಿನ್ನ ದಾಸಿಯಾಗ ಬೇಕೆಂದು ಇಲ್ಲಿಗೆ ಬಂದೆನು, ನನ್ನನ್ನು ಗ್ರಹಣಮಾಡು, ಗ್ರಹಣಮಾಡುತ್ತೀ ನೆಂದರೆ ಬಿಡುವೆನೆಂದಳು.

ಜೀವಾನಂದ—ದೂರಹೋಗು, ಪಾಪಿಷ್ಠೆ! ದೂರಹೋಗು, ಇಂಥ ಮಾತನ್ನು ನಾನು ಕಿವಿಯಿಂದ ಕೇಳಲಾರೆನು.

ಶಾಂತಿ—ನಾನು ಪಾಪಿಷ್ಠಳೇ ಹೌದು, ಅದಕ್ಕೆ ಸಂದೇಹವಿಲ್ಲ; ಹಾಗಿಲ್ಲ ದಿದ್ದರೆ ಹೆಂಗಸಾಗಿ ಪುರುಷನ ಹತ್ತಿರ ಬಂದು ಪ್ರೇಮಭಿಕ್ಷೆಯನ್ನು ಬೇಡುತ ಲಿದ್ದೆನೆ?—ನಾನು ಹೇಳುವಹಾಗೆ ಮಾಡು—ಬಿಟ್ಟುಬಿಡುತ್ತೇನೆ.

ಜೀವಾನಂದ—ಛೀ! ಛೀ ಛೀ! ನಾನು ಬ್ರಹ್ಮಚಾರಿ—ನನಗೆ ಇಂಥ ಮಾತು ಹೇಳತಕ್ಕದ್ದಲ್ಲ—ನೀನು ನನ್ನ—

ಶಾಂತಿಯು ಭಯದಿಂದ ಕೂಡಲೆ ಸುಮ್ಮನಿರು! ಸುಮ್ಮನಿರು! ಸುಮ್ಮ ನಿರು! ನಾನು ಶಾಂತಿ ಎಂದಳು.

ಹೀಗೆ ಹೇಳಿ ಶಾಂತಿಯು ಜೀವಾನಂದನನ್ನು ಬಿಟ್ಟು ಅವನ ಪಾದಧೂಳಿ ಯನ್ನು ತೆಗೆದುಕೊಂಡು ಶಿರಸ್ಸಿನಲ್ಲಿ ಧಾರಣೆಮಾಡಿಕೊಂಡಳು. ಅನಂತರ ಕೈಜೋಡಿಸಿಕೊಂಡು, ಪ್ರಭು! ಅಪರಾಧವನ್ನು ಮನಸ್ಸಿನಲ್ಲಿಡಬೇಡ, ಆದರೆ ಪುರುಷರು ಮಾಡುವ ಪ್ರೀತಿವಿಶ್ವಾಸದ ನಟನೆಯನ್ನು ನುಡು! ನನ್ನನ್ನು ಗುರುತಿಸಲಾರದೆ ಹೋದಿರಿ! ಎಂದಳು.

ಆಗ ಜೀವಾನಂದನ ಮನಸ್ಸಿಗೆ ನಡೆದುದೆಲ್ಲ ಪ್ರಸ್ಫುಟವಾಯಿತು. ಶಾಂತಿ ಯಲ್ಲದೆ ಈ ಕೆಲಸವನ್ನು ಮತ್ಯಾರು ಮಾಡುವರು? ಶಾಂತಿಯಲ್ಲದೆ ಈ ತಮಾಷಿಯನ್ನು ಮಾಡಲು ಮತ್ಯಾರು ಸಮರ್ಥರು? ಶಾಂತಿ ಅಲ್ಲದೆ ಮತ್ಯಾರ ಬಾಹುಗಳಲ್ಲಿ ಇಷ್ಟು ಬಲ? ಇದೆಲ್ಲ ಪ್ರಸ್ಫುಟವಾಗಿ, ಆನಂದಿತ ನಾಗಿ, ಅಪ್ರತಿಭನಾಗಿ, ಏನೋ ಹೇಳುವದಕ್ಕೆ ತೊಡಗಿದನು. ಆದರೆ ಅವಕಾಶ ವಾಗಲಿಲ್ಲ; ಗೋಸಾಯಿಗಳು ಬಂದುಬಿಟ್ಟರು. ಧೀರಾನಂದನು ಮುಂದೆ ಮುಂದೆ ಬಂದು, ಜೀವಾನಂದನನ್ನು ಕುರಿತು, ಇದೇನು ಗದ್ದಲವೆಂದು ಕೇಳಿದನು.

ಜೀವಾನಂದನು ಏನುತ್ತರವನ್ನು ಕೊಟ್ಟಾನು? ಶಾಂತಿಯು ಆ ಸಮಯ ದಲ್ಲಿ ಅವನಿಗೆ ಕಿವಿಯಲ್ಲಿ ನನ್ನನ್ನು ನೀನು ಹಿಡಿದುಕೊಂಡಿದ್ದೆ ಎಂದು ಹೇಗೆ ಹೇಳಲಿ ಎಂದು ಹೇಳಿ ಸ್ವಲ್ಪ ನಕ್ಕು, ಧೀರಾನಂದನ ಪ್ರಶ್ನೆಗೆ ಉತ್ತರವಾಗಿ—ಗದ್ದಲ ವಾಯಿತು—ಯಾರೋ ಹೆಂಗಸು ಅರಚಿಕೊಳ್ಳುತ್ತಿದ್ದಳು, ಯಾರೋ ತನ್ನ ಪತಿ ವ್ರತಾಭಂಗಮಾಡಿದರೆಂದು ಕೂಗಿದಳು. ಆದರೆ ಎಲ್ಲಿಯೋ ಗೊತ್ತೇಯಿಲ್ಲ ಜೀವಾನಂದನೂ ಹುಡುಕಿದನು. ನಾನೂ ಹುಡುಕಿ ಹುಡುಕಿ ಸಾಕಾಯಿತು.

ಏನೂ ಸಿಕ್ಕಲಿಲ್ಲ. ನೀವೆಲ್ಲ ಈ ವನದಲ್ಲಿ ಒಂದುಸಲ ಹುಡುಕಿದರೆ ವಾಸಿ—ಅತ್ತ ಕಡೆ ದೂರದಲ್ಲಿ ಶಬ್ದವಾದ ಹಾಗಾಯಿತು, ಎಂದಳು.

ಶಾಂತಿಯು ಗೋಸಾಯಿಗಳಿಗೆ ನಿಬಿಡವಾದ ಅರಣ್ಯದ ಕಡೆ ತೋರಿಸಿಬಿಟ್ಟಳು ಜೀವಾನಂದನು ಶಾಂತಿಯನ್ನು ಕುರಿತು, ವೈಷ್ಣವರಿಗೆ ಇಷ್ಟು ತೊಂದರೆ ಕೊಡ ವುದರಿಂದ ನಿನಗೇನು ಫಲ? ಆ ವನಕ್ಕೆ ಹೋದರೆ ಅವರು ತಿರುಗಿ ಬರುವುದಕ್ಕೆ ಆದೀತೆ? ಹಾವೇ ಕಡಿಯುತ್ತೋ, ಹುಲಿಯೇ ತಿಂದುಹಾಕುತ್ತೋ ಎಂದನು.

ಶಾಂತಿ—ಹೆಂಗಸಿನ ಹೆಸರು ಹೇಳಿರುವದ್ದರಿಂದ ವೈಷ್ಣವರು ಸ್ವಲ್ಪ ಪ್ರಯಾ ಪಡದೆ ಹಿಂದಿರುಗಲಾರರು. ಹಾಗೆ ಬೇಡವೆಂದರೆ ಹಿಂದಿರುಗಿಸುತ್ತೇನೆ.

ಇಷ್ಟು ಹೇಳಿ ಶಾಂತಿಯು ಗೋಸಾಯಿಗಳನ್ನು ಕರೆದು ತಾವುಗಳು ಸ್ವಲ್ ಯೋಚಿಸಬೇಕು, ಏನಾದರೂ ಭೂತಪಿಶಾಚಿಯಾಗಿದ್ದರೂ ಇರಬಹುದು, ಅದ ಮಾಯೆಯಿಂದ ಹೀಗಾಗುವುದುಂಟೆಂದಳು.

ಕೇಳಿ, ಗೋಸಾಯಿಗಳಲ್ಲೊಬ್ಬನು, ಅದೂ ಸಂಭವ—ಇಲ್ಲದಿದ್ದರೆ ಹೆಂಗಸ ಎಲ್ಲಿಂದ ಬಂದಾಳೆಂದನು.

ಗೋಸಾಯಿಗಳೆಲ್ಲರೂ ಇದೇ ಅಭಿಪ್ರಾಯದವರಾದರು. ಭೌತಿಕಮಾಯೆ ಯೆಂದು ಸ್ಥಿರಮಾಡಿಕೊಂಡು ಎಲ್ಲರೂ ಮಠಕ್ಕೆ ಹೊರಟುಹೋದರು. ಜೀವಾ ನಂದನು, ಬಾ, ಇಲ್ಲಿಯೇ ಕೂತುಕೊಳ್ಳೋಣ, ಇದನ್ನೆಲ್ಲ ನನಗೆ ತಿಳಿಯುವ ಹಾಗ ಹೇಳು. ನೀನು ಇಲ್ಲಿಗೆ ಹೇಗೆ ಬಂದೆ, ಏತಕ್ಕೆ ಬಂದೆ? ಈ ವೇಷವೇನು? ಇಷ್ಟು ತಮಾಷಿಮಾಡುವುದು ಎಲ್ಲಿ ಕಲಿತೆ? ಶಾಂತಿಯು ನಾನೇತಕ್ಕೆ ಬಂದೆ? ನಿನಗೋಸ್ಕ ಬಂದೆನು. ಹೇಗೆ ಬಂದೆನೆ? ನಡದುಕೊಂಡು ಬಂದೆ. ಈ ವೇಷವೇತಕ್ಕೆ? ನನ್ನ ಇಷ್ಟ. ಇಷ್ಟು ತಮಾಷಿ ಮಾಡುವುದನ್ನು ಎಲ್ಲಿ ಕಲಿತುಕೊಂಡೆನೆಂದರೆ—ಒಬ್ಬ ಪುರುಷನ ಹತ್ತಿರ ಕಲಿತೆನು. ಇದೆಲ್ಲ ವಿವರವಾಗಿ ಹೇಳುವೆನು, ಇಲ್ಲಿ ವನದಲ್ಲಿ ಏತಕ್ಕೆ ಕುಳಿತಿರಬೇಕು. ನಡೆ, ನಿನ್ನ ಲತಾಕುಂಜಕ್ಕೆ ಹೋಗೋಣವೆಂದಳು

ಜೀವಾನಂದ—ನನ್ನ ಕುಂಜ ಯಾವುದು?

ಶಾಂತಿ—ಮಠದಲ್ಲಿ.

ಜೀವಾನಂದ—ಅಲ್ಲಿ ಹೆಂಗಸರು ಹೋಗಕೂಡದು.

ಶಾಂತಿ—ನಾನು ಹೆಂಗಸೆ?

ಜೀವಾನಂದ—ನಾನು ಸ್ವಾಮಿಗಳ ನಿಯಮವನ್ನುಲ್ಲಂಘಿಸಲಾರೆನು.

ಶಾಂತಿ—ನನಗೆ ಸ್ವಾಮಿಗಳ ಅಪ್ಪಣೆ ಆಗಿದೆ. ಕುಂಜಕ್ಕೆ ಹೋದರೆ ಎಲ್ಲ ಹೇಳುತ್ತೇನೆ. ವಿಶೇಷತಃ ಮನೆಯೊಳಗೆ ಹೋಗದೆ ನಾನು ದಾಡಿಮಿಾಶೆಗಳನ್ನು ತೆಗೆಯಲಾರೆನು. ದಾಡಿಯನ್ನು ತೆಗಿಯದಿದ್ದರೆ ಈ ಕೆಟ್ಟಮೋರೆಯವಳನ್ನು ನೀನು ಗುರ್ತಿಸಲಾರೆ, ಛಿ! ಪುರುಷ ಜಾತಿ ಎಂಥಾದ್ದು!

---

# ಎರಡನೆಯ ಭಾಗ

## ಮೊದಲನೆಯ ಪರಿಚ್ಛೇದ

ಕಳೆದ ಎಪ್ಪತ್ತಾರನೇ ವರುಷವು ಪೂರೈಸಿತು. ಬಂಗಾಳಾದೇಶದಲ್ಲಿ ಹಾಗೂ ಬೇಳೆಪಾಲು ಜನರನ್ನು—ಎಷ್ಟು ಕೋಟಿ ಪ್ರಜೆಯೋ ಅದನ್ನು ಯಾರು ಹೇಳಬಲ್ಲರು—ಯಮಪುರಿಗೆ ಕಳುಹಿಸಿಬಿಟ್ಟು ಆ ದುರ್ವತ್ಸರವು ತಾನೂ ಕಾಲ ಗ್ರಾಸಕ್ಕೆ ಬಿದ್ದಿತು. ಎಪತ್ತೇಳನೇ ವರುಷದಲ್ಲಿ ದೇವರು ಸುಪ್ರಸನ್ನನಾದನು. ಸುವೃಷ್ಟಿಯಾಯಿತು. ಪೃಥಿವಿಯು ಸಸ್ಯಶಾಲಿನಿಯಾಯಿತು. ಜೀವದಿಂದುಳಿದು ಕೊಂಡವರು ಹೊಟ್ಟೆ ತುಂಬ ಉಂಡರು. ಅನೇಕರು ಅನಾಹಾರದಿಂದಾಗಲಿ ಅಲ್ಪಾಹಾರದಿಂದಾಗಲಿ ರುಗ್ಣರಾಗಿದ್ದವರು ಪೂರ್ಣಾಹಾರವನ್ನು ಒಂದೇ ಸಲ ತಡೆಯಲಾರದೆ ಅದರಿಂದ ಸತ್ತುಹೋದರು. ಪೃಥಿವಿಯು ಸಸ್ಯಶಾಲಿನೀ ಹೌದು, ಆದರೆ ಜನಶೂನ್ಯ. ಗ್ರಾಮ ಗ್ರಾಮದಲ್ಲಿಯೂ ಮನೆಗಳು ಖಾಲಿಬಿದ್ದು, ದನಕರ ಗಳಿಗೆ ವಿಶ್ರಾಮಭೂಮಿಯಾಗಿ ಪ್ರೇತ ಭಯಕ್ಕೆ ಕಾರಣವಾಯಿತು. ಗ್ರಾಮ ಗ್ರಾಮದಲ್ಲಿಯೂ ನೂರಾರು ಉತ್ಕೃಷ್ಟವಾದ ಕ್ಷೇತ್ರಗಳೆಲ್ಲ ಉಳುವವರು ಇಲ್ಲದೆ ಬಂಜರು ಬಿದ್ದು ಕಾಡು ಬೆಳೆದುಹೋಗಿತ್ತು. ದೇಶವೆಲ್ಲ ಕಾಡುಮಯವಾಯಿತು. ಎಲ್ಲಿ ಹಾಸಮಯವಾದ ಶ್ಯಾಮಲವಾದ ಸಸ್ಯರಾಶಿಯು ಪ್ರಕಾಶಿಸುತಲಿತ್ತೋ, ಎಲ್ಲಿ ಅಸಂಖ್ಯಾಕವಾದ ದನಕರಗಳು ಮೇಯುತ್ತಲಿದ್ದವೋ, ಎಲ್ಲಿ ಗ್ರಾಮದ ಯುವಕ ಯುವತಿಯರು ಗುಂಪು ಸೇರಿ ಆಮೋದ ಪ್ರಮೋದಗಳನ್ನು ಮಾಡುತ ಲಿದ್ದ ಉದ್ಯಾನಭೂಮಿಗಳಾಗಿದ್ದವೋ, ಅವೆಲ್ಲ ಘೋರತರವಾದ ಕಾಡಾಗುತ್ತ ಬಂದವು. ಒಂದು ವರುಷವಾಯಿತು, ಎರಡಾಯಿತು, ಮೂರು ವರುಷ ವಾಯಿತು, ಕಾಡು ವೃದ್ಧಿಯಾಗುತ್ತ ಬಂತು. ಯಾವ ಸ್ಥಳವು ಮನುಷ್ಯನ ಸುಖಕ್ಕೆ ಆಸ್ಥಾನವಾಗಿತ್ತೋ ಅಲ್ಲೆಲ್ಲ ನರಮಾಂಸ ಲೋಲುಪವಾದ ವ್ಯಾಘ್ರವು ಹರಿಣಾದಿಗಳನ್ನು ಅಟ್ಟಿಕೊಂಡು ಬರುವ ಸ್ಥಳಗಳಾದವು. ಎಲ್ಲಿ ಸುಂದರಿಗಳು ಗುಂಪುಗುಂಪಾಗಿ ಅಲಕ್ತಾಂಕಿತ ಚರಣಗಳಲ್ಲಿ ಗೆಜ್ಜೇಪಿಲ್ಲಿ, ಗೊಲಸು, ಗೋಲುಂ ಗುರ, ಕಾಲುಂಗುರ, ಗೆಜ್ಜೇಸರ ಪಾಡಗಗಳ ಶಬ್ದಮಾಡಿಕೊಂಡು ಸಂಗಾತಿಗಳ ಸಂಗಡ ಸರಸವಾಡುತ್ತ ಘಟ್ಟಿಯಾಗಿ ನಗುತ ನಗುತ ಹೋಗುತಲಿದ್ದರೋ, ಆ ಸ್ಥಳಗಳಲ್ಲಿ ಕರಡಿಗಳು ಬಂದು ಬಿಲಗಳನ್ನು ಮಾಡಿ ಮರಿಗಳನ್ನು ಇಟ್ಟುಕೊಂಡು ಲಾಲನ ಪಾಲನೆ ಮಾಡಲಾರಂಭಿಸಿದವು. ಎಲ್ಲಿ ಹುಡುಗರು ಚಿಕ್ಕ ವಯಸ್ಸಿನಲ್ಲಿ ಸಂಧ್ಯಾಕಾಲದ ಮಲ್ಲಿಕಾಕುಸುಮದಂತೆ ಉತ್ಫುಲ್ಲರಾಗಿ ಹೃದಯ ತೃಪ್ತಿಕರವಾಗಿ

ನಗುತಲಿದ್ದರೋ, ಆ ಸ್ಥಳಗಳಲ್ಲಿ ಮಂದೆ ಮಂದೆಯಾಗಿ ಕಾಡಾನೆಗಳು ಮದಮತ್ತ ವಾಗಿ ಮರದ ಕೊಂಬೆಗಳನ್ನು ಸೀಳುತ್ತ ಓಡಾಡುತಲಿದ್ದವು. ಎಲ್ಲಿ ದುರ್ಗೋತ್ಸವ ಗಳು ಆಗುತಲಿದ್ದವೋ, ಅಲ್ಲಿ ಶೃಗಾಲಗಳ ಬಿಲಗಳು, ದೋಲಮಂಚಿಕೆಗಳಲ್ಲಿ ಪೇಚ ಪಕ್ಷಿಗಳ ಆಶ್ರಯ, ನಾಟಮಂದಿರಗಳಲ್ಲಿ ವಿಷಸರ್ಪವು ಹಗಲೆಲ್ಲ ಕಪ್ಪೆಗಳನ್ನು ಹುಡುಕುತಲಿವೆ. ಪೈರು ಬೆಳೆಯಾಗುತ್ತದೆ, ತಿನ್ನುವುದಕ್ಕೆ ಜನರು ಇಲ್ಲ, ಧಾನ್ಯ ಬೆಳದರೂ ದುಡ್ಡು ಇಲ್ಲ; ಕೊಂಬುವವರು ಇಲ್ಲ; ಜಮೀನ್‌ದಾರರು ಕಂದಾಯ ವನ್ನು ಕೊಡಲಶಕ್ತರಾದರು; ಅವರ ರೈತರು ಕೊಡತಕ್ಕ ಹಣವನ್ನು ಕೊಡರು. ರಾಜನು ಜಮೀನ್‌ದಾರಿಗಳನ್ನು ಜಪ್ತಿಮಾಡಿಕೊಂಡಿದ್ದರಿಂದ ಅವರು ಹೃತ ಸರ್ವಸ್ವರಾಗಿ ದರಿದ್ರರಾಗುತ್ತ ಬಂದರು. ಭೂಮಾತೆಯು ಸುಪ್ರಸುವಿನಿಯಾದಳು. ಆದರೂ ದುಡ್ಡು ಹುಟ್ಟದು. ಯಾರ ಮನೆಯಲ್ಲಿಯೂ ದುಡ್ಡು ಕಾಸು ಇಲ್ಲ. ಕೈಗೆ ಸಿಕ್ಕಿದ್ದನ್ನು, ಸಿಕ್ಕಿದವನು ತಿನ್ನುತಲಿದ್ದನು. ಕಳವು ದರೋಡೆಗಳು ತಲೆಯೆತ್ತಿ ಕೊಂಡವು. ಸಾಧುಶೀಲನು ಭೀತನಾಗಿ ಮನೆಯನ್ನು ಬಿಟ್ಟು ಹೊರಡದೆ ತಲೆ ಯನ್ನು ಮರೆಮಾಡಿಕೊಂಡನು.

ಇತ್ತಕಡೆ ಸಂತಾನ ಸಂಪ್ರದಾಯದವರು ನಿತ್ಯವೂ ಚಂದನ ತುಲಸೀದಳ ಗಳಿಂದ ವಿಷ್ಣುವಿನ ಪಾದಪದ್ಮವನ್ನು ಪೂಜೆಮಾಡುತ್ತ ಯಾರ ಮನೆಯಲ್ಲಿ ಬಂದೂಕು ಪಿಸ್ತೂಲಿದ್ದರೂ ಕಿತ್ತುಕೊಂಡು ಬರುವರು. ಭವಾನಂದನು, ಭ್ರಾತೃಗಳಿರಾ! ಮನೆಗಳಲ್ಲಿ ಮಣಿಮಾಣಿಕ್ಯ ವಜ್ರ ವೈಡೂರ್ಯ ಪ್ರವಾಳಾದಿಗಳಿದ್ದರೂ ಅವುಗಳನ್ನು ಬಿಟ್ಟು ಒಡದ ಬಂದೂಕಗಳಿದ್ದರೆ ಅವುಗಳನ್ನು ತರತಕ್ಕದ್ದು, ಎಂದು ಹೇಳಿದನು.

ಸಂತಾನ ಸೇನಾಧಿಪತಿಗಳು ಗ್ರಾಮ ಗ್ರಾಮಕ್ಕೂ ತಮ್ಮ ಅನುಚರರನ್ನು ಕಳುಹಿಸಲಾರಂಭಿಸಿದರು. ಅನುಚರರು ಗ್ರಾಮಗಳಿಗೆ ಹೋಗಿ ಎಲ್ಲಿ ಹಿಂದುಜನ ರನ್ನು ಕಂಡರೂ ಅವರನ್ನು ಕುರಿತು, ವಿಷ್ಣುಪೂಜೆಯನ್ನು ಮಾಡುವಿರಾ? ಎಂದು ಕೇಳುವರು. ಹೀಗೆ ಹೇಳುತ್ತ ಇಪ್ಪತ್ತು ಮೂವತ್ತು ಜನರು ಗುಂಪುಕೂಡಿ ಕೊಂಡು ಮುಸಲಮಾನರ ಗ್ರಾಮಗಳ ಮೇಲೆ ಬಿದ್ದು ಅವರ ಮನೆಗೆ ಬೆಂಕಿ ಹಾಕುವರು. ಮುಸಲಮಾನರು ಪ್ರಾಣರಕ್ಷಣೆಯಲ್ಲಿ ವ್ಯಸ್ತರಾಗಿರುವಾಗ ಅವರ ಸರ್ವಸ್ವವನ್ನೂ ಸಂತಾನರು ಹೊತ್ತುಕೊಂಡುಹೋಗಿ ಅದನ್ನು ಹೊಸದಾಗಿ ಬಂದ ವಿಷ್ಣುಭಕ್ತರಿಗೆ ಹಂಚಿಕೊಡುವರು. ಲೂಟಿಯಲ್ಲಿ ಬಂದ ಭಾಗವನ್ನು ಹೊಂದಿ ಗ್ರಾಮವಾಸಿಗಳು ತೃಪ್ತರಾಗುತ್ತಲೇ ಸಂತಾನರು ಅವರನ್ನು ಕರೆತಂದು ವಿಗ್ರಹ ಗಳ ಪಾದಸ್ಪರ್ಶವನ್ನು ಮಾಡಿಸಿ ಅವರನ್ನು ಸಂತಾನರನ್ನಾಗಿ ಮಾಡುವರು. ಜನರು ಸಂತಾನತ್ವದಲ್ಲಿ ವಿಲಕ್ಷಣವಾದ ಲಾಭವುಂಟೆಂದು ತಿಳಿದರು. ವಿಶೇಷವಾಗಿ ಮುಸಲಮಾನರ ರಾಜ್ಯದಲ್ಲಿ ಗೊತ್ತುಗುರಿಯಿಲ್ಲದ ಅನಾಯಕತ್ವವನ್ನು ನೋಡಿ ಎಲ್ಲರೂ ಮುಸಲಮಾನರ ಮೇಲೆ ವಿರಕ್ತರಾಗುತ್ತ ಬಂದರು. ಹಿಂದು ಧರ್ಮವು ಲೋಪವಾಗಿದ್ದಕಾರಣ ಅನೇಕ ಹಿಂದುಜನರು ಹಿಂದುಮತವನ್ನು ಸ್ಥಾಪನೆ

ಮಾಡುವುದಕ್ಕೆ ಅತ್ಯುತ್ಕಟವಾದ ಆತುರವುಳ್ಳವರಾದರು. ಆದುದರಿಂದ ಸಂತಾನರ ಸಂಖ್ಯೆಯು ವೃದ್ಧಿಯಾಗುತ್ತ ದಿನೇದಿನೇ ನೂರಾರು, ಮಾಸ ಮಾಸ ಸಾವಿರಾರು ಮಂದಿ ಬಂದು ಭವಾನಂದ ಜೀವಾನಂದರ ಪಾದಪದ್ಮಗಳಿಗೆರಗಿ ದಳಬದ್ಧರಾಗಿ ದಿಕ್ಕುದಿಕ್ಕಿನಲ್ಲಿಯೂ ಮುಸಲಮಾನರನ್ನು ಶಾಸನಮಾಡಲು ಹೊರಟರು. ಎಲ್ಲಿ ಸರ್ಕಾರದ ನೌಕರರನ್ನು ಕಂಡರೂ ಹಿಡಿದು ಹೊಡೆಯುವರು. ಕೆಲವರನ್ನು ವಧೆಮಾಡುವರು. ಸರ್ಕಾರದ ಹಣ ಎಲ್ಲಿದ್ದರೂ ಹೊಡೆದು ಬಡಿದು ಮನಗೆ ತಂದು ಹಾಕಿಕೊಳ್ಳುವರು. ಮುಸಲಮಾನರ ಗ್ರಾಮ ಸಿಕ್ಕಿದರೆ ಸುಟ್ಟು ಬೂದಿ ಮಾಡುವರು.

ಆಗ ನಗರದಲ್ಲಿ ಮಹಾರಾಜಾಧಿರಾಜನಿಗೆ ಎಚ್ಚರಿಕೆಯುಂಟಾಯಿತು. ಸಂತಾನರ ಶಾಸನಾರ್ಥವಾಗಿ ಅವನು ಅನೇಕಾನೇಕ ಸೈನ್ಯಗಳನ್ನು ಕಳುಹಿಸಲಾರಂಭಿಸಿದನು. ಆದರೆ ಅದುವರೆಗೆ ಸಂತಾನರು ದಳಬದ್ಧರಾಗಿ ಶಸ್ತ್ರಯುಕ್ತರಾಗಿ ಮಹಾದಂಭಶಾಲಿಗಳಾಗಿ ಎದ್ದಿದ್ದರು. ಅವರ ದರ್ಪದ ಇದುರಿಗೆ ಮುಸಲ್ಮಾನರ ಸೈನ್ಯವು ನಿಲ್ಲಲಾರದೆ ಹೋಯಿತು. ಮುಂದೆ ಬಂದು ನಿಂತರೂ ಸಂತಾನರು ಅಮಿತ ಸಂಖ್ಯಾಬಲದಿಂದ ಅವರ ಮೇಲೆಬಿದ್ದು ಅವರನ್ನು ಛಿನ್ನಭಿನ್ನಮಾಡಿ ಹರಿಧ್ವನಿಯನ್ನು ಮಾಡುವರು. ಒಂದೊಂದುವೇಳೆ ಸಂತಾನರ ದಳವನ್ನು ಯವನ ಸೈನಿಕರು ಸೋಲಿಸಿದರೂ ಆಗಲೇ ಎಲ್ಲಿಂದಲೋ ಮತ್ತೊಂದು ಸಂತಾನ ದಳ ಬಂದು ವಿಜೇತರ ತಲೆಯನ್ನು ಕಡಿದುಹಾಕಿ ಹರಿಹರಿ ಎಂದು ಹೊರಟುಹೋಗುವರು. ರಾಜನಾದ ಅಸದುಲ್ ಜಮಾನನಿಗೆ ಬಹಳ ಕಷ್ಟಕ್ಕೆ ಬಂದಿತು. ಅನೇಕ ಫಿರಂಗಿ ಮದ್ದು ಗುಂಡು ಆನೆ ಕುದುರೆಗಳನ್ನು ಕಳುಹಿಸಿದನು. ಅದರಿಂದ ಸಂತಾನರ "ಜಯ ಜಗದೀಶ ಹರೆ" ಎಂಬ ಶಬ್ದವು ನಿವಾರಣವಾಗಲಿಲ್ಲ. ಅಸದುಲ್ ಜಮಾನನು ತಾನು ರಾಜ್ಯಚ್ಯುತನಾಗುವೆನೆಂದು ತಿಳಿದುಕೊಂಡನು.

ಆಗವನು ಕಾತರನಾಗಿ ಇಂಗ್ಲೀಷರಿಗೆ ಕಾಗದವನ್ನು ಬರೆದ ಕ್ರಮವೇನೆಂದರೆ:—"ನಾನು ಈಗ ರೆವಿನ್ಯು ಹಣವನ್ನು ವಸೂಲ್ಮಾಡುವುದಕ್ಕೆ ಏನುಮಾಡಿದರೂ ಆಗುವುದಿಲ್ಲ; ಇರಸಾಲನ್ನು ಮಾಡಲಾರೆನು; ಈಗ ನೀವು ರಕ್ಷಿಸಿದರೆ ಅನಂತರ ವಸೂಲ್ಮಾಡಬಹುದು; ಇಲ್ಲವಾದರೆ ನೀವೇ ಬಂದು ವಸೂಲ್ಮಾಡಿಕೊಳ್ಳಬೇಕು."

ಇಂಗ್ಲೀಷರು ಮೊದಲು ಕೆಲಕೆಲ ಕಡೆಗಳಲ್ಲಿ ತಾವೇ ಹಣವನ್ನು ವಸೂಲ್ಮಾಡಿಕೊಳ್ಳುತ್ತಿದ್ದರು; ಆದರೆ ಈಗ ಅವರ ಯತ್ನವು ವಿಫಲವಾಗುತ್ತ ಬಂದಿತು. ಈ ಸಮಯದಲ್ಲಿ ಪ್ರಥಿತನಾಮನಾದ ಭಾರತವರ್ಷದ ಇಂಗ್ಲೀಷ ಕುಲೋತ್ಪನ್ನನಾದ ಪ್ರಾತಃಸೂರ್ಯನೋ ಎಂಬ ಹಾಗಿದ್ದ ವಾರನ್ ಹೇಸ್ಟಿಂಗ್ಸ್ ಭಾರತವರ್ಷದ ಗೌರ್ನರ್ ಜನರಲ್ಲಾಗಿದ್ದನು. ಅವನು ಕಲಕತ್ತೆಯಲ್ಲಿ ಕುಳಿತುಕೊಂಡು ಒಂದು ಕಬ್ಬಿಣದ ಸರಪಣಿಯನ್ನು ಮುಂದಿಟ್ಟುಕೊಂಡು ಮನಸ್ಸಿನಲ್ಲಿ ಈಯೊಂದು ಸರಪಣಿ

ಯಿಂದ ಈ ಸಸಾಗರಸದ್ವೀಪ ಭಾರತಭೂಮಿಯನ್ನು ಕಟ್ಟಿಬಿಡುವೆನೆಂದು ಹೇಳಿಕೊಂಡನು. ಒಂದುದಿನ ಜಗದೀಶ್ವರನು ಸಿಹ್ಮಾಸನಾರೂಢನಾಗಿ ಕುಳಿತುಕೊಂಡು ನಿಸ್ಸಂದೇಹವಾಗಿ ತಥಾಸ್ತು ಎಂದನು. ಆದರೆ ಆ ದಿನವು ದೂರವಾಗಿದ್ದಿತು. ಸಂತಾನರ ಭೀಷಣವಾದ ಹರಿಧ್ವನಿಯಿಂದ ವಾರನ್ ಹೇಸ್ಟಿಂಗ್ಸನೂ ಸಹ ಕಂಪಿತನಾದನು.

ವಾರನ್ ಹೇಸ್ಟಿಂಗ್ಸನು ಮೊದಲು ಫೌಜುದಾರಿ ಸೈನ್ಯದಿಂದ ಸಂತಾನರ ರಾಜವಿದ್ರೋಹವನ್ನು ಅಡಗಿಸಲು ಪ್ರಯತ್ನಪಟ್ಟನು. ಆದರೆ ಫೌಜುದಾರಿ ಸಿಪಾಯಿಗಳ ಅವಸ್ಥೆಯು ಬಹಳ ಕೆಟ್ಟುಹೋಗಿ ಒಬ್ಬ ಮುದಿ ಹೆಂಗಸು ಬಾಯಿಯಲ್ಲಿ ಹರಿನಾಮವನ್ನು ಹೇಳಿದರೂ ಕೇಳಿ ಭಯದಿಂದೋಡಿಹೋಗುತಲಿದ್ದರು. ಆದುದರಿಂದ ವಾರನ್ ಹೇಸ್ಟಿಂಗ್ಸನು ನಿರುಪಾಯನಾಗಿ ಸುದಕ್ಷನಾದ ಕೇಪ್ಟನ್ ಥಾಮಸ್ ಎಂಬೊಬ್ಬ ಸೈನಿಕನನ್ನು ಅಧಿನಾಯಕನಾಗಿಮಾಡಿ ಕುಂಪಣಿ ಸೈನ್ಯವನ್ನು ವಿದ್ರೋಹ ನಿವಾರಣಾರ್ಥವಾಗಿ ವೀರಭೂಮಿ ಪ್ರದೇಶಕ್ಕೆ ಕಳುಹಿಸಿಕೊಟ್ಟನು.

ಕೇಪ್ಟನ್ ಥಾಮುಸನು ವೀರಭೂಮಿಗೆ ತಲಪಿ, ಅಲ್ಲಿ ರಾಜವಿದ್ರೋಹ ನಿವಾರಣ ವಿಚಾರವಾಗಿ ಅತ್ಯುತ್ತಮವಾಗಿ ಏರ್ಪಾಡುಗಳನ್ನು ಮಾಡತೊಡಗಿದನು. ರಾಜನ ಸೈನ್ಯವನ್ನೂ ಜಮೀನ್‌ದಾರರ ಸೈನ್ಯಗಳನ್ನೂ ಸಹ ಕೇಳಿ ತೆಗೆದುಕೊಂಡು ಯುದ್ಧದಲ್ಲಿ ಸುಶಿಕ್ಷಿತರಾದ ಕುಂಪಣಿ ಸೈನ್ಯದ ಜತೆಗೂಡಿಸಿ, ಅವರಲ್ಲಿ ಬಲಿಷ್ಠರಾದ ದೇಶ್ಯ ವಿದೇಶ್ಯ ಯೋದ್ಧೃರನ್ನು ಆರಿಸಿ ಪಟಾಲಂಗಳನ್ನಾಗಿ ಮಾಡಿದನು. ಅನಂತರ ಆ ಮಿಶ್ರವಾದ ಸೈನ್ಯವನ್ನು ದಳದಳವಾಗಿ ವಿಂಗಡಿಸಿ ಅವರುಗಳಮೇಲೆ ಉಪಯುಕ್ತರಾದವರನ್ನು ನಿಯಮಿಸಿದನು. ಅನಂತರ ಅವರಿಗೆ ದೇಶಗಳನ್ನು ವಿಭಾಗಮಾಡಿಕೊಟ್ಟು, ನೀವು ಬಲೆಗಾರರ ಹಾಗೆ ಸೋಹು ಹೊಡಿಯುತ್ತ ಹೋಗಬೇಕು, ಎಲ್ಲಿ ವಿದ್ರೋಹಿಗಳು ಸಿಕ್ಕಿದರೂ ಇರಿವೆಗಳನ್ನ ತುಳಿಯುವ ಹಾಗೆ ಧ್ವಂಸಮಾಡಬೇಕು, ಎಂದು ಹೇಳಿ ಕಳುಹಿಸಿದನು. ಕುಂಪಣಿ ಸೈನಿಕರು ಕೆಲವರು ಗಾಂಜ, ಕೆಲವರು 'ರಂ' (ನಿಷಾಮಾಡುವ ಮದ್ಯ) ಹೊಡದು ಬಂದೂಕಿಗೆ ಸನೀನುಗಳನ್ನು ಏರಿಸಿಕೊಂಡು ಸಂತಾನರ ವಧೆಗೆ ಹೊರಟರು. ಆದರೆ ಸಂತಾನರು ಈಗ ಅಸಂಖ್ಯಾಕರಾಗಿ ಅಜೇಯರಾಗಿದ್ದರು. ಕೇಪ್ಟನ್ ಥಾಮುಸಿನ ಸೈನಿಕರು ಕೊಯಿಲು ಕಾಲದಲ್ಲಿ ಕೂಲಿಗಳ ಕುಡುಗೋಲಿಗೆ ಸಿಕ್ಕಿದ ಪೈರಿನಹಾಗೆ ಕತ್ತರಿಸಲ್ಪಟ್ಟರು. ಹರಿಹರಿ ಧ್ವನಿಯಿಂದ ಕೇಪ್ಟನ್ ಥಾಮುಸಿನ ಕಿವಿಗಳು ಕಿವಿಡಾಗಿ ಹೋದವು. ಈ ಪ್ರಕಾರ ೧೭೭೩ನೆ ವರುಷದಲ್ಲಿ ವೀರಭೂಮಿಯಲ್ಲಿ ಸಂತಾನರು ಹೆಸರುಗೊಂಡರು.

---

# ಎರಡನೆಯ ಪರಿಚ್ಛೇದ

ಆ ಕಾಲದಲ್ಲಿ ಕುಂಪಣಿಯವರ ರೇಷ್ಮೆಮಾಡುವ ಕಾರಖಾನೆಗಳು ಸ್ಥಾಪಿತವಾಗಿದ್ದವು. ಶಿವಗ್ರಾಮದಲ್ಲಿ ಒಂದು ಕೋಠಿಯಿತ್ತು. ಡನಿವರ್ತ ಸಾಹೇಬನು ಆ ಕೋಠಿಗೆ ಫಾಕ್ಟರು (Factor) ಅಂದರೆ ಅಧ್ಯಕ್ಷನಾಗಿದ್ದನು. ಕೋಠಿಗಳ ಸಂರಕ್ಷಣೆಯ ವಿಷಯದಲ್ಲಿ ಸರಿಯಾದ ಏರ್ಪಾಡುಗಳಾಗಿದ್ದವು. ಡನಿವರ್ತ ಸಾಹೇಬನು ಹೇಗೋ ಹಾಗೆ ತನ್ನ ಪ್ರಾಣರಕ್ಷಣೆಯನ್ನು ಮಾಡಿಕೊಂಡು ಅಲ್ಲಿ ವಾಸವಾಗಿದ್ದನು. ಆದರೆ ಅವನ ಹೆಂಡರಮಕ್ಕಳನ್ನು ಕಲಕತ್ತೆಗೆ ಕಳುಹಿಸಿ ಕೊಟ್ಟಿದ್ದನು. ಹೀಗಿದ್ದರೂ ಅವನಿಗೆ ಸಂತಾನರ ಹಾವಳಿಯು ತಪ್ಪಿರಲಿಲ್ಲ. ಈ ಸಮಯದಲ್ಲಿ ಆ ಪ್ರದೇಶಕ್ಕೆ ನಾಲ್ಕೈದು ಪಟಾಲಂಗಳ ಸಹಿತವಾಗಿ ಕೇಪ್ಟನ್ ಥಾಮಸ್ ಸಾಹೇಬರ ಸವಾರಿಯು ಚಿತ್ತೈಸಿತ್ತು. ಆ ಸಮಯದಲ್ಲಿ ಕೆಲಹೊಲೆಯರು ಮುಂತಾದ ಕೀಳುಜಾತಿಯರಾದ ಹೊಸದಾಗಿ ಆದ ಸಂತಾನರು ಆ ಕಾಲದ ಉತ್ಸಾಹವನ್ನು ನೋಡಿ ಪರದ್ರವ್ಯಾಪಹರಣದಲ್ಲಿ ಉತ್ಸಾಹಿಗಳಾಗಿದ್ದರು. ಕೇಪ್ಟನ್ ಥಾಮಸ್ ಸಾಹೇಬರು ಸೈನ್ಯದ ಸರಬರಾಯಿಗೋಸ್ಕರ ಉತ್ತಮವಾದ ಅಕ್ಕಿ ತುಪ್ಪ ಗೋಧಿ ಮುಂತಾದ್ದನ್ನು ಭಂಡಿ ಭಂಡಿಗಳ ಮೇಲೆ ತರಿಸುತಲಿದ್ದರು. ಅದನ್ನು ನೋಡಿ ಬಾಯಿನೀರು ಕರಗಿ ಆ ನೂತನವಾಗಿ ಸಂತಾನರಾದ ಹೊಲೆಯರ ಗುಂಪಿಗೆ ಸೇರಿದವರು ಭಂಡಿಗಳಮೇಲೆ ಬಿದ್ದರು. ಆದರೆ ಥಾಮಸಿನ ಶಿಪಾಯಿಗಳ ಕೈಲಿದ್ದ ಬಂದೂಕುಗಳಿಂದ ಪೆಟ್ಟುತಿಂದು ಹಿಂದಿರುಗಿ ಓಡಿಹೋಗಿಬಿಟ್ಟರು. ಕೇಪ್ಟನ್ ಥಾಮಸ್ ಸಾಹೇಬನು ಆ ಕ್ಷಣದಲ್ಲಿಯೇ ಕಲಕತ್ತೆಗೆ ರಿಪೋರ್ಟುಮಾಡಿದನೇನೆಂದರೆ:—ಈ ದಿನ ಒಂದುನೂರೈವತ್ತೇಳು ಕುಂಪಣಿ ಶಿಪಾಯಿಗಳನ್ನು ತೆಗದುಕೊಂಡು ಹೋಗಿ ಹದಿನಾಲ್ಕುಸಾವಿರದ ಏಳುನೂರು ಜನ ರಾಜವಿದ್ರೋಹಿಗಳನ್ನ ಪರಾಜಯಮಾಡಿದ್ದಾಯಿತು. ವಿದ್ರೋಹಿಗಳಲ್ಲಿ ಎರಡುಸಾವಿರದ ನೂರೈವತ್ತುಮೂರು ಜನರು ಹತರಾದರು; ಸಾವಿರದ ಇನ್ನೂರು ಮುವತ್ತುಮೂರು ಜನರು ಘಾಯಪಟ್ಟು ಆಹತರಾದರು, ಏಳುಮಂದಿ ಬಂದಿಗಳಾಗಿ ಸಿಕ್ಕಿದರು. ಕಡೇಮಾತು ಮಾತ್ರ ಸತ್ಯವಾದುದು. ಕೇಪ್ಟನ್ ಥಾಮಸನು ಬ್ಲೇಸಹಿಂ ಅಥವಾ ರಸವಾಕನ ಎರಡನೇ ಯುದ್ಧವನ್ನು ಜಯಿಸಿದೆನೆಂದು ತಿಳಿದುಕೊಂಡು ದಾಡಿ ಮಿಶೆಯನ್ನು ಕಡಿದುಕೊಳ್ಳುತ್ತ ನಿರ್ಭಯನಾಗಿ ಅಲ್ಲಲ್ಲಿ ತಿರುಗಾಡುತಲಿದ್ದನು. ಮತ್ತು ಡನಿವರ್ತ ಸಾಹೇಬನಿಗೆ ಇನ್ನೇನು? ರಾಜವಿದ್ರೋಹವು ನಿವಾರಣವಾಯಿತು. ನಿನ್ನ ಕಳತ್ರಪುತ್ರರನ್ನು ಕಲಕತ್ತೆಯಿಂದ ಕರಿಸಬಹುದೆಂದು ಪರಾಮರ್ಶವನ್ನು ಕೊಟ್ಟನು. ಡನಿವರ್ತ ಸಾಹೇಬನು ಹಾಗಾಗಬಹುದು, ತಾವು ಇಲ್ಲಿ ಹತ್ತುದಿನವಿರೋಣಾಗಲಿ, ದೇಶದ ಸ್ಥಿತಿಯು ಇನ್ನೂ ಸ್ವಲ್ಪ ಸ್ಥಿರಕ್ಕೆ ಬರಲಿ, ಆಮೇಲೆ ನನ್ನ ಹೆಂಡತಿಮಕ್ಕಳು ಬರುವರೆಂದನು. ಡನಿವರ್ತನ ಮನೇಲಿ ಅನೇಕ

ಕುರಿಕೋಳಿಗಳಿದ್ದವು, ಉತ್ತಮವಾದ ಪನ್ನೀರು, ನಾನಾವಿಧವಾದ ಕಾಡು ಹಕ್ಕಿಗಳೂ ಮೃಗಗಳೂ ಅವನ ಮೇಜಿಗೆ ಸಿದ್ಧವಾಗುತಲಿದ್ದವು. ದಾಡಿಯುವನೊಬ್ಬ ಬಬ್ಬರ್ಚಿಯು ಎರಡನೇ ದ್ರೌಪದಿಯಾಗಿದ್ದನು. ಆದಕಾರಣ ಥಾಮಸ ಸಾಹೇಬನು ಹೆಚ್ಚು ಮಾತು ಖರ್ಚುಮಾಡದೆ ಅಲ್ಲಿಯೇ ಇದ್ದುಕೊಂಡಿದ್ದನು.

ಇತ್ತ ಭವಾನಂದನು ಹಲ್ಲು ಕಡಿಯುತ್ತ ಮನಸ್ಸಿನಲ್ಲಿ, ಯಾವಾಗ ಈ ಕೇಪ್ಟನ್ ಥಾಮಸ ಸಾಹೇಬ ಬಹದ್ದೂರನ ತಲೆ ಕಡಿದು ಶಂಬರಾರಿ ಎಂಬ ಉಪಾಧಿ ಯನ್ನು ಪಡೆದೇನೆಂದು ಯೋಚನೆಮಾಡಿಕೊಳ್ಳುತ್ತಿದ್ದನು. ಇಂಗ್ಲೀಷರು ಹಿಂದು ಸ್ಥಾನ ದೇಶವನ್ನು ಉದ್ಧರಿಸುವದಕ್ಕೋಸ್ಕರ ಬಂದಿದ್ದಾರೆಂದು ಸಂತಾನರು ಅರಿಯರು. ಹೇಗೆ ತಿಳಿದಾರು? ಕೇಪ್ಟನ್ ಥಾಮಸನ ಸಮಸಾಮಯಿಕರಾದ ಇತರ ಇಂಗ್ಲೀಷ ಜನರನ್ನು ಅವರರಿಯರು. ಆಗಿನ ಇಂಗ್ಲೀಷರ ಮನಸ್ಸಿನ ಉದ್ದೇಶ್ಯವು ಭಗವಂತನ ಇಷ್ಟದಲ್ಲಿ ಮಾತ್ರವೇ ಇತ್ತು. ಭವಾನಂದನು ಮನಸ್ಸಿನಲ್ಲಿ ಈ ಅಸುರರನ್ನು ನಿಪಾತಮಾಡಿಬಿಡುವೆನು, ಎಲ್ಲರೂ ಒಟ್ಟಿಗೆ ಸೇರಲಿ, ಅವರು ಮೈಮರೆತಿರಲಿ, ನಾನು ಸ್ವಲ್ಪ ದೂರದಲ್ಲಿಯೇ ಇದ್ದುಕೊಂಡಿರುವೆನು ಎಂದು ಮುಂತಾಗಿ ಯೋಚಿಸಿಕೊಂಡು, ಸಂತಾನರೆಲ್ಲರೂ ಕಣ್ಣುಮರೆಯಾಗಿದ್ದುಬಿಟ್ಟರು. ಕೇಪ್ಟನ್ ಥಾಮಸ ಸಾಹೇಬನು ನಿಷ್ಕಂಟಕವಾಗಿ ದ್ರೌಪದಿಯ ಗುಣಗ್ರಹಣದಲ್ಲಿ ನಿವಿಷ್ಟಚಿತ್ತನಾಗಿದ್ದನು.

ಸಾಹೇಬ ಬಹದ್ದೂರನು ಸಿಕಾರಿಯಲ್ಲಿ ಬಹಳ ಇಷ್ಟವುಳ್ಳವನು. ಮಧ್ಯೆ ಮಧ್ಯೆ ಶಿವಗ್ರಾಮಕ್ಕೆ ಸಮೀಪವಾದ ಅರಣ್ಯದಲ್ಲಿ ಬೇಟೆಗೆ ಹೋಗುವುದುಂಟು. ಒಂದುದಿನ ಡನಿವರ್ತನನ್ನು ಸಂಗಡ ಕರೆದುಕೊಂಡು ಕುದುರೆ ಸವಾರನಾಗಿ ಕೆಲವುಜನ ಸಿಕಾರಿಗಳನ್ನು ಜತೆಯಲ್ಲಿ ಕರೆದುಕೊಂಡು ಹೊರಗೆ ಹೊರಟಿದ್ದನು. ಥಾಮಸ ಸಾಹೇಬನು ಅಸಮ ಸಾಹಸಿಕನಾಗಿ ಬಲದಲ್ಲಿ ವೀರ್ಯದಲ್ಲಿ ಸಹ ಇಂಗ್ಲೀಷ್ ಜಾತಿಯವರಲ್ಲಿಯೂ ಕೂಡ ಸಮನಿಲ್ಲದವನಾಗಿದ್ದನು. ಆ ಅರಣ್ಯವು ಹುಲಿ ಕರಡಿ ಕಾಡುಕೋಣ ಮುಂತಾದ ಕಾಡುಮೃಗಗಳಿಂದ ತುಂಬಿತ್ತು. ಜನಗಳು ಅಲ್ಲಿಗೆ ಹೋಗುವುದಕ್ಕೆ ಹೆದರುವರು. ಸಾಹೇಬ ಬಹದ್ದೂರನು ಅರಣ್ಯದಲ್ಲಿ ಸ್ವಲ್ಪದೂರ ಹೋದಮೇಲೆ, ಹಿಂದೆ ಬರುತಲಿದ್ದ ಸಿಕಾರಿಗಳು ಇನ್ನು ಮುಂದೆ ಹೋಗಲು ಒಪ್ಪಲಿಲ್ಲ. ಅಲ್ಲಿ ಮುಂದೆ ಮಾರ್ಗವಿಲ್ಲ, ಹೋಗುವದಕ್ಕಾಗುವದಿಲ್ಲ ವೆಂದು ಹಿಂದೆ ನಿಂತುಹೋದರು. ಡನಿವರ್ತ ಸಾಹೇಬನೂ ಒಂದುಸಲ ಅರಣ್ಯದಲ್ಲಿ ಹುಲಿಗೆ ಇದಿರಾಗಿ ಸಿಕ್ಕಿ ಪಾಡುಪಟ್ಟು ಪೂರ್ವಾನುಭವವು ಪೂರ್ಣವಾಗಿ ಜ್ಞಾಪಕ ದಲ್ಲಿದ್ದು, ಮುಂದೆ ಹೋಗುವದಕ್ಕೆ ಇಷ್ಟಪಡಲಿಲ್ಲ. ಎಲ್ಲರೂ ಹಿಂದಿರುಗಬೇಕೆಂದು ಹೇಳಿದರು. ಕೇಪ್ಟನ್ ಥಾಮಸ ಸಾಹೇಬನು, ನೀವು ಹಿಂದಿರುಗಿ ಹೋಗಿ, ನಾನು ಬರುವದಿಲ್ಲವೆಂದು ಹೇಳಿ ನಿಬಿಡವಾದ ಅರಣ್ಯ ಮಧ್ಯದಲ್ಲಿ ಪ್ರವೇಶಮಾಡಿದನು.

ವಸ್ತುತಃ, ಅರಣ್ಯ ಮಧ್ಯದಲ್ಲಿ ಮಾರ್ಗವೇ ಇರಲಿಲ್ಲ. ಕುದುರೆ ಹೋಗು

ಪದಕ್ಕೂ ದಾರಿ ಇಲ್ಲ. ಆದರೂ ಸಾಹೇಬನು ಕುದುರೆಯನ್ನು ಬಿಟ್ಟುಬಿಟ್ಟು ಹೆಗಲಿನ ಮೇಲೆ ಬಂದೂಕನ್ನು ಇಟ್ಟುಕೊಂಡು ಒಬ್ಬನೇ ಅರಣ್ಯದಲ್ಲಿ ಹೋದನು. ಅಲ್ಲಲ್ಲಿ ಹುಲಿಯನ್ನು ಹುಡುಕಿಕೊಂಡು ಹೋದನು. ಹುಲಿಯು ಸಿಕ್ಕಲಿಲ್ಲ. ನೋಡಿದ್ದೇನು ? ಒಂದು ದೊಡ್ಡ ಮರದ ಬುಡದಲ್ಲಿ ಪ್ರಸ್ಫುಟಿತವಾದ ಫುಲ್ಲಕುಸುಮಯುಕ್ತವಾದ ಲತಾಗುಲ್ಮಾದಿಗಳಿಂದ ಸುತ್ತುವರಿಯಲ್ಪಟ್ಟು ಕುಳಿತಿದ್ದದ್ದು ಏನು ?—ಹುಲಿಯೆ ? ಹುಲಿಯಲ್ಲ. ಒಬ್ಬ ಸನ್ಯಾಸಿ; ಆ ರೂಪದಿಂದ ವನವೆಲ್ಲಾ ಬೆಳಕಾಗಿತ್ತು. ಪ್ರಸ್ಫುಟಿತವಾದ ಆ ಹೂವುಗಳು ಆ ದೇವಸದೃಶವಾದ ಶರೀರದ ಸಂಸರ್ಗದಿಂದ ಅಧಿಕತರವಾಗಿ ಸುಗಂಧಯುಕ್ತವಾದುವು. ಕೇಪ್ಟನ್ ಥಾಮಸ್ ಸಾಹೇಬನು ವಿಸ್ಮಿತನಾದನು. ವಿಸ್ಮಿತನಾದಮೇಲೆ ಕೋಪವನ್ನು ತಾಳಿದನು. ಕೇಪ್ಟನ್ ಸಾಹೇಬನಿಗೆ ದೇಶಭಾಷೆಯು ಚನ್ನಾಗಿ ಬರುತಲಿತ್ತಾದಕಾರಣ, ನೀನು ಯಾಡೆಂದು ಕೇಳಿದನು. ('ರ' ಕಾರಕ್ಕೆ ಬದಲಾಗಿ 'ಡ'ಕಾರ ಪ್ರಯೋಗ.)

ಸನ್ಯಾಸಿ—ನಾನು ಸನ್ಯಾಸಿ.

ಕೇಪ್ಟನ್—ನೀನು ರಾಜದ್ರೋಹಿ (Rebel).

ಸನ್ಯಾಸಿ—ಅದೇನು ?

ಕೇಪ್ಟನ್—ನಾನು ನಿನ್ನನ್ನು ಗುಂಡಿನಿಂದ ಹೊಡಿಯುವೆನು.

ಸನ್ಯಾಸಿ—ಹೊಡಿ.

ಕೇಪ್ಟನ್ನಿನ ಮನಸ್ಸಿನಲ್ಲಿ ಹೊಡಿಯಲೋ ಬೇಡವೊ ಎಂದು ಯೋಚಿಸುತ್ತಿದ್ದಹಾಗೆ ಮಿಂಚಿನ ವೇಗದಿಂದ ಆ ನವೀನ ಸನ್ಯಾಸಿಯು ಅವನ ಮೇಲೆ ಬಿದ್ದು ಅವನ ಕೈಯಿಂದ ಬಂದೂಕನ್ನು ಕಿತ್ತುಕೊಂಡುಬಿಟ್ಟನು. ಸನ್ಯಾಸಿಯು ವಕ್ಷಾವರಣವಾಗಿದ್ದ ಚರ್ಮವನ್ನು ಬಿಚ್ಚಿಬಿಟ್ಟನು. ಮೀಸೆ ದಾಡಿಯನ್ನೂ ಜಟೆಯನ್ನೂ ಎಳದು ಬಿಸಾಟನು. ಥಾಮಸನು ನೋಡುತ್ತಿದ್ದ ಹಾಗೆ ಬಂದಪೂರ್ವವಾದ ಸುಂದರ ಸ್ತ್ರೀಮೂರ್ತಿಯು ನಿಂತಿತು. ಸುಂದರಿಯು ನಗುನಗುತ, ಸಾಹೇಬ! ನಾನು ಹೆಂಗಸು; ಯಾರನ್ನೂ ಆಘಾತಮಾಡುವುದಿಲ್ಲ; ಹಿಂದುಗಳಿಗೂ ಮುಸಲ್ಮಾನರಿಗೂ ಕಸರ್ವ ಕದನವಾಗುತ್ತೆ; ಮಧ್ಯೆ ನೀವೇತಕ್ಕೆ ಬರಬೇಕು ? ನೀವು ಮನೆಗೆ ಹಿಂದಿರುಗಬೇಕು ಎಂದಳು.

ಸಾಹೇಬ—ನೀನು ಯಾರು ?

ಶಾಂತಿ—ನೋಡು, ನಾನು ಹೆಂಗಸು. ಯಾರ ಸಂಗಡ ಯುದ್ಧಮಾಡುವುದಕ್ಕೆ ನೀನು ಬಂದಿದ್ದೀಯೋ ಅವರಲ್ಲಿ ಒಬ್ಬನ ಹೆಂಡತಿ.

ಸಾಹೇಬ— ನೀನು ನನ್ನ ಕುದುರೆಮೇಲೆ ಕೂಡುವಿಯಾ ?

ಶಾಂತಿ—ಏತಕ್ಕೆ ? ನಿನ್ನ ಉಪಪತ್ನಿಯಾಗಿಯೆ ?

ಕೇಪ್ಟನ್—ಯಜಮಾನಿಯಾಗಿ—ಆದರೆ ಮದುವೆಮಾಡಿಕೊಳ್ಳಲಾರೆನು.

ಶಾಂತಿ—ನಾನೂ ಹೇಳತಕ್ಕದ್ದೊಂದುಂಟು; ನಮ್ಮ ಮನೆಯಲ್ಲಿ ಒಂದು

ಸೊಗಸಾದ ಕಪಿಯು ಇತ್ತು; ಅದು ಸತ್ತುಹೋಯಿತು. ಪಂಜರವು ಖಾಲಿಯಾಗಿದೆ. ಪಂಜರದಲ್ಲಿ ಒಳ್ಳೆ ಹೆಂಡವನ್ನು ಕೊಡುವೆನು, ನೀನು ಆ ಪಂಜರಕ್ಕೆ ಬರುವಿಯು? ನಮ್ಮ ತೋಟದಲ್ಲಿ ಒಳ್ಳೇ ರಸಬಾಳೆಹಣ್ಣು ಉಂಟು.

ಸಾಹೇಬ—ನೀನು ಬಹಳ ವೀರಾಂಗನೆ (Spirited Woman) ಆಗಿದ್ದಿ; ನಿನ್ನ ಧೈರ್ಯ ಶೌರ್ಯ (Courage) ನೋಡಿ ನನಗೆ ಬಹಳ ಸಂತೋಷವಾಯಿತು. ನೀನು ನನ್ನ ಕುದುರೆಮೇಲೆ ಸವಾರಳಾಗು. ನಿನ್ನ ಸ್ವಾಮಿಯು ಯುದ್ಧದಲ್ಲಿ ಸತ್ತುಹೋಗುವನು. ಆಗ ನೀನೇನಾಗುವೆ?

ಶಾಂತಿ—ಹಾಗಾಗುವುದಾದರೆ, ನಾನೂ ನೀನೂ ಒಂದು ಶಪಥ ಮಾಡೋಣ. ಯುದ್ಧವು ಇನ್ನು ಎರಡು ಮೂರು ದಿನಗಳಲ್ಲಿ ಆಗುವುದು, ನೀನು ಜಯಿಸಿದರೆ ನಾನು ನಿನ್ನ ಉಪಪತ್ನಿಯಾಗುವೆನು—ಜೀವದಿಂದ ಇದ್ದು ನಾವು ಜಯಿಸಿದರೆ, ನೀನು ಬಂದು ನಮ್ಮ ಗೂಡಿನಲ್ಲಿದ್ದುಕೊಂಡು ರಸಬಾಳೆಹಣ್ಣು ತಿಂದುಕೊಂಡು ಇರುವಿಯಾ?

ಸಾಹೇಬ—ಬಾಳೆಹಣ್ಣು ತಿನ್ನುವುದಕ್ಕೆ ಉಟ್ಟಮವಾದದ್ದು (ಉತ್ತಮವಾದುದು). ಈಗ ಇದೀಯೋ ಏನು?

ಶಾಂತಿ—ತೆಗೆದುಕೊ, ನಿನ್ನ ಬಂದೂಕನ್ನು ತೆಗೆದುಕೊ. ಇಂಥಾ ಹೊಸ ಜಯಶಾಲಿಗಳ ಸಂಗಡ ಯಾರುತಾನೇ ಮಾತುನಾಡುವರು?

ಶಾಂತಿಯು ಬಂದೂಕನ್ನು ಬಿಸಾಟು ನಗುನಗುತ ಹೊರಟುಹೋದಳು.

---

## ಮೂರನೆಯ ಪರಿಚ್ಛೇದ

ಶಾಂತಿಯು ಸಾಹೇಬನನ್ನು ಬಿಟ್ಟು ಹರಿಣಿಯಹಾಗೆ ವೇಗದಿಂದ ವನಮಧ್ಯದಲ್ಲಿ ಎಲ್ಲಿಯೋ ಹೊರಟುಹೋದಳು. ಸ್ವಲ್ಪ ಹೊತ್ತಿನ ಮೇಲೆ ಸಾಹೇಬನು ಸ್ತ್ರೀಕಂಠದಿಂದ ಮಧುರವಾದ ಸಂಗೀತವನ್ನು ಕೇಳಿದನು.

ಈ ಯೌವನಜಲತರಂಗವರೋಧಿಪನ್ಯಾರೊ?
ಹರೆ ಮುರಾರೆ! ಹರೆ ಮುರಾರೆ!

ಪುನಃ ಮತ್ತೊಲ್ಲೋ ಸಾರಂಗದ ಮಧುರವಾದ ಧ್ವನಿಯು ನುಡಿಸಿದ್ದು ಕೇಳಿಸಿತು.

ಈ ಯೌವನಜಲತರಂಗವರೋಧಿಪನ್ಯಾರೊ?
ಹರೆ ಮುರಾರೆ! ಹರೆ ಮುರಾರೆ!

ಅದರ ಸಂಗಡ ಪುರುಷ ಕಂಠವು ಸೇರಿ ಸಂಗೀತವು ಕೇಳಿಸಿತು.

ಈ ಯೌವನಜಲತರಂಗವರೋಧಿಪನ್ಯಾರೊ?
ಹರೆ ಮುರಾರೆ! ಹರೆ ಮುರಾರೆ!

ಮೂರು ಸ್ವರವೂ ಕೂಡಿ ಒಂದಾಗಿ ಸೇರಿ ವನದ ಲತೆಗಳೆಲ್ಲ ಕಂಪಿತವಾದವು. ಶಾಂತಿಯು ಗಾನಮಾಡುತ್ತ ಹೊರಟುಹೋದಳು.

ಆ ನಿಬಿಡವಾದ ವನದಲ್ಲಿ ಏನಿದೆ ಎಂಬುದು ಹೊರಗಿನಿಂದ ಗೋಚರವಿಲ್ಲ. ಶಾಂತಿಯು ಆ ವನಮಧ್ಯದಲ್ಲಿ ಪ್ರವೇಶಮಾಡಿದಳು. ಅಲ್ಲಿ ಆ ಶಾಖಾಪಲ್ಲವ ರಾಶಿಯೊಳಗೆ ಒಂದು ಚಿಕ್ಕದಾದ ಕುಟೀರವಿತ್ತು. ಮರದ ರಂಬೆಗಳಿಂದ ಕಟ್ಟಿ, ಎಲೆಗಳಿಂದ ಹೊದ್ದಿಸಲ್ಪಟ್ಟು, ತಡಿಕೆ ಕಟ್ಟಿ ಮಣ್ಣಿನಿಂದ ಒರೆಯಲ್ಪಟ್ಟ ಗೋಡೆಗಳುಳ್ಳದ್ದಾಗಿತ್ತು. ಅದಕ್ಕೆ ಲತೆಗಳಿಂದ ಮಾಡಲ್ಪಟ್ಟ ಬಾಗಿಲು. ಆ ಬಾಗಿಲನ್ನು ತೆಗದು ಶಾಂತಿಯು ಅದರೊಳಗೆ ಪ್ರವೇಶಮಾಡಿದಳು. ಅಲ್ಲಿ ಜೀವಾನಂದನು ಸಾರಂಗವನ್ನು ನುಡಿಸುತ ಕುಳಿತಿದ್ದನು.

ಜೀವಾನಂದನು ಶಾಂತಿಯನ್ನು ನೋಡಿ, ಇಷ್ಟು ದಿನಗಳ ಮೇಲೆ ಜಲ ತರಂಗವು ಉಕ್ಕಿ ಪ್ರವಹಿಸಿತೆ? ಎಂದನು.

ಶಾಂತಿಯು ನಕ್ಕು, ಅಡ್ಡಕಟ್ಟು ಹಾಕಿರುವ ಕಟ್ಟೆಯಮೇಲೆ ಉಕ್ಕಿ ಪ್ರವಹಿಸುವುದು ಹೇಗೆ? ಎಂದುತ್ತರವನ್ನು ಕೊಟ್ಟಳು.

ಜೀವಾನಂದನು ಮುಖಕಂದಿದವನಾಗಿ ನೋಡು, ಶಾಂತಿ! ಒಂದುದಿನ ವೇನೋ ನನ್ನ ವ್ರತವು ಭಂಗವಾಗಿ ನನ್ನ ಪ್ರಾಣವು ಉತ್ಸರ್ಗವಾಗಿ ಹೋಗಿಬಟ್ಟಿದೆ. ಆ ಪಾಪಕ್ಕೆ ಪ್ರಾಯಶ್ಚಿತ್ತವಾಗಬೇಕು. ಇಷ್ಟುದಿನಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದ್ದೆನು; ಕೇವಲ ನಿನ್ನ ಕೋರಿಕೆಯಿಂದ ಮಾಡಿಕೊಳ್ಳಲಿಲ್ಲ. ಇನ್ನು ಘೋರವಾದ ಯುದ್ಧವಾಗುವುದಕ್ಕೆ ಹೆಚ್ಚು ವಿಳಂಬವಿಲ್ಲ. ಆ ಯುದ್ಧ ಕ್ಷೇತ್ರದಲ್ಲಿ ನಾನು ಆ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ತೀರಬೇಕು. ಈ ಪ್ರಾಣವನ್ನು ಪರಿತ್ಯಾಗ ಮಾಡಲೇಬೇಕು. ನಾನು ಸಾಯುವ ಪರ್ಯಂತವೂ ಈ ಬ್ರಹ್ಮಚರ್ಯವೆ—

ಶಾಂತಿ—ನಾನು ನಿನ್ನ ಧರ್ಮಪತ್ನೀ, ಸಹಧರ್ಮಿಣೀ, ಧರ್ಮದಲ್ಲಿ ಸಹಾಯವನ್ನು ಮಾಡುವವಳು. ನೀನು ಅತಿಶಯವಾದ ಗುರುತರವಾದ ಧರ್ಮವನ್ನು ಗ್ರಹಣಮಾಡಿದ್ದೀಯೇ. ಆ ಧರ್ಮದಲ್ಲಿ ಸಹಾಯಮಾಡುವುದಕ್ಕೋಸ್ಕರವೇ ನಾನು ಗೃಹವನ್ನು ತ್ಯಾಗಮಾಡಿ ಬಂದಿದ್ದೇನೆ. ಇಬ್ಬರೂ ಏಕತ್ರ ಇದ್ದುಕೊಂಡು ಆ ಧರ್ಮಾಚರಣೆಯನ್ನು ಮಾಡೋಣವೆಂದು ಗೃಹಪರಿತ್ಯಾಗವನ್ನು ಮಾಡಿ ಬಂದು ವನದಲ್ಲಿ ವಾಸಮಾಡುತ್ತೇನೆ. ನಿನ್ನಾ ಧರ್ಮವನ್ನು ವೃದ್ಧಿಮಾಡುವೆನು. ಧರ್ಮಪತ್ನಿಯಾಗಿ ಆ ಧರ್ಮವನ್ನು ಏತಕ್ಕೆ ವಿಘ್ನಮಾಡಲಿ? ವಿವಾಹವು ಇಹಕಾಲಕ್ಕೂ ಹೌದು, ಮತ್ತು ಪರಕಾಲಕ್ಕೂ ಹೌದು. ಇಹಕಾಲಕ್ಕೋಸ್ಕರವೇ ನಾನು ನಿನ್ನನ್ನು ಮದುವೆಯಾಗಲಿಲ್ಲ. ಅದು ನೀನು ಬಲ್ಲೆ. ನಮ್ಮಿಬ್ಬರ ವಿವಾಹವು ಪರಕಾಲಕ್ಕೋಸ್ಕರವಾಗಿ ಆಗಿರುವುದು. ಪರಕಾಲದಲ್ಲಿ ಫಲವು ಒಂದಕ್ಕೆರಡಾಗುವುದು. ಹಾ! ಪ್ರಭುವೆ! ನೀನು ನನಗೆ ಗುರು. ನಾನು ನಿನಗೆ

ಧರ್ಮವನ್ನು ಹೇಳಿಕೊಡಲೆ? ನೀನು ವೀರನು, ನಿನಗೆ ಆ ವೀರ ವ್ರತವನ್ನು ಕಲಿಸಲೆ?

ಜೀವಾನಂದನು ಆಹ್ಲಾದದಿಂದ ಗದ್ಗದಸ್ವರವುಳ್ಳವನಾಗಿ, ನೀನು ಕಲಿಸಿಯೇ ನಾನು ಕಲಿತುಕೊಂಡದ್ದು, ಎಂದನು.

ಶಾಂತಿಯು ಪ್ರಫುಲ್ಲಚಿತ್ತಳಾಗಿ—ಕೇಳು ಇನ್ನು, ಗೋಸಾಯಿ! ಇಹಕಾಲದಲ್ಲಿಯೇ ನಮ್ಮ ವಿವಾಹವು ನಿಷ್ಫಲವೆ? ನೀನು ನನ್ನನ್ನು ಪ್ರೀತಿಸುತ್ತಿ, ನಾನು ನಿನ್ನನ್ನು ಪ್ರೀತಿಸುತ್ತೇನೆ, ಇದಕ್ಕಿಂತಲೂ ಇಹಕಾಲದಲ್ಲಿ ಇನ್ನೇನು ಹೆಚ್ಚಾದ ಫಲ ಬೇಕು? ಹೇಳು—'ವಂದೇ ಮಾತರಂ.'

ಆಗ ಅವರಿಬ್ಬರೂ ಜತೆಯಾಗಿ ಒಂದೇ ಕೊರಳಿನಿಂದ "ವಂದೇ ಮಾತರಂ" ಹಾಡಿದರು. ಗಾನಮಾಡುತ್ತಿದ್ದಹಾಗೆಯೇ ಇಬ್ಬರೂ ಕಣ್ಣೀರುಬಿಟ್ಟುಕೊಂಡು ಅತ್ತರು.

---

## ನಾಲ್ಕನೆಯ ಪರಿಚ್ಛೇದ

ಭವಾನಂದಗೋಸ್ವಾಮಿಯು ಒಂದು ತಡವೆ ರಾಜನಗರಕ್ಕೆ ಬಂದು ಪ್ರಶಸ್ತವಾದ ರಾಜಬೀದಿಯನ್ನು ಬಿಟ್ಟು ಕತ್ತಲೆಯಾದ ಒಂದು ಸಂದಿನಲ್ಲಿ ಹೋದನು. ಸಂದಿನ ಎರಡು ಪಾರ್ಶ್ವದಲ್ಲಿಯೂ ದೊಡ್ಡ ದೊಡ್ಡ ಮಹಡೀಮನೆಗಳು. ಸೂರ್ಯದೇವನು ಮಧ್ಯಾಹ್ನದಲ್ಲಿ ಮಾತ್ರ ಒಂದುಸಲ ಸಂದನ್ನು ಇಣಿಕಿ ನೋಡುತ್ತಲಿದ್ದನು. ಆದರಮೇಲೆ ಅಲ್ಲಿ ಅಂಧಕಾರದ ಅಧಿಕಾರವಾಗಿರುವುದು. ಸಂದಿನಲ್ಲಿ ಒಂದು ಎರಡಂತಸ್ತಿನ ಮಹಡಿಮನೆಯೊಳಗೆ ಭವಾನಂದ ಠಾಕೂರನು ಪ್ರವೇಶಿಸಿದನು. ಮೊದಲಿನ ಅಂತಸ್ತಿನ ಒಂದು ಚಿಕ್ಕಮನೆಯಲ್ಲಿ ಅರ್ಧವಯಸ್ಕಳಾದ ಹೆಂಗಸೊಬ್ಬಳು ಅಡಿಗೆಮಾಡುತಲಿದ್ದಳು. ಅಲ್ಲಿಗೆ ಹೋಗಿ ಭವಾನಂದ ಮಹಾಪ್ರಭುವು ದರ್ಶನವನ್ನು ಕೊಟ್ಟನು. ಹೆಂಗಸು ಅರ್ಧವಯಸ್ಕಳು, ಕಪ್ಪಾಕಾರ, ಟೊಣಪಿಯಾದವಳು. ಕೆಂಪುಶೀರೆ ಉಟ್ಟವಳು, ಅಚ್ಚಕಪ್ಪು, ಗಲ್ಲದಲ್ಲಿ ಹಚ್ಚೆಯನ್ನು ಕುಕ್ಕಿಸಿಕೊಂಡಿದ್ದಳು. ಸೀಮಂತಪ್ರದೇಶದಲ್ಲಿ ಕೇಶದಾಮವು ಚೂಡಾಕಾರವಾಗಿ ಶೋಭಿಸುತಲಿತ್ತು; ಸೌಟನ್ನು ಅನ್ನದ ತಪ್ಪಲೆಯಲ್ಲಿ ಹಾಕಿ ಠನಠನ ಶಬ್ದಮಾಡುತ ತಿರುಗಿಸುತ್ತಿದ್ದಳು. ಫರಫರ ಎಂದು ಅಳಕಾವಳಿಯ ಕೇಶಗುಚ್ಛವು ಹಾರುತಲಿತ್ತು, ಪಿಟಿಪಿಟಿ ಎಂದು ತನಗೆತಾನೇ ಏನೋ ಹೇಳಿಕೊಳ್ಳುತ್ತಿದ್ದಳು. ಅವಳ ಮುಖಭಂಗಿಯು ವಿಕಾರವಾದಹಾಗೆಲ್ಲ ತಲೇಮೇಲಿನ ಚೂಡಾಕಾರವಾದ ಗಂಟು ನಾನಾಪ್ರಕಾರವಾಗಿ ಅಲುಗಾಡುತಲಿತ್ತು. ಈ ಸಮಯದಲ್ಲಿ ಭವಾನಂದಪ್ರಭು ಮನೆಯೊಳಗೆ ಪ್ರವೇಶಿಸಿದನು. ಪ್ರವೇಶಿಸಿ, ಏನು, ಠಾಕೂರಾಣಿ! ಎದ್ದಿರಾ? ನಮಸ್ಕಾರ ಮಾಡುತ್ತೇನೆಂದನು.

ಠಾಕೂರಾಣಿಯು ಭವಾನಂದನನ್ನು ನೋಡಿ ಘಾಬರಿಯಾಗಿ ಬಟ್ಟೆಯನ್ನು ಸರಿಮಾಡಿಕೊಳ್ಳಲಾರಂಭಿಸಿದಳು. ಮಸ್ತಕದಲ್ಲಿದ್ದ ಚೂಡಾಕಾರವಾದ ಗಂಟನ್ನು ಬಿಚ್ಚಿಬಿಡಬೇಕೆಂದು ಇಷ್ಟ, ಆದರೆ ಅನುಕೂಲಿಸಲಿಲ್ಲ; ಏತಕ್ಕಂದರೆ, ಕೈಯಲ್ಲಿ ಸೂಟಕ, ಕೈತೊಳದಿರಲಿಲ್ಲ. ಎಣ್ಣೆಯಿಂದ ಮಸೃಣವಾದ ಆ ಚಿಕುರಜಾಲ—ಅಯ್ಯೋ! ಅದರಲ್ಲಿ ಪೂಜೇ ಸಮಯದ ಒಂದು ವಕುಳಪುಷ್ಪವು ಸಿಕ್ಕಿಕೊಂಡಿತ್ತು, ಶರಗಿನಿಂದ ಮುಚ್ಚಿಕೊಳ್ಳಲು ಪ್ರಯತ್ನಪಟ್ಟಳು. ಅದು ಸಾಧ್ಯವಾಗಲಿಲ್ಲ. ಏತಕ್ಕಂದರೆ, ಠಾಕೂರಾಣಿಯು ಒಂದು ಐದುಮೊಳದ ಕೆಂಪುಬಟ್ಟೆಯನ್ನು ಸುತ್ತಿಕೊಂಡಿದ್ದಳು. ಆ ಐದುಮೊಳದ ಬಟ್ಟೆಯು ಮೊದಲು ಆ ಗುರುಭಾರಪ್ರಣತವಾದ ಉದರಪ್ರದೇಶವನ್ನು ಸುತ್ತಿಕೊಂಡು ಬರುವುದರಲ್ಲಿ ಪೂರೈಸುತ್ತಬಂದು ಅದರ ಮೇಲೆ ದುಸ್ಸಹ ಭಾರಗ್ರಸ್ತವಾದ ಹೃದಯಮಂಡಲದಲ್ಲಿಯೂ ಮಾಸವನ್ನು ಮುಚ್ಚುವಷ್ಟು ಪರದೆಯಾಗುವುದರೊಳಗೆ ಕೊನೆಗಂಡುಹೋಯಿತು. ಭುಜದ ಮೇಲೆ ಬರುವಷ್ಟು ಶರಗು ಬರಲಿಲ್ಲ. ಶರಗು ಬಲದ ಕಿವಿಯ ಹತ್ತಿರ ಬಂದು ಇನ್ನು ಮುಂದು ಹೋಗಲಾರೆನೆಂದು ಹೇಳಿತು. ಮುಂದೆ ಮಾಡುವದೇನು? ವ್ರೀಡಾವನತಳಾಗಿ ಗೌರೀಠಾಕೂರಾಣಿಯು ಇದ್ದಷ್ಟು ಶರಗನ್ನು ಕಿವಿಯವರೆಗೆ ಎಳದುಕೊಂಡು ಇನ್ನುಮುಂದೆ ಎಂಟುಮೊಳದ ಬಟ್ಟೆಯನ್ನು ತೆಗದುಕೊಳ್ಳಬೇಕೆಂದು ಮನಸ್ಸಿನಲ್ಲಿ ದೃಢವಾದ ಪ್ರತಿಜ್ಞಾಬದ್ಧಳಾಗಿ ಏನು, ಗೋಸಾಯಿಗಳೆ! ನನಗೆ ಏತಕ್ಕೆ ನಮಸ್ಕಾರ! ಅಣ್ಣ!

ಭವಾನಂದ—ನೀನು ಅಕ್ಕನಲ್ಲವೆ?

ಗೌರಿ—ಏನೋ ಅಪ್ಪ! ನಿಮ್ಮ ಅಂತಃಕರಣ. ನೀವು ಗೋಸಾಯಿಗಳು, ದೇವರಹಾಗೆ, ಹೇಗೆಮಾಡಿದರೂ ಸರಿಯೆ, ಮುಖ್ಯ ಚೆನ್ನಾಗಿರಿ, ನಮಸ್ಕಾರ ಮಾಡಿದರೂ ಮಾಡಬಹುದು. ಎಷ್ಟಾದರೂ ನಾನು ವರುಷದಲ್ಲಿ ದೊಡ್ಡವಳು.

ಭವಾನಂದನಿಗಿಂತಲೂ ಗೌರಿದೇವಿಯು ೩೦–೩೫ ವರುಷ ದೊಡ್ಡವಳು, ಆದರೂ ಚತುರನಾದ ಭವಾನಂದನು ಇದೇನಕ್ಕಾ! ವಿನೋದಕ್ಕೆ ಹೇಳುವ ಹಾಗಿದೆ. ಲೆಕ್ಕಮಾಡಿ ನೋಡಿದರೆ ನೀನು ನನಗಿಂತಲೂ ಆರು ವರುಷ ಚಿಕ್ಕವಳಲ್ಲವೆ, ಜ್ಞಾಪಕವಿಲ್ಲವೇನು? ನಮ್ಮ ವೈಷ್ಣವರಲ್ಲಿ ಎಲ್ಲ ಬಗೆಯವರೂ ಉಂಟು. ಮಠಾಧಿಕಾರಿ ಬ್ರಹ್ಮಚಾರಿಗೆ ಹೇಳಿ ನಿನ್ನನ್ನು ಕೂಡಿಕೆಮಾಡಿಕೊಳ್ಳಬೇಕೆಂದು ಇಷ್ಟವುಂಟಾಗಿ, ಹೇಳಿಹೋಗೋಣವೆಂದು ಬಂದೆನೆಂದನು.

ಗೌರಿ—ಛೀ! ಅದೆಂಥಾ ಮಾತು! ಇಂಥಾ ಮಾತು ಹೇಳಬಹುದೆ! ನಾನು ಅಪ್ಪಟವಾದ ವಿಧವೆ.

ಭವಾನಂದ—ಹಾಗಾದರೆ ಕೂಡಿಕೆ ಆಗಕೂಡದೇನು?

ಗೌರಿ—ನಿಮ್ಮಿಷ್ಟ, ನಿಮಗೆ ತಿಳಿದುದು ಮಾಡಿ, ನೀವು ಪಂಡಿತರು, ನಾನು ಹೆಣ್ಣುಹೆಂಗಸು, ಏನು ಗೊತ್ತು? ಅದು ಯಾವಾಗ?

ಭವಾನಂದನು ಅತಿಕಷ್ಟದಿಂದ ಹಾಸವನ್ನು ಅಡಗಿಸಿಕೊಂಡು, ಆ ಬ್ರಹ್ಮಚಾರಿಯನ್ನು ಒಂದುಸಲ ನೋಡಿದಕೂಡಲೇ ಆಗುತ್ತೆ—ಮತ್ತು—ಅದು ಇರಲಿ ಅವಳು ಹೇಗೆ ಇದ್ದಾಳೆ? ಎಂದು ಕೇಳಿದನು.

ಗೌರೀದೇವಿಯು ಮುಖಬಾಡಿದವಳಾಗಿ ಮನಸ್ಸಿನಲ್ಲಿ, ಕೂಡಿಕೆ ಮಾತ ಹುಡುಗಾಟವಾಗಿರಬಹುದೆಂದಂದುಕೊಂಡು ಇನ್ನು ಹೇಗೆ ಇದ್ದಾಳು? ಇರುವ ಹಾಗೆ ಇದ್ದಾಳೆಂದಳು.

ಭವಾನಂದ—ನೀನೊಂದು ಸಲ ಹೋಗಿ ನೋಡಿಕೊಂಡು, ನಾನು ಬಂದಿದ್ದೇನೆ, ನೋಡಿಕೊಂಡು ಹೋಗುತ್ತೇನೆಂದು ಹೇಳಿ, ಬಾ.

ಗೌರೀದೇವಿಯು ಕೈಲಿದ್ದ ಸೊಟಕವನ್ನು ಕೆಳಗೆ ಹಾಕಿ ಕೈ ತೊಳದುಕೊಂಡು, ಮಹಡಿಗೆ ಹೋಗುವ ದೊಡ್ಡದೊಡ್ಡ ಮೆಟ್ಟಿಲುಗಳು ಬಳಕುವಹಾಗೆ ಹತ್ತಿಹೋದಳು. ಒಂದು ಚಿಕ್ಕಮನೆಯಲ್ಲಿ ಹರಕು ಚಾಪೆಯ ಮೇಲೆ ಒಬ್ಬ ಪೂರ್ವವಾದ ಸುಂದರಿಯು ಕುಳಿತಿದ್ದಳು. ಆದರೆ ಆ ಸೌಂದರ್ಯದಮೇಲೆ ಒಂದು ಘೋರತರವಾದ ಛಾಯೆಯು ಬಿದ್ದಿತ್ತು. ಮಧ್ಯಾಹ್ನದಲ್ಲಿ ಕುಲಪರಿಪಾವಸಿಯಾದ ಪ್ರಸನ್ನ ಸಲಿಲೆಯಾದ ವಿಪುಲ ಜಲ ಕಲ್ಲೋಲಿನಿಯಾದ ಸ್ರೋತಸ್ವತಿಯಾದ ಗಂಗೆಯ ವಕ್ಷದಮೇಲೆ ಅತಿ ನಿಬಿಡವಾದ ಮೇಘದ ಛಾಯೆಯಹಾಗೆ ಯಾವದೋ ಛಾಯೆಯು ಬಿದ್ದಿತ್ತು. ನದೀಹೃದಯದಲ್ಲಿ ತರಂಗವು ಚದುರುತಲಿದೆ, ತೀರದಲ್ಲಿ ಪುಷ್ಪಿತವಾದ ತರುಕುಲವು ವಾಯುವಿನಿಂದ ತೂಗಾಡುತಲಿದೆ, ಘನಪುಷ್ಪಭಾರದಿಂದ ಬಗ್ಗುತಲಿದೆ, ಅಟ್ಟಾಳಿಕಾ ಶ್ರೇಣಿಯು ಶೋಭಿಸುತಲಿದೆ, ತರಣೀಗಳ ಶ್ರೇಣಿಯಿಂದ ತಾಡಿತವಾಗಿ ಜಲವು ಆಂದೋಳಿತವಾಗುತಲಿದೆ; ಮಧ್ಯಾಹ್ನಕಾಲ, ಆದರೂ ಆ ನಿಬಿಡವಾದ ಮೇಘಮಾಲೆಯು ಕಪ್ಪಾದ ಛಾಯೆಯಲ್ಲಿ ಸಕಲವಾದ ಶೋಭಾಕಾಂತಿಯೂ ಕಾಲಿಮಾಮಯವಾಗಿದೆ. ಇದೂ ಹಾಗೆಯೇ, ಮೊದಲಿನ ಹಾಗೆ ಅದೇ ಮನೋಹರವಾದ ನುಣುಪಾದ ಚಂಚಲವಾದ ನಿಬಿಡವಾದ ಅಳಕಗುಚ್ಛ, ಪೂರ್ವದಹಾಗೆ ಅದೇ ಪ್ರಶಸ್ತವಾದ ಪರಿಪೂರ್ಣವಾದ ಲಲಾಟಭೂಮಿಯಲ್ಲಿ ಮೊದಲಿನಹಾಗೆ ಅತುಲವಾದ *ತೂಲಿಕಾಲಿಖಿತ ಭ್ರೂಧನು, ಮೊದಲಿನಹಾಗೆ ವಿಸ್ಫಾರಿತವಾದ ಸಜಲವಾದ ಉಜ್ವಲವಾದ ಕೃಷ್ಣತಾರೆಯನುಳ್ಳ ಬೃಹಚ್ಚಕ್ಷು, ಆದರೆ ಅಷ್ಟು ಕಟಾಕ್ಷಮಯವಲ್ಲ, ಅಷ್ಟು ಲೋಲತೆ ಇಲ್ಲ, ಸ್ವಲ್ಪ ನಮ್ರವಾಗಿತ್ತು; ಅಧರದಲ್ಲಿ ಹಾಗೆಯೇ ರಾಗ, ರಂಗು, ಹೃದಯವು ಹಾಗೆಯೇ ಶ್ವಾಸಾನುಗಾಮಿಯಾಗಿ ಪೂರ್ಣತೆಯಿಂದ ಧಡ್‌ಧಡ್ ಎನ್ನುತ್ತೆ, ಬಾಹುಗಳು ಮೊದಲಿನಹಾಗೆ ವನ್ಯಲತೆಗಳಿಗೆ ದುಷ್ಪ್ರಾಪ್ಯವಾದ ಕೋಮಲತೆಯುಕ್ತವಾಗಿದೆ. ಆದರೆ ಈಗ ಆ ಕಾಂತಿ ಇಲ್ಲ, ಆ ಉಜ್ವಲತೆ ಇಲ್ಲ, ಆ ಪ್ರಖರತೆ ಇಲ್ಲ, ಆ ಚಂಚಲತೆ ಇಲ್ಲ, ಆ ರಸವಿಲ್ಲ. ಹೆಚ್ಚು ಹೇಳಲೇಕೆ? ಈಗ ತೋರುವುದರಲ್ಲಿ ಆ ಯೌವನವಿಲ್ಲ.

---

*ತೂಲಿಕಾ (A painter's brush or pencil).

ಇರುವುದು ಕೇವಲಾ ಸೌಂದರ್ಯ ಮತ್ತು ಆ ಮಾಧುರ್ಯ. ನೂತನವಾಗಿವೆ ಆ ಧೈರ್ಯ ಗಾಂಭೀರ್ಯಗಳು. ಮೊದಲು ನೋಡಿದ್ದರೆ ಇವಳು ದೇವಲೋಕದಲ್ಲಿ ಅತುಲನೀಯಳಾದ ಸುಂದರಿಯಾಗಿದ್ದಳೆಂದು ಗೊತ್ತಾಗುತಲಿತ್ತು, ಈಗ ನೋಡಿದರೆ ಇವಳು ದೇವಲೋಕದಲ್ಲಿ ಶಾಪಗ್ರಸ್ತಳಾದ ದೇವಿಯೆಂದು ಗೊತ್ತಾಗುತ್ತದೆ. ಇವಳು ಕುಳಿತಿದ್ದ ನಾಲ್ಕುಕಡೆಯಲ್ಲಿಯೂ ನಾಲ್ಕೈದು ಭಾರಿಭಾರಿ ಪುಸ್ತಕಗಳು ಬಿದ್ದಿದ್ದವು. ಗೋಡೆಗೆ ಹರಿನಾಮಮಾಲೆಯು ನೇತುಹಾಕಿದೆ, ಅದರ ಮಧ್ಯೆ ಮಧ್ಯೆ ಜಗನ್ನಾಥ, ಬಲರಾಮ, ಸುಭದ್ರೆಯ ಪಟಗಳು, ಕಾಳೀಯಮರ್ದನ, ನವನಾರೀ ಕುಂಜರ, ವಸ್ತ್ರಾಪಹರಣ, ಗೋವರ್ಧನಧಾರಣ, ಮುಂತಾದ ವ್ರಜಲೀಲಾ ಚಿತ್ರಗಳಿಂದ ರಂಜಿತವಾಗಿದೆ. ಚಿತ್ರಗಳ ಕೆಳಗೆ "ಚಿತ್ರವೋ, ಇಲ್ಲ, ವಿಚಿತ್ರವೊ?" ಎಂದು ಬರೆದದೆ. ಈ ಗೃಹದೊಳಗೆ ಭವಾನಂದನು ಪ್ರವೇಶಮಾಡಿದನು.

ಭವಾನಂದ—ಹೇಗಿದೆ? ಕಲ್ಯಾಣಿ! ಶರೀರದಲ್ಲಿ ಆರೋಗ್ಯತಾನೆ?

ಕಲ್ಯಾಣಿ—ಈ ಪ್ರಶ್ನೆಯನ್ನು ಕೇಳುವುದು ನೀವು ಬಿಡುವುದಿಲ್ಲವೆ? ನನ್ನ ಶರೀರಾರೋಗ್ಯ ವಿಷಯದಲ್ಲಿ ನಿಮಗೆ ಇಷ್ಟವೆ, ಇಲ್ಲ ನನಗೆ ಇಷ್ಟವೆ?

ಭವಾನಂದ—ಯಾರು ವೃಕ್ಷವನ್ನು ಹಾಕುತ್ತಾನೋ ಅದಕ್ಕವನು ನೀರು ಹಾಕುವನು, ಮರವು ವೃದ್ಧಿಯಾದರೆ ಅವನಿಗೆ ಸುಖ, ನಿನ್ನ ಮೃತವಾದ ದೇಹದಲ್ಲಿ ನಾನು ಪ್ರಾಣವನ್ನು ನೆಟ್ಟವನು,ವೃದ್ಧಿಯಾಗುತ್ತದೋ ಇಲ್ಲವೋ ಕೇಳಕೂಡದೇತಕ್ಕೆ?

ಕಲ್ಯಾಣಿ—ವಿಷವೃಕ್ಷಕ್ಕೆ ಕ್ಷಯವುಂಟೆ?

ಭವಾನಂದ—ಜೀವನವು ವಿಷವೆ?

ಕಲ್ಯಾಣಿ—ಹಾಗಿಲ್ಲದಿದ್ದರೆ, ಅಮೃತಸೇಚನೆಯಾಗಿದ್ದರೂ ಅದನ್ನು ಧ್ವಂಸ ಮಾಡಬೇಕೆಂದು ಇಷ್ಟವುಳ್ಳವಳಾಗಿದ್ದೆನೇತಕ್ಕೆ?

ಭವಾನಂದ—ಅದನ್ನು ಕುರಿತು ಕೇಳಬೇಕೆಂದು ಬಹಳ ದಿನದಿಂದ ಮನಸ್ಸಿನಲ್ಲಿತ್ತು. ಕೇಳುವುದಕ್ಕೆ ಧೈರ್ಯ ಉಂಟಾಗಲಿಲ್ಲ. ನಿನ್ನ ಜೀವನವನ್ನು ವಿಷಮಯವಾಗಿ ಮಾಡಿದವರು ಯಾರು?

ಕಲ್ಯಾಣಿ—(ಸ್ಥಿರಭಾವದಿಂದ) ನನ್ನ ಜೀವನವನ್ನು ಯಾರೂ ವಿಷಮಯವಾಗಿ ಮಾಡಲಿಲ್ಲ. ಜೀವನವೇ ವಿಷಮಯ. ನನ್ನ ಜೀವನ ವಿಷಮಯ, ತಮ್ಮ ಜೀವನ ವಿಷಮಯ, ಎಲ್ಲರ ಜೀವನವೂ ವಿಷಮಯ.

ಭವಾನಂದ—ಹೌದು, ಕಲ್ಯಾಣಿ! ನನ್ನ ಜೀವನ ವಿಷಮಯ. ಯಾವ ದಿನ ಮೊದಲುಗೊಂಡು—ನಿನ್ನ ವ್ಯಾಕರಣವು ಪೂರೈಸಿತೆ?

ಕಲ್ಯಾಣಿ—ಎಲ್ಲಾ ಪೂರೈಸಿತು. ಕೇವಲ ಸ್ತ್ರೀತ್ವ ಪೂರೈಸಲಿಲ್ಲ.

ಭವಾನಂದ—ಅಭಿಧಾನವೊ (ಅಮರವೊ)?

ಕಲ್ಯಾಣಿ—ಸ್ವರ್ಗವೋ ವರ್ಗವೋ ಗೊತ್ತುಮಾಡಿಕೊಳ್ಳಲಾರದೆ ಹೋದೆನು. ನೀವು ತಿಳಿಯುವಹಾಗೆ ಹೇಳಬಲ್ಲಿರಾ?

ಭವಾನಂದ—ನಿನಗೆ ಗೊತ್ತಾಗದ್ದು ನಾನು ತಿಳಿಯಹೇಳಲಾರೆನು. ಸಾಹಿತ್ಯವು ಮೊದಲಿನಹಾಗೆ ಸಾಗುತ್ತದೊ?

ಕಲ್ಯಾಣಿ—ಪೂರ್ವಾಪರ ನನಗೆ ತಿಳಿಯದು. ಕುಮಾರಸಂಭವವನ್ನು ಬಿಟ್ಟುಬಿಟ್ಟು ಹಿತೋಪದೇಶವನ್ನು ಓದುತ್ತೇನೆ.

ಭವಾನಂದ—ಅದೇತಕ್ಕೆ ಕಲ್ಯಾಣಿ?

ಕಲ್ಯಾಣಿ—ಕುಮಾರದಲ್ಲಿ ದೇವಚರಿತ್ರೆ, ಹಿತೋಪದೇಶದಲ್ಲಿ ಪಶುಚರಿತ್ರೆ.

ಭವಾನಂದ—ದೇವಚರಿತ್ರೆಯನ್ನು ಬಿಟ್ಟು ಪಶುಚರಿತ್ರೆಯಲ್ಲಿ ಅನುರಾಗವೇತಕ್ಕೆ?

ಕಲ್ಯಾಣಿ—ಹಣೆಯಬರಹ. ನನ್ನ ಸ್ವಾಮಿಯ ಸಮಾಚಾರವೇನು?

ಭವಾನಂದ—ಬಾರಬಾರಿಗೂ ಆ ಸಮಾಚಾರವನ್ನೇತಕ್ಕೆ ಕೇಳುತ್ತಿ? ಅವನೇನೋ ನಿನಗೆ ಸತ್ತಹಾಗೆ.

ಕಲ್ಯಾಣಿ—ನಾನು ಅವನ ಪಾಲಿಗೆ ಸತ್ತಹಾಗೆ, ಅವನು ನನ್ನ ಪಾಲಿಗೆ ಅಲ್ಲ.

ಭವಾನಂದ—ಅವನು ನಿನ್ನ ಪಾಲಿಗೆ ಸತ್ತನೆಂದು ಅಲ್ಲವೆ ನೀನು ಸತ್ತದ್ದು? ಬಾರಬಾರಿಗೂ ಆ ಮಾತು ಏತಕ್ಕೆ, ಕಲ್ಯಾಣಿ?

ಕಲ್ಯಾಣಿ—ಸತ್ತರೆ ಸಂಬಂಧವು ಹೋಗಿಬಿಡುವದೆ? ಅವನು ಹೇಗೆ ಇದ್ದಾನೆ?

ಭವಾನಂದ—ಚೆನ್ನಾಗಿದ್ದಾನೆ.

ಕಲ್ಯಾಣಿ—ಎಲ್ಲಿದ್ದಾನೆ? ಪದಚಿಹ್ನದಲ್ಲೆ?

ಭವಾನಂದ—ಅಲ್ಲೇ ಇದ್ದಾನೆ.

ಕಲ್ಯಾಣಿ—ಏನು ಕೆಲಸ ಮಾಡುತ್ತಾನೆ?

ಭವಾನಂದ—ಅವನು ಮಾಡುತಲಿದ್ದ ಕೆಲಸವನ್ನೇ ಮಾಡುತ್ತಾನೆ. ಕೋಟೆ ನಿರ್ಮಾಣ, ಅಸ್ತ್ರನಿರ್ಮಾಣ. ಅವನಿಂದ ನಿರ್ಮಾಣವಾದ ಫಿರಂಗಿ ಗುಂಡು, ಬಂದೂಕು, ಮದ್ದು ಮುಂತಾದ್ದು; ಯಾವದಕ್ಕೂ ನಮಗೆ ಕಡಮೆ ಇಲ್ಲ. ಸಂತಾನರಲ್ಲಿ ಅವನೇ ಶ್ರೇಷ್ಠನು. ಅವನು ನಮ್ಮಗಳಿಗೆಲ್ಲ ಮಹದುಪಕಾರವನ್ನು ಮಾಡಿದ್ದಾನೆ. ಅವನು ನಮಗೆ ಬಲಬಾಹು.

ಕಲ್ಯಾಣಿ—ನಾನು ಪ್ರಾಣತ್ಯಾಗವನ್ನು ಮಾಡದಿದ್ದರೆ ಇದೆಲ್ಲ ಆಗುತಲಿತ್ತೆ? ಯಾರ ಎದೆಗೆ ಕಲ್ಲು ಮಣ್ಣು ಗುಂಡು ಗಡಿಗೆ ಕಟ್ಟಿರುತ್ತೋ ಅಂತಹವನು ಭವಸಾಗರದಲ್ಲಿ ಈಜಿ ಪಾರಾಗುವನೆ? ಕಾಲಿಗೆ ಬೇಡಿಯನ್ನು ಹಾಕಿದರೆ ಓಡುವನೆ? ನೀನು ಸನ್ಯಾಸಿಯಾಗಿ ಈ ಹಾಳು ಜೀವನವನ್ನು ಏತಕ್ಕೆ ಇಟ್ಟುಕೊಂಡಿದ್ದಿ?

ಭವಾನಂದ—ಸ್ತ್ರೀಯು ಸಹಧರ್ಮಿಣೀ, ಧರ್ಮಕ್ಕೆ ಸಹಾಯಳು.

ಕಲ್ಯಾಣಿ—ಸಣ್ಣ ಸಣ್ಣ ಧರ್ಮಗಳಲ್ಲಿ ಸಹಾಯಗಾರಳು, ದೊಡ್ಡದೊಡ್ಡ ಧರ್ಮಗಳಲ್ಲಿ ಕಂಟಕಳು. ನಾನು ವಿಷಕಂಟಕದಿಂದ ಅವನ ಅಧರ್ಮ ಕಂಟಕವನ್ನು

ಕಿತ್ತುಹಾಕಿದ್ದೆನು. ಛಿ! ದುರಾಚಾರ ಪಾಮರ ಬ್ರಹ್ಮಚಾರಿಯೆ! ಈ ಪ್ರಾಣ ವನ್ನು ಪುನಃ ಏತಕ್ಕೆ ಕೊಟ್ಟೆ?

ಭವಾನಂದ—ಒಳ್ಳೇದು, ಯಾರು ಕೊಟ್ಟನೋ ಆ ಪ್ರಾಣವು ಅವನದು. ಕಲ್ಯಾಣಿ! ಯಾವ ಪ್ರಾಣವನ್ನು ಕೊಟ್ಟೆನೋ, ನೀನಾ ಪ್ರಾಣವನ್ನು ನನಗೆ ಕೊಡಲಾರೆಯಾ?

ಕಲ್ಯಾಣಿ—ನನ್ನ ಮಗಳು ಸುಕುಮಾರಿಯು ಹೇಗಿದ್ದಾಳೆ, ಗೊತ್ತುಂಟೆ?

ಭವಾನಂದ—ಬಹಳ ದಿನಗಳಿಂದ ಆ ಸಮಾಚಾರವು ತಿಳಿಯಲಿಲ್ಲ. ಜೀವಾ ನಂದನು ಈಚಿಗೆ ಅತ್ತಕಡೆ ಹೋಗಲಿಲ್ಲ.

ಕಲ್ಯಾಣಿ—ಆ ಸಮಾಚಾರವನ್ನು ತರಲಾರೆಯಾ? ಸ್ವಾಮಿಯೇನೋ ನನಗೆ ತ್ಯಾಜ್ಯ. ಬದುಕಿಕೊಂಡಿದ್ದೇನಾದ್ದರಿಂದ ಮಗಳನ್ನು ಏತಕ್ಕೆ ತ್ಯಾಗಮಾಡಲಿ? ಈಗಲೂ ಸುಕುಮಾರಿಯು ಸಿಕ್ಕಿದರೆ ಈ ಪ್ರಾಣಕ್ಕೆ ಸ್ವಲ್ಪ ಸುಖವುಂಟಾದೀತು. ನನಗೋಸ್ಕರ ಇಷ್ಟುಮಾಡಬಾರದೆ?

ಭವಾನಂದ—ಮಾಡುವೆ, ಕಲ್ಯಾಣಿ! ನಿನ್ನ ಮಗಳನ್ನು ಕರೆತಂದು ಬಿಡು ತ್ತೇನೆ. ಆದರೆ ಅದರ ಮೇಲೆ?

ಕಲ್ಯಾಣಿ—ಅದರ ಮೇಲೆ ಇನ್ನೇನು?

ಭವಾನಂದ—ಸ್ವಾಮಿ?

ಕಲ್ಯಾಣಿ—ನನ್ನ ಮನಃಪೂರ್ವಕವಾಗಿ ತ್ಯಾಗಮಾಡಿದ್ದೇನೆ.

ಭವಾನಂದ—ಅವನ ವ್ರತವು ಸಾಂಗವಾದರೆ?

ಕಲ್ಯಾಣಿ—ಆಗ ಅವನವಳಾಗುತ್ತೇನೆ. ನಾನು ಬದುಕಿರುವುದು ಅವನಿಗೆ ತಿಳಿದಿದೆಯೆ?

ಭವಾನಂದ—ಇಲ್ಲ.

ಕಲ್ಯಾಣಿ—ನೀನು ಅವನನ್ನು ನೋಡಿಲ್ಲವೆ?

ಭವಾನಂದ—ನೋಡಿದ್ದೇನೆ.

ಕಲ್ಯಾಣಿ—ನನ್ನ ವಿಚಾರವೇನೂ ಮಾಡಲಿಲ್ಲವೆ?

ಭವಾನಂದ—ಇಲ್ಲ. ಸತ್ತುಹೋದ ಹೆಂಡತಿಗೂ ಗಂಡನಿಗೂ ಏನು ಸಂಬಂಧ?

ಕಲ್ಯಾಣಿ—ಏನು ಹೇಳುತ್ತಾನೆ?

ಭವಾನಂದ—ನೀನು ಪುನಃ ಮದುವೆಯನ್ನು ಮಾಡಿಕೊಳ್ಳುವಿಯಾ? ನಿನಗೆ ಪುನರ್ಜನ್ಮವಾಗಿದೆ.

ಕಲ್ಯಾಣಿ—ನನ್ನ ಮಗಳನ್ನು ಕರೆತಂದುಬಿಡು.

ಭವಾನಂದ—ಕರೆತರುವೆನು. ಪುನಃ ವಿವಾಹವನ್ನು ಮಾಡಿಕೊಳ್ಳುವಿಯಾ?

ಕಲ್ಯಾಣಿ—ನಿನ್ನ ಸಂಗಡಲೆ?

ಭವಾನಂದ—ಮಾಡಿಕೊಳ್ಳುವಿಯಾ?

ಕಲ್ಯಾಣಿ—ನಿನ್ನ ಸಂಗಡಲೆ?

ಭವಾನಂದ—ಹಾಗೇ ಆಗಲಿ, ಆದರೆ?

ಕಲ್ಯಾಣಿ—ಸಂತಾನ ಧರ್ಮವು ಎಲ್ಲಿರುವುದು?

ಭವಾನಂದ—ಅತಲ ಜಲದಲ್ಲಿ.

ಕಲ್ಯಾಣಿ—ಮಹಾವ್ರತವೊ? ಇದೇ ಭವಾನಂದನ ಹೆಸರೊ?

ಭವಾನಂದ—ಅತಲ ಜಲದಲ್ಲಿ.

ಕಲ್ಯಾಣಿ—ಯಾರಿಗೋಸ್ಕರ ಇದನ್ನೆಲ್ಲ ಅತಲ ಜಲದಲ್ಲಿ ಮುಣುಗಿಸುವೆ?

ಭವಾನಂದ—ನಿನಗೋಸ್ಕರ. ಈಗ ನೋಡು, ಮನುಷ್ಯನಾಗಲಿ, ಋಷಿಯಾಗಲಿ, ಸಿದ್ಧನಾಗಲಿ, ದೇವತೆಯಾಗಲಿ, ಚಿತ್ತವು ಅವಶವಾದುದು; ಸಂತಾನ ಧರ್ಮವು ನನ್ನ ಪ್ರಾಣವಾಗಿದೆ. ಆದರೆ, ಇಂದು ಹೇಳುತ್ತೇನೆ ಕೇಳು, ನೀನು ನನ್ನ ಪ್ರಾಣಾಧಿಕವಾದ ಪ್ರಾಣ. ನಾನು ಎಂದು ನಿನಗೆ ಪ್ರಾಣದಾನವನ್ನು ಮಾಡಿದೆನೋ ಅಂದು ಮೊದಲು ನಾನು ನಿನ್ನ ಪಾದಮೂಲದಲ್ಲಿ ವಿಕ್ರೀತನಾದೆನು. ನನಗೆ ಪ್ರಪಂಚದಲ್ಲಿ ಇಂಥ ರೂಪರಾಶಿಯಿದೆ ಎಂದು ಗೊತ್ತಿರಲಿಲ್ಲ. ಇಂಥ ರೂಪರಾಶಿಯನ್ನು ಕಣ್ಣಿನಿಂದ ಎಂದಾದರೂ ನೋಡುವೆನೆಂದು ತಿಳಿದಿದ್ದರೆ ಈ ಸಂತಾನ ಧರ್ಮವನ್ನು ಎಂದಿಗೂ ಗ್ರಹಣಮಾಡುತ್ತಿರಲಿಲ್ಲ. ಈ ಧರ್ಮವು ಈ ಸಂತಾಸನಲ್ಲಿ ಸುಟ್ಟು ಬೂದಿಯಾಗಿಹೋಗಲಿ. ಧರ್ಮವು ಹೋಯಿತು. ಪ್ರಾಣ ಉಳಿದುಕೊಂಡಿತು. ಈಗ ನಾಲ್ಕು ವರುಷದಿಂದಲೂ ಪ್ರಾಣವು ತುಡುಗಿಕೊಳ್ಳುತ್ತದೆ, ಹೋಗುವದಿಲ್ಲ. ಇನ್ನು ನಿಲ್ಲಲಾರದು. ದಾಹ! ಕಲ್ಯಾಣಿ! ದಾಹ! ಜ್ವಾಲೆ! ಸುಟ್ಟುಹಾಕೋಣವೆಂದರೆ ಕಟ್ಟಿಗೆ ಇಲ್ಲ. ಪ್ರಾಣಹೋಗುತ್ತದೆ. ನಾಲ್ಕು ವರುಷ ಸಹಿಸಿದೆನು; ಇನ್ನು ಸಹಿಸಲಾರೆನು. ನೀನು ನನ್ನವಳಾಗುವಿಯಾ?

ಕಲ್ಯಾಣಿ—ನೀನೇ ಹೇಳಿದೆ, ಸಂತಾನರ ಧರ್ಮದಲ್ಲಿ ಇಂದ್ರಿಯವು ಪರವಶವಾದರೆ ಅದಕ್ಕೆ ಪ್ರಾಯಶ್ಚಿತ್ತವು ಮರಣವೆಂದು ಹೇಳಿದೆ. ಇದು ನಿಜವೆ?

ಭವಾನಂದ—ಇದು ನಿಜ.

ಕಲ್ಯಾಣಿ—ಹಾಗಾದರೆ ನಿನಗೆ ಪ್ರಾಯಶ್ಚಿತ್ತ ಮರಣವೊ?

ಭವಾನಂದ—ನನಗೆ ಪ್ರಾಯಶ್ಚಿತ್ತ ಮರಣವೊಂದೇ.

ಕಲ್ಯಾಣಿ—ನಾನು ನಿನ್ನ ಇಷ್ಟಾರ್ಥವನ್ನು ಕೈಗೂಡಿಸಿದರೆ ನೀನು ಸಾಯುವೆ?

ಭವಾನಂದ—ನಿಶ್ಚಯವಾಗಿ ಸಾಯುವೆನು.

ಕಲ್ಯಾಣಿ—ನಿನ್ನ ಇಷ್ಟಾರ್ಥವನ್ನು ಕೈಗೂಡಿಸದಿದ್ದರೆ?

ಭವಾನಂದ—ಹಾಗಾದರೂ ಮರಣವೇ ನನಗೆ ಪ್ರಾಯಶ್ಚಿತ್ತ. ಏತಕ್ಕೆಂದರೆ, ನನ್ನ ಚಿತ್ತವು ಇಂದ್ರಿಯಕ್ಕೆ ವಶವಾಗಿದೆ.

ಕಲ್ಯಾಣಿ—ನಿನ್ನ ಇಷ್ಟಾರ್ಥವನ್ನು ನಿನಗೆ ಕೈಗೂಡಿಸಲಾರೆ, ನೀನು ಯಾವಾಗ ಸಾಯುವೆ?

ಭವಾನಂದ—ಮುಂದಿನ ಯುದ್ಧದಲ್ಲಿ.

ಕಲ್ಯಾಣಿ—ಹಾಗಾದರೆ ಹೋಗು. ನನ್ನ ಮಗಳನ್ನು ಕಳುಹಿಸುತ್ತೀಯು?

ಭವಾನಂದ—(ಸಾಶ್ರುಲೋಚನನಾಗಿ) ಕಳುಹಿಸುತ್ತೇನೆ. ನಾನು ಸತ್ತು ಹೋದಮೇಲೆ ನನ್ನನ್ನು ಜ್ಞಾಪಿಸಿಕೊಳ್ಳುವಿಯಾ?

ಕಲ್ಯಾಣಿ—ಜ್ಞಾಪಿಸಿಕೊಳ್ಳುವೆ. ವ್ರತಚ್ಯುತನಾದ ಅಧರ್ಮಿಯೆಂದು.

ಭವಾನಂದನು ಹೊರಟುಹೋದನು. ಕಲ್ಯಾಣಿಯು ಪುಸ್ತಕವನ್ನು ಓದುತ್ತ ಕುಳಿತಳು.

---

## ಐದನೆಯ ಪರಿಚ್ಛೇದ

ಭವಾನಂದನು ಯೋಚನಾಕ್ರಾಂತನಾಗಿ ಮಠಕ್ಕೆ ಹೊರಟನು. ಹೋಗುತ್ತ ರಾತ್ರಿಯಾಯಿತು. ಮಾರ್ಗದಲ್ಲಿ ಒಬ್ಬನೇ ಹೋಗುತಲಿದ್ದನು. ವನಕ್ಕೆ ಒಬ್ಬನೇ ಪ್ರವೇಶಿಸಿದನು. ಅಲ್ಲಿ ಯಾರೋ ಒಬ್ಬನು ಮುಂದೆ ಹೋಗುತಲಿದ್ದನು. ಭವಾನಂದನು ಅದು ಯಾರೆಂದು ಕೂಗಿದನು.

ಅಗ್ರಗಾಮಿ—ಕೇಳುವವರು ಯಾರು? ಗೊತ್ತಾದರೆ ಉತ್ತರ ಕೊಡುವೆನು. ನಾನು ಪಥಿಕನು.

ಭವಾನಂದ—ವಂದೇ.

ಅಗ್ರಗಾಮಿ—ಮಾತರಂ.

ಭವಾನಂದ—ನಾನು ಭವಾನಂದಗೋಸ್ವಾಮಿ.

ಅಗ್ರಗಾಮಿ—ನಾನು ಧೀರಾನಂದ.

ಭವಾನಂದ—ಧೀರಾನಂದ! ಎಲ್ಲಿಗೆ ಹೋಗಿದ್ದೆ?

ಧೀರಾನಂದ—ನಿನ್ನನ್ನು ಹುಡುಕಿಕೊಂಡು.

ಭವಾನಂದ—ಏತಕ್ಕೆ?

ಧೀರಾನಂದ—ಒಂದು ಮಾತು ಹೇಳುವುದಕ್ಕೆ.

ಭವಾನಂದ—ಏನು ಮಾತು?

ಧೀರಾನಂದ—ನಿರ್ಜನ ಸ್ಥಳದಲ್ಲಿ ಹೇಳತಕ್ಕದ್ದು.

ಭವಾನಂದ—ಇಲ್ಲಿಯೇ ಹೇಳು, ಇಲ್ಲಿ ಯಾರೂ ಇಲ್ಲ.

ಧೀರಾನಂದ—ನೀನು ನಗರಕ್ಕೆ ಹೋಗಿದ್ದೆಯೊ?

ಭವಾನಂದ—ಹೌದು.

ಧೀರಾನಂದ—ಗೌರೀದೇವೀ ಮನೆಗೆ?

ಭವಾನಂದ—ನೀನೂ ನಗರಕ್ಕೆ ಹೋಗಿದ್ದೆಯಾ?

ಧೀರಾನಂದ—ಅಲ್ಲಿ ಒಬ್ಬ ಪರಮಸುಂದರಿಯಾದ ಯುವತಿಯು ವಾಸ ಮಾಡುತ್ತಾಳಲ್ಲವೆ?

ಭವಾನಂದನು ಸ್ವಲ್ಪ ಆಶ್ಚರ್ಯಪಟ್ಟು ಭೀತನೂ ಆಗಿ—ಇದೆಲ್ಲ ಏನು ಮಾತು? ಎಂದನು.

ಧೀರಾನಂದ—ನೀನು ಅವಳನ್ನು ನೋಡಿದೆಯಲ್ಲವೆ?

ಭವಾನಂದ—ಅದರಮೇಲೆ?

ಧೀರಾನಂದ—ನೀನು ಆ ಹೆಂಗಸಿನಲ್ಲಿ ಬಹಳ ಅನುರಕ್ತನಾಗಿದ್ದೀಯೆ?

ಭವಾನಂದ—(ಸ್ವಲ್ಪ ಯೋಚಿಸಿ) ಧೀರಾನಂದ! ಈ ಅನ್ವೇಷಣವೇತಕ್ಕೆ ಆಯಿತು? ನೀನು ಹೇಳುವದೆಲ್ಲ ನಿಜವಾದದ್ದು. ನಿನ್ನನ್ನು ಹೊರತು ಇದನ್ನು ಇನ್ಯಾರು ಬಲ್ಲರು?

ಧೀರಾನಂದ—ಇನ್ಯಾರೂ ಅರಿಯರು.

ಭವಾನಂದ—ಹಾಗಾದರೆ ನಿನ್ನನ್ನು ಹೊಡೆದುಹಾಕಿದರೆ ನಾನು ಕಳಂಕ ದಿಂದ ಮುಕ್ತನಾಗಬಹುದು?

ಧೀರಾನಂದ—ಆಗಬಹುದು.

ಭವಾನಂದ—ಹಾಗಾದರೆ ಬಾ. ಈ ವಿಜನವಾದ ಸ್ಥಾನದಲ್ಲಿ ಇಬ್ಬರೂ ಯುದ್ಧಮಾಡೋಣ. ನಿನ್ನನ್ನು ವಧೆಮಾಡಿ ನಾನು ನಿಷ್ಕಂಟಕನಾಗುತ್ತೇನೆ, ಇಲ್ಲವಾದರೆ ನೀನು ನನ್ನನ್ನು ವಧೆಮಾಡಿ ಎಲ್ಲ ಜ್ವಾಲೆಯನ್ನು ಅಣಗಿಸು. ಆಯುಧವಿದೆಯೆ?

ಧೀರಾನಂದ—ಅದೆ. ಬರೀಕೈಯಲ್ಲಿ ಈ ಮಾತುಗಳನ್ನೆಲ್ಲ ನಿನ್ನ ಸಂಗಡ ಹೇಳುವುದಕ್ಕೆ ಯಾರಿಗೆ ಸಾಧ್ಯ. ಯುದ್ಧವೇ ನಿನ್ನ ಮತವಾಗಿದ್ದರೆ, ಅವಶ್ಯಕ ವಾಗಿ ಮಾಡುವೆನು. ಸಂತಾನ ಸಂತಾನರಿಗೆ ವಿರೋಧವು ನಿಷಿದ್ಧ, ಆತ್ಮರಕ್ಷಣೆ ಗೋಸ್ಕರವಾಗಿ ಯಾರ ಸಂಗಡಲಾದರೂ ನಿಷಿದ್ಧವಿಲ್ಲ. ಆದರೆ ಯಾವ ಮಾತು ಗಳನ್ನು ಹೇಳುವುದಕ್ಕೆ ನಿನ್ನನ್ನು ಹುಡುಕುತಲಿದ್ದೆನೋ ಅದನ್ನೆಲ್ಲ ಕೇಳಿಬಿಟ್ಟು ಅನಂತರ ಯುದ್ಧವನ್ನು ಮಾಡುವುದು ಒಳ್ಳೇದಲ್ಲವೆ?

ಭವಾನಂದ—ಬಾಧಕವೇನು? ಹೇಳು, ಹಾಗಾದರೆ.

ಭವಾನಂದನು ಕತ್ತಿಯನ್ನು ಒರೆಯಿಂದ ತೆಗೆದು ಧೀರಾನಂದನ ಭುಜದ ಮೇಲೆ ಇಟ್ಟನು. ಧೀರಾನಂದನು ಓಡಿಹೋಗಲಿಲ್ಲ.

ಧೀರಾನಂದ—ನಾನು ಏನು ಹೇಳುತ್ತಿದ್ದೆನೆಂದರೆ—ನೀನು ಕಲ್ಯಾಣಿಯನ್ನು ವಿವಾಹ—

ಭವಾನಂದ—ಕಲ್ಯಾಣಿಯು ಅದು ಬಲ್ಲಳೆ?

ಧೀರಾನಂದ—ಏತಕ್ಕೆ ಮಾಡಿಕೊಳ್ಳುವುದಿಲ್ಲ?

ಭವಾನಂದ—ಅವಳಿಗೆ ಗಂಡನಿದ್ದಾನೆ.

ಧೀರಾನಂದ—ವೈಷ್ಣವರಲ್ಲಿ ಅಂಥ ವಿವಾಹವಾಗಬಹುದು.

ಭವಾನಂದ—ಅವಳು ಅಂಥ ಗೊಡ್ಡು ಸನ್ಯಾಸಿಯಲ್ಲ. ಸಂತಾನರಿಗೆ ವಿವಾಹವೇ ಇಲ್ಲ.

ಧೀರಾನಂದ—ಸಂತಾನರ ಧರ್ಮವು ಅಪರಿಹಾರ್ಯವೆ?—ನಿನ್ನ ಪ್ರಾಣ ಹೋಗುವುದೆ?—ಛೀ! ಛೀ! ನನ್ನ ಕುತ್ತಿಗೆಯು ಘಾಯವಾಯಿತು. (ವಾಸ್ತವಿಕವಾಗಿ ಧೀರಾನಂದನ ಕುತ್ತಿಗೆಯಿಂದ ರಕ್ತವು ಸುರಿಯುತಲಿತ್ತು.)

ಭವಾನಂದ—ನೀನು ನನಗೆ ಅಧರ್ಮವನ್ನು ಬೋಧಿಸುವುದಕ್ಕೆ ಬಂದೆಯಾ, ಏನು? ನಿನಗೆ ಏನೋ ಸ್ವಾರ್ಥವಿರಬೇಕು.

ಧೀರಾನಂದ—ಅದನ್ನೇ ಹೇಳುವುದಕ್ಕೆ ಇಷ್ಟವುಳ್ಳವನಾಗಿದ್ದೇನೆ. ಕತ್ತಿಯನ್ನು ಪೂರಾ ಅದಮಬೇಡ. ಹೇಳುತ್ತೇನೆ. ಈ ಸಂತಾನ ಧರ್ಮದಲ್ಲಿ ಮುಳೆಗಳೆಲ್ಲ ಪುಡಿಯಾಗುತ್ತೆ; ನಾನು ಇದನ್ನು ಪರಿತ್ಯಜಿಸಿ ಹೆಂಡರ ಮಕ್ಕಳ ಮುಖವನ್ನು ನೋಡಿಕೊಂಡು ಕಾಲಹರಣೆ ಮಾಡಬೇಕೆಂದು ಬಹಳ ಆತುರನಾಗಿದ್ದೇನೆ. ನಾನು ಈ ಸಂತಾನ ಧರ್ಮವನ್ನು ಬಿಟ್ಟುಬಿಡುವೆನು. ಆದರೆ ಮನೆಗೆ ಹೋಗಿ ಕೂತು ಮಾಡುವದೇನು? ನಾನು ವಿದ್ರೋಹಿಯೆಂದು ಎಲ್ಲರೂ ತಿಳಿದಿದ್ದಾರೆ, ಮನೆಯಲ್ಲಿ ಹೋಗಿ ಕೂತರೂ ರಾಜಪುರುಷರು ಬಂದು ತಲೆಯನ್ನು ಕಡಿದು ತೆಗೆದುಕೊಂಡು ಹೋಗುತ್ತಾರೆ. ಇಲ್ಲದಿದ್ದರೆ ಸಂತಾನರೇ ನನ್ನನ್ನು ವಿಶ್ವಾಸಘಾತಿಯೆಂದು ಹೊಡೆದುಹಾಕಿ ಹೊರಟುಹೋಗುವರು. ಆದುದರಿಂದ ನಿನ್ನನ್ನೂ ನನ್ನ ಮಾರ್ಗದಲ್ಲಿ ತೆಗೆದುಕೊಳ್ಳುವುದಕ್ಕೆ ಇಷ್ಟವುಳ್ಳವನಾಗಿದ್ದೇನೆ.

ಭವಾನಂದ—ನನ್ನನ್ನು ಏತಕ್ಕೆ?

ಧೀರಾನಂದ—ಇದು ಮುಖ್ಯವಾದ ಮಾತು. ಈ ಸಂತಾನ ಸೇನೆಯು ನಿನ್ನ ಆಜ್ಞಾಧೀನ—ಸತ್ಯಾನಂದನು ಈಗ ಇಲ್ಲಿ ಇಲ್ಲ. ನೀನೇ ಅವರಿಗೆ ನಾಯಕ; ನೀನು ಈ ಸೇನೆಯನ್ನು ತೆಗೆದುಕೊಂಡುಹೋಗಿ ಯುದ್ಧಮಾಡು, ನಿನಗೆ ಜಯವಾಗುತ್ತೆಂದು ನನಗೆ ದೃಢವಾದ ನಂಬುಗೆ. ಯುದ್ಧದಲ್ಲಿ ಜಯವಾದರೆ ನಿನ್ನ ಸ್ವಂತ ಹೆಸರಿನಿಂದ ರಾಜ್ಯಸ್ಥಾಪನೆಯನ್ನು ಮಾಡು. ಸೈನ್ಯ ನಿನ್ನ ಸ್ವಾಧೀನವಾಗಿದೆ—ನೀನು ರಾಜನಾಗು—ಕಲ್ಯಾಣಿಯು ನಿನಗೆ ಮಂಡೋದರಿಯಾಗಲಿ, ನಾನು ನಿನ್ನ ಅನುಚರನಾಗಿ ಹೆಂಡರಮಕ್ಕಳ ಮುಖಾವಲೋಕನದಿಂದ ಕಾಲಹರಣೆ ಮಾಡಿಕೊಂಡು ನಿನಗೆ ಆಶೀರ್ವಾದವನ್ನು ಮಾಡಿಕೊಂಡಿರುತ್ತೇನೆ. ಸಂತಾನ ಧರ್ಮವನ್ನು ಅತಲಜಲದಲ್ಲಿ ಹಾಕಿಬಿಡು.

ಭವಾನಂದನು ಕತ್ತಿಯನ್ನು ಧೀರಾನಂದನ ಕುತ್ತಿಗೆಯಿಂದ ಮೆಲ್ಲಮೆಲ್ಲಗೆ ಸರಿಸಿ ತೆಗೆದು, ಧೀರಾನಂದ! ಯುದ್ಧವನ್ನು ಮಾಡು, ನಿನ್ನನ್ನು ವಧೆಮಾಡುವೆನು, ನಾನು ಇಂದ್ರಿಯಪರವಶನಾಗಿರುವೆನು, ಆದರೆ ವಿಶ್ವಾಸಹಂತನಲ್ಲ. ನಾನು ವಿಶ್ವಾಸಘಾತಕನಾಗುವುದಕ್ಕೆ ನೀನು ಪರಾಮರ್ಶವನ್ನು ಕೊಡುತ್ತೀ. ನೀನು

ಸ್ವಯಂ ವಿಶ್ವಾಸಘಾತಕನು, ನಿನ್ನನ್ನು ಕೊಂದರೆ ಬ್ರಹ್ಮಹತ್ಯೆಯು ಬರುವುದಿಲ್ಲ, ನಿನ್ನನ್ನು ವಧೆಮಾಡುವೆನು ಎಂದನು. ಮಾತು ಪೂರೈಸುವುದರೊಳಗಾಗಿ ಧೀರಾನಂದನು ಊರ್ಧ್ವಶ್ವಾಸದಿಂದ ಓಡಿಹೋದನು. ಭವಾನಂದನು ಅವನ ಹಿಂದೆ ಓಡಲಿಲ್ಲ. ಭವಾನಂದನು ಸ್ವಲ್ಪಹೊತ್ತು ಅನ್ಯಮನನಾಗಿದ್ದು ಅನಂತರ ಹುಡುಕಿದಾಗ ಅವನು ಇರಲಿಲ್ಲ.

---

## ಆರನೆಯ ಪರಿಚ್ಛೇದ

ಮಠಕ್ಕೆ ಹೋಗದೆ ಭವಾನಂದನು ಗಂಭೀರವಾದ ವನ ಮಧ್ಯದಲ್ಲಿ ಪ್ರವೇಶ ಮಾಡಿದನು. ಆ ಕಾಡಿನಲ್ಲಿ ಒಂದುಕಡೆ ಒಂದು ಬಿದ್ದುಹೋದ ಹಳೆದಾದ ದೊಡ್ಡ ಮಹಡೀಮನೆಯಿತ್ತು. ಭಗ್ನಾವಶಿಷ್ಟವಾದ ಇಟ್ಟಿಗೆ ಮುಂತಾದ್ದರ ಮೇಲೆ ಲತೆ ಮುಂತಾದ ಕಾಡುಗಿಡಗಳು ಅತಿ ಸಾಂದ್ರವಾಗಿ ಬೆಳೆದಿದ್ದವು. ಅಸಂಖ್ಯವಾದ ಸರ್ಪಗಳಿಗೆ ವಾಸಸ್ಥಳವಾಗಿತ್ತು. ಬಿದ್ದುಹೋದ ಕೊಠಡಿಗಳಲ್ಲೊಂದು ಇದ್ದಮಟ್ಟಿಗೆ ಬಿದ್ದುಹೋಗದೆ ಚೆನ್ನಾಗಿ ಪರಿಷ್ಕೃತವಾಗಿತ್ತು. ಭವಾನಂದನು ಹೋಗಿ ಅಲ್ಲಿ ಕುಳಿತುಕೊಂಡನು. ಕುಳಿತುಕೊಂಡು ಭವಾನಂದನು ಯೋಚನೆಯನ್ನು ಮಾಡಲಾರಂಭಿಸಿದನು.

ರಾತ್ರಿಯು ಅತಿಶಯವಾದ ಅಂಧಕಾರಮಯವಾಗಿತ್ತು. ಅದು ಬಹಳ ವಿಸ್ತಾರವಾದ ಅರಣ್ಯ, ಶುದ್ಧ ಜನಶೂನ್ಯವಾಗಿತ್ತು. ಅತಿಶಯವಾಗಿ ಸಾಂದ್ರವಾಗಿ ದುರ್ಭೇದ್ಯವಾದದ್ದು, ಕಾಡುಮೃಗಗಳೂ ಕೂಡ ತಿರುಗಾಡುವುದಕ್ಕೆ ಅಡ್ಡಿಯಾಗಿತ್ತು. ವಿಶಾಲ, ಜನಶೂನ್ಯ, ದುರ್ಭೇದ್ಯ, ಅಂಧಕಾರ, ನೀರವ! ದೂರದಲ್ಲಿ ಮಧ್ಯೆಮಧ್ಯೆ ವ್ಯಾಘ್ರದ ಹುಂಕಾರ ಅಥವಾ ಇತರ ಕಾಡುಮೃಗಗಳ ಕ್ಷುಧಾ, ಭೀತಿ ಅಥವಾ ಆಸ್ಫಾಲನದ ವಿಕಟವಾದ ಶಬ್ದ. ಒಂದೊಂದು ಸಲ ದೊಡ್ಡ ದೊಡ್ಡ ಪಕ್ಷಿಗಳ ಪಕ್ಷಕಂಪನ, ಒಂದೊಂದು ಸಲ ತಾಡಿತ ಅಥವಾ ತಾಡನಕಾರೀಕ ಶಬ್ದ ವಧ್ಯ ಅಥವಾ ವಧಕಾರೀಮೃಗಗಳ ಓಡಿಹೋಗುವ ಶಬ್ದ. ಆ ವಿಜನವಾದ ಸ್ಥಳದಲ್ಲಿ ಆ ಅಂಧಕಾರದಲ್ಲಿ ಆ ಬಿದ್ದುಹೋದ ಮಹಡೀಮನೆಯಲ್ಲಿ ಭವಾನಂದನು ಒಬ್ಬನೇ ಕುಳಿತಿದ್ದನು. ಅವನ ಪಾಲಿಗೆ ಆ ಕಾಲದಲ್ಲಿ ಪೃಥಿವಿಯೇ ಇಲ್ಲ, ಅಥವಾ ಕೇವಲ ಭಯಕ್ಕೆ ಉಪಾದಾನಮಯಿಯಾಗಿತ್ತು. ಆ ಸಮಯದಲ್ಲಿ ಭವಾನಂದನು ಕಪಾಲದ ಮೇಲೆ ಕೈಯಿಟ್ಟುಕೊಂಡು ಯೋಚಿಸುತಲಿದ್ದನು. ಚಲನೆ ಇಲ್ಲ, ನಿಶ್ವಾಸವಿಲ್ಲ, ಭಯವಿಲ್ಲ, ಅತ್ಯಂತ ಪ್ರಗಾಢವಾದ ಚಿಂತೆಯಲ್ಲಿ ಮಗ್ನನಾಗಿದ್ದನು. ಮನಸ್ಸಿನಲ್ಲಿ, ಯಾವದು ಭವಿತವ್ಯವೋ ಅದು ಅವಶ್ಯವಾಗಿ ಆಗುವುದು; ನಾನು ಭಾಗೀರಥೀ ಜಲತರಂಗದ ಸಮೀಪದಲ್ಲಿ ಸಣ್ಣದಾದ ಆನೆಯಹಾಗೆ ಇಂದ್ರಿಯಸ್ರೋತದಲ್ಲಿ ಮುಣುಗಿ ತೇಲುತ್ತೇನೆ, ಇದೇ ನನ್ನ ದುಃಖವಾಗಿದೆ.

ಒಂದು ಮುಹೂರ್ತದಲ್ಲಿ ದೇಹವು ಧ್ವಂಸವಾಗುವುದು. ದೇಹಧ್ವಂಸವೇ ಇಂದ್ರಿಯಗಳ ಧ್ವಂಸ. ನಾನು ಆ ಇಂದ್ರಿಯಗಳಿಗೆ ವಶೀಭೂತನಾದೆನು. ನನಗೆ ಮರಣವೇ ಶ್ರೇಯಸ್ಸು. ಧರ್ಮತ್ಯಾಗಿಯೆ? ಛೀ! ಸಾಯುವೆನು, ಎಂದು ಯೋಚನೆಯ ಸ್ರೋತವು ಪ್ರವಹಿಸುತಲಿರುವಾಗ ತಲೆಯಮೇಲೆ ಪೇಚಕಪಕ್ಷಿಯು ಮೃದುವಾದ ಗಂಭೀರವಾದ ಧ್ವನಿಯನ್ನು ಮಾಡಿತು. ಆಗ ಭವಾನಂದನು, ಬಾಯಿಬಿಟ್ಟು, ಅದೇನು, ಶಬ್ದ? ಕಿವಿಗೆ ಬಿದ್ದದ್ದು ನೋಡಿದರೆ ನನ್ನನ್ನು ಯಮನೇ ಕರೆಯುವ ಹಾಗೆ ಕೇಳುತ್ತದೆ, ಏನು ಶಬ್ದವನ್ನು ಮಾಡಿತೋ, ಯಾರು ನನ್ನನ್ನು ಕೂಗಿದರೋ ಯಾವದೂ ಗೊತ್ತಾಗುವುದಿಲ್ಲ; ಪುಣ್ಯಮಯಿಯಾದ ಹೆ ಅನಂತೆ! ನೀನು ಶಬ್ದಮಯಿ, ಆದರೆ ನಿನ್ನ ಶಬ್ದದ ಮರ್ಮವನ್ನು ನಾನು ತಿಳಿದುಕೊಳ್ಳಲಾರೆನು. ನನಗೆ ಧರ್ಮದಲ್ಲಿ ಬುದ್ಧಿಯನ್ನು ಕೊಡು, ನನ್ನನ್ನು ಪಾಪದಿಂದ ವಿರತನನ್ನಾಗಿ ಮಾಡು, ಧರ್ಮದಲ್ಲಿ, ಹೆ ಗುರುದೇವ! ಧರ್ಮದಲ್ಲಿ ನನ್ನ ಬುದ್ಧಿಯು ಇರಲಿ, ಎಂದು ಹೇಳಿದನು.

ಆಗ ಆ ಭೀಷಣವಾದ ಕಾನನಮಧ್ಯದಲ್ಲಿ ಅತಿ ಮಧುರವಾಗಿ ಗಂಭೀರವಾಗಿ ಮರ್ಮಭೇದಿಯಾಗಿ ಮನುಷ್ಯನ ಕೊರಳು ಕೇಳಿಸಿತು. "ಧರ್ಮದಲ್ಲಿ ನಿನ್ನ ಬುದ್ಧಿಯು ಇರುವುದು, ಆಶೀರ್ವಾದವನ್ನು ಮಾಡಿದ್ದೇನೆಂದು" ಹೇಳಿದಹಾಗೆ ಕೇಳಿಸಿತು.

ಭವಾನಂದನ ಶರೀರವು ರೋಮಾಂಚವಾಯಿತು. "ಇದೇನು ಇದು? ಇದು ಗುರುದೇವನ ಕಂಠ. ಮಹಾಸ್ವಾಮಿ! ತಾವೆಲ್ಲಿದ್ದೀರಿ! ಈ ಸಮಯದಲ್ಲಿ ದಾಸನಿಗೆ ದರ್ಶನ ಕೊಡೋಣವಾಯಿತು!"

ಆದರೆ ಯಾರೂ ದರ್ಶನವನ್ನು ಕೊಡಲಿಲ್ಲ. ಯಾರೂ ಉತ್ತರವನ್ನು ಕೊಡಲಿಲ್ಲ. ಭವಾನಂದನು ಪುನಃಪುನಃ ಉತ್ತರ ಬರಲಿಲ್ಲವೆಂದಂದುಕೊಂಡು ಅಲ್ಲಲ್ಲಿ ಹುಡುಕಿದನು. ಯಾರೂ ಇಲ್ಲ.

ಯಾವಾಗ ರಜನಿಯು ಪ್ರಭಾತವಾಗಿ ಪ್ರಾತಃಸೂರ್ಯನು ಉದಯಿಸಿ ಅರಣ್ಯದ ತಲೇಮೇಲಿದ್ದ ಶ್ಯಾಮಲವಾದ ಪತ್ರರಾಶಿಯನ್ನು ಪ್ರಕಾಶಮಾಡಿದನೋ, ಆಗ ಭವಾನಂದನು ಮಠದಲ್ಲಿ ಬಂದಿದ್ದನು. ಕಿವಿಯಲ್ಲಿ ಹರೆ ಮುರಾರೆ ಹರೆ ಮುರಾರೆ ಶಬ್ದವು ಬಿತ್ತು. ಅದು ಸತ್ಯಾನಂದನ ಕಂಠವಾಗಿತ್ತು. ಸತ್ಯಾನಂದನು ಹಿಂದಿರುಗಿ ಬಂದಿದ್ದನು.

———

## ಏಳನೆಯ ಪರಿಚ್ಛೇದ

ಜೀವಾನಂದನು ಕುಟೀರವನ್ನು ಬಿಟ್ಟು ಹೊರಗೆ ಹೋದನಂತರ ಶಾಂತಿ ದೇವಿಯು ಪುನಃ ಸಾರಂಗವನ್ನು ಹಿಡಿದು ಮೃದು ಮೃದುವಾದ ಧ್ವನಿ ಯಿಂದ ಸಂಗೀತವನ್ನು ಗಾನಮಾಡಿದಳು :—

ಪ್ರಳಯಪಯೋಧಿಜಲೆ ಧೃತವಾನಸಿ ವೇದಂ
ವಿಹಿತವಹಿತ್ರ ಚರಿತ್ರಮಖೇದಂ
ಕೇಶವಧೃತ ಮೀನಶರೀರ
ಜಯಜಗದೀಶಹರೆ—ಎಂದು

ಜಯದೇವಗೋಸ್ವಾಮಿಯಿಂದ ವಿರಚಿತವಾದ ಆ ಮಧುರವಾದ ಸ್ತೋತ್ರವು ಶಾಂತಿದೇವಿಯ ಕಂಠದಿಂದ ಹೊರಟು ಆ ಅನಂತವಾದ ಕಾನನದ ಅನಂತವಾದ ನಿಶ್ಶಬ್ದವನ್ನು ಸೀಳಿಕೊಂಡು, ಪೂರ್ಣಜಲೋಚ್ಛ್ವಾಸದ ಸಮಯದಲ್ಲಿ ವಸಂತ ಕಾಲದ ತಂಗಾಳಿಯಿಂದ ತಾಡಿತವಾದ ತರಂಗಭಂಗದೋಪಾದಿಯಲ್ಲಿ ಮಧುರ ವಾಗಿ ಕೇಳಿಸಿತು. ಆಗವಳು ಪುನಃ ಗಾನವನ್ನು ತೊಡಗಿದಳು :—

ನಿಂದಿಸಿಯಜ್ಞವಿಧೆರಹಹ ಶ್ರುತಿಜಾತಂ
ಸದಯಹೃದಯದರ್ಶಿತ ಪಶುಘಾತಂ
ಕೇಶವಧೃತ ಬುದ್ಧಶರೀರ
ಜಯಜಗದೀಶಹರೆ—

ಆಗ ಹೊರಗಿನಿಂದ ಯಾರೋ ಅತಿ ಗಂಭೀರವಾದ ಧ್ವನಿಯಿಂದ ಮೇಘ ಗರ್ಜನೆಯಾದಹಾಗೆ ಗಾನಮಾಡಿದರು.

ಮ್ಲೇಂಛ ನಿವಹ ನಿಧನೆ ಕಲಯಸಿ ಕರವಾಲಂ
ಧೂಮಕೇತುಮಿವ ಕಿಮಪಿ ಕರಾಳಂ
ಕೇಶವಧೃತ ಕಲ್ಕಿಶರೀರ
ಜಯಜಗದೀಶಹರೆ—ಎಂದು

ಶಾಂತಿಯು, ಅದು ಯಾರ ಕಂಠವೆಂಬುದು ತಿಳಿದುಕೊಂಡು, ನಿಲ್ಲೆ. ನತದೃಷ್ಟಳ ಮಗಳೆ! ಮುದಿವಯಸ್ಸಿನಲ್ಲಿ ನೀನು ಹುಡುಗಿಯರ ಜತೆಗೆ ಹಾಡ. ವುದಕ್ಕೆ ಬಂದಿಯಾ? ಎಂದು ಹೇಳಿ ಸಾರಂಗದ ತಂತಿಗಳನ್ನು ಬಿಗಿಮಾಡಿಕೊಂಡ. ಏರಿಸಿ ತನ್ನ ಕಂಠವನ್ನೂ ಏರಿಸಿಕೊಂಡು ಹಾಡಿದಳು :—

ವೇದಾನುದ್ಧರತೆ ಜಗಂತಿವಹತೆ
ಭೂಗೋಳಮುದ್ಬಿಭ್ರತೆ
ದೈತ್ಯಂ ದಾರಯತೆ ಬಲಿಂ ಛಲಯತೆ
ಕ್ಷತ್ರಕ್ಷಯಂ ಕುರ್ವತೆ।

ಪೌಲಸ್ತ್ಯಂ ಜಯತೆ ಹಲಂ ಕಲಯತೆ
ಕಾರುಣ್ಯಮಾತನ್ವತೆ
ಮ್ಲೇಚ್ಛಾನ್ಮೂರ್ಛಯತೆ ದಶಾಕೃತಿಕೃತೆ
ಕೃಷ್ಣಾಯ ತುಭ್ಯಂ ನಮಃ ॥

ಹಾಡಾಡುತ ಆ ದೀರ್ಘತಾಳವನ್ನು ಆ ಉಚ್ಚವಾದ ಗಗನವಿದಾರಕವಾದ ಸ್ವರವನ್ನು ಇಳಿಸಿಕೊಂಡು ಶಾಂತಿಯು ಪುನಃ ಹಾಡಿದಳು :—

ವಿಸ್ಮಿತ ಕಮಲಾ ಕುಚಮಂಡಲ
ಧೃತಕುಂಡಲ ಕಲಿತ ಲಲಿತ ವನಮಾಲ
ಜಯಜಗದೀಶಹರೆ—ಎಂದು

ಹೊರಗೆ ಇವಳ ಜತೆಗೆ ಹಾಡುತಲಿದ್ದವನು ತಾನೇ ಸ್ವಂತವಾಗಿ ಹಾಡಿದನು :—

ದಿನಮಣಿಮಂಡನ ಭವಖಂಡನ ಮುನಿಜನ ಮಾನಸಹಂಸ ॥

ಶಾಂತಿಯು ಭಕ್ತಿಭಾವದಿಂದ ಪ್ರಣತಳಾಗಿ ಸತ್ಯಾನಂದನ ಪಾದಧೂಳಿಯನ್ನು ಗ್ರಹಣಮಾಡಿ, ಪ್ರಭುವೆ! ನಾನೇನು ಭಾಗ್ಯವನ್ನು ಮಾಡಿದ್ದೆನೋ ತಮ್ಮ ಶ್ರೀ ಪಾದಪದ್ಮದ ದರ್ಶನವಾಯಿತು, ಅಪ್ಪಣೆಯನ್ನು ಕೊಡೋಣಾಗಲಿ, ನನ್ನಿಂದೇನಾಗತಕ್ಕದ್ದು? ಎಂದು ಹೇಳಿ, ಸಾರಂಗವನ್ನು ಶ್ರುತಿಮಾಡಿಕೊಂಡು ಪುನಃ ಹಾಡಿದಳು :—

ತವ ಚರಣಪ್ರಣತಾ ವಯಮಿತಿ ಭಾವಯ ಕುರುಕುಶಲಂ
ಪ್ರಣತೇಷು—ಎಂದು.

ಸತ್ಯಾನಂದನು, ತಾಯೆ! ನಿನ್ನ ಕುಶಲವೇ ಆಗುವುದು.

ಶಾಂತಿ—ಹೇಗೆ ಪ್ರಭುವೆ! ತಮ್ಮ ಆಜ್ಞೆಯಾಗಿದೆ, ನನ್ನ ವೈಧವ್ಯ!

ಸತ್ಯಾನಂದ—ನಿನ್ನನ್ನು ನಾನರಿಯೆ, ಹಗ್ಗದ ಬಲವನ್ನು ಅರಿಯದೆ ನಾನು ಹೆಚ್ಚು ಎಳದೆನು, ನೀನು ನನಗಿಂತಲೂ ಜ್ಞಾನಿ, ಇದರ ಉಪಾಯವನ್ನು ನೀನು ಮಾಡು, ಜೀವಾನಂದನಿಗೆ ನನಗೆ ಇದೆಲ್ಲ ಗೊತ್ತಿದೆಯೆಂದು ಹೇಳಬೇಡ, ನಿನ್ನ ಪ್ರಲೋಭದಿಂದ ಪ್ರಾಣವನ್ನು ಇಟ್ಟುಕೊಳ್ಳಲು ಸಮರ್ಥನಾಗುವನು, ಅಲ್ಲದೆ ಅದರಿಂದಲೇ ಪ್ರಾಣವನ್ನು ಇನ್ನೂ ಇಟ್ಟುಕೊಂಡಿದ್ದಾನೆ. ಅಷ್ಟಾದರೆ ನನ್ನ ಕಾರ್ಯೋದ್ಧಾರವಾಗುವುದು.

ಆ ವಿಶಾಲವಾದ ನೀಲವಾದ ಉತ್ಫುಲ್ಲವಾದ ಲೋಚನಗಳಿಂದ ನಿದಾಘ—ಕಾದಂಬಿನೀ—ವಿರಾಜಿತ—ವಿದ್ಯುತ್ತುಲ್ಯವಾದ ರೋಷವಿಶಿಷ್ಟವಾದ ಕಟಾಕ್ಷವನ್ನು ಬೀರುತ್ತ, ಏನು, ಪ್ರಭು! ನಾನೂ ಮತ್ತು ಸ್ವಾಮಿಯೂ ಏಕಾತ್ಮಕರು, ನಾನು ತಮ್ಮ ಸಂಗಡ ಏನೇನು ಮಾತುಗಳನಾಡಿದೆನೋ ಅದನ್ನೆಲ್ಲ ಅವನಿಗೆ ಹೇಳುವೆನು; ಸಾಯಬೇಕಾದರೆ, ಸಾಯುವನು; ನನಗೆ ನಷ್ಟವೇನು? ನಾನೂ

ಸಂಗಡಲೇ ಸಾಯುವೆನು, ಅವನಿಗೆ ಸ್ವರ್ಗವುಂಟಾದರೆ ನನಗೆ ಸ್ವರ್ಗವಿಲ್ಲವೆಂದು ತಿಳಿಯೋಣಾಯಿತೇನು? ಎಂದಳು.

ಬ್ರಹ್ಮಚಾರಿಯು, ನಾನು ಯಾವಾಗಲೂ ಯಾರಲ್ಲಿಯೂ ಸೋಲಲಿಲ್ಲ; ಈ ಹೊತ್ತು ನಿನ್ನಲ್ಲಿ ಸೋತೆನು; ತಾಯೆ! ನಾನು ನಿನ್ನ ಮಗನು, ಸಂತಾನ ನನ್ನು ಪ್ರೀತಿಸು, ಜೀವಾನಂದನ ಪ್ರಾಣರಕ್ಷಣೆಯನ್ನು ಮಾಡು, ನನ್ನ ಕಾರ್ಯೋದ್ಧಾರವಾಗುವುದೆಂದನು.

ಮಿಂಚು ನಕ್ಕಿತು. ಶಾಂತಿಯು, ನನ್ನ ಸ್ವಾಮಿಯ ಧರ್ಮವು ನನ್ನ ಸ್ವಾಮಿಯ ಕೈಯಲ್ಲಿದೆ, ನಾನು ಅವನನ್ನು ಧರ್ಮದಿಂದ ವಿರತನನ್ನಾಗಿ ಏತಕ್ಕೆ ಮಾಡಬೇಕು? ಇಹಲೋಕದಲ್ಲಿ ಹೆಂಗಸಿಗೆ ಪತಿಯೇ ದೇವತೆ; ಆದರೆ ಪರಲೋಕ ದಲ್ಲಿ ಎಲ್ಲರಿಗೂ ಧರ್ಮವೇ ದೇವತೆ—ನನಗೆ ನನ್ನ ಪತಿ ದೊಡ್ಡವನು. ಅವನಿ ಗಿಂತಲೂ ನನ್ನ ಸ್ವಧರ್ಮವು ದೊಡ್ಡದು, ಅದಕ್ಕಿಂತಲೂ ನನ್ನ ಪತಿಯ ಧರ್ಮವು ದೊಡ್ಡದು; ನನಗೆ ಇಷ್ಟಬಂದಾಗ ನನ್ನ ಧರ್ಮಕ್ಕೆ ಎಳ್ಳೂ ನೀರೂ ಬಿಟ್ಟು ಬಿಡುವೆನು. ನನ್ನ ಸ್ವಾಮಿಯ ಸ್ವಧರ್ಮಕ್ಕೆ ಎಳ್ಳು ನೀರು ಬಿಡಲಾದೀತೆ? ಮಹಾಪ್ರಭು! ನಿಮ್ಮ ಹೇಳಿಕೆಯಲ್ಲಿ ನನ್ನ ಸ್ವಾಮಿಯು ಸಾಯುವದಾದರೆ ಸಾಯಲಿ, ನಾನು ಅಭ್ಯಂತರ ಮಾಡತಕ್ಕವಳಲ್ಲವೆಂದಳು.

ಬ್ರಹ್ಮಚಾರಿಯು ದೀರ್ಘನಿಶ್ವಾಸವನ್ನು ಬಿಟ್ಟು ತಾಯೆ! ಈ ಘೋರವಾದ ವ್ರತಕ್ಕೆ ಬಲಿದಾನವುಂಟು. ನಾವೆಲ್ಲರೂ ಬಲಿಯಾಗಬೇಕಾಗಿದೆ, ನಾನು ಸಾಯುವೆನು, ಜೀವಾನಂದ, ಭವಾನಂದ ಎಲ್ಲರೂ ಸಾಯುವರು, ತಾಯೆ! ನೀನೂ ಸಾಯುವೆ ಎಂದು ಕಾಣುತ್ತದೆ. ಆದರೆ ಕೆಲಸಮಾಡಿ ಸಾಯಬೇಕು, ಕಾರ್ಯಮಾಡದೆ ಸಾಯುವುದು ಚೆನ್ನಾಗಿದೆಯೆ? ನಾನು ಸ್ವದೇಶವನ್ನು ಮಾತ್ರ ತಾಯಿಯೆಂದು ಕರೆಯುತ್ತೇನೆ ಹೊರತು ಮತ್ತಾರನ್ನೂ ಹಾಗೆ ಕರೆಯುವುದಿಲ್ಲ; ಏತಕ್ಕೆಂದರೆ ಅಜಲಾ, ಸುಫಲಾ ಭೂಮಿತಾಯಿ ಹೊರತು ನಾವು ಅನನ್ಯಮಾತೃ ಕರು. ನಿನ್ನನ್ನು ತಾಯಿಯೆಂದು ಹೇಳಿದೆನು; ನೀನು ತಾಯಿಯಾಗಿ ಸಂತಾನರ ಕಾರ್ಯವನ್ನು ಮಾಡು, ಯಾತರಿಂದ ಕಾರ್ಯೋದ್ಧಾರವಾಗುವುದೋ ಅದನ್ನು ಮಾಡು, ಜೀವಾನಂದನ ಪ್ರಾಣರಕ್ಷಣೆಯನ್ನು ಮಾಡು, ನಿನ್ನ ಪ್ರಾಣರಕ್ಷಣೆ ಯನ್ನು ಮಾಡಿಕೊ ಎಂದನು.

ಹೀಗೆ ಹೇಳಿ ಸತ್ಯಾನಂದನು "ಹರೆ ಮುರಾರೆ ಮಧುಕೈಟಭಾರೆ" ಎಂದು ಹಾಡುತ್ತ ಹೊರಟುಹೋದನು.

———

# ಎಂಟನೆಯ ಪರಿಚ್ಛೇದ

ಕ್ರಮವಾಗಿ ಸಂತಾನ ಸಂಪ್ರದಾಯದವರಲ್ಲಿ ಸತ್ಯಾನಂದನು ಹಿಂದಿರುಗಿ ಬಂದನೆಂತಲೂ ಸಂತಾನರಿಗೆಲ್ಲ ಏನೋ ಹೇಳಬೇಕೆಂದಿದ್ದಾನೆಂತಲೂ ಬರಬೇಕೆಂದು ಅವನಪ್ಪಣೆಯಾಗಿದೆಯೆಂತಲೂ ಸಮಾಚಾರವು ಪ್ರಚಾರಿತ ವಾಯಿತು. ಆಗ ಗುಂಪು ಗುಂಪಾಗಿ ಸಂತಾನರೆಲ್ಲರೂ ಅಜಯನದೀತೀರದಲ್ಲಿ ಬಂದು ಸೇರಿದರು. ಬೆಳದಿಂಗಳು ರಾತ್ರಿಯಲ್ಲಿ ಅಜಯನದೀ ಪಾರ್ಶ್ವದಲ್ಲಿ ದೊಡ್ಡ ಅರಣ್ಯದಲ್ಲಿ ಆಮ್ರ ಹಲಸು ತಾಲ ತಿಂತರೀ ಅಶ್ವತ್ಥ ವಟ ಶಾಲ್ಮಲೀ ಮುಂತಾದ ವೃಕ್ಷಗಳಿಂದಲಂಕೃತವಾದ ಆ ಮಹಾ ಗಹನದಲ್ಲಿ ಹತ್ತುಸಾವಿರ ಸಂತಾನರು ಸೇರಿದರು. ಆಗ ಎಲ್ಲರೂ ಪರಸ್ಪರ ಬಾಯಿಯಿಂದ ಸತ್ಯಾನಂದನ ಆಗಮನದ ಸಮಾಚಾರವನ್ನು ಕೇಳಿ ಕೋಲಾಹಲಧ್ವನಿಯನ್ನು ಮಾಡುತಲಿದ್ದರು. ಸತ್ಯಾನಂದನು ಎಲ್ಲಿಗೆ ಯಾವ ಕೆಲಸಕ್ಕೆ ಹೋಗಿದ್ದನೋ ಅದು ಯಾರಿಗೂ ಗೊತ್ತಿಲ್ಲ. ಆದರೆ ಪ್ರವಾದವೇನೆಂದರೆ:—ಅವನು ಸಂತಾನರ ಮಂಗಳಾಕಾಂಕ್ಷಿಯಾಗಿ ಅದಕ್ಕೋಸ್ಕರ ತಪಸ್ಸುಮಾಡುವುದಕ್ಕೆ ಹಿಮಾಲಯಕ್ಕೆ ಹೋಗಿದ್ದನು. ಮಹಾಸ್ವಾಮಿಗಳ ತಪಸ್ಸು ಸಿದ್ಧಿಯಾಯಿತು. ನಮಗೆ ರಾಜ್ಯವು ಬರುವುದೆಂದು ಬಹಳ ಕೋಲಾಹಲವಾಗಲಾರಂಭವಾಯಿತು. ಆಗ ಕೆಲವರು ಹೊಡಿ, ಬಡಿ, ಮುಸಲರನ್ನು ಹೊಡೀರಿ ಎಂದು ಚೀತ್ಕಾರಮಾಡಿದರು. ಕೆಲವರು ಜಯ, ಮಹಾಸ್ವಾಮಿಗಳಿಗೆ ಜಯವಾಗಲೆಂದು ಕೂಗಿದರು. ಕೆಲವರು ಹರೇ ಮುರಾರೆ ಮಧುಕೈಟಭಾರೆ ಹಾಡಿದರು. ಕೆಲವರು ವಂದೇ ಮಾತರಂ ಹಾಡಿದರು. ಕೆಲವರು ಅಣ್ಣಾ! ತುಚ್ಛ ಬಂಗಾಳಿಗಳಾಗಿ ರಣಕ್ಷೇತ್ರದಲ್ಲಿ ಈ ಶರೀರವನ್ನು ಬಿಟ್ಟುಬಿಡುವ ದಿನ ಬಂದಿತೆ? ಎಂದರು. ಕೆಲವರು ಅಣ್ಣಾ! ಮಶೀದಿಗಳನ್ನು ಒಡದು ಧ್ವಂಸಮಾಡಿ ರಾಧಾಮಾಧವನ ಮಂದಿರವನ್ನು ಕಟ್ಟುವ ದಿನ ಬಂದೀತೆ? ಎಂದರು. ಕೆಲವರು ತಾನು ಸಂಪಾದಿಸಿದ್ದನ್ನ ತಾನು ಭೋಗಮಾಡುವ ದಿನ ಬಂದೀತೆ? ಎಂದರು. ಕೆಲವರು ನಿರಾಶ್ರಮಿಗಳಾಗಿರದೆ ನಿಬರ್ಾಧಕವಾಗಿ ಪುನಃ ಆಶ್ರಮಗ್ರಹಣಮಾಡುವ ದಿನ ಬಂದೀತೆ? ಎಂದರು. ಕೆಲವರು ಈ ಅರಾಜಕ ತಪ್ಪೀತೆ? ಕೆಲವರು ಈ ಜಾತಿಪಕ್ಷಪಾತ ತಪ್ಪುವ ದಿನ ಬಂದೀತೆ? ಕೆಲವರು ಶಿಷ್ಟಾಚರಣೆಯಲ್ಲಿ ಬುದ್ಧಿ ಹುಟ್ಟುವ ದಿನ ಬಂದೀತೆ? ಎಂದು ಮುಂತಾಗಿ ತಮ್ಮ ತಮ್ಮ ಅಭಿಮತಾನುಸಾರವಾಗಿ ಹೇಳಿಕೊಳ್ಳುತ್ತಿದ್ದರು. ಹತ್ತುಸಾವಿರ ನರಕಂಠಗಳ ಕಲಕಲ ರವ, ಮಧುರವಾದ ವಾಯುವಿನಿಂದ ತಾಡಿತವಾಗಿ ಉಂಟಾದ ವೃಕ್ಷಪತ್ರರಾಶಿಯ ಮರ್ಮರ ಶಬ್ದ, ಸೈಕತವಾಹಿನೀಯಾದ ತರಂಗಿಣಿಯ ಮೃದು ಮೃದುವಾದ ತರತರ ರವ, ನೀಲಾಕಾಶದಲ್ಲಿ ಚಂದ್ರತಾರಾ, ಶ್ವೇತವಾದ ಮೇಘರಾಶಿ, ಶ್ಯಾಮಲವಾದ ಧರಣೀತಲದಲ್ಲಿ ಹಸಿರಾದ ಅರಣ್ಯ, ಸ್ವಚ್ಛವಾದ ನದಿ, ಬಿಳುಪಾದ

ಮರಳು, ಫುಲ್ಲವಾದ ಕುಸುಮದಾಮಗಳು ಮತ್ತು ಮಧ್ಯೆ ಮಧ್ಯೆ ಆ ಸಕಲ ಜನ ಮನೋರಮವಾದ ''ವಂದೇ ಮಾತರಂ.'' ಇಷ್ಟರಲ್ಲಿ ಸತ್ಯಾನಂದನು ಬಂದು ಆ ಸೇರಿದ ಸಂತಾನರ ಮಧ್ಯದಲ್ಲಿ ನಿಂತುಕೊಂಡನು. ಆಗ ಆ ದಶಸಹಸ್ರ ಸಂತಾನ ಮಸ್ತಕಗಳು ಮರಗಳ ಕಂಡಿಗಳಿಂದ ಬಿದ್ದ ಚಂದ್ರಕಿರಣದಲ್ಲಿ ಪ್ರಭಾಸಿತವಾಗಿ ಶ್ಯಾಮಲವಾದ ತೃಣಾವೃತವಾದ ಭೂಮಿಯಲ್ಲಿ ಪ್ರಣತವಾದವು. ಅತಿ ಉಚ್ಚ ವಾದ ಧ್ವನಿಯಿಂದ ಅಶ್ರುಪೂರ್ಣಲೋಚನನಾಗಿ ಎರಡು ಕೈಗಳನ್ನು ಮೇಲಕ್ಕೆತ್ತಿ ಕೊಂಡು ಸತ್ಯಾನಂದನು ಹೇಳತೊಡಗಿದನು :—

ಶಂಖಚಕ್ರಗದಾಪದ್ಮಧಾರಿಯಾಗಿಯೂ, ವನಮಾಲಿಯಾಗಿಯೂ, ವೈಕುಂಠ ನಾಥನಾಗಿಯೂ, ಕೇಶಮಥನನಾಗಿಯೂ, ಮಧು, ಮುರ, ನರಕ ಮರ್ದನ ನಾಗಿಯೂ, ಲೋಕಪಾಲಕನಾಗಿಯೂ ಇರುವ ಆ ಶ್ರೀಹರಿಯು ನಿಮಗೆ ಮಂಗಳವನ್ನು ಮಾಡಲಿ, ನಿಮ್ಮಗಳ ಬಾಹುಗಳಲ್ಲಿ ಬಲವನ್ನು ಕೊಡಲಿ, ಮನಸ್ಸಿ ನಲ್ಲಿ ಭಕ್ತಿಯನ್ನು ಕೊಡಲಿ, ಧರ್ಮದಲ್ಲಿ ಮತಿಯನ್ನು ಇಡಲಿ, ನೀವುಗಳು ಒಂದು ಸಲ ಅವನ ಮಹಿಮೆಯನ್ನು ಕೀರ್ತನೆಮಾಡಿ ಎಂದು ಹೇಳುತ್ತಲೇ ಆ ಸಹಸ್ರಾರು ಕಂಠಗಳಿಂದ ಉಚ್ಚಸ್ವರದಿಂದ ಗೀತವಾಗಲಾರಂಭವಾಯಿತು :—

''ಜಯಜಗದೀಶಹರೆ
ಪ್ರಳಯಪಯೋಧಿಜಲೆ ಧೃತವಾನಸಿ ವೇದಂ
ವಿಹಿತವಹಿತ್ರಚರಿತ್ರಮಖೇದಂ
ಕೇಶವಧೃತಮೀನಶರೀರ
ಜಯಜಗದೀಶಹರೆ''—ಎಂದು

ಸತ್ಯಾನಂದನು ಅವರಿಗೆ ಪುನಃ ಆಶೀರ್ವದಿಸಿ, ಹೆ, ಸಂತಾನಗಳಿರಾ! ಈ ದಿನ ನಿಮ್ಮಗಳಿಗೆ ಹೇಳತಕ್ಕದ್ದು ಒಂದು ವಿಶೇಷ ಮಾತು ಉಂಟು; ಥಾಮಸ ನೆಂಬ ಒಬ್ಬ ವಿಧರ್ಮಿಯಾದ ದುರಾತ್ಮನು ಬಹುಜನ ಸಂತಾನರನ್ನು ನಷ್ಟ ಮಾಡಿದ್ದಾನೆ. ನಾವು ಇಂದು ರಾತ್ರಿ ಅವನನ್ನು ಸಸೈನ್ಯವಾಗಿ ಹತಮಾಡಬೇಕು. ಜಗದೀಶ್ವರನ ಆಜ್ಞೆ—ನೀವುಗಳು ಏನು ಹೇಳುವಿರಿ? ಎಂದನು.

ಭೀಷಣವಾದ ಹರಿಧ್ವನಿಯಿಂದ ಕಾನನವೆಲ್ಲ ವಿದೀರ್ಣವಾಯಿತು. ಈಗಲೇ ಹೊಡದುಹಾಕುತ್ತೇವೆ, ಅವನೆಲ್ಲಿದ್ದಾನೆ? ತೋರಿಸಿ, ನಡೆರಿ, ಹೊಡಿ! ಬಡಿ! ಶತ್ರುವನ್ನು ಹೊಡಿ! ಇತ್ಯಾದಿ ಶಬ್ದಗಳು ದೂರದಲ್ಲಿದ್ದ ಶೈಲಗಳಲ್ಲಿ ಪ್ರತಿ ಧ್ವನಿತವಾದವು. ಆಗ ಸತ್ಯಾನಂದನು ನಾವು ಸ್ವಲ್ಪ ತಾಳ್ಮೆಯನ್ನು ತಾಳಿ ನಿಧಾನ ಮಾಡಬೇಕು. ಶತ್ರುಗಳು ಫಿರಂಗಿಯನ್ನುಂಟಾಗಿದ್ದಾರೆ. ಫಿರಂಗಿ ಗಳಿಲ್ಲದೆ ಅವರ ಸಂಗಡ ಯುದ್ಧಮಾಡುವುದಕ್ಕೆ ಸಾಗದು; ಅದಲ್ಲದೆ ಅವರು ವೀರಜಾತಿಯವರು. ಪದಚಿಹ್ನದುರ್ಗದಿಂದ ಹದಿನೇಳು ಫಿರಂಗಿ ಬರುತ್ತದೆ. ಫಿರಂಗಿಗಳು ಬರುತ್ತಲೇ ನಾವು ಯುದ್ಧಕ್ಕೆ ಹೊರಡೋಣ; ನೋಡಿ,

ಆಗಲೇ ಬೆಳಕು ಹರಿಯುತ್ತ ಬಂತು. ಐದುಘಂಟೆಯಾಗುವದರೊಳಗೆ—ಅದೇನು ? ಎಂದನು.

ಢಂ-ಢಂ-ಅಕಸ್ಮಾತ್ತಾಗಿ ಆ ವಿಶಾಲವಾದ ಕಾನನದಲ್ಲಿ ನಾಲ್ಕುದಿಕ್ಕುಗಳಲ್ಲಿಯೂ ಫಿರಂಗಿ ಶಬ್ದವಾಯಿತು. ಇಂಗ್ಲೀಷರ ಫಿರಂಗಿ. ಕೇಪ್ಟನ್ ಥಾಮುಸನು ಸಂತಾನರನ್ನು ಬಲೇಸೋಹುಗೆ ಸಿಕ್ಕಿದ ಮೀನುಗಳ ಹಾಗೆ ವಧೆಮಾಡಬೇಕೆಂದು ಉದ್ಯೋಗಮಾಡಿದ್ದನು.

## ಒಂಭತ್ತನೆಯ ಪರಿಚ್ಛೇದ

೧೦ ಇಂಗ್ಲೀಷರ ಫಿರಂಗಿಗಳು ಢಂ, ಢಂ ಶಬ್ದಮಾಡಿದವು. ಆ ಶಬ್ದವು ವಿಶಾಲವಾದ ಆ ಕಾನನವನ್ನು ಕಂಪಿತಮಾಡಿ ಪ್ರತಿಧ್ವನಿತವಾಯಿತು. ಶಬ್ದವು ಅಜಯುನದಿಯು ಸೋಪಾನದಿಂದ ಸೋಪಾನಕ್ಕೆ ಕೇಳಿ ನದೀಪಾರಾಗಿ ದೂರದಲ್ಲಿದ್ದ ಕಾನನಾಂತರದಲ್ಲಿ ಪ್ರವೇಶಮಾಡಿ ಅಲ್ಲಿಯೂ ಢಂ, ಢಂ ಎಂದು ಕೇಳಿಸಿತು. ಸತ್ಯಾನಂದನು ಯಾರ ತೋಫು ನೋಡೆಂದನು. ಆ ಕ್ಷಣದಲ್ಲಿಯೇ ಕೆಲಜನ ಸಂತಾನರು ಕುದುರೆಯನ್ನೇರಿ ನೋಡುವುದಕ್ಕೆ ಹೊರಟರು. ಆದರೆ ಅವರು ಕಾನನವನ್ನು ಬಿಟ್ಟು ಸ್ವಲ್ಪದೂರ ಹೋಗುವದರೊಳಗಾಗಿ ಶ್ರಾವಣಮಾಸದ ಮಳೆಯ ಧಾರೆಯಹಾಗೆ ಗುಂಡುಗಳು ಅವರಮೇಲೆ ಸುರಿದವು. ಅವರು ಕುದುರೆ ಸಹಿತವಾಗಿ ಆಹತರಾಗಿ, ಎಲ್ಲರೂ ಪ್ರಾಣತ್ಯಾಗವನ್ನು ಮಾಡಿದರು! ಸತ್ಯಾನಂದನು ದೂರದಿಂದದನ್ನು ನೋಡಿ, ದೊಡ್ಡ ಮರವನ್ನು ಹತ್ತಿ ಏನಾಯಿತು, ನೋಡಿರೆಂದು ಹೇಳುವದರೊಳಗೆ ಜೀವಾನಂದನು ದೊಡ್ಡ ಮರವನ್ನೇರಿ ಪ್ರಭಾತ ಕಿರಣದಲ್ಲಿ ನೋಡುತಲಿದ್ದವನು ಮರದ ಕೊಂಬೆಯಮೇಲೆ ನಿಂತು, ತೋಫು ಇಂಗ್ಲೀಷರದೆಂದನು. ಸತ್ಯಾನಂದನು ಕುದುರೆ ಸವಾರರೋ, ಕಾಲಾಳುಗಳೋ ಎಂದು ಕೇಳಿದನು.

ಜೀವಾನಂದ—ಎರಡೂ ಉಂಟು.

ಸತ್ಯಾನಂದ—ಎಷ್ಟು ?

ಜೀವಾನಂದ—ಅಂದಾಜಮಾಡುವುದಕ್ಕಾಗುವುದಿಲ್ಲ. ಮರಗಳು ಅಡ್ಡವಾಗಿವೆ. ಅವರು ಹೊರಗೆ ಹೊರಟಿಲ್ಲ—

ಸತ್ಯಾನಂದ—ಕೆಂಪು ಜನರೋ, ಇಲ್ಲ ಬರೀ ಸಿಪಾಯಿಗಳೋ ?

ಜೀವಾನಂದ—ಕೆಂಪು ಜನರು ಇದ್ದಾರೆ.

ಜೀವಾನಂದನು ಮರದಿಂದಿಳಿದನು.

ಸತ್ಯಾನಂದ—ಹತ್ತುಸಾವಿರ ಸಂತಾನರು ಸಿದ್ಧವಾಗಿದ್ದಾರೆ. ಏನು ಮಾಡುವೆಯೋ, ನೋಡು. ನೀನು ಇಂದು ಸೇನಾಪತಿ.

ಇದನ್ನು ಕೇಳಿ ಜೀವಾನಂದನು ಸಶಸ್ತ್ರನಾಗಿ ಸಜ್ಜಿತನಾಗಿ ಒಂದು ಹಾರು ಹಾರಿ ಕುದುರೆಯನೇರಿದನು. ಒಂದುಸಲ ನವೀನಾನಂದನ ಕಡೆಗೆ ತಿರುಗಿ ನೋಡಿ ಕಣ್ಣಿನಿಂದೇನೋ ಸಂಕೇತವಮಾಡಿದನು. ಏನು ಸಂಕೇತವೋ ಯಾರಿಗೂ ಗೊತ್ತಾಗ ಲಿಲ್ಲ. ನವೀನಾನಂದನು ಸಯನೇಂಗಿತೆಯಿಂದ ಏನುತ್ತರವನ್ನು ಕೊಟ್ಟನೋ ಅದು ಯಾರಿಗೂ ಗೊತ್ತಾಗಲಿಲ್ಲ. ಅವರವರ ಮನಸ್ಸಿನಲ್ಲಿ ಪರಸ್ಪರ ಇದೇ ಕಡೆಯ ದರ್ಶನ ವೆಂದು ತಿಳಿದುಕೊಂಡಿರಬಹುದು. ಆಗ ನವೀನಾನಂದನು ದಕ್ಷಿಣ ಬಾಹುವನ್ನು ಮೇಲಕ್ಕೆತ್ತಿ ಎಲ್ಲರನ್ನು ಕುರಿತು, ಭ್ರಾತೃಗಳಿರಾ! ಈ ಸಮಯದಲ್ಲಿ ಜಯ ಜಗದೀಶಹರೆ! ಎಂದು ಪ್ರಾರ್ಥಿಸರಿ ಎಂದು ಹೇಳಿದನು. ಆಗ ಆ ದಶಸಹಸ್ರ ಸಂತಾನರೂ ಏಕಕಂಠವಾಗಿ ನದೀ, ಕಾನನ, ಆಕಾಶವು ಸಹ ಪ್ರತಿಧ್ವನಿಯಾಗುವ ಹಾಗೆ ಗುಂಡಿನ ಶಬ್ದವು ಮುಣುಗಿಹೋಗುವಹಾಗೆ ಬಾಹುಗಳನೆತ್ತಿಕೊಂಡು,

ಜಯಜಗದೀಶಹರೆ

ಮ್ಲೇಂಚ್ಛನಿವಹ ನಿಧನೆ ಕಲಯುಸಿಕರವಾಲಂ।—ಎಂದು ಹಾಡಿದರು.

ಈ ಸಮಯದಲ್ಲಿ ಆ ಇಂಗ್ಲೀಷರ ಗುಂಡುಗಳ ವೃಷ್ಟಿಯು ಕಾನನ ಮಧ್ಯದಲ್ಲಿ ಸಂತಾನ ಸಂಪ್ರದಾಯದವರ ಮೇಲೆ ಕರೆಯಿತು. ಅನೇಕರು ಹಾಡಾ ಡುತ ಛಿನ್ನಮಸ್ತಕರಾಗಿ ಛಿನ್ನಬಾಹುಗಳಾಗಿ ಛಿನ್ನಹೃತ್‌ಗಳಾಗಿ ನೆಲಕ್ಕೆ ಬಿದ್ದರು. ಆದರೂ ಯಾರೂ ಹಾಡುವುದನ್ನು ನಿಲ್ಲಿಸದೆ, ಜಯಜಗದೀಶಹರೆ! ಎಂದು ಹಾಡುತ ಲಿದ್ದರು. ಗಾನವು ಸಮಾಪ್ತವಾಗುತ್ತಲೆ, ಒಂದೇ ತಡವೆ ಎಲ್ಲ ನಿಸ್ತಬ್ಧವಾಯಿತು. ಆ ನಿಬಿಡವಾದ ಕಾನನವೂ ಆ ನದೀ ಸೈಕತವೂ ಆ ಅನಂತವಾದ ವಿಜನವೂ ಒಂದೇ ತಡವಿಗೆ ಗಂಭೀರವಾದ ನೀರವದಲ್ಲಿ ನಿವಿಷ್ಟವಾದವು. ಕೇವಲ ಆ ಅತಿಭಯಾನಕ ವಾದ ಫಿರಂಗಿಗಳ ಧ್ವನಿ, ದೂರದಿಂದ ಬರುತಲಿದ್ದ ಆ ಕೆಂಪುಜನರ ಅಸ್ತ್ರಗಳ ಝುಂಝುನಾ ಶಬ್ದ ಮತ್ತು ಅವರ ಪದಧ್ವನಿ ಮಾತ್ರ ಕೇಳುತಲಿದ್ದವು.

ಸತ್ಯಾನಂದನು ಆ ಗಭೀರವಾದ ನಿಶ್ಶಬ್ದದ ಮಧ್ಯದಲ್ಲಿ ಅತಿ ಉಚ್ಚವಾದ ಸ್ವರದಿಂದ, ಜಗದೀಶನಾದ ಹರಿಯು ನಿಮ್ಮಗಳಿಗೆ ಕೃಪೆಮಾಡುವನು. ತೋಫು ಗಳು ಎಷ್ಟು ದೂರದಲ್ಲಿವೆ ಎಂದನು.

ಮೇಲಿನಿಂದ ಒಬ್ಬನು, ಈ ಕಾಡಿಗೆ ಅತಿ ಸಮೀಪವಾಗಿವೆ. ಮುಂದಿನ ಗುಡ್ಡವು ಅಡ್ಡವಾಗಿದೆ ಎಂದನು.

ಸತ್ಯಾನಂದ—ನೀನು ಯಾರು?

ಮೇಲಿನಿಂದ—ನಾನು ನವೀನಾನಂದನು.

ಸತ್ಯಾನಂದ—ನೀವು ಹತ್ತುಸಾವಿರ ಸಂತಾನರು ಇದ್ದೀರಿ, ನಿಮಗೆ ಜಯ ವಾಗುವುದು, ತೋಫುಗಳನ್ನು ಕಿತ್ತು ತೆಗೆದುಕೊಂಡು ಬನ್ನಿ.

ಆಗ ಮುಂದಾಳಾಗಿ ಅಶ್ವಾರೋಹಿಯಾಗಿದ್ದ ಜೀವಾನಂದನು "ಬನ್ನಿರಿ" ಎಂದು ಕೂಗಿದನು.

ಆಗ ಹತ್ತುಸಾವಿರ ಸಂತಾನರು—ಅಶ್ವಾರೋಹಿ, ಪದಾತಿಗಳೆಲ್ಲರೂ ಅತಿ ವೇಗದಿಂದ ಜೀವಾನಂದನ ಅನುವರ್ತಿಗಳಾದರು. ಪದಾತಿಗಳು, ಭುಜದ ಮೇಲೆ ಬಂದೂಕು, ಸೊಂಟದಲ್ಲಿ ಕತ್ತಿ, ಕೈಲಿ ಭಲ್ಲೆ, ಕಾನನದಿಂದ ಹೊರಗೆ ಹೊರಟ ಕೂಡಲೇ ಆ ಅಜಸ್ರವಾದ ಗುಂಡುಗಳ ಮಳೆಯು ಸುರಿದು ಅವರನ್ನು ಭಿನ್ನಭಿನ್ನ ಮಾಡಲಾರಂಭಿಸಿತು. ಬಹುಮಂದಿ ಸಂತಾನರು ಯುದ್ಧವಿಲ್ಲದೆ ಪ್ರಾಣತ್ಯಾಗ ವನ್ನು ಮಾಡಿ ಭೂಶಾಯಿಗಳಾದರು. ಒಬ್ಬನು ಜೀವಾನಂದನನ್ನು ಕುರಿತು, ಜೀವಾನಂದ! ಅನರ್ಥಕವಾಗಿ ಪ್ರಾಣಿಹತ್ಯೆಯಿಂದ ಪ್ರಯೋಜನವೇನೆಂದನು.

ಜೀವಾನಂದನು ಹಿಂದಿರುಗಿ ನೋಡಲಾಗಿ ಭವಾನಂದನಾಗಿದ್ದನು. ಜೀವಾ ನಂದನು ಏನು ಮಾಡೋಣ, ಹೇಳೆಂದನು.

ಭವಾನಂದ—ವನದೊಳಗಿದ್ದುಕೊಂಡು ಗಿಡಗಳ ಆಶ್ರಯದಿಂದ ನಮ್ಮ ಪ್ರಾಣರಕ್ಷಣೆಯನ್ನು ಮಾಡಿಕೊಳ್ಳೋಣ, ಗುಂಡಿನ ಬಾಯಿಗೆ ಸಿಕ್ಕಿದರೆ ಮಾತಿ ಲ್ಲದೆ ನೆಲವೇ ಗತಿ. ತೋಫುಗಳಿಲ್ಲದೆ ಈ ಸಂತಾನ ಸೈನ್ಯವು ಒಂದು ನಿಮಿಷ ನಿಲ್ಲಲಾರದು. ಆದರೆ ಪೊದೆಗಳಲ್ಲಿದ್ದುಕೊಂಡು ಬಹಳಹೊತ್ತು ಯುದ್ಧವನ್ನು ಮಾಡಬಲ್ಲರು.

ಜೀವಾನಂದ—ನೀನು ಹೇಳುವುದು ನಿಜ, ಆದರೆ ಪ್ರಭುವು ತೋಫು ಗಳನ್ನು ಕಿತ್ತುಕೊಂಡು ಬರಬೇಕೆಂದು ಅಪ್ಪಣೆಯನ್ನು ಮಾಡಿದ್ದಾರೆ, ಆದ್ದರಿಂದ ನಾವು ತೋಫುಗಳನ್ನು ಕಿತ್ತುಕೊಂಡು ಬರುವುದಕ್ಕೆ ಹೋಗುತ್ತೇವೆ.

ಭವಾನಂದ—ತೋಫುಗಳನ್ನು ಕಿತ್ತುಕೊಂಡು ಬರುವುದು ಯಾರಿಗೆ ಸಾಧ್ಯ? ಹಾಗೆ ಹೋಗಲೇಬೇಕಾದ ಪಕ್ಷದಲ್ಲಿ ನೀನು ನಿಲ್ಲು; ನಾನು ಹೋಗುತ್ತೇನೆ.

ಜೀವಾನಂದ—ಅದಾಗಲಾರದು. ಭವಾನಂದ! ಇಂದು ನಾನು ಸಾಯುವ ದಿನ.

ಭವಾನಂದ—ಇಂದು ನಾನು ಸಾಯುವ ದಿನ.

ಜೀವಾನಂದ—ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ.

ಭವಾನಂದ—ನಿನ್ನದು ನಿಷ್ಪಾಪವಾದ ಶರೀರ, ನಿನಗೆ ಪ್ರಾಯಶ್ಚಿತ್ತವಿಲ್ಲ. ನನ್ನ ಮನಸ್ಸು ಕಲುಷಿತವಾದುದು, ನಾನೇ ಸಾಯಬೇಕಾದುದು. ನೀನು ಇರು, ನಾನು ಹೋಗುತ್ತೇನೆ.

ಜೀವಾನಂದ—ಭವಾನಂದ! ನೀನು ಮಾಡಿದ ಪಾಪವೇನೋ ಅದು ನಾನರಿಯೆನು. ಆದರೆ ನೀನು ಇದ್ದರೆ ಸಂತಾನರ ಕಾರ್ಯೋದ್ಧಾರವಾಗುವುದು, ನಾನು ಹೋಗುತ್ತೇನೆ.

ಭವಾನಂದನು ಸ್ವಲ್ಪಹೊತ್ತು ಸುಮ್ಮನಿದ್ದು ಕಡೆಗೆ—ಸಾಯುವುದು ಅವಶ್ಯ ವಿದ್ದರೆ ಇಂದೇ ಸಾಯುವೆನು, ಎಂದು ಸಾಯುವುದರಿಂದ ಪ್ರಯೋಜನವೋ ಅಂದೇ ಸಾಯುವೆನು; ಸಾಯುವುದಕ್ಕೆ ಕಾಲಾಕಾಲವೇನು?

ಜೀವಾನಂದ—ಹಾಗಾದರೆ, ಬಾ.

ಇಷ್ಟು ಮಾತು ನಡೆದಮೇಲೆ ಭವಾನಂದನು ಎಲ್ಲರಿಗಿಂತ ಮುಂದಾಳಾದನು. ಆಗ ದಳದಳದಲ್ಲಿಯೂ ಗುಂಪುಗ ಂಪಿನಲ್ಲಿಯೂ ಗುಂಡುಗಳು ಬಿದ್ದು ಸಂತಾನ ಸೈನ್ಯವನ್ನು ಖಂಡವಿಖಂಡ ಮಾಡುತಲಿದ್ದವು. ಹರಿದು ಸೀಳಿಹಾಕುತಲಿದ್ದವು, ತಲೆಕೆಳಗೆ ಮಾಡುತಲಿದ್ದವು, ಇದಲ್ಲದೆ ಶತ್ರುಗಳಲ್ಲಿ ಬಂದೂಕುಧಾರಿಗಳಾದ ಸಿಪಾಯಿಗಳು ಗುರಿಯಿಟ್ಟು ತಪ್ಪದೆ ಸಂತಾನರನ್ನು ಸಾಲುಸಾಲಾಗಿ ನೆಲದ ಮೇಲೆ ಕೆಡಹುತ್ತಿದ್ದರು. ಇಂಥ ಸಮಯದಲ್ಲಿ ಭವಾನಂದನು, ಈ ತರಂಗದಲ್ಲಿ ಸಂತಾನರು ಇಂದು ಧುಮಿಕಿಬಿಡಬೇಕು. ಯಾರು ಬೀಳುವಿರಿ? ಈ ಸಮಯದಲ್ಲಿ ಹಾಡಬೇಕು ವಂದೇ ಮಾತರಂ, ಎಂದು ಹೇಳಿದನು. ಆಗ ಉಚ್ಚನಿನಾದದಿಂದ ಮೇಘಮಲ್ಲಾರಿ ರಾಗದಲ್ಲಿ ಆ ಸಾಹಸ್ರಕಂಠ ಸಂತಾನ ಸೇನೆಯು ತೋಪು ಗುಂಡುಗಳ ತಾಳಕ್ಕೆ ಸರಿಯಾಗಿ 'ವಂದೇ ಮಾತರಂ' ಹಾಡಿದರು.

---

## ಹತ್ತನೆಯ ಪರಿಚ್ಛೇದ

ಆ ಹತ್ತುಸಾವಿರ ಸಂತಾನರು 'ವಂದೇ ಮಾತರಂ' ಹಾಡುತ್ತ ಭಲ್ಲೆಗಳನೆತ್ತಿಕೊಂಡು ದ್ರುತವೇಗದಿಂದ ತೋಪುಗಳಿದ್ದ ಸ್ಥಳಕ್ಕೆ ಹೋಗಿಬಿದ್ದರು. ಗುಂಡುಗಳ ವೃಷ್ಟಿಯಲ್ಲಿ ಖಂಡವಿಖಂಡವಾಗಿ ವಿದೀರ್ಣವಾಗಿ ಉತ್ಪತಿತವಾಗಿ ಅತ್ಯಂತ ವಿಶೃಂಖಲವಾಗಿ ಹೋಗಿಬಿಟ್ಟರು. ಆದರೂ ಸಂತಾನ ಸೈನ್ಯವು ಹಿಮ್ಮೆಟ್ಟಲಿಲ್ಲ. ಆ ಸಮಯದಲ್ಲಿ ಕೇಪ್ಟನ್ ಥಾಮಸನು ಒಂದು ದಳ ಸಿಪಾಯಿಗಳು ಬಂದೂಕುಗಳಿಗೆ ಸನೀನುಗಳನ್ನು ಚಡಾಯಿಸಿಕೊಂಡು ಸಂತಾನರ ದಕ್ಷಿಣ ಪಾರ್ಶ್ವದಲ್ಲಿ ಆಕ್ರಮಣ ಮಾಡಬೇಕೆಂದು ಅಪ್ಪಣೆಯನ್ನು ಮಾಡಿದನು. ಆಗ ಎರಡು ಕಡೆಗಳಿಂದ ಆಕ್ರಾಂತರಾಗಿ ಸಂತಾನರು ಒಂದೇ ತಡವೆ ನಿರಾಶರಾದರು. ಒಂದೊಂದು ನಿಮಿಷದಲ್ಲಿ ನೂರಾರು ಸಂತಾನರು ನಷ್ಟವಾಗುತ್ತ ಬಂದರು. ಆಗ ಜೀವಾನಂದನು, ಭವಾನಂದ! ನೀನು ಹೇಳಿದ್ದೇ ನಿಜವಾಯಿತು, ಇನ್ನು ವೈಷ್ಣವರ ಧ್ವಂಸ ಪ್ರಯೋಜನವಿಲ್ಲ; ಮೆಲ್ಲಮೆಲ್ಲಗೆ ತಿರಗೋಣವೆಂದನು.

ಭವಾನಂದ—ಈಗ ತಿರುಗಿ ಹೋಗುವುದು ಹೇಗೆ! ಈಗ ಹಿಂದಿರುಗಿಹೋಗುವವರು ಸಾಯುವರು.

ಜೀವಾನಂದ—ಮುಂದುಗಡೆಯಿಂದಲೂ ಬಲಗಡೆಯಿಂದಲೂ ಆಕ್ರಮಣ ಮಾಡಿದ್ದಾರೆ; ಎಡಗಡೆಯಲ್ಲಿ ಯಾರೂ ಇಲ್ಲ; ನಡೆ, ಮೆಲ್ಲಮೆಲ್ಲಗೆ ಹಿಮ್ಮೆಟ್ಟಿ ಎಡಕ್ಕೆ ಸರಿದುಹೋಗೋಣ.

ಭವಾನಂದ—ಸರಿದು ಎಲ್ಲಿಗೆ ಹೋಗುತ್ತಿ? ಅತ್ತಕಡೆ ಅಜಯನದಿ, ಹೊಸ ಮಳೆಯಿಂದ ಅಜಯವು ಅತಿ ಪ್ರಬಲ ಪ್ರವಾಹವಾಗಿದೆ. ಇಂಗ್ಲೀಷರ ಗುಂಡುಗಳ

ವೃಷ್ಟಿಯಿಂದ ತಪ್ಪಿಸಿಕೊಂಡು ಸಂತಾನ ಸೇನೆಯನ್ನು ಅಜಯನದೀ ಜಲದಲ್ಲಿ ಮುಣುಗಿಸುವಿಯಾ?

ಜೀವಾನಂದ—ಅಜಯಕ್ಕೆ ಒಂದು ಅಣೆಕಟ್ಟೆದೆಯೆಂದು ಜ್ಞಾಪಕವಿದೆ.

ಭವಾನಂದ—ಈ ಹತ್ತುಸಾವಿರ ಜನರನ್ನು ಅಣೆಮೇಲಿನಿಂದ ಪಾರುಮಾಡುವುದಕ್ಕೆ ಹೋದರೆ ಇಕ್ಕಟ್ಟುಸಲ್ಲಿ ಗುಂಪು ಸೇರಿ ಸಂತಾನ ಸೇನೆಯೆಲ್ಲ ಒಂದೇ ಗುಂಡಿಗೆ ಧ್ವಂಸವಾಗಿ ಹೋಗುತ್ತದೆ.

ಜೀವಾನಂದ—ಒಂದು ಕೆಲಸ ಮಾಡು, ಅಲ್ಪಸಂಖ್ಯೆಯುಳ್ಳ ಸೇನೆಯನ್ನು ನೀನು ತೆಗೆದುಕೊಂಡು ಹೋಗು. ಈ ಯುದ್ಧದಲ್ಲಿ ತೋರಿಸಿರುವ ಸಾಹಸವನ್ನೂ ಚಾತುರ್ಯವನ್ನೂ ನೋಡಿದರೆ ಇದು ನಿನಗೆ ಅಸಾಧ್ಯವಲ್ಲ. ನೀನು ಅಲ್ಪ ಸಂಖ್ಯೆ ಸಂತಾನ ಸೇನೆಯನ್ನು ಇಟ್ಟುಕೊಂಡು ಮುಂದುಗಡೆ ನೋಡಿಕೊ; ನಾನು ನಿನ್ನ ಸೇನೆಯ ಮರೆಯಲ್ಲಿ ಉಳಿದ ಸಂತಾನರನ್ನು ಅಣೆಮೇಲಿನಿಂದ ಪಾರಮಾಡಿ ತೆಗೆದುಕೊಂಡು ಹೋಗುತ್ತೇನೆ, ನಿನ್ನ ಜತೆಯಲ್ಲಿರುವರೇನೋ ನಷ್ಟರಾಗಿ ಹೋಗಲೇಬೇಕು, ನನ್ನ ಸಂಗಡ ಬರುವವರು ಉಳಿದುಕೊಳ್ಳುವರು.

ಭವಾನಂದ—ಒಳ್ಳೇದು, ಹಾಗೆ ಮಾಡುತ್ತೇನೆ.

ಆಗ ಭವಾನಂದನು ಎರಡುಸಾವಿರ ಸಂತಾನರನ್ನು ಕರೆದುಕೊಂಡು ಪುನಃ 'ವಂದೇ ಮಾತರಂ' ಶಬ್ದವನ್ನು ಎತ್ತಿ ಅತ್ಯಂತ ಉತ್ಸಾಹದಿಂದ ಇಂಗ್ಲೀಷರ ಫಿರಂಗಿಯುಳ್ಳ ಸೈನ್ಯವನ್ನು ಆಕ್ರಮಣ ಮಾಡಿದನು. ಅಲ್ಲಿ ಘೋರತರವಾದ ಯುದ್ಧವು ಆರಂಭವಾಯಿತು. ಆದರೆ ತೋಪುಗಳ ಬಾಯಿಯಲ್ಲಿ ಆ ಸಣ್ಣದಾದ ಸಂತಾನ ಸೇನೆಯು ಎಷ್ಟುಹೊತ್ತು ನಿಂತೀತು? ಕುಯಿಲು ಕುಯ್ಯುವರ ಹಾಗೆ ಆ ಸಂತಾನರನ್ನು ಭೂಮಿಶಾಯಿಗಳನ್ನಾಗಿ ಮಾಡಿದರು.

ಇಷ್ಟರೊಳಗೆ ಜೀವಾನಂದನು ಮಿಕ್ಕ ಸಂತಾನರನ್ನು ಸ್ವಲ್ಪ ತಿರುಗಿಸಿ ಎಡಗಡೆಯಲ್ಲಿ ಕಾನನವನ್ನು ಬಳಿಸಿಕೊಂಡು ಮೆಲ್ಲಮೆಲ್ಲಗೆ ಹೋದನು. ಕೇಪ್ಟನ್ ಥಾಮಸನ ಸಹಕಾರಿಯಾದ ಲೆಫ್ಟಿನೆಂಟು ವಾಟಸನ್ ಎಂಬುವನು ದೂರದಿಂದ ಒಂದು ದಳ ಸಂತಾನರು ಮೆಲ್ಲಮೆಲ್ಲಗೆ ಓಡಿಹೋಗುತ್ತಾರೆಂದು ನೋಡಿ, ಅವನೊಂದು ದಳ ಫೌಜದಾರಿ ಸಿಪಾಯಿಗಳನ್ನೂ ಒಂದು ದಳ ದೇಶ್ಯರಾಜನ ಸಿಪಾಯಿಗಳನ್ನು ಸಹ ತೆಗೆದುಕೊಂಡು ಜೀವಾನಂದನ ಬೆನ್ನು ಹತ್ತಿದನು.

ಇದನ್ನು ಕೇಪ್ಟನ್ ಥಾಮಸನು ನೋಡಿದನು. ಸಂತಾನರಲ್ಲಿ ಬಹು ಭಾಗದವರು ಓಡಿಹೋಗುತ್ತಿದ್ದದ್ದನ್ನು ಕಂಡು, ಅವನು ಕೇಪ್ಟನ್ ಹೆ ಎಂಬುವನನ್ನು ಕುರಿತು, ನಾನು ಮುನ್ನೂರು ನಾನೂರು ಜನ ಸಿಪಾಯಿಗಳನ್ನು ತೆಗೆದುಕೊಂಡು ಇಲ್ಲಿ ಉಳಿದಿರುವ ದ್ರೋಹಿಗಳನ್ನು ಹೊಡದುಹಾಕುತ್ತೇನೆ. ನೀನು ತೋಪುಗಳನ್ನೂ ಮಿಕ್ಕ ಸೈನ್ಯವನ್ನೂ ಸಹ ತೆಗೆದುಕೊಂಡು ಅವರ ಹಿಂದೆ ಓಡಿಹೋಗು,

ವಾಟಸನನು ಎಡಗಡೆಯಿಂದ ಹೋಗುತ್ತಾನೆ; ದಕ್ಷಿಣ ಕಡೆಯಿಂದ ನೀನು ಹೋಗು. ಹಾಗಾದರೆ ಮೂರುಕಡೆಯಿಂದಲೂ ಅವರನ್ನು ಸುತ್ತಿಕೊಂಡಂತಾಗಿ ಬಲೆಗೆ ಸಿಕ್ಕಿದ ಹಕ್ಕಿಯು ಹಾಗೆ ಹೊಡದುಹಾಕಬಹುದು. ಅವರು ದ್ರುತಪದರಾದ ದೇಶ್ಯಜನ, ಎಲ್ಲರಿಗಿಂತಲೂ ಓಡುವುದರಲ್ಲಿ ದಕ್ಷರು, ನೀನು ಅವರನ್ನು ಹಿಡಿಯು ಲಾರೆ, ಆದ್ದರಿಂದ ಸವಾರರನ್ನು ತೆಗೆದುಕೊಂಡು ಸ್ವಲ್ಪ ಬಳಸಿಕೊಂಡು ಹೋಗಿ ಅಡ್ಡಹಾಕಿ ಅಣೆಕಟ್ಟಿನ ಬಾಯಿಗೆ ನಿಂತುಕೊಂಡರೆ ಕೆಲಸವನ್ನು ಸಾಧಿಸಬಹು ದೆಂದು ಹೇಳಿದನು. ಕೇಪ್ಟನ್ ಹೆ ಹಾಗೆ ಮಾಡಿದನು.

''ಅತಿದರ್ಪೇಹತಾಲಂಕಾ''—ಕೇಪ್ಟನ್ ಥಾಮುಸನು ಸಂತಾನರನ್ನು ಅತಿಶಯು ವಾಗಿ ಹೇಯಾಳಿಕೆಯಿಂದ ಕಂಡು ಇನ್ನೂರು ಪದಾತಿಗಳನ್ನು ಮಾತ್ರ ಭವಾ ನಂದನ ಸಂಗಡ ಯುದ್ಧಕ್ಕೋಸ್ಕರ ಇಟ್ಟುಕೊಂಡು ಮಿಕ್ಕ ಸೈನ್ಯವನ್ನೆಲ್ಲ ಹೆ ಸಂಗಡ ಕಳುಹಿಸಿದನು. ಚತುರನಾದ ಭವಾನಂದನು ಇಂಗ್ಲೀಷರ ತೋಫುಗಳು ಸೈನ್ಯವು ಸಹ ಹೊರಟುಹೋಗಿ ಸ್ವಲ್ಪ ಜನವೇ ಉಳಿದಿರುವುದರಿಂದ ಅವರನ್ನ ಉಳಿಸಕೂಡದೆಂದು ತಿಳಿದವನಾಗಿ, ತನ್ನ ಹತಾವಶಿಷ್ಟರಾಗಿ ಉಳಿದಿದ್ದವರನ್ನು ಕರೆದು, ಈ ಸ್ವಲ್ಪ ಜನರನ್ನು ಕೊಂದುಹಾಕಿ ನಾವು ಜೀವಾನಂದನ ಸಹಾಯುಕ್ಕೆ ಹೋಗಬೇಕು. ನೀವು ಇನ್ನೊಂದು ಸಲ, ಜಯುಜಗದೀಶಹರೆ ಎಂದು ಹೇಳಿರಿ ಎಂದು ಹೇಳಿದನು. ಆಗ ಆ ಸ್ವಲ್ಪ ಜನ ಸಂತಾನರು ''ಜಯುಜಗದೀಶಹರೆ'' ಹೇಳುತ್ತಾ ಹುಲಿಗಳ ಹಾಗೆ ಕೇಪ್ಟನ್ ಥಾಮುಸನ ಮೇಲೆ ಬಿದ್ದರು. ಆ ಬಿದ್ದ ಜೋರನ್ನು ಆ ಅಲ್ಪ ಸಂಖ್ಯಕರಾದ ಸಿಪಾಯಿಗಳು ತೆಲಂಗೀ ದಳದವರು ಸಹಿಸಲಾರದೆ ಎಲ್ಲರೂ ನಷ್ಟರಾಗಿ ಹೋದರು. ಆಗ ಭವಾನಂದನು ತಾನೇ ಹೋಗಿ ಕೇಪ್ಟನ್ ಥಾಮುಸನ ತಲೆಯು ಕೂದಲನ್ನು ಹಿಡಿದುಕೊಂಡನು. ಕೇಪ್ಟನ್ ಥಾಮುಸನು ಕಡೆಯುವರೆಗೆ ಯುದ್ಧಮಾಡಿದನು. ಭವಾನಂದನು, ಕೇಪ್ಟನ್ ಸಾಹೇಬ! ನಿನ್ನನ್ನು ಹೊಡದುಹಾಕುವುದಿಲ್ಲ, ಇಂಗ್ಲೀಷರು ನಮಗೆ ಶತ್ರುಗಳಲ್ಲ. ನೀವು ಮುಸ ಲ್ಮಾನರ ಸಹಾಯುಕ್ಕೆ ಏತಕ್ಕೆ ಬಂದಿರಿ? ಬಾ—ನಿನಗೆ ಪ್ರಾಣದಾನ ಮಾಡಿದ್ದೇನೆ. ನೀನೇನೋ ಈಗ ಬಂದಿಯಾಗಿದ್ದೀ. ಇಂಗ್ಲೀಷರಿಗೆ ಜಯುವಾಗಲಿ, ನಾವು ನಿಮ್ಮ ಹಿತಚಿಂತಕರು ಎಂದು ಹೇಳಿದನು. ಆಗ ಥಾಮುಸನು ಭವಾನಂದನನ್ನು ವಧೆ ಮಾಡುವುದಕ್ಕೆ ಸನೀನ ಸಹಿತವಾದ ಬಂದೂಕನ್ನು ಎತ್ತುವುದಕ್ಕೆ ಪ್ರಯತ್ನಪಟ್ಟನು. ಆದರೆ ಭವಾನಂದನು ಅವನನ್ನು ಹುಲಿಯು ಹಾಗೆ ಹಿಡಿದಿದ್ದನಾದ್ದರಿಂದ ಥಾಮು ಸನು ಅಲ್ಲಾಡುವುದಕ್ಕಾಗದೆ ಹೋಯಿತು. ಭವಾನಂದನು ಇವನನ್ನು ಕಟ್ಟಿಹಾಕಿ ರೆಂದು ಅನುಚರರಿಗೆ ಹೇಳಿದನು. ಎರಡು ಮೂರು ಜನ ಸಂತಾನರು ಬಂದು ಥಾಮುಸನನ್ನು ಕಟ್ಟಿದರು. ಭವಾನಂದನ ಅಪ್ಪಣೆಯು ಪ್ರಕಾರ ಕಟ್ಟಿದವನನ್ನು ಕುದುರೆಯು ಮೇಲೆ ಕಟ್ಟಿಹಾಕಿ 'ವಂದೇ ಮಾತರಂ' ಹಾಡುತ್ತಾ ವಾಟ್ಸನ್ ಇದ್ದ ಕಡೆಗೆ ಹೊರಟರು.

ಜೀವಾನಂದನ ಸಂತಾನ ಸೇನೆಯುವರು ಭಗ್ನೋದ್ಯಮವಾಗಿ ಪಲಾಯನದಲ್ಲಿ ಉದ್ಯತರಾಗಿದ್ದರು. ಜೀವಾನಂದನೂ ಧೀರಾನಂದನೂ ಅವರಿಗೆ ತಿಳಿಯಹೇಳಿ ನಿಲ್ಲಿಸಿದರು ; ಆದರೆ ಎಲ್ಲರನ್ನೂ ನಿಲ್ಲಿಸುವುದಕ್ಕಾಗಲಿಲ್ಲ. ಕೆಲವರು ಓಡಿಹೋಗಿ ಆಮ್ರಕಾನನದಲ್ಲಿ ಆಶ್ರಯವನ್ನು ತೆಗೆದುಕೊಂಡರು. ಉಳಿದವರನ್ನು ಜೀವಾನಂದನೂ ಧೀರಾನಂದನೂ ಸಹ ಅಣೆಕಟ್ಟಿನ ಮೇಲೆ ತೆಗೆದುಕೊಂಡು ಹೋದರು. ಆದರೆ ಅಲ್ಲಿ ಹೇ ಮತ್ತು ವಾಟ್ಸನ್ ಸಹ ಎರಡು ಕಡೆಗಳಿಂದಲೂ ಸುತ್ತಿಕೊಂಡಿದ್ದರು. ಇನ್ನು ಯತ್ನ ತಪ್ಪಿತು.

---

## ಹನ್ನೊಂದನೆಯ ಪರಿಚ್ಛೇದ

ಅಷ್ಟುಹೊತ್ತಿಗೆ ಥಾಮಸನ ತೋಪುಗಳು ಬಲಗಡೆ ಬಂದು ಒದಗಿದವು. ಆಗ ಸಂತಾನರ ಸೇನೆಯು ಛಿನ್ನಭಿನ್ನವಾಯಿತು. ಯಾರೂ ಉಳಿಯುವ ಆಶೆಯಿಲ್ಲದೆ ಹೋಯಿತು. ಸಂತಾನರು ಸಿಕ್ಕಿದ ಕಡೆ ಓಡುವುದಕ್ಕೆ ಪ್ರಾರಂಭಿಸಿದರು. ಜೀವಾನಂದನೂ ಧೀರಾನಂದನೂ ಸಹ ಅವರನ್ನು ನಿಲ್ಲಿಸಿ ಒಂದು ಸ್ಥಳವನ್ನು ಸೇರಿಸುವುದಕ್ಕೆ ಪ್ರಯತ್ನಪಟ್ಟು ನಿಷ್ಫಲವಾಯಿತು. ಆ ಸಮಯದಲ್ಲಿ ಘಟ್ಟಿಯಾಗಿ ಅಣೆಕಟ್ಟಿನ ಮೇಲೆ ಹೋಗಿ ಅತ್ತಕಡೆಗೆ ಹೋಗಿ! ಇಲ್ಲದಿದ್ದರೆ ನದಿಯಲ್ಲಿ ಮುಣುಗಿ ಹೋಗುವಿರಿ, ಮೆಲ್ಲಮೆಲ್ಲಗೆ ಇಂಗ್ಲೀಷರ ಕಡೆ ಮುಖವನ್ನು ತಿರುಗಿಸಿಕೊಂಡು ಹೋಗಿ ಎಂದು ಶಬ್ದವಾಯಿತು.

ಜೀವಾನಂದನು ಶಬ್ದ ಬಂದ ಕಡೆ ನೋಡಲಾಗಿ ಮುಂದುಗಡೆ ಭವಾನಂದನು ಇದ್ದನು. ಭವಾನಂದನು, ಜೀವಾನಂದ! ಅಣೆಕಟ್ಟಿನ ಮೇಲೆ ತೆಗದುಕೊಂಡು ಹೋಗು, ಇನ್ನು ಯತ್ನವಿಲ್ಲವೆಂದನು. ಆಗ ಮೆಲ್ಲಮೆಲ್ಲಗೆ ಹಿಮ್ಮೆಟ್ಟುತ್ತ ಸಂತಾನ ಸೇನೆಯು ಅಣೆಕಟ್ಟಿನ ಮೇಲೆ ಹೋಯಿತು. ಆದರೆ ಅಣೆಕಟ್ಟಿನ ಹತ್ತಿರ ಹೋಗುತಲೇ ಬಹು ಸಂಖ್ಯಕ ಸಂತಾನರು ಒಂದೇ ತಡವೆ ಅಣೆಕಟ್ಟಿನ ಮೇಲೆ ಹೋದದ್ದು ಇಂಗ್ಲೀಷರ ತೋಪುಗಳಿಗೆ ಬಹಳ ಅನುಕೂಲವಾಯಿತು. ಅಣೆಕಟ್ಟು ಗುಡಿಸಿದ ಹಾಗೆ ಆಗಲಾರಂಭವಾಯಿತು. ಸಂತಾನರು ದಳದಳವಾಗಿ ವಿನಷ್ಟರಾಗುತ್ತ ಬಂದರು. ಭವಾನಂದ, ಜೀವಾನಂದ, ಧೀರಾನಂದ ಮೂವರೂ ಏಕತ್ರವಾಗಿದ್ದರು. ಒಂದು ತೋಫಿನ ಅವಾಂತರಕ್ಕೆ ಬಹುಮಂದಿ ಸಂತಾನರ ಕ್ಷಯವಾಯಿತು. ಭವಾನಂದನು, ಜೀವಾನಂದ! ಧೀರಾನಂದ! ಬನ್ನಿ, ನಾವು ಮೂರುಜನವೂ ಕತ್ತಿಗಳನ್ನು ತಿರುಗಿಸುತ್ತ ಹೋಗಿ ಆ ತೋಫನ್ನು ಕಿತ್ತುಕೊಳ್ಳೋಣವೆಂದನು. ಆಗ ಮೂರು ಜನವೂ ಕತ್ತಿಗಳನ್ನು ಪಟ್ಟಾತಿರುಗಿಸುತ್ತ ತೋಫಿನ ಹತ್ತಿರ ಹೋಗಿ ಅಲ್ಲಿದ್ದ ಸೇನೆಯನ್ನು ಹೊಡದು ಹಾಕಿದರು. ಅದನ್ನು ನೋಡಿ, ಇನ್ನು ಕೆಲ ಸಂತಾನರು ಅವರ ಸಹಾಯಕ್ಕೆ ಹೋದರು. ತೋಪು ಭವಾನಂದನ ಕೈವಶ

ವಾಯಿತು. ವಶಮಾಡಿಕೊಂಡು ಭವಾನಂದನು ಆ ತೋಫಿನ ಮೇಲೆ ಕುಳಿತು ಕೊಂಡನು. ಕರತಾಳಿಮಾಡುತ್ತ "ವಂದೇ ಮಾತರಂ" ಎಂದು ಹೇಳಿರೆಂದು ಹೇಳಿದನು. ಎಲ್ಲರೂ "ವಂದೇ ಮಾತರಂ" ಹಾಡಿದರು. ಭವಾನಂದನು, ಜೀವಾನಂದ! ಈ ತೋಫನ್ನು ತಿರುಗಿಸಿಕೊಂಡು ಈ ಅಧಮಾಧಮರನ್ನು ಸುಟ್ಟು ಬೂದಿ ಮಾಡಿಬಿಡೋಣವೆಂದು ಹೇಳಿದನು. ಅನಂತರ ಸಂತಾನರು ಸೇರಿ ತೋಫನ್ನು ಶತ್ರುಗಳ ಕಡೆಗೆ ತಿರುಗಿಸಿದರು. ಆಗ ತೋಫು ಉಚ್ಚ ನಾದದಿಂದ ವೈಷ್ಣವರ ಕಿವಿಯಲ್ಲಿ 'ಹರಿ ಹರಿ' ಎಂದು ಶಬ್ದಮಾಡುವ ಹಾಗೆ ಶಬ್ದವಾಯಿತು. ಆದರಿಂದ ಅನೇಕಾನೇಕ ಸಿಪಾಯಿಗಳು ನಷ್ಟರಾಗಲು ಪ್ರಾರಂಭವಾಯಿತು. ಭವಾನಂದನು ಆ ತೋಫನ್ನು ಎಳದುಕೊಂಡು ಬಂದು ಅಣೆಕಟ್ಟಿನ ಬಾಯಿಗೆ ಇಟ್ಟುಕೊಂಡು, ನೀವಿಬ್ಬರೂ ಸಂತಾನ ಸೇನೆಯನ್ನು ಅಣೆಕಟ್ಟಿನ ಮೇಲೆ ತೆಗದುಕೊಂಡು ಪಾರಾಗಿ ಹೋಗಿರಿ, ನಾನೊಬ್ಬನೇ ಈ ವ್ಯೂಹಮುಖವನ್ನು ರಕ್ಷಿಸಿಕೊಂಡಿರುತ್ತೇನೆ, ತೋಫು ಹಾರಿಸುವುದಕ್ಕೆ ಕೆಲ ಜನರನ್ನು ಇಟ್ಟುಹೋಗಿರೆಂದು ಹೇಳಿದನು. ಹತ್ತೊಂಭತ್ತು ಜನ ಚಿಕ್ಕಚಿಕ್ಕ ವಯಸ್ಸಿನವರು ಭವಾನಂದನ ಸಹಾಯಕ್ಕೆ ನಿಂತರು.

ಅನಂತರ, ಅಸಂಖ್ಯಾಕರಾದ ಸಂತಾನರು ಅಣೆಕಟ್ಟು ದಾಟಿ ಜೀವಾನಂದ, ಧೀರಾನಂದ ಇವರ ಆಜ್ಞಾನುರೀತಿಯಾಗಿ ಆಚೆ ದಡಕ್ಕೆ ಸೇರಿದರು. ಭವಾನಂದನೊಬ್ಬನೇ ಹತ್ತೊಂಬತ್ತು ಜನರ ಸಹಾಯದಿಂದ ಆ ಒಂದು ತೋಫಿನಿಂದ ಬಹುತರ ಸೇನೆಯನ್ನು ಹತಮಾಡಲಾರಂಭಿಸಿದನು. ಆದರೆ ಯವನ ಸೇನೆಯು ಜಲೋಚ್ಛ್ವಾಸದಲ್ಲಿ ಹುಟ್ಟುವ ತರಂಗ! ತರಂಗದ ಮೇಲೆ ತರಂಗ, ತರಂಗದ ಮೇಲೆ ತರಂಗ! ಭವಾನಂದನನ್ನು ಸುತ್ತಿಕೊಂಡು ಉತ್ಪೀಡನಮಾಡಿ ಮುಣುಗಿದವನಾಗಿ ಮಾಡಿಬಿಟ್ಟಿತು. ಭವಾನಂದನು, ಅಜೇಯನು, ಅಶ್ರಾಂತನು, ನಿರ್ಭೀಕನು. ತೋಫಿನ ಪ್ರತಿಯೊಂದು ಗುಂಡಿಗೂ ಅನೇಕ ಸೇನೆಯನ್ನು ನಷ್ಟಮಾಡಿದನು. ಯವನರು ಗಾಳಿಯಿಂದ ಪೀಡಿತವಾದ ತರಂಗದ ಅಭಿಘಾತದೋಪಾದಿಯಲ್ಲಿ ಅವನ ಮೇಲೆ ಬೀಳುತ್ತ ಬಂದರು. ಆದರೆ ಹತ್ತೊಂಭತ್ತು ಜನ ಸಂತಾನರು ತೋಫಿನಿಂದ ಅಣೆಕಟ್ಟಿನ ಬಾಯನ್ನು ಬಂಧಮಾಡಿ ನಿಂತುಕೊಂಡಿದ್ದರು. ಅವರು ಸತ್ತವರಾಗಿದ್ದರೂ ಸಾಯಿಲಿಲ್ಲ. ಯವನರು ಅಣೆಕಟ್ಟನ್ನು ಮೆಟ್ಟುವುದಕ್ಕಾಗಲಿಲ್ಲ. ಆ ವೀರರು ಅಜೇಯರು, ಅವರ ಜೀವನವು ಅವಿನಶ್ವರ. ಅವಕಾಶ ಸಿಕ್ಕಿ ಸಂತಾನ ಸೇನೆಯು ದಳದಳವಾಗಿ ಆಚೆ ದಡಕ್ಕೆ ಪಾರಾಗಿ ಹೊರಟುಹೋದರು. ಇನ್ನು ತುಸಹೊತ್ತು ಅಣೆಕಟ್ಟಿನ ಮುಖವನ್ನು ರಕ್ಷಿಸಿಕೊಂಡಿದ್ದರೆ ಎಲ್ಲರೂ ಪಾರಾಗುತಲಿದ್ದರು. ಈ ಸಮಯದಲ್ಲಿ ಮತ್ತೆಲ್ಲೋ ತೋಫಿನ ಶಬ್ದವು ಕೇಳಿಸಿತು. ಉಭಯ ಪಕ್ಷದವರೂ ಕೆಲನಿಮಿಷಗಳು ಯುದ್ಧದಲ್ಲಿ ಕ್ಷಾಂತರಾಗಿ ಹಾಗೇ ಕೇಳಿದರು. ಮತ್ತೆಲ್ಲಿಂದ ತೋಫುಗಳು! ನೋಡಲಾಗಿ ವನದ ಮಧ್ಯದಿಂದ ಕೆಲಜನ ದೇಶ್ಯ ಜನರು ಹಾರಿಸುವ ಗುಂಡುಗಳು ಹೊರಡುತಲಿದ್ದವು. ಹೊರಟು ಆ ವಿರಾಟರೂಪ

ವಾದ ಫಿರಂಗಿಗಳ ಶ್ರೇಣಿಯು ಸಪ್ತದಶಮುಖಗಳಿಂದ ಹೊಗೆಯನ್ನು ಕಾರುತ್ತ ಹೇ ಸಾಹೇಬನ ದಳದಮೇಲೆ ಅಗ್ನಿವೃಷ್ಟಿಯನ್ನು ಮಾಡುತಲಿತ್ತು. ಆ ಘೋರವಾದ ಶಬ್ದದಿಂದ ವನ, ನದ, ಗಿರಿಗಳೆಲ್ಲವೂ ಪ್ರತಿಧ್ವನಿತವಾದವು. ಹಗಲೆಲ್ಲ ರಣದಲ್ಲಿ ಶ್ರಮ ಪಟ್ಟು ಯವನ ಸೇನೆಯು ಪ್ರಾಣಭಯದಿಂದ ಧಿಗ್ಗನೆ ನಡುಗಿತು. ಆ ಅಗ್ನಿವೃಷ್ಟಿ ಯಿಂದ ತೆಲಂಗಿ ಮುಸಲಮಾನರು ಹಿಂದುಸ್ತಾನಿಗಳೆಲ್ಲರೂ ಪಲಾಯನರಾಗುತ ಲಿದ್ದರು. ಕೇವಲ ನಾಲ್ಕುಮಂದಿ ಕೆಂಪುಜನರು ಮಾತ್ರ ನೆಟ್ಟನೆ ನಿಂತು ಮರಣಕ್ಕೆ ಸಿದ್ಧರಾದರು. ಭವಾನಂದನು ವಿನೋದವನ್ನು ನೋಡುತಲಿದ್ದವನು, ಭ್ರಾತೃ ಗಳಿರಾ! ಮುಸಲರು ಭಗ್ನರಾಗಿ ಓಡುತ್ತಾರೆ, ಹೊರಡಿ, ಅವರನ್ನು ಬೆನ್ನಟ್ಟೋಣ ವೆಂದನು. ಆಗ ಸಂತಾನರು ಪಿಪೀಲಿಕಾ ಪ್ರವಾಹದಂದದಿ ನೂತನ ಉತ್ಸಾಹದಿಂದ ಅಣೆಕಟ್ಟಿನಿಂದ ಹಿಂದಿರುಗಿ ಬಂದು ಯವನರನ್ನು ಆಕ್ರಮಣಮಾಡಲು ಓಡಿದರು. ಅಕಸ್ಮಾತ್ತಾಗಿ ಅವರು ಯವನರ ಮೇಲೆ ಬಿದ್ದರು. ಯವನರಿಗೆ ಪುನಃ ಯುದ್ಧಕ್ಕೆ ಅವಕಾಶವಾಗಲಿಲ್ಲ. ಭಾಗೀರಥಿಯ ತರಂಗವು ಹೇಗೆ ಆ ದಂಭಕಾರಿಯಾದ ದೊಡ್ಡ ಪರ್ವತಾಕಾರವಾದ ಮತ್ತಹಸ್ತಿಯನ್ನು ತೇಲಿಸುತ್ತ ತೆಗೆದುಕೊಂಡು ಹೋಗು ವುದೋ ಹಾಗೆ ಸಂತಾನರು ಯವನರನ್ನು ತೇಲಿಸಿಕೊಂಡು ಹೋದರು. ಯವನ ರಿಗೆ ಹಿಂದುಗಡೆ ಭವಾನಂದನ ಪದಾತಿಗಳ ಸೇನೆ, ಮುಂದುಗಡೆ ಮಹೇಂದ್ರನ ಫಿರಂಗಿಗಳು. ಆಗ ಹೇ ಸಾಹೇಬನಿಗೆ ಸರ್ವನಾಶಕಾಲ ಬಂತು. ಇನ್ನೇನು ಉಳಿಯ ಲಿಲ್ಲ. ಬಲ, ವೀರ್ಯ, ಸಾಹಸ, ಕೌಶಲ, ಶಿಕ್ಷೆ, ದಂಭ, ಎಲ್ಲ ತೇಲಿಹೋಯಿತು. ಫೌಜದಾರಿ, ಬಾದಷಾಹಿ, ಇಂಗ್ಲೀಷು, ದೇಶೀ, ವಿಲಾಯಿತೀ, ಕಪ್ಪುಜನ, ಕೆಂಪು ಜನ—ಎಲ್ಲ ಸೈನ್ಯವೂ ನಿಪಾತವಾಗಿ ಭೂತಲಶಾಯಿಯಾಗಿ ಹೋಯಿತು. ವಿಧರ್ಮಿ ಗಳ ದಳಗಳು ಪಲಾಯನವಾಗಿ ಹೋದವು. ಹೊಡೀರಿ, ಹೊಡೀರಿ ಎಂದು ಜೀವಾ ನಂದ, ಭವಾನಂದ, ಧೀರಾನಂದ ಎಲ್ಲರೂ ವಿಧರ್ಮಿ ಸೇನೆಯ ಹಿಂದೆ ಓಡಿದರು. ಅವರ ತೋಪುಗಳನ್ನು ಸಂತಾನರು ಕಿತ್ತುಕೊಂಡರು. ಬಹುತರ ಇಂಗ್ಲೀಷರ ಸಿಪಾಯಿಗಳು ನಿಹತರಾದರು. ಸರ್ವವೂ ನಾಶವಾಯಿತೆಂದು ನೋಡಿ ಹೇ ಸಾಹೇ ಬನು ಮತ್ತು ವಾಟ್ಸನ್ ಸಾಹೇಬನು ಭವಾನಂದನ ಬಳಿಗೆ, ನಾವು ಬಂದಿಗಳಾಗು ತ್ತೇವೆ, ಇನ್ನು ಪ್ರಾಣಿಹತ್ಯ ಮಾಡಕೂಡದೆಂದು ಹೇಳಿ ಕಳುಹಿಸಿದನು. ಜೀವಾ ನಂದನು ಭವಾನಂದನ ಮುಖವನ್ನು ನೋಡಿದನು. ಭವಾನಂದನು ಮನಸ್ಸಿನಲ್ಲಿ ಅದು ಆಗಲಾರದು, ನಾನಿಂದು ಸಾಯಬೇಕೆಂದಂದುಕೊಂಡು ಉಚ್ಚಸ್ವರದಿಂದ ಕೈಯೆತ್ತಿ ಹರಿ, ಹರಿ ಎನ್ನುತ್ತಾ ಕೂಗಿ ಹೊಡೀರಿ ಎಂದು ಕೂಗಿದನು.

ಪುನಃ ಒಂದು ಪ್ರಾಣಿ ಉಳಿಯಲಿಲ್ಲ. ಕಡೆಗೆ ಒಂದು ಸ್ಥಳದಲ್ಲಿ ಮಾತ್ರ ಇಪ್ಪತ್ತು ಮೂವತ್ತು ಕೆಂಪುಜನರು ಗುಂಪಾಗಿ ನಿಂತು ಆತ್ಮಸಮರ್ಪಣದಲ್ಲಿ ಕೃತ ನಿಶ್ಚಯರಾಗಿ ಅತಿ ಘೋರತರವಾದ ಯುದ್ಧವನ್ನು ಮಾಡಲಾರಂಭಿಸಿದರು. ಜೀವಾನಂದನು, ಭವಾನಂದ! ನಮಗೆ ರಣಜಯವಾಗಿದೆ. ಇನ್ನು ಈ ಹೊತ್ತು

ಬೇಡ, ಈ ಕೆಲಜನ ಹೊರತು ಇನ್ಯಾರೂ ಇಲ್ಲ, ಅವರಿಗೆ ಪ್ರಾಣದಾನವನ್ನು ಮಾಡಿ ಹೊರಡು, ಹೋಗೋಣವೆಂದನು. ಒಬ್ಬನು ಜೀವದಿಂದಿದ್ದರೂ ಹಿಂದಿರುಗುವುದಿಲ್ಲ ವೆಂದು ಭವಾನಂದನು ಹೇಳಿದನು. ಜೀವಾನಂದನು ನಿನ್ನ ಮೇಲೆ ಆಣೆಯನ್ನು ಇಟ್ಟು ಹೇಳುತ್ತೇನೆ. ಸ್ವಲ್ಪ ದೂರದಲ್ಲಿ ನಿಂತು ನೋಡು, ಇಷ್ಟುಮಂದಿ ಇಂಗ್ಲೀಷ ಜನರನ್ನು ನಾನೊಬ್ಬನೇ ನಿಹತಮಾಡುತ್ತೇನೆ ಎಂದನು.

ಕೇಪ್ಟನ್ ಥಾಮಸನು ಕುದುರೆ ಮೇಲೆ ನಿಬದ್ಧನಾಗಿದ್ದನು. ಭವಾನಂದನು ಈ ಅಧಮನನ್ನು ತಂದು ನನ್ನ ಮುಂದುಗಡೆ ಇಡಿ, ಇವನನ್ನು ಹೊಡೆದು ನಾನು ಸಾಯುತ್ತೇನೆಂದನು.

ಕೇಪ್ಟನ್ ಥಾಮಸನಿಗೆ ದೇಶಭಾಷೆಯು ಬರುವುದು. ತಿಳಿದುಕೊಂಡು ಇಂಗ್ಲೀಷು ಸೇನೆಯವರನ್ನು ಕುರಿತು, ಇಂಗ್ಲೀಷ್ ಜನರಾ! ನಾನೇನೋ ಸತ್ತೆನು. ಪ್ರಾಚೀನ ಇಂಗ್ಲೆಂಡಿನ ಹೆಸರನ್ನು ಕಾಪಾಡಿಕೊಳ್ಳಿರಿ, ನಿಮ್ಮ ಮೇಲೆ ಏಸುಕ್ರಿಸ್ತನ ಆಣೆಯಿದೆ; ಮೊದಲು ನನ್ನನ್ನು ಹೊಡದು ಅನಂತರ ಈ ವಿದ್ರೋಹಿ ಯಾದ ಕಾಫರನನ್ನು ಹೊಡಿಯಿರೆಂದನು.

"ಭ್ರೈ" ಎಂದು ಒಂದು ಬಂದೂಕಿನ ಗುಂಡು, ಹಾರಿತು. ಒಬ್ಬ ಐರಿಷ ದೇಶದವನು ಕೇಪ್ಟನ್ ಥಾಮಸಿನ ತಲೆಗೆ ಗುರಿಯಿಟ್ಟು ಬಂದೂಕು ಹೊಡದನು. ಲಲಾಟದಲ್ಲಿ ತಗಲಿ ಕೇಪ್ಟನ್ ಥಾಮಸನು ಪ್ರಾಣತ್ಯಾಗವನ್ನು ಮಾಡಿದನು. ಭವಾನಂದನು ಆಗ ಕೂಗಿ ಹೇಳಿದ್ದೇನೆಂದರೆ:—ನನ್ನ ಬ್ರಹ್ಮಾಸ್ತ್ರವು ವ್ಯರ್ಥ ವಾಯಿತು, ಈ ಸಮಯದಲ್ಲಿ ಪಾರ್ಥ, ವೃಕೋದರ, ನಕುಲ, ಸಹದೇವ ಇವರ ಹಾಗಿರುವವರು ಯಾರು ಬಂದು ನನ್ನನ್ನು ರಕ್ಷಿಸುವರು! ನೋಡಿ, ಬಾಣಾಹತ ವಾದ ವ್ಯಾಘ್ರದ ಹಾಗೆ ಕೆಂಪುಜನರು ನನ್ನ ಮೇಲೆ ಬಂದು ಬಿದ್ದಿದ್ದಾರೆ, ನಾನು ಸಾಯುವದಕ್ಕೆ ಬಂದಿದ್ದೇನೆ, ನನ್ನ ಜತೆಯಲ್ಲಿ ಸಾಯುವದಕ್ಕೆ ಸಿದ್ಧರಾದ ಸಂತಾ ನರು ಯಾರಿದ್ದೀರಿ? ಎಂದು ಕೂಗಿ ಹೇಳಿದನು.

ಮೊದಲು ಧೀರಾನಂದನು ಮುಂದಾಳಾದನು. ಅವನ ಹಿಂದೆ ಜೀವಾ ನಂದ—ಇವನ ಹಿಂದೆ ಇನ್ನೂ ಹತ್ತು ಇಪ್ಪತ್ತು ನಾಲ್ವತ್ತು ಐವತ್ತು ಜನ ಬಂದರು. ಭವಾನಂದನು ಧೀರಾನಂದನನ್ನು ನೋಡಿ, ನೀನು ನನ್ನ ಜತೆಯಲ್ಲಿ ಸಾಯಲು ಬಂದೆಯೊ? ಎಂದು ಕೇಳಿದನು.

ಜೀವಾನಂದ—ಸಾಯುವುದಕ್ಕೆ ನಿನಗೊಬ್ಬನಿಗೆ ಮಾತ್ರ ಹಕ್ಕಿಲ್ಲ—ಎಂದು ಹೇಳಿ, ಒಬ್ಬ ಕೆಂಪುಮುಖದವನನ್ನು ಆಹತವಾಗಿ ಹೊಡದನು.

ಭವಾನಂದ—ಅದಲ್ಲ. ಸತ್ತರೆ ಹೆಂಡರ ಮಕ್ಕಳ ಮುಖ ನೋಡಿಕೊಂಡು ಕಾಲಹರಣೆ ಮಾಡುವುದಕ್ಕಿಲ್ಲ!

ಧೀರಾನಂದ—ನೆನ್ನೇಮಾತು ಹೇಳುತ್ತೀಯೊ? ಇನ್ನೂ ನನಗೆ ಗೊತ್ತಾಗ ಲಿಲ್ಲವಲ್ಲ? (ಧೀರಾನಂದನು ಆಹತನಾದ ಕೆಂಪುಮುಖದವನನ್ನು ವಧೆಮಾಡಿದನು.)

ಭವಾನಂದ—ಇಲ್ಲ. (ಈ ಸಮಯದಲ್ಲಿ ಒಬ್ಬ ಕೆಂಪುಮುಖದವನ ಆಘಾತ ದಿಂದ ಭವಾನಂದನ ದಕ್ಷಿಣ ಬಾಹುವು ಕಳಚಿಬಿತ್ತು.)

ಧೀರಾನಂದ—ನಿನ್ನಹಾಗೆ ಪವಿತ್ರಾತ್ಮನಿಗೆ ಆ ಮಾತುಗಳನ್ನೆಲ್ಲಾ ಹೇಳು ವುದಕ್ಕೆ ನನಗೆ ಸಾಧ್ಯವೆ? ನಾನು ಸತ್ಯಾನಂದನಿಂದ ಕಳುಹಿಸಲ್ಪಟ್ಟ ಗೂಢಚಾರ ನಾಗಿ ಬಂದಿದ್ದೆನು.

ಭವಾನಂದ—ಅದೇನು? ಮಹಾಸ್ವಾಮಿಗಳಿಗೆ ನನ್ನಲ್ಲಿ ಅವಿಶ್ವಾಸವೆ? (ಭವಾನಂದನು ಆಗ ಒಂದು ಕೈಯಿಂದಲೇ ಯುದ್ಧಮಾಡುತಲಿದ್ದನು.) ಧೀರಾ ನಂದನು ಅವನನ್ನು ರಕ್ಷಿಸಿಕೊಳ್ಳುತ್ತ, ಕಲ್ಯಾಣಿಯ ಸಂಗಡ ನೀನು ಮಾತು ನಾಡುತಲಿದ್ದದ್ದನ್ನು ಅವರು ಕಿವಿಯಾರೆ ಕೇಳಿದ್ದಾರೆ ಎಂದನು.

ಭವಾನಂದ—ಹೇಗೆ?

ಧೀರಾನಂದ—ಅವರೇ ಅಲ್ಲಿಗೆ ಬಂದಿದ್ದರು. ಎಚ್ಚರಿಕೆಯಿಂದ ನೋಡಿಕೊ. (ಭವಾನಂದನು, ತನ್ನನ್ನು ಹೊಡದ ಕೆಂಪುಮುಖದವನನ್ನು ಪ್ರತಿಯಾಗಿ ಹೊಡದು ಹಾಕಿದನು.) ಅವರು ಕಲ್ಯಾಣಿಗೆ ಭಗವದ್ಗೀತೆಯನ್ನು ಹೇಳಿಕೊಡುತ್ತಲಿದ್ದರು. ಆ ಸಮಯದಲ್ಲಿ ನೀನು ಹೋದೆ—ಜತನ! (ಭವಾನಂದನ ಎಡತೋಳು ಬಿತ್ತು.)

ಭವಾನಂದ—ನಾನು ಸತ್ತ ವರ್ತಮಾನವನ್ನು ಅವರಿಗೆ ಹೇಳು. ನಾನು ಅವಿಶ್ವಾಸಿಯಲ್ಲ.

ಧೀರಾನಂದನು ಬಾಷ್ಪಪೂರ್ಣಲೋಚನನಾಗಿ ಯುದ್ಧವನ್ನು ಮಾಡುತ್ತ, ಅದು ಅವರು ಬಲ್ಲರು, ನೆನ್ನೆ ಅವರು ಆಡಿದ ಮಾತುಗಳನ್ನು ನೆನಪು ಮಾಡಿಕೊ, ಅದಲ್ಲದೆ, ನನ್ನ ಸಂಗಡ, ಭವಾನಂದನ ಜತೆಯಲ್ಲಿರು. ಅವನು ಇಂದು ಸಾಯು ವನು. ಮರಣಕಾಲದಲ್ಲಿ ನಾನು ಆಶೀರ್ವಾದವನ್ನು ಮಾಡಿದೆನೆಂದು ಹೇಳು. ಪರಲೋಕದಲ್ಲಿ ಅವನಿಗೆ ವೈಕುಂಠಪ್ರಾಪ್ತಿಯುಂಟಾಗುತ್ತದೆಂದು ಹೇಳಿದರು.

ಭವಾನಂದನು, ಸಂತಾನರಿಗೆ ಜಯವಾಗಲಿ, ಸ್ನೇಹಿತನೆ! ನನ್ನ ಮರಣ ಕಾಲದಲ್ಲಿ ಒಂದು ಸಲ 'ವಂದೇ ಮಾತಂ' ವನ್ನು ಕಿವಿಗೆ ಬೀಳುವಹಾಗೆ ಮಾಡೆಂದನು.

ಆಗ ಧೀರಾನಂದನ ಅಪ್ಪಣೆಪ್ರಕಾರ ಯುದ್ಧೋನ್ಮತ್ತರಾದ ಸಂತಾನರೆಲ್ಲರೂ ಅತಿಗಂಭೀರವಾಗಿ 'ವಂದೇ ಮಾತರಂ' ಹಾಡಿದರು. ಅದರಿಂದ ಅವರಿಗೆ ಬಾಹು ಬಲವು ದ್ವಿಗುಣವಾಯಿತು. ಆ ಭಯಂಕರವಾದ ಮುಹೂರ್ತದಲ್ಲಿ ಉಳಿದಿದ್ದ ಕೆಂಪುಜನರು ಹತವಾಗಿ ಹೋದರು. ರಣಕ್ಷೇತ್ರದಲ್ಲಿ ಇನ್ನು ಶತ್ರುಗಳುಳಿಯಲಿಲ್ಲ.

ಆ ಮುಹೂರ್ತದಲ್ಲಿ ಭವಾನಂದನು ಬಾಯಿಯಲ್ಲಿ 'ವಂದೇ ಮಾತರಂ'ವನ್ನು ಹಾಡುತ್ತ ಮನಸ್ಸಿನಲ್ಲಿ ವಿಷ್ಣುಪದವನ್ನು ಧ್ಯಾನಮಾಡುತ್ತ ಪ್ರಾಣತ್ಯಾಗವನ್ನು ಮಾಡಿದನು.

ಹಾ! ರಮಣೀ ರೂಪಲಾವಣ್ಯ! ಇಹಸಂಸಾರದಲ್ಲ ನಿನ್ನನ್ನು ಧಿಕ್!

## ಹನ್ನೆರಡನೆಯ ಪರಿಚ್ಛೇದ

ರಣದಲ್ಲಿ ಜಯವಾದನಂತರ ಅಜಯ ನದೀತೀರದಲ್ಲಿ ಸತ್ಯಾನಂದನನ್ನು ಸುತ್ತಿ ಕೊಂಡು ವಿಜಯಿಗಳಾದ ವೀರರು ನಾನಾ ಉತ್ಸವವನ್ನು ಮಾಡಲು ಪ್ರಾರಂಭಿಸಿದರು. ಸತ್ಯಾನಂದನು ಮಾತ್ರ ವ್ಯಾಕುಲಚಿತ್ತನಾಗಿದ್ದನು—ಭವಾನಂದನಿಗೋಸ್ಕರ—

ಇದುವರೆಗೆ ವೈಷ್ಣವರಿಗೆ ರಣವಾದ್ಯವು ಅಧಿಕವಿರಲಿಲ್ಲ. ಆದರೆ ಈಗ ಭೇರಿ, ಕಾಹಳೆ, ಜಿನಗಾಳೆ, ತಮಟೆ, ಟಕೋರ, ನಗಾರಿ, ದೋಳು, ಡಮರ, ಡಬೀರಿ, ಮೃದಂಗ, ತುತ್ತೂರಿ, ಶಂಖ, ಜಾಗಟೆ ಮುಂತಾದ ನಾನಾ ವಿಧವಾದ ವಾದ್ಯಗಳು ಎಲ್ಲಿಂದಲೋ ಬಂದು ಎಲ್ಲ ಸೇರಿ ಒಂದು ತುಮುಲ ಶಬ್ದವಾಯಿತು. ಈ ಜಯಸೂಚಕ ವಾದ್ಯಗಳಿಂದ ಕಾನನ, ಪ್ರಾಂತರ, ನದೀ ಮುಂತಾದುದೆಲ್ಲ ಧ್ವನಿ ಪ್ರತಿಧ್ವನಿಯಾಗಿ ಪರಿಪೂರ್ಣವಾಗಿ ತುಂಬಿಹೋಯಿತು. ಈ ಪ್ರಕಾರ ಸಂತಾನರು ಬಹಳಹೊತ್ತು ನಾನಾ ಉತ್ಸವಗಳನ್ನು ಮಾಡಿದ ಮೇಲೆ ಸತ್ಯಾನಂದನು, ಜಗದೀಶ್ವರನು ಇಂದು ನಮಗೆ ಕೃಪೆಗೈದನು. ಸಂತಾನ ಧರ್ಮಕ್ಕೆ ಜಯವಾಯಿತು; ಆದರೆ ಒಂದು ಕೆಲಸವು ಉಳಿಯಿತು. ಯಾರು ನಮ್ಮ ಜತೆಯಲ್ಲಿ ಈ ಉತ್ಸವಕ್ಕೆ ಸೇರಿಲ್ಲವೋ, ಯಾರು ನಮ್ಮ ಉತ್ಸವಕ್ಕೋಸ್ಕರ ಪ್ರಾಣವನ್ನು ಕೊಟ್ಟನೋ ಅಂತಹವನನ್ನು ಮರೆಯುವುದು ಸರಿಯಲ್ಲ. ಯಾರು ರಣಕ್ಷೇತ್ರದಲ್ಲಿ ನಿಹತನಾಗಿ ಬಿದ್ದಿದ್ದಾನೋ ಅವನ ಸತ್ಕಾರವನ್ನು ಮಾಡೋಣ, ನಡೆಯಿರಿ, ಆ ಮಹಾತ್ಮನು ನಮಗೋಸ್ಕರ ಈ ರಣಜಯವನ್ನು ಹೊಂದಿ ಪ್ರಾಣತ್ಯಾಗವನ್ನು ಮಾಡಿದ್ದಾನೆ, ಮಹಾ ಉತ್ಸವದೊಡನೆ ಆ ಭವಾನಂದನ ಸತ್ಕಾರವನ್ನು ಮಾಡೋಣವೆಂದು ಹೇಳಿದನು. ಆಗ ಸಂತಾನರು 'ವಂದೇ ಮಾತರಂ' ಹೇಳುತ್ತ ನಿಹತನಾದವನ ಸತ್ಕಾರಕ್ಕೆ ಹೊರಟರು. ಬಹುಜನರು ಗುಂಪುಸೇರಿ ಹರಿಸ್ಮರಣೆಯನ್ನು ಮಾಡುತ್ತ ಭಾರಿ ಭಾರಿಯಾದ ಚಂದನ ಕೊರಡುಗಳನ್ನು (ಆಗ ಫಾರೆಸ್ಟು ಅಂದರೆ, ಕಾಡು ಇಲಾಖೆಯ ಸಂಕಟವಿರಲಿಲ್ಲ!) ಹೊತ್ತುಕೊಂಡು ಬಂದು ಒಂದು ಚಿತಿಯನ್ನು ಮಾಡಿ ಚಿತಿಯನ್ನು ಸುತ್ತುತ್ತ 'ಹರೇಮುರಾರೆ' ಗಾನಮಾಡಿದರು. ಇವರು ವೈಷ್ಣವ ಸಂಪ್ರದಾಯಕ್ಕೆ ಸೇರಿದ ವಿಷ್ಣುಭಕ್ತರಾದ್ದರಿಂದ ದಹನ ಮಾಡುತ್ತಾರೆ.

ಇದಾದಮೇಲೆ ಕಾನನದಲ್ಲಿ ಕೇವಲ ಸತ್ಯಾನಂದ, ಜೀವಾನಂದ, ಮಹೇಂದ್ರ, ನವೀನಾನಂದ ಮತ್ತು ಧೀರಾನಂದ ಇಷ್ಟು ಜನ ಮಾತ್ರ ಕುಳಿತಿದ್ದರು. ಈ ಐದು ಜನರು ಏಕಾಂತವಾಗಿ ಪರಾಮರ್ಶೆಯನ್ನು ಮಾಡುತ್ತಿದ್ದರು. ಸತ್ಯಾನಂದನು ಇಷ್ಟುದಿನವೂ ನಾವು ಯಾವುದಕ್ಕೋಸ್ಕರ ಸರ್ವ ಧರ್ಮವನ್ನೂ ಸರ್ವ ಸುಖವನ್ನೂ ತ್ಯಾಗಮಾಡಿದ್ದೆವೋ ಆ ವ್ರತವು ಈಹೊತ್ತು ಸಫಲವಾಯಿತು. ಈ ಪ್ರದೇಶ

ದಲ್ಲಿ ಯವನರ ಸೇನೆಯು ಇನ್ನಿಲ್ಲ. ಅವಶಿಷ್ಟವಾಗಿರುವುದು ನಮ್ಮ ಇದಿರಿಗೆ ಒಂದು ನಿಮಿಷ ನಿಲ್ಲಲಾರದು, ಈಗ ನೀವು ಏನು ಪರಾಮರ್ಶೆಯನ್ನು ಹೇಳುವಿರಿ? ಎಂದನು.

ಜೀವಾನಂದನು, ದಯಮಾಡಿನೋಣಾಗಲಿ, ಈ ಸಮಯದಲ್ಲಿ ಹೋಗಿ ನಗರಾಧಿಕಾರವನ್ನು ಮಾಡೋಣವೆಂದನು.

ಸತ್ಯಾನಂದ—ನನ್ನದೂ ಅದೇ ಮತ.

ಧೀರಾನಂದ—ಸೈನ್ಯವೆಲ್ಲಿ?

ಜೀವಾನಂದ—ಏಕೆ? ಇದೇ ಸೈನ್ಯ.

ಧೀರಾನಂದ—ಈ ಸೈನ್ಯ ಇನ್ನೆಲ್ಲಿ? ಯಾರಾದರೂ ಕಣ್ಣಿಗೆ ಬಿದ್ದರೆ?

ಜೀವಾನಂದ—ಅಲ್ಲಲ್ಲಿ ವಿಶ್ರಾಮಮಾಡಿಕೊಂಡಿರಬೇಕು. ಡಂಕಾಹೊಡೆದರೆ ಎಲ್ಲರೂ ಬರುವರು.

ಧೀರಾನಂದ—ಒಬ್ಬನೂ ಸಿಕ್ಕುವುದಿಲ್ಲ.

ಜೀವಾನಂದ—ಏಕೆ?

ಧೀರಾನಂದ—ಎಲ್ಲರೂ ಲೂಟಿಮಾಡುವುದಕ್ಕೆ ಹೋಗಿದ್ದಾರೆ, ಗ್ರಾಮಗಳೆಲ್ಲ ಈಗ ಅರಕ್ಷಿತವಾಗಿವೆ, ಮುಸಲಮಾನರ ಗ್ರಾಮಗಳನ್ನೂ ರೇಷ್ಮೆ ಕಾರಖಾನೆಗಳನ್ನೂ ಲೂಟಿಮಾಡಿಕೊಂಡು ಮನೆಗೆ ಹೊರಟುಹೋಗುತ್ತಾರೆ. ಯಾರೂ ಕೈಗೆ ಸಿಕ್ಕುವುದಿಲ್ಲ. ನಾನು ಈಗ ಹುಡುಕಿಬಂದೆನು.

ಸತ್ಯಾನಂದನು ವಿಷಣ್ಣನಾಗಿ, ಹೇಗಾದರೂ ಆಗಲಿ, ನಗರವನ್ನು ಹೊರತು ಸಮಸ್ತವಾದ ವೀರಭೂಮಿಯು ನಮ್ಮ ಸ್ವಾಧೀನವಾಗಿದೆ; ನಗರದ ಹೊರಗೆ ನಮಗೆ ಪ್ರತಿಕಕ್ಷಿಗಳಾದವರು ಯಾರೂ ಇಲ್ಲ. ಆದುದರಿಂದ ನೀವು ವೀರಭೂಮಿಯಲ್ಲಿ ಸಂತಾನರ ರಾಜ್ಯವನ್ನು ಮಾಡಿರಿ. ಪ್ರಜೆಗಳಿಂದ ಕರವನ್ನು ತೆಗೆದುಕೊಳ್ಳಿರಿ, ಮತ್ತು ನಗರವನ್ನು ನಮ್ಮ ಅಧಿಕಾರಕ್ಕೊಳಪಡಿಸಲು ಸೇನೆಯನ್ನು ಸಂಗ್ರಹಮಾಡಿರಿ; ಹಿಂದುಗಳ ರಾಜ್ಯವಾಗಿದೆ ಎಂದು ಕೇಳಿದರೆ ಅನೇಕ ಸೇನೆಯು ಸಂತಾನಸೇನೆಯ ನಿಶಾನು ತೆಗೆದುಕೊಳ್ಳುವರು ಎಂದು ಹೇಳಿದನು.

ಆಗ ಜೀವಾನಂದ ಮುಂತಾದವರು ಸತ್ಯಾನಂದನಿಗೆ ಪ್ರಣಾಮವನ್ನು ಮಾಡಿ, ನಾವು ಪ್ರಣಾಮವನ್ನು ಮಾಡುತ್ತೇವೆ—ಹೆ, ಮಹಾರಾಜಾಧಿರಾಜ! ಅಪ್ಪಣೆಯಾಗಲಿ, ನಾವು ಈ ಕಾನನದಲ್ಲಿಯೇ ತಮ್ಮ ಸಿಹ್ಮಾಸನವನ್ನು ಸ್ಥಾಪಿತ ಮಾಡುತ್ತೇವೆ ಎಂದರು.

ಸತ್ಯಾನಂದನು ಹುಟ್ಟಿದಮೇಲೆ ಎಂದೂ ಕೋಪಮಾಡದವನು ಇಂದು ಪ್ರಥಮ ಕೋಪವನ್ನು ಪ್ರಕಾಶಮಾಡಿ, ಛಿ! ನನ್ನನ್ನು ಬರೇಕೊಡವೆಂದು ತಿಳಿದುಕೊಂಡಿರಾ? ನಾವು ಯಾರೂ ರಾಜರಲ್ಲ—ನಾವು ಸನ್ಯಾಸಿಗಳು—ಈ ದೇಶಕ್ಕೆಲ್ಲ ಸಾಕ್ಷಾತ್ತಾಗಿ ವೈಕುಂಠನಾಥನೇ ರಾಜ. ನಗರವು ನಮ್ಮ ಅಧಿಕಾರಕ್ಕೆ ಬರು

ತ್ತಲೇ ನಿಮಗೆ ಯಾರು ಇಷ್ಟವೋ ಅವನ ಶಿರದಲ್ಲಿ ರಾಜಮುಕುಟವನ್ನು ಇಡಿ. ಆದರೆ ನಾನು ಮಾತ್ರ ಈ ಬ್ರಹ್ಮಚರ್ಯ ವ್ರತವನ್ನು ಬಿಟ್ಟು ಯಾವ ಆಶ್ರಮವನ್ನೂ ಸ್ವೀಕಾರಮಾಡಲಾರೆನು. ಇದು ಖಂಡಿತವಾಗಿ ತಿಳಿದಿರಬೇಕು. ಈಗ ನಿಮ್ಮ ನಿಮ್ಮ ಕೆಲಸಕ್ಕೆ ಹೋಗಬಹುದೆಂದನು.

ಆಗ ನಾಲ್ಕು ಜನರೂ ಬ್ರಹ್ಮಚಾರಿಗೆ ಪ್ರಣಾಮವನ್ನು ಮಾಡಿ ಎದ್ದರು. ಆಗ ಸತ್ಯಾನಂದನು ಇತರರಿಗೆ ತಿಳಿಯದ ಹಾಗೆ ಸಂಜ್ಞೆಮಾಡಿ ಮಹೇಂದ್ರನನ್ನು ಇರಿಸಿಕೊಂಡನು. ಮಿಕ್ಕ ಮುವ್ವರು ಹೊರಟುಹೋದರು. ಸತ್ಯಾನಂದನು ಮಹೇಂದ್ರನನ್ನು ಕುರಿತು ನೀವೆಲ್ಲರೂ ವಿಷ್ಣುಮಂಟಪದಲ್ಲಿ ಪ್ರತಿಜ್ಞೆಯನ್ನು ಮಾಡಿ ಸಂತಾನ ಧರ್ಮವನ್ನು ಗ್ರಹಣಮಾಡಿದಿರಿ, ಭವಾನಂದನು ಅವನೊಪ್ಪಿಕೊಂಡಿದ್ದ ಪ್ರಾಯಶ್ಚಿತ್ತಕ್ಕೆ ಇಂದು ಒಳಗಾದನು, ಜೀವಾನಂದನೂ ಕೂಡ ಯಾವ ದಿನ ಪ್ರಾಯಶ್ಚಿತ್ತಕ್ಕೊಳಗಾಗಿ ಪ್ರಾಣವನ್ನು ತ್ಯಾಗಮಾಡುತ್ತಾನೋ ಎಂದು ನನಗೆ ಭಯವಾಗಿದೆ—ಆದರೆ ನನಗೆ ಒಂದು ಭರವಸೆಯುಂಟು. ಏನೆಂದರೆ, ಒಂದಾನೊಂದು ನಿಗೂಢವಾದ ಕಾರಣದಿಂದ ಅವನು ಪ್ರಕೃತದಲ್ಲಿ ಸಾಯುವುದಕ್ಕೆ ಇಷ್ಟವುಳ್ಳವನಾಗಿಲ್ಲ. ನೀನೊಬ್ಬನೇ ಪ್ರತಿಜ್ಞೆಯನ್ನು ಕಾಪಾಡಿಕೊಂಡಿರುವವನು. ಈಗ ಸಂತಾನರ ಕಾರ್ಯೋದ್ಧಾರವಾಯಿತು. ಪ್ರತಿಜ್ಞೆಯು ಏನೆಂದರೆ ಸಂತಾನರ ಕಾರ್ಯ ಉದ್ಧಾರವಾಗುವವರೆಗೂ ನೀನು ನಿನ್ನ ಹೆಂಡತಿ ಮಕ್ಕಳ ಮುಖವನ್ನು ನೋಡಕೂಡದೆಂದು ಪ್ರತಿಜ್ಞೆಯಾಗಿದ್ದಿತು. ಈಗ ಸಂತಾನರ ಕಾರ್ಯವು ಉದ್ಧಾರವಾಗಿದೆ. ಇನ್ನು ಪುನಃ ಸಂಸಾರಿಯಾಗಬಹುದೆಂದನು.

ಮಹೇಂದ್ರನ ಕಣ್ಣುಗಳಿಂದ ದರವಿದರಿತವಾಗಿ ಧಾರೆಯು—ಸುರಿಯಿತು. ಮಹೇಂದ್ರನು, ಸ್ವಾಮಿ! ಯಾರನ್ನು ಪಡೆದು ಸಂಸಾರಿಯಾಗಲಿ? ಹೆಂಡತಿಯೇನೋ ಆತ್ಮಘಾತಿನಿಯಾಗಿ ಹೋದಳು. ಇನ್ನು ಆ ಮಗಳು ಎಲ್ಲಿದ್ದಾಳೋ ಅದನ್ನು ನಾನರಿಯೆನು. ಎಲ್ಲಿ ಸಿಕ್ಕುವಳು? ಬದುಕಿದ್ದಾಳೆಂದು ಅಪ್ಪಣೆಕೊಡಿಸೋಣವಾಯಿತು. ಇಷ್ಟುಹೊರತು ಮತ್ತೇನೂ ಅರಿಯೆನು ಎಂದು ಹೇಳಿದನು.

ತಲೆಯಮೇಲೆ ಮರದ ಕೊಂಬೆಯಮೇಲೆ ಯಾರೋ ಕೂತಿದ್ದವರು, ಮಗಳಿರುವ ಸ್ಥಳವನ್ನು ನಾನು ಬಲ್ಲೆನೆಂದು ಹೇಳಿದರು. ಮಹೇಂದ್ರನು ತಲೆಯನ್ನೆತ್ತಿ ನೋಡಿ, ನೀನು ಯಾರೆಂದನು.

ಸತ್ಯಾನಂದನು ಸ್ವಲ್ಪ ರುಷ್ಟಭಾವವನ್ನು ತಾಳಿ ಮುಖವನ್ನು ಮೇಲಕ್ಕೆ ಮಾಡಿಕೊಂಡು ನೋಡಿ, ನವೀನಾನಂದ! ನಿನಗೆ ಹೊರಟುಹೋಗುವುದಕ್ಕೆ ಮೊದಲೇ ಅಪ್ಪಣೆಯನ್ನು ಕೊಟ್ಟಿದ್ದೆನು, ಇನ್ನೂ ಇಲ್ಲಿಯೇ ಏಕೆ ನಿಂತೆ? ಎಂದನು.

ಶಾಂತಿಯು ಕೊಂಬೆಯ ಮೇಲಿನಿಂದಲೇ, ಪ್ರಭುವೆ! ಸ್ವರ್ಗಲೋಕದಲ್ಲಿಯೂ ಮರ್ತ್ಯಲೋಕದಲ್ಲಿಯೂ ತಮ್ಮ ಅಧಿಕಾರವುಂಟು. ಮರದ ಕೊಂಬೆಯ ಮೇಲೂ ಉಂಟೆ? ಎಂದಳು.

ಹೀಗೆ ಹೇಳಿ ಶಾಂತಿಯು ಧಡೆಂದು ಕೊಂಬೆಯಿಂದ ನೆಲಕ್ಕೆ ಧುಮಿಕಿದಳು.

ಸತ್ಯಾನಂದನು ಮಹೇಂದ್ರನನ್ನು ಕುರಿತು, ಇವನು ನವೀನಾನಂದ ಗೋಸ್ವಾಮಿ—ಅತ್ಯಂತ ಪವಿತ್ರಾತ್ಮನು, ನನ್ನ ಪ್ರಿಯಶಿಷ್ಯನೂ ಹೌದು, ಇವನು ನಿನ್ನ ಮಗಳನ್ನು ಹುಡುಕಿ ಕರೆತರುವನು ಎಂದು ಹೇಳಿ, ಸತ್ಯಾನಂದನು ಶಾಂತಿಗೆ ಸ್ವಲ್ಪ, ಏನೋ ಸಂಜ್ಞೆಯನ್ನು ಮಾಡಿದನು. ಶಾಂತಿಯು ಪ್ರಣಾಮವನ್ನು ಮಾಡಿ ಅಪ್ಪಣೆಯನ್ನು ತೆಗೆದುಕೊಂಡಳು. ಆಗ ಮಹೇಂದ್ರನು ನಿನ್ನನ್ನು ಪುನಃ ಎಲ್ಲಿ ನೋಡುವೆನೆಂದನು.

ಶಾಂತಿಯು, ನನ್ನ ಆಶ್ರಮಕ್ಕೆ ಬರಬಹುದು ಎಂದು ಹೇಳಿ ಮುಂದೆಮುಂದೆ ಹೊರಟುಹೋದಳು.

ಮಹೇಂದ್ರನು ಬ್ರಹ್ಮಚಾರಿಯ ಪಾದವಂದನೆಯನ್ನು ಮಾಡಿ ಅಪ್ಪಣೆಯಂ ಪಡೆದು ಶಾಂತಿಯ ಜತೆಯಲ್ಲಿ ಅವಳ ಆಶ್ರಮಕ್ಕೆ ಬಂದನು. ಅಷ್ಟುಹೊತ್ತಿಗೆ ರಾತ್ರಿ ಬಹಳ ಹೊತ್ತಾಯಿತು. ಹಾಗಿದ್ದರೂ ಶಾಂತಿಯು ವಿಶ್ರಾಮವನ್ನು ತೆಗೆದುಕೊಳ್ಳದೆ ನಗರಾಭಿಮುಖವಾಗಿ ಹೊರಟಳು.

ಎಲ್ಲರೂ ಹೊರಟುಹೋದಮೇಲೆ ಬ್ರಹ್ಮಚಾರಿಯು ಒಬ್ಬನೇ ಭೂಮಿಯ ಮೇಲೆ ಸಾಷ್ಟಾಂಗವಾಗಿ ನೆಲದಲ್ಲಿ ತಲೆಯನಿಟ್ಟು ಮನಸ್ಸಿನಲ್ಲಿ ಜಗದೀಶ್ವರನ ಧ್ಯಾನವನ್ನು ಮಾಡಲಾರಂಭಿಸಿದನು. ರಾತ್ರಿಯು ಪ್ರಭಾತವಾಗುತ ಬಂದಿತು. ಆಗ ಯಾರೋ ಬಂದು ಅವನ ಮಸ್ತಕವನ್ನು ಮುಟ್ಟಿ ನಾನು ಬಂದಿದ್ದೇನೆಂದನು.

ಬ್ರಹ್ಮಚಾರಿಯು ಎದ್ದು ನೋಡಿ ಚಮಕಿತನಾಗಿ ಬಹಳ ವ್ಯಗ್ರಭಾವದಿಂದ, ತಾವು ದಯಮಾಡಿಸೋಣವಾಯಿತು? ಮತ್ತೇನು? ಎಂದು ಹೇಳಿದನು. ಬಂದವನು, ದಿನವು ಪೂರ್ಣವಾಯಿತು ಎಂದನು. ಬ್ರಹ್ಮಚಾರಿಯು, ಹೇ ಪ್ರಭು! ಇಂದು ಕ್ಷಮಿಸಬೇಕು, ಬರುವ ಮಾಘಪೂರ್ಣಿಮಾ ದಿನ ತಮ್ಮ ಆಜ್ಞೆಯ ಪ್ರಕಾರ ನಡೆಯುವೆನೆಂದನು.

---

## ಹದಿಮೂರನೆಯ ಪರಿಚ್ಛೇದ

ಆ ರಾತ್ರಿಯಲ್ಲಿ ಬೆಳಕುಹರಿಯುವವರೆಗೂ ಹರಿಧ್ವನಿಯಿಂದ ವೀರಭೂಮಿಯು ಪರಿಪೂರ್ಣವಾಗಿ ತುಂಬಿಹೋಯಿತು. ಸಂತಾನರು ಗುಂಪು ಗುಂಪಾಗಿ ಎಲ್ಲೆಲ್ಲಿಯೂ ಉಚ್ಚಸ್ವರದಿಂದ, ಕೆಲವರು, 'ವಂದೇ ಮಾತರಂ' ಕೆಲವರು, 'ಜಗದೀಶಹರೆ' ಹಾಡಿಕೊಂಡು ತಿರುಗುತಲಿದ್ದರು. ಕೆಲವುಮಂದಿ ಶತ್ರು ಸೇನೆಯಲ್ಲಿ ಬಿದ್ದಿದ್ದ ಅಸ್ತ್ರಗಳನ್ನು, ಕೆಲವರು ವಸ್ತ್ರಗಳನ್ನು ಅಪಹರಣೆ ಮಾಡಲಾರಂಭಿಸಿದರು. ಕೆಲವರು ಮೃತದೇಹದ ಮುಖದಲ್ಲಿ ಪದಾಘಾತವನ್ನು ಮಾಡುತ್ತ, ಕೆಲವರು ಗ್ರಾಮಾಭಿಮುಖವಾಗಿಯೂ ಕೆಲವರು ನಗರಾಭಿಮುಖವಾಗಿಯೂ

ಹೊರಟರು. ಸಿಕ್ಕಿದ ಪ್ರಯಾಣೀಕರನ್ನು ಅಥವಾ ಗೃಹಸ್ಥರನ್ನು ಹಿಡಿದುಕೊಂಡು 'ವಂದೇ ಮಾತರಂ' ಹೇಳು, ಇಲ್ಲದಿದ್ದರೆ ಪ್ರಾಣದಿಂದ ಬಿಡುವುದಿಲ್ಲವೆಂದು ಪೀಡಿಸುವುದಕ್ಕಾರಂಭವಾಯಿತು. ಕೆಲವರು ಜಿನಸಿ ಅಂಗಡಿಗಳನ್ನು ಲೂಟಿಮಾಡುವುದು, ಕೆಲವರು ಗೌಳಿಗರ ಮನೆ ಹೊಕ್ಕು ಮಡಿಕೆಗಳನ್ನು ಒಡೆದು ಹಾಲು ಮೊಸರು ಕುಡಿಯುವುದು, ಕೆಲವರು ನಾವು ವ್ರಜಗೋಪಾಲರು ಬಂದಿದ್ದೇವೆ, ಗೋಪಿಗಳೆಲ್ಲೆಂದು ಕೇಳುವುದು, ಹೀಗೆಲ್ಲ ನಾನಾಪ್ರಕಾರ ನಡೆಯಿತು. ಆ ಒಂದು ರಾತ್ರಿಯಲ್ಲಿ ಗ್ರಾಮ ಗ್ರಾಮದಲ್ಲಿಯೂ ನಗರ ನಗರದಲ್ಲಿಯೂ ಮಹಾ ಕೋಲಾಹಲವುಂಟಾಯಿತು. ಎಲ್ಲರೂ ಮುಸಲಮಾನರು ಸೋತುಹೋದರು, ಹಿಂದುಗಳಿಗೆ ರಾಜ್ಯವಾಯಿತು. ಎಲ್ಲರೂ ಹರಿ ಹರಿ ಎಂದು ಹೇಳಿರೆಂದು ಕೂಗುತಲಿದ್ದರು. ಹಳ್ಳಿಯವರು ಮುಸಲಮಾನರು ಕಣ್ಣಿಗೆ ಬಿದ್ದರೆ ಹೊಡೆದು ಓಡಿಸುವರು. ಕೆಲಕೆಲವರು ಗುಂಪುಗುಂಪಾಗಿ ಹೋಗಿ ಮುಸಲಮಾನರ ಮನೆಗೆ ಬೆಂಕಿಯನ್ನು ಹಾಕಿ ಇದ್ದದ್ದೆಲ್ಲ ದೋಚಿಕೊಂಡು ಹೋಗುತ್ತಿದ್ದರು. ಅನೇಕ ಯವನರು ಹತರಾದರು. ಅನೇಕ ಮುಸಲಮಾನರು ದಾಡಿಗಳನ್ನು ತೆಗೆದುಹಾಕಿ ಮೈಗೆ ಮಣ್ಣು ಬಳಿದುಕೊಂಡು ಹರಿನಾಮವನ್ನು ಹೇಳುವುದಕ್ಕೆ ತೊಡಗಿದರು, ಕೇಳಿದರೆ ನಾನು ಹಂಡು (ಹಿಂದು) ಎಂದು ಹೇಳುವರು.

ಗುಂಪುಗುಂಪಾಗಿ ಭಯಪಟ್ಟ ಮುಸಲಮಾನರು ನಗರಾಭಿಮುಖವಾಗಿ ಓಡಿದರು. ಎಲ್ಲಿ ಮಹಾರಾಜಾ ವೀರಭೂಮ್ಯಾಧಿಪತಿ ಅಸದುಲ್‌ಜಮಾನ್ ಬಹದ್ದೂರನು ರಾಜಸಿಹ್ಮಾಸನದಲ್ಲಿ ಕುಳಿತಿದ್ದನೋ, ಅಲ್ಲಿಗೆ ಈ ದಾರುಣವಾದ ರಾಜ್ಯಧ್ವಂಸ ಸೂಚಕವಾದ ವಾರ್ತೆಯು ತಲಪಿತು. ಆಗ ವ್ಯಾಕುಲಚಿತ್ತರಾಗಿ ರಾಜಪುರುಷರು ನಾಲ್ಕು ದಿಕ್ಕುಗಳಿಗೂ ಹೊರಟರು. ರಾಜನ ಉಳಿದ ಸಿಪಾಯಿಗಳು ವಸ್ತ್ರಧಾರಿಗಳಾಗಿ ಶಸ್ತ್ರಪಾಣಿಗಳಾಗಿ ನಗರ ರಕ್ಷಣಾರ್ಥವಾಗಿ ಸಾಲುಕಟ್ಟಿ ನಿಂತರು. ರಾಜನಗರದ ಕೋಟೆಯಲ್ಲಿ ಅಲ್ಲಲ್ಲಿ ಶಸ್ತ್ರಪಾಣಿಗಳಾದ ರಕ್ಷಕರು ನಿಯಮಿಸಲ್ಪಟ್ಟರು. ರಾಜಧಾನಿಯಲ್ಲಿ ಸಮಸ್ತ ಜನರು ಸಮಸ್ತ ರಾತ್ರಿಯಲ್ಲಿ ಜಾಗರಣೆಮಾಡುತ್ತ ಏನಾಗುತ್ತದೋ ಎಂದು ಚಿಂತಿಸಿಕೊಳ್ಳುತ್ತಿದ್ದರು. ಹಿಂದುಗಳೆಲ್ಲರೂ ಬರಲಿ, ಸನ್ಯಾಸಿಗಳು ಬರಲಿ, ತಾಯಿ ದುರ್ಗೆ ಹಾಗೆ ಮಾಡಲಿ, ಹಿಂದುಗಳ ಅದೃಷ್ಟವು ಕುದುರಲಿ ಎಂದು ಹೇಳುತ್ತಿದ್ದರು. ಮುಸಲಮಾನರು ಅಲ್ಲಾ-ಒ-ಅಕ್ಬರ್! ನಾವು ಐದು ಹೊತ್ತು ನಮಾಜುಮಾಡುತ್ತೇವೆ. ಈ ಹಿಂದುಗಳನ್ನು ಹೊಡೆದುಹಾಕುವುದಕ್ಕಾಗದೆ ಹೋಯಿತು. ದುನಿಯಾ (ಪ್ರಪಂಚವು) ಎಲ್ಲ ಝೂಟ್ (ಸುಳ್ಳು) ಎಂದು ಅಳುತ್ತಿದ್ದರು. ಕೆಲವರು ನಗುತ್ತಿದ್ದರು. ಎಲ್ಲರೂ ಬಹು ಘಾಬರಿಯಾಗಿ ರಾತ್ರಿಯನ್ನು ಕಳೆದರು.

ಇದೆಲ್ಲ ಕಲ್ಯಾಣಿಯ ಕಿವಿಗೆ ಬಿದ್ದಿತು. ಆಬಾಲ ವೃದ್ಧ ವನಿತೆಯರು ಕೇಳದೆ ಇರಲಿಲ್ಲ. ಕಲ್ಯಾಣಿಯು ಮನಸ್ಸಿನಲ್ಲಿ "ಜಯಜಗದೀಶಹರೆ! ಇಂದು ಕಾರ್ಯವು

ಸಿದ್ಧಿಯಾಯಿತು, ನಾನು ಇಂದು ಸ್ವಾಮಿಯ ದರ್ಶನಾರ್ಥವಾಗಿ ಯಾತ್ರೆಯನ್ನು ಮಾಡುವೆನು, ಹೆ, ಮಧುಸೂದನ! ಇಂದು ನನಗೆ ಸಹಾಯಮಾಡು'' ಎಂದಂದುಕೊಂಡಳು.

ಗಭೀರವಾದ ರಾತ್ರಿಯಲ್ಲಿ ಕಲ್ಯಾಣಿಯು ಹಾಸಿಗೆಯನ್ನು ಬಿಟ್ಟೆದ್ದು ಒಬ್ಬಳೇ ಕಿಟಿಕಿಯ ಬಾಗಿಲು ತೆರೆದು ಅತ್ತಿತ್ತ ನೋಡಿ ಎಲ್ಲಿಯೂ ಯಾರೂ ಕಾಣದೆ ಮೆಲ್ಲಮೆಲ್ಲನೆ ನಿಶ್ಶಬ್ದವಾಗಿ ಇಳಿದು ಗೌರಿದೇವಿಯ ಪುರಿಯನ್ನು ಬಿಟ್ಟು ರಾಜ ಬೀದಿಗೆ ಹೊರಟಳು. ಮನಸ್ಸಿನಲ್ಲಿ ಇಷ್ಟದೇವತೆಯನ್ನು ಸ್ಮರಣೆಮಾಡಿಕೊಂಡು ನೋಡಿಕೊ, ದೇವರೆ! ಇಂದು ಅವರನ್ನು ಪದಚಿಹ್ನದಲ್ಲಿ ನೋಡಬೇಕು ಎಂದಂದು ಕೊಂಡಳು.

ಕಲ್ಯಾಣಿಯು ನಗರ ಘಾಟಿಯ ಹತ್ತಿರ ಬಂದು ನಿಂತಳು. ಪಹರೆದವನು ನೋಡಿ ಯಾರು ಹೋಗುವವರು? ಎಂದನು. ಕಲ್ಯಾಣಿಯು ಭೀತಿಗೊಂಡ ಸ್ವರದಿಂದ ನಾನು ಹೆಂಗಸು ಎಂದಳು. ಪಹರೆದವನು ಹೋಗುವುದಕ್ಕೆ ಹುಕುಂ ಇಲ್ಲವೆಂದನು. ಸಮಾಚಾರವು ದಫೇದಾರನ ಕಿವಿಗೆ ಬಿದ್ದಿತು. ದಫೇದಾರನು ಹೊರಗೆ ಹೋಗುವುದಕ್ಕೆ ನಿಷೇಧವಿಲ್ಲ. ಒಳಕ್ಕೆ ಬರುವುದಕ್ಕೆ ಅಪ್ಪಣೆ ಇಲ್ಲವೆಂದನು. ಕೇಳಿ ಪಹರೆಯವನು ಕಲ್ಯಾಣಿಯನ್ನು ಕುರಿತು ಹೋಗಮ್ಮ, ಹೋಗುವುದಕ್ಕೆ ಅಡ್ಡಿಯಿಲ್ಲ, ಆದರೆ ಈ ದಿನ ರಾತ್ರಿಯಲ್ಲಿ ಬಹಳ ಆಪತ್ತು, ನೀನೇನು ಆಗುತ್ತೀಯೋ ಹೇಳಲಾರೆನು, ನೀನು ಕಳ್ಳರ ಕೈಗೆ ಸಿಕ್ಕಿಬೀಳುತ್ತಿ, ಬಿದ್ದು ಸಾಯುವುದೇ ಸರಿ, ನಾನು ಹೇಳುವುದಿಲ್ಲ, ಅಮ್ಮ! ಈ ದಿನ ರಾತ್ರಿಯಲ್ಲಿ ಹೊರಗೆ ಹೋಗಬೇಡ, ಇದರಮೇಲೆ ನಿನ್ನ ಇಷ್ಟ ಎಂದು ಹೇಳಿದನು.

ಕಲ್ಯಾಣಿ—ಅಪ್ಪಾ! ಭಿಕ್ಷುಕಳು—ನನ್ನಲ್ಲಿ ಒಂದುಕಾಸೂ ಇಲ್ಲ, ಕಳ್ಳರು ನನ್ನನ್ನು ಏನೂ ಮಾಡರು.

ಪಹರೇದವನು, ಪ್ರಾಯವು ಇದೆಯಲ್ಲ! ತಾಯಿ! ಪ್ರಪಂಚದಲ್ಲಿ ಪ್ರಾಯವೇ ಸಕಲಾಭರಣ ಸಂಪತ್ತು! ನೋಡಿದರೆ ನಿನ್ನಲ್ಲಿ ಅದು ಮಹದೈಶ್ವರ್ಯವಾಗಿದೆ ಎಂದನು. ಕಲ್ಯಾಣಿಯು ಏನೋ ಅದೊಂದು ವಿಪತ್ತೆಂದಂದುಕೊಂಡು ಏನೂ ಹೇಳದೆ ಮೆಲ್ಲಮೆಲ್ಲನೆ ಆ ಸ್ಥಳದಿಂದ ತಪ್ಪಿಸಿಕೊಂಡು ಹೊರಟುಹೋದಳು. ಪಹರೆಯವನು, ಹೆಂಗಸು ಆ ರಸಿಕತ್ವವನ್ನು ತಿಳಿದುಕೊಳ್ಳಲಾರದೆ ಹೋದಳೆಂದು ಮನಸ್ಸಿನಲ್ಲಿ ದುಃಖಪಟ್ಟು, ಒಂದು ''ದಂ'' ಗಾಂಜಾ ಹೊಡೆದು ಝೋಲಿ ಹೊಡಿಯುತ್ತ ಝುಂಪೆ ತಾಳದಲ್ಲಿ ಝಣಾಯಿಸಿ ''ಝೋಂತಕಥೈ'' ಹಾಡಲು ಪ್ರಾರಂಭಿಸಿದನು. ಕಲ್ಯಾಣಿಯು ಹೊರಟುಹೋದಳು.

ಆ ರಾತ್ರಿ ಮಾರ್ಗದಲ್ಲಿ ಪಥಿಕರು, ಕೆಲವರು ಹೊಡಿ ಬಡಿ ಎಂತಲೂ, ಕೆಲವರು ಓಡು ಓಡು ಎಂದು ಕೂಗುತಲಿದ್ದರು, ಕೆಲವರು ಅಳುತ್ತಿದ್ದರು, ಕೆಲವರು ನಗುತ್ತಿದ್ದರು, ಸಿಕ್ಕಿದವರು ಸಿಕ್ಕಿದವರನ್ನು ಹಿಡಿದುಕೊಂಡು ಹೋಗುತ್ತಿದ್ದರು.

ನೋಡಿ ಕಲ್ಯಾಣಿಗೆ ಅತಿಕಷ್ಟಕ್ಕೆ ಬಂದಿತು. ಮಾರ್ಗ ಗೊತ್ತಿಲ್ಲ, ಯಾರನ್ನು ಕೇಳಿ ತಿಳಿದುಕೊಳ್ಳುವುದಕ್ಕೂ ಮಾರ್ಗವಿಲ್ಲ, ಎಲ್ಲರೂ ರಣೋನ್ಮುಖರಾಗಿದ್ದರು. ಕೇವಲ ಕತ್ತಲೆಯಲ್ಲಿ ಮರೆಮಾಚಿಕೊಂಡು ಹೋಗಬೇಕು. ಅಲ್ಲಲ್ಲಿ ಔತೌತುಕೊಳ್ಳುತ್ತ ಹೋಗುತ್ತಿದ್ದರೂ ಕಲ್ಯಾಣಿಯು ಅತಿ ಉದ್ಧತರಾಗಿ ಉನ್ಮತ್ತರಾದ ವಿದ್ರೋಹಿಗಳ ಒಂದು ಗುಂಪಿನವರ ಕೈಗೆ ಸಿಕ್ಕಬಿಟ್ಟಳು. ಅವರು ಘೋರವಾದ ಚೀತ್ಕಾರವನ್ನು ಮಾಡುತ್ತ ಅವಳನ್ನು ಹಿಡಿದುಕೊಳ್ಳುವುದಕ್ಕೆ ಬಂದರು. ಕಲ್ಯಾಣಿಯು ಊರ್ಧ್ವ ಶ್ವಾಸದಿಂದೋಡಿ ಕಾಡು ಬಿದ್ದಳು. ಅಲ್ಲಿಗೂ ಒಬ್ಬಿಬ್ಬರು ಕಳ್ಳರು ಅವಳ ಬೆನ್ನಟ್ಟಿದರು. ಒಬ್ಬನು ಓಡಿಬಂದು ಅವಳ ಶರಗನ್ನು ಹಿಡಿದುಕೊಂಡು ಎಲೈ ಚನ್ನೈದಿಲು ಚನ್ನಿಗಳೆ! ಎಂದನು. ಆ ಸಮಯದಲ್ಲಿ ಮತ್ತೊಬ್ಬನು ಅಕಸ್ಮಾತ್ತಾಗಿ ಬಂದು ಆ ಅತ್ಯಾಚಾರಿಯಾದ ಮನುಷ್ಯನನ್ನು ಕಾರಿಬೀಳುವಹಾಗೆ ಒದ್ದು ಕೆಡಹಿದನು. ಅವನು ಆಹತನಾಗಿ ಸರಿದು ಹೊರಟುಹೋದನು. ಆ ಒದ್ದವನು ಸನ್ಯಾಸಿ. ಕಾವಿಶಾಟಿಯನ್ನುಟ್ಟಿದ್ದನು; ಕೃಷ್ಣಾಜಿನದಿಂದ ಆವೃತವಕ್ಷನಾಗಿದ್ದನು. ವಯಸ್ಸು ಇನ್ನೂ ಚಿಕ್ಕದು. ಅವನು ಕಲ್ಯಾಣಿಯನ್ನು ಕುರಿತು ಭಯ ಪಡಬೇಡ, ನನ್ನ ಜತೆಯಲ್ಲಿ ಬಾ,—ಎಲ್ಲಿಗೆ ಹೋಗಬೇಕೆಂದು ಕೇಳಿದನು.

ಕಲ್ಯಾಣಿ—ಪದಚಿಹ್ನ ಗ್ರಾಮಕ್ಕೆ.

ಆಗಂತುಕನು ಚಮಕಿತನಾಗಿ ಆಶ್ಚರ್ಯಪಟ್ಟು, ಅದೇತಕ್ಕೆ ಪದಚಿಹ್ನ ಗ್ರಾಮಕ್ಕೆ? ಎಂದು ಕೇಳಿ, ಅವನು ಇದಿರಿಗೆ ನಿಂತಿದ್ದ ಕಲ್ಯಾಣಿಯ ಭುಜದ ಮೇಲೆ ಕೈಯಿಟ್ಟು ಆ ಕತ್ತಲೆಯಲ್ಲಿ ಮುಖದ ಹತ್ತಿರ ಮುಖವನಿಟ್ಟುಕೊಂಡು ಗುರುತಿಸಿ ನೋಡಿದನು.

ಕಲ್ಯಾಣಿಯು ಇದ್ದಕಿದ್ದ ಹಾಗೆ ಪುರುಷ ಸ್ಪರ್ಶದಿಂದ ರೋಮಾಂಚಳಾಗಿ ಭಯಪಟ್ಟು ಆಶ್ಚರ್ಯಾನ್ವಿತಳಾಗಿ ಖತಿಗೊಂಡು ಕಣ್ಣೀರುತುಂಬಿದವಳಾದಳು. ಓಡಿಹೋಗುವುದಕ್ಕೆ ಸಾಧ್ಯವಿಲ್ಲ; ಭಯವಿಹ್ವಲಳಾಗಿ ಗಡಗಡನೆ ನಡುಗಿದಳು. ಆಗಂತುಕನು ನೋಟನೋಡಿ ಪೂರ್ಸೈಸಿ, ಹರೇಮುರಾರೆ! ಬಲ್ಲೆನು, ನೀನು ನತದೃಷ್ಟಳಾದ ಕಲ್ಯಾಣಿ! ಎಂದನು.

ಕಲ್ಯಾಣಿಯು ಭೀತಳಾಗಿ, ತಾವು ಯಾರೆಂದು ಕೇಳಿದಳು.

ಆಗಂತುಕ—ನಾನು ನಿನ್ನ ದಾಸಾನುದಾಸ—ಹೇ ಸುಂದರಿ! ನನ್ನಮೇಲೆ ಪ್ರಸನ್ನಳಾಗು.

ಕಲ್ಯಾಣಿಯು ಅತಿವೇಗದಿಂದ ಅಲ್ಲಿಂದ ಸರಿದುಹೋಗಿ ಗಲಗಲ ಬಾಯಿ ಮಾಡುತ್ತ ತರ್ಜನ ಗರ್ಜನವಂ ಮಾಡಿ, ಈ ಅಪಮಾನಮಾಡುವುದಕ್ಕೆ ನೀನು ನನ್ನನ್ನು ರಕ್ಷಿಸಿಕೊಂಡದ್ದು? ನೋಡಿದರೆ ಬ್ರಹ್ಮಚಾರಿಯ ವೇಷ, ಬ್ರಹ್ಮಚಾರಿಗೆ ಇದೇ ಧರ್ಮ? ನಾನಿಂದು ನಿಸ್ಸಹಾಯಳು. ಇಲ್ಲದಿದ್ದರೆ ನಿನ್ನ ಬಾಯಿಗೆ ಮೋರೆಗುಕ್ಕೆಯನ್ನು ಹಾಕುತ್ತಿದ್ದೆನೆಂದು ಸಿಡುಕಿದಳು.

ಬ್ರಹ್ಮಚಾರಿಯು ಎಲೈ ವಿಸ್ಮಿತವದನೆ! ನಾನು ಬಹುದಿನಗಳಿಂದ ಈ ನಿನ್ನ ಶ್ರೇಷ್ಠವಾದ ಶರೀರ ಸ್ಪರ್ಶಸುಖವನ್ನು ಹಂಬಲಿಸುತ್ತಿದ್ದೆನೆಂದು ಹೇಳಿ ಬೇಗನೆ ಓಡಿಹೋಗಿ ಕಲ್ಯಾಣಿಯನ್ನು ಹಿಡಿದು ಗಾಢಾಲಿಂಗನೆ ಮಾಡಿಕೊಂಡನು. ಆಗ ಕಲ್ಯಾಣಿಯು 'ಕಿಲಕಿಲ ನಕ್ಕು, ಅಯ್ಯೋ! ಕೆಟ್ಟವಳೆ! ಮೊದಲೇ ಹೇಳ ಬಾರದೆ? ನನಗೂ ಇದೇ ಅವಸ್ಥೆ ಎಂದು ಹೇಳಬಾರದಾಗಿತ್ತೆ? ಎಂದಳು. ಆಗ ಶಾಂತಿಯು ಏನಕ್ಕ! ಮಹೇಂದ್ರನನ್ನು ಹುಡುಕಿಕೊಂಡು ಹೋಗುತ್ತೀಯಾ? ಎಂದಳು.

ಕಲ್ಯಾಣಿ—ನೀನೇನು? ಎಲ್ಲರ ಮನಸ್ಸು ಕಂಡವಳೊ?

ಶಾಂತಿ—ನಾನು ಬ್ರಹ್ಮಚಾರಿ—ಸಂತಾನ ಸೇನೆಗೆಲ್ಲ ಅಧಿನಾಯಕನು—ಘೋರವಾದ ವೀರಪುರುಷ; ನನಗೆ ಯಾವದು ಗೊತ್ತಿಲ್ಲ? ಎಲ್ಲ ಗೊತ್ತು! ಈ ದಿನ ಮಾರ್ಗದಲ್ಲಿ ಸಿಪಾಯಿಗಳ ಅವಾಂತರ—ನೀನು ಪದಚಿಹ್ನಕ್ಕೆ ಹೋಗಲಾರೆ.

ಕಲ್ಯಾಣಿಯು ಅಳುವುದಕ್ಕೆ ತೊಡಗಿದಳು.

ಶಾಂತಿಯು ಕಣ್ಣು ತಿರುಗಿಸುತ್ತ, ಭಯವೇನು? ನಾವು ನಮ್ಮ ನಯನ ಬಾಣಗಳಿಂದ ಸಹಸ್ರಾರು ಶತ್ರುಗಳನ್ನಾದರೂ ಹೊಡೆದುಹಾಕಬಲ್ಲೆವು. ನಡೆ, ಪದಚಿಹ್ನಕ್ಕೆ ಹೋಗೋಣವೆಂದಳು.

ಕಲ್ಯಾಣಿಯು ಇಂತಹ ಬುದ್ಧಿಮತಿಯಾದ ಹೆಂಗಸಿನ ಸಹಾಯದಿಂದ ಸ್ವರ್ಗವೇ ಸಿಕ್ಕಿದವಳಹಾಗಾಗಿ, ನಡೆ, ನೀನೆಲ್ಲಿಗಾದರೂ ಕರೆದುಕೊಂಡು ಹೋಗು, ಬರುತ್ತೇನೆಂದಳು.

ಶಾಂತಿಯು ಆಗವಳನ್ನು ಜತೆಯಲ್ಲಿ ಕಾಡುಹಾದಿಯಲ್ಲಿ ಕರೆದುಕೊಂಡು ಹೋದಳು.

---

## ಹದಿನಾಲ್ಕನೆಯ ಪರಿಚ್ಛೇದ

ಶಾಂತಿಯು ಆಶ್ರಮವನ್ನು ಬಿಟ್ಟು ಗಭೀರವಾದ ರಾತ್ರಿಯಲ್ಲಿ ನಗರಾಭಿಮುಖವಾಗಿ ಹೊರಟಾಗ ಜೀವಾನಂದನು ಆಶ್ರಮದಲ್ಲಿದ್ದನು. ಶಾಂತಿಯು ಜೀವಾನಂದನನ್ನು ಕುರಿತು, ನಾನು ನಗರಕ್ಕೆ ಹೋಗಿ ಮಹೇಂದ್ರನ ಹೆಂಡತಿಯನ್ನು ಕರೆತರುವೆನು, ನೀವು ಮಹೇಂದ್ರನಿಗೆ ಅವನ ಹೆಂಡತಿಯು ಜೀವಿಸಿದ್ದಾಳೆಂದು ಹೇಳಿರೆಂದು ಹೇಳಿದ್ದಳು.

ಜೀವಾನಂದನು ಭವಾನಂದನಿಂದ ಕಲ್ಯಾಣಿಯ ಪುನರುಜ್ಜೀವನ ವೃತ್ತಾಂತ ವನ್ನೆಲ್ಲ ಕೇಳಿ ತಿಳಿದಿದ್ದನು—ಮತ್ತು ಅವಳು ಆಗ ವಾಸವಾಗಿದ್ದ ವಾಸಸ್ಥಾನವನ್ನೂ ಆ ಸರ್ವಸ್ಥಾನ ವಿಚಾರಿಣಿಯಾದ ಶಾಂತಿಯಿಂದ ತಿಳಿದಿದ್ದನು. ಕ್ರಮೇಣ ಇದನ್ನೆಲ್ಲ ಮಹೇಂದ್ರನಿಗೆ ತಿಳಿಸಿದನು.

ಮಹೇಂದ್ರನು ಕೇಳಿ ಮೊದಲು ನಂಬಲಿಲ್ಲ; ಕಡೆಗೆ ಆನಂದದಿಂದ ಅಭಿಭೂತನಾಗಿ ಮುಗ್ಧಪ್ರಾಯನಾದನು.

ಆದಿನ ರಜನೀಪ್ರಭಾತದಲ್ಲಿ ಶಾಂತಿಯ ಸಹಾಯದಿಂದ ಕಲ್ಯಾಣಿಗೆ ಮಹೇಂದ್ರನ ದರ್ಶನವಾಯಿತು. ನಿಶ್ಶಬ್ದವಾದ ಕಾನನದ ಮಧ್ಯದಲ್ಲಿ ದಟ್ಟವಾಗಿ ಬೆಳದಿದ್ದ ಶಾಲತರುಗಳ ಅಂಧಕಾರದ ಛಾಯೆಯಲ್ಲಿ ಪಶುಪಕ್ಷಿಗಳಿಗೆ ನಿದ್ರೆಯು ಭಂಗವಾಗುವುದಕ್ಕೆ ಮೊದಲೇ ಅವರಿಗೆ ಪರಸ್ಪರ ದರ್ಶನಲಾಭವುಂಟಾಯಿತು—ಇದಕ್ಕೆ ಸಾಕ್ಷಿಗಳು ;—ಕೇವಲ ಆ ನೀಲವಾದ ಗಗನವಿಹಾರಿಗಳಾದ ಮ್ಲಾನಕಿರಣಗಳುಳ್ಳ ಆಕಾಶದ ನಕ್ಷತ್ರ ನಿಚಯ ಮತ್ತು ಆ ಗಾಳಿಯಿಲ್ಲದೆ ನಿಷ್ಕಂಪವಾಗಿ ನಿಂತಿದ್ದ ಅನಂತವಾದ ಶಾಲತರುಶ್ರೇಣಿ ಮತ್ತು ದೂರದಲ್ಲಿ ಬಂಡೆಗಳಮೇಲೆ ಬಿದ್ದು ಹೊರಳುತ ಮೊರೆಯಿಡುತಲಿದ್ದ ಮಧುರ ಕಲ್ಲೋಲಿನೀಯಾದ ಸಂಕೀರ್ಣವಾದ ನದಿಯ ಝುರ್ಝುರ ಶಬ್ದ; ಎಲ್ಲೋ ದೂರದಲ್ಲಿ ಪೂರ್ವದಿಕ್ಕಿನಲ್ಲಿ ಸಮುದಿತವಾದ ಉಷಾಮುಕುಟ ಕಾಂತಿಯನ್ನು ನೋಡಿ ಆಹ್ಲಾದಿತವಾಗಿ ಕೂಗುತಲಿದ್ದ ಕೋಕಿಲೆಯ ಧ್ವನಿ—

ಬೆಳಕು ಹರಿಯುವುದಕ್ಕೆ ಇನ್ನೂ ಒಂದು ಪ್ರಹರವಿದ್ದಿತು. ಅಲ್ಲಿಗೆ ಶಾಂತಿಯೂ ಜೀವಾನಂದನೂ ಬಂದು ದರ್ಶನವನ್ನು ಕೊಟ್ಟರು. ಕಲ್ಯಾಣಿಯು ಶಾಂತಿಯನ್ನು ಕುರಿತು, ನಿಮ್ಮಗಳಿಗೆ ನಾವು ಮೂಲ್ಯವಿಲ್ಲದೆ ವಿಕ್ರೀತರಾಗಿದ್ದೇವೆ; ನಮ್ಮ ಮಗುವನ್ನು ಹುಡುಕಿಕೊಟ್ಟು ಉಪಕಾರವನ್ನು ಸಂಪೂರ್ಣಮಾಡಬೇಕೆಂದಳು.

ಶಾಂತಿಯು ಜೀವಾನಂದನ ಮುಖವನ್ನು ನೋಡಿ, ನಾನು ಸ್ವಲ್ಪ ಮಲಗುವೆನು. ಈ ದಿನವೆಲ್ಲ ಒಂದು ಸ್ಥಳದಲ್ಲಿ ಕೂಡಲಿಲ್ಲ. ಎರಡು ರಾತ್ರಿಗಳಿಂದ ನಿದ್ರೆಯಿಲ್ಲ. ನಾನು ಹೋಗುತ್ತೇನೆ. ಪುರುಷನೆ! ಎಂದಳು.

ಕಲ್ಯಾಣಿಯು ಸ್ವಲ್ಪ ನಕ್ಕಳು. ಜೀವಾನಂದನು ಮಹೇಂದ್ರನನ್ನು ನೋಡಿ, ಆ ಭಾರವು ನನ್ನಮೇಲೆ ನಿಂತಿತು; ನೀವು ಪದಚಿಹ್ನಗ್ರಾಮಕ್ಕೆ ಹೋಗಿರಿ—ಅಲ್ಲಿಯೇ ಮಗುವು ಬರುವುದೆಂದನು.

ಜೀವಾನಂದನು ಭೈರವಪುರಕ್ಕೆ ನಿಮಾಯಿಮಣಿಯಿಂದ ಮಗುವನ್ನು ಕರೆತರಲು ಹೊರಟುಹೋದನು—ಮೈಮೇಲೆ ತೆಗೆದುಕೊಂಡ ಕೆಲಸವು ಸುಲಭವಾದುದಾಗಿ ಕಾಣಿಸಲಿಲ್ಲ.

ಆಗ ನಿಮಾಯಿಯು ಮೊದಲು ಉಗುಳು ನುಂಗಿದಳು—ಒಂದು ಸಲ ಅತ್ತ ಇತ್ತ ನೋಡಿದಳು, ಅದರಮೇಲೆ ಮೂಗಿನ ಹೊಳ್ಳೆಗಳು ಅರಳಿದವು. ಅದರಮೇಲೆ ಅತ್ತುಬಿಟ್ಟಳು.

ನಿಮಾಯಿಯು ಆ ದುಂಡಾಗಿ ಮುದ್ದಾಗಿದ್ದ ಮುಂಗೈಯಿಂದ ಕಣ್ಣುಗಳನ್ನು ಉಜ್ಜುಜ್ಜಿ ಒರಸಿಕೊಂಡಮೇಲೆ ಜೀವಾನಂದನು ಏನೆ ತಂಗಿ! ಅಳುವು

ದೇಕೆ? ಅದು ದೂರವಲ್ಲ—ಅವರ ಮನೆಗೆ ಹೋಗಿ ನೋಡಿಕೊಂಡು ಬರಬಹುದು. ಕಷ್ಟವೇನೂ ಇಲ್ಲವೆಂದನು.

ನಿಮಾಯಿಯು ಮೂಗು ಅರಳಿದ್ದ ಹಾಗೆ ಮುಗುವೇನೋ ನಿನ್ನದು, ನೀನೇ ಕರೆದುಕೊಂಡು ಹೋಗು, ನನಗೇಕೆ? ಎಂದು ಹೇಳಿ ಸುಕುಮಾರಿಯನ್ನು ಕರೆ ತಂದು ಜೀವಾನಂದನ ಹತ್ತಿರ ಕೋಪದಿಂದ ಕುಕ್ಕರಿಸಿ ಒಂದುಕಡೆ ಮುದುಡಿ ಕೊಂಡು ಕುಳಿತು ಕಣ್ಣೀರು ಬಿಟ್ಟಳು. ಯತ್ನವಿಲ್ಲದೆ ಜೀವಾನಂದನು ಇನ್ನೇನೂ ಹೇಳದೆ ಆ ಮಾತು ಈ ಮಾತು ಎತ್ತಿದನು. ಆದರೆ ನಿಮಾಯಿಯ ಕೋಪವು ಇಳಿಯಲಿಲ್ಲ. ಅವಳು ಎದ್ದುಹೋಗಿ ಸುಕುಮಾರಿಯ ಬಟ್ಟೆಗಳ ಗಂಟನ್ನು ಒಡವೆಗಳ ಪೆಟ್ಟಿಗೆಯನ್ನು ಆಡುವ ಬೊಂಬೆಯ ಸಾಮಾನುಗಳನ್ನು ಸಹ ದಡಬಡ ಮಾಡಿ ಜೀವಾನಂದನ ಮುಂದೆ ತಂದು ಹಾಕಿದಳು. ಸುಕುಮಾರಿಯು ಅದನ್ನೆಲ್ಲ ಆರಿಸಿ ಒಟ್ಟುಮಾಡುತ್ತ ನಿಮಾಯಿಯನ್ನು ನೋಡಿ, ಎಲೆ ಅಮ್ಮ! ಎಲ್ಲಿಗೆ ಹೋಗ ಬೇಕೆ? ಏಕೆ? ಎಂದು ಕೇಳಿದಳು. ನಿಮಾಯಿಯು ಇನ್ನು ಸಹಿಸುವುದಕ್ಕಾಗ ಲಿಲ್ಲ—ಆಗವಳು ಸುಕುಮಾರಿಯನ್ನು ಎತ್ತಿಕೊಂಡು ಅಳುತಳುತ ಹೊರಟು ಹೋದಳು.

---

## ಹದಿನಾರನೆಯ ಪರಿಚ್ಛೇದ

ಈ ದಿನ ಪದಚಿಹ್ನದಲ್ಲಿ ನೂತನವಾಗಿ ನಿರ್ಮಾಣವಾದ ದುರ್ಗದ ಮಧ್ಯದಲ್ಲಿ ಸುಖವಾಗಿ ಸೇರಿ, ಮಹೇಂದ್ರ, ಕಲ್ಯಾಣಿ, ಜೀವಾನಂದ, ಶಾಂತಿ, ನಿಮಾಯಿಮಣಿ, ನಿಮಾಯಿಮಣಿಯ ಸ್ವಾಮಿ, ಸುಕುಮಾರಿ ಸುಖವಾಗಿ ಸಮ್ಮಿ ಳಿತವಾಗಿದ್ದರು. ಶಾಂತಿಯು ನವೀನಾನಂದ ವೇಷದಿಂದ ಬಂದಿದ್ದಳು. ಕಲ್ಯಾಣಿ ಯನ್ನು ಜತೆಯಲ್ಲಿ ಕರೆತಂದ ರಾತ್ರಿಯಲ್ಲಿ ಅವಳು ಕಲ್ಯಾಣಿಗೆ ಗಂಡನಿಗೆ ತಾನು ಹೆಂಗಸೆಂದು ತಿಳಿಸಕೂಡದೆಂದು ಹೇಳಿದ್ದಳು. ಒಂದು ದಿನ ಕಲ್ಯಾಣಿಯು ಶಾಂತಿ ಯನ್ನು ತನ್ನ ಅಂತಃಪುರಕ್ಕೆ ಕರೆಸಿದಳು. ನವೀನಾನಂದನು ಅಂತಃಪುರಕ್ಕೆ ಹೋದನು. ಆಳುಗಳು ಅಡ್ಡಿಮಾಡಿದರೂ ಕೇಳದೆ ಒಳಕ್ಕೆ ಹೊರಟುಹೋದನು.

ಶಾಂತಿಯು ಕಲ್ಯಾಣಿಯನ್ನು ಏಕೆ ಕರೆಸಿದೆ ಎಂದು ಕೇಳಿದಳು. ಕಲ್ಯಾಣಿ— ಪುರುಷ ವೇಷದಿಂದ ಎಷ್ಟು ದಿನವಿರಬೇಕು? ಒಟ್ಟಿಗೆ ಸೇರಿ ಮಾತನಾಡುವುದಕ್ಕೆ ಕೂಡ ಇಲ್ಲ. ನನ್ನ ಸ್ವಾಮಿಯ ಹತ್ತಿರ ಹೇಳಿಬಿಡಬೇಕು.

ನವೀನಾನಂದನು ಬಹಳ ಹೊತ್ತು ಯೋಚಿಸುತ್ತ ಉತ್ತರವನ್ನು ಕೊಡದೆ ನಿಂತಿದ್ದನು. ಅನಂತರ ಅದರಿಂದ ಬಹಳ ವಿಘ್ನಕ್ಕೆ ಕಾರಣವಾಗುತ್ತದೆ ಎಂದನು.

ಇಬ್ಬರೂ ಆ ಸಂಗತಿಯನ್ನು ಕುರಿತು ಮಾತನಾಡುತ್ತಿದ್ದರು. ಇತ್ತಲಾಗಿ ನವೀನಾನಂದನನ್ನು ಅಂತಃಪುರಕ್ಕೆ ಹೋಗಲು ಅಡ್ಡಿಮಾಡಿದ ಆಳುಗಳು ಹೋಗಿ

ಮಹೇಂದ್ರನಿಗೆ ನವೀನಾನಂದನು ಅಡ್ಡಿಮಾಡಿದರೂ ಕೇಳದೆ ಬಲವಂತದಿಂದ ಅಂತಃ ಪುರದೊಳಗೆ ಹೊರಟುಹೋದನೆಂದು ವರ್ತಮಾನವನ್ನು ಕೊಟ್ಟರು. ಕುತೂಹಲ ನಾಗಿ ಮಹೇಂದ್ರನು ಅಂತಃಪುರಕ್ಕೆ ಹೋದನು. ಕಲ್ಯಾಣಿಯು ಮಲಗುವ ಚಿಕ್ಕ ಮನೆಗೆ ಹೋಗಿ ನೋಡಲಾಗಿ ನವೀನಾನಂದನು ಮಂಚದ ಹತ್ತಿರ ನಿಂತುಕೊಂಡು, ಕಲ್ಯಾಣಿಯು ಅವನು ಮೈಗೆ ಕಟ್ಟಿಕೊಂಡಿದ್ದ ಚರ್ಮಕಟ್ಟಿದ್ದ ನೂಲಿನ ಗಂಟನ್ನು ಬಿಚ್ಚುತ್ತಿದ್ದಳು. ಮಹೇಂದ್ರನು ಅತ್ಯಂತ ಆಶ್ಚರ್ಯಪಟ್ಟು ಅತಿಶಯವಾಗಿ ಕೋಪವಶನಾದನು.

ನವೀನಾನಂದನು ಅವನನ್ನು ನೋಡಿ ನಕ್ಕು, ಏನು ಗೋಸಾಯಿಗಳೆ! ಸಂತಾನರಿಗೆ ಸಂತಾನರಲ್ಲಿಯೇ ನಂಬಿಕೆ ಇಲ್ಲವೆ? ಎಂದನು.

ಮಹೇಂದ್ರ—ಭವಾನಂದಠಾಕೂರನು ನಂಬಿಕೆಯುಳ್ಳವನಾಗಿದ್ದನೊ?

ನವೀನಾನಂದನು, ಕಣ್ಣುಗಳನ್ನು ತಿರುಗಿಸುತ್ತ, ಕಲ್ಯಾಣಿಯು ಭವಾ ನಂದನ ಮೈಮೇಲೆ ಕೈಹಾಕಿ ಹುಲೀಚರ್ಮದ ಗಂಟನ್ನು ಬಿಚ್ಚಿದಳೆ? ಎಂದು ಹೇಳುತ್ತ ಶಾಂತಿಯು ಕಲ್ಯಾಣಿಯ ಕೈತೆಗೆದು ಬಿಚ್ಚಬೇಡವೆಂದಳು.

ಮಹೇಂದ್ರ—ಅದರಿಂದೇನು?

ನವೀನಾನಂದ—ನನ್ನನ್ನು ನಂಬದೆ ಇರಬಹುದು—ಕಲ್ಯಾಣಿಯನ್ನು ಅವಿ ಶ್ವಾಸಮಾಡುವುದು ಯಾವ ಲೆಕ್ಕಾಚಾರ?

ಮಹೇಂದ್ರನಿಗೆ ಏನೂ ತೋಚದೆ ಅಪ್ರತಿಭನಾಗಿ, ಯಾವಾಗ ಹೇಗೆ ಅವಿಶ್ವಾಸಮಾಡಿದೆನೆಂದನು.

ನವೀನಾನಂದ—ಹಾಗಿಲ್ಲದಿದ್ದರೆ, ನನ್ನ ಹಿಂದೆ ಹಿಂದೆ ಅಂತಃಪುರಕ್ಕೆ ಬಂದು ದೇಕೆ?

ಮಹೇಂದ್ರ—ಕಲ್ಯಾಣಿಯ ಹತ್ತಿರ ನನಗೆ ಕೆಲಸವಿತ್ತು; ಅದುಕಾರಣ ಬಂದೆನು.

ನವೀನಾನಂದ—ಹಾಗಾದರೆ ಈಗ ದಯಮಾಡಿ ಕಲ್ಯಾಣಿಯ ಹತ್ತಿರ ನನಗೂ ಸ್ವಲ್ಪ ಕೆಲಸವಿದೆ. ತಾವು ಹೊರಟುಹೋದರೆ ನಾನು ಮೊದಲು ಮಾತ ನಾಡಿ ಹೋಗುತ್ತೇನೆ. ಮನೆ ಬಾಗಲು ತಮ್ಮದು. ತಾವು ಯಾವಾಗ ಬೇಕಾ ದರೂ ಬರಬಹುದು. ನಾನು ಕಷ್ಟಪಟ್ಟು ಒಂದುಸಲ ಬಂದವನು.

ಮಹೇಂದ್ರನು ಮೂಗನಾಗಿ ನಿಂತನು. ಏನೂ ಗೊತ್ತಾಗದೆ ಇದ್ದನು. ಮಾತುಕಥೆಯನ್ನು ಕೇಳಿದರೆ ಅಪರಾಧಿಯು ಹೇಳುವ ಮಾತಾಗಿರಲಿಲ್ಲ. ಕಲ್ಯಾ ಣಿಯ ಭಾವವು ವಿಚಿತ್ರವಾಗಿದ್ದಿತು. ಅವಳೂ ಅವಿಶ್ವಾಸಿನಿಯ ಹಾಗೆ ಓಡಿಹೋಗ ಲಿಲ್ಲ, ಭಯಪಡಲಿಲ್ಲ, ಲಜ್ಜಿತಳಾಗಲಿಲ್ಲ—ತುಸ ಹುಸಿನಗು ನಗುತ್ತಿದ್ದಳು. ಮತ್ತು ಕಲ್ಯಾಣಿ ಆ ಮರದ ಕೆಳಗೆ, ಅನಾಯಾಸವಾಗಿ ವಿಷವನ್ನು ತೆಗೆದುಕೊಂಡವಳು, ಅಂತಹವಳು ಅಪರಾಧಿಯಾದಾಳೆ? ಮಹೇಂದ್ರನು ಇದನ್ನೆಲ್ಲಾ ಯೋಚಿಸುತ್ತಿದ್ದ

ಸಮಯದಲ್ಲಿ ಅಭಾಗಿನಿಯಾದ ಶಾಂತಿಯು ಮಹೇಂದ್ರನ ದುರವಸ್ಥೆಯನ್ನು ನೋಡಿ ಸ್ವಲ್ಪ ನಕ್ಕು, ಕಲ್ಯಾಣಿಯನ್ನು ನೋಡಿ, ಒಂದು ವಿಲೋಲಕಟಾಕ್ಷವನ್ನು ಬೀರಿದಳು. ಆಗ ಇದ್ದಕ್ಕಿದ್ದಹಾಗೆ ಅಂಧಕಾರದಲ್ಲಿ ಬೆಳಕು ಹರಿದಹಾಗಾಯಿತು. ಮಹೇಂದ್ರನು ನೋಡಲಾಗಿ ಅದು ರಮಣಿಯ ಕಟಾಕ್ಷವಾಗಿದ್ದಿತು. ಸಾಹಸ ದಿಂದ ಧೈರ್ಯಗೊಂಡು ನವೀನಾನಂದನ ದಾಡಿಯನ್ನು ಹಿಡಿದೆಳೆದನು. ಕೃತ್ರಿಮ ವಾದ ದಾಡಿ ಮೀಶೆಗಳು ಜರಿದು ಕೈಗೆ ಬಂದವು. ಆ ಸಮಯದಲ್ಲಿ ಕಲ್ಯಾಣಿಯು ಅವಕಾಶ ತೆಗೆದುಕೊಂಡು ಹುಲೀಚರ್ಮದ ಗಂಟನ್ನು ಬಿಚ್ಚಿಹಾಕಿದಳು. ಅದೂ ಬಿದ್ದುಹೋಯಿತು. ನೆಲದಮೇಲೆ ಬಿದ್ದು ಶಾಂತಿಯು ಅವನತಮುಖಿಯಾದಳು.

ಮಹೇಂದ್ರನು ಶಾಂತಿಯನ್ನು ಕುರಿತು ನೀನು ಯಾರೆಂದು ಕೇಳಿದನು.

ಶಾಂತಿ—ಶ್ರೀಮಾನ್ ನವೀನಾನಂದಗೋಸ್ವಾಮಿ.

ಮಹೇಂದ್ರ—ಅದಂತೂ ಕಳ್ಳವೇಷ—ನೀನು ಹೆಂಗಸು?

ಶಾಂತಿ—ಈಗ ಯತ್ನತಪ್ಪಿತು.

ಮಹೇಂದ್ರ—ಈಗ ಮತ್ತೊಂದು ಕೇಳುತ್ತೇನೆ—ನೀನು ಹೆಂಗಸಾಗಿದ್ದು ಕೊಂಡು ಸರ್ವದಾ ಜೀವಾನಂದಠಾಕೂರನ ಸಹವಾಸದಲ್ಲೇತಕ್ಕಿರುತ್ತಿ?

ಶಾಂತಿ—ಅದನ್ನು ತಮ್ಮ ಸಂಗಡ ನಾನು ಹೇಳಲಿಲ್ಲ.

ಮಹೇಂದ್ರ—ನೀನು ಹೆಂಗಸು—ಜೀವಾನಂದಠಾಕೂರನನ್ನು ಬಲ್ಲೆಯಾ?

ಶಾಂತಿ—ಬಲ್ಲೆ.

ಕೇಳಿ ವಿಶುದ್ಧಾತ್ಮನಾದ ಮಹೇಂದ್ರನು ಮುಖಕಂದಿದವನಾದನು. ನೋಡಿ ಕಲ್ಯಾಣಿಯು ಇನ್ನು ತಡೆಯಲಾರದೆ ಹೋಗಿ, ಇವಳು ಜೀವಾನಂದ ಗೋಸ್ವಾಮಿಯ ಧರ್ಮಪತ್ನಿಯಾದ ಶಾಂತಿದೇವಿಯೆಂದಳು.

ಒಂದು ಮುಹೂರ್ತದಮಟ್ಟಿಗೆ ಮಹೇಂದ್ರನ ಮುಖವು ಪ್ರಫುಲ್ಲವಾಯಿತು. ಪುನಃ ಆ ಮುಖದಲ್ಲಿ ಅಂಧಕಾರವು ಕವಿತುಕೊಂಡಿತು. ಕಲ್ಯಾಣಿಯು ತಿಳಿದವಳಾಗಿ ಇವಳು ಬ್ರಹ್ಮಚಾರಿಣೀ ಎಂದಳು.

ಮಹೇಂದ್ರನು ವಿಷಣ್ಣನಾಗಿ ಇರಬಹುದು, ಆದರೂ ಪ್ರಾಯಶ್ಚಿತ್ತವಿದೆ ಎಂದು ಹೇಳಿ ಶಾಂತಿಯ ಮುಖವನ್ನು ನೋಡುತ್ತ ಪ್ರಾಯಶ್ಚಿತ್ತವೇನು? ತಮಗೆ ಗೊತ್ತುಂಟೆ? ಎಂದನು.

ಶಾಂತಿ—ಮರಣ, ಯಾವ ಸಂತಾನನಿಗೆ ತಾನೇ ಗೊತ್ತಿಲ್ಲ? ಮುಂದಿನ ಮಾಘಶುದ್ಧ ಪೂರ್ಣಿಮಾದಲ್ಲಿ ಆ ಪ್ರಾಯಶ್ಚಿತ್ತವಾಗಬೇಕೆಂದು ನಿಶ್ಚಿತವಾಗಿದೆ, ತಾವು ನಿಶ್ಚಿಂತರಾಗಿರೋಣವಾಗಲಿ.

ಈ ಮಾತು ಹೇಳಿ ಶಾಂತಿಯು ಅಲ್ಲಿಂದ ಹೊರಟುಹೋದಳು. ಮಹೇಂದ್ರನೂ ಕಲ್ಯಾಣಿಯೂ ವಜ್ರಾಹತರಾದವರ ಹಾಗಾಗಿ ನಿಂತುಕೊಂಡಿದ್ದರು.

## ಹದಿನಾರನೆಯ ಪರಿಚ್ಛೇದ

ವೀರಭೂಮಿಯು ಮುಸಲಮಾನರ ಕೈಬಿಟ್ಟುಹೋಯಿತು. ಮುಸಲಮಾನರು ಯಾರೂ ಈ ಮಾತು ಹೇಳುವುದಿಲ್ಲ, ಒಪ್ಪುವುದೂ ಇಲ್ಲ, ಮನಸ್ಸಿನಲ್ಲಿ ಕಣ್ಣಿಟ್ಟುಕೊಂಡು ಕೆಲವು ತುಂಟರು ಬಹಳ ಅವಾಂತರಮಾಡುತ್ತಾರೆ. ತಹ ಬಂದಿಗೆ ತರುತ್ತೇವೆಂದು ಹೇಳುತ್ತಾರೆ. ಹೀಗೆ ಬಹಳ ದಿನ ಹೇಳಲಾಗದೇ ಹೋಯಿತು. ಈ ಸಮಯದಲ್ಲಿ ಭಗವಂತನ ಇಷ್ಟದಮೇಲೆ ಕಲಕತ್ತೆಯಲ್ಲಿ ವಾರನ್ ಹೇಸ್ಟಿಂಗ್ಸನು ಗೌರ್ನರ್ ಜನರಲಾಗಿದ್ದನು. ವಾರನ್ ಹೇಸ್ಟಿಂಗ್ಸ್ ಕಣ್ಣು ಮುಚ್ಚಿಕೊಂಡಿರುವ ಮನುಷ್ಯನಾಗಿರಲಿಲ್ಲ—ಅವನಿಗೆ ಆ ವಿದ್ಯೆಯು ತಿಳಿದಿದ್ದರೆ ಈ ಕಾಲದಲ್ಲಿ ಭಾರತಖಂಡದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ಎಲ್ಲಿರುತಲಿತ್ತು? ಗೌಣ ವಿಲ್ಲದೆ ಮುಖ್ಯಾಧಿಕಾರಿಯಾಗಿ ವೀರಭೂಮಿಯ ಶಾಸನಾರ್ಥವಾಗಿ ಮೇಜರು ಊಡು ಎಂಬ ಎರಡನೇ ಸೇನಾಪತಿಯು ಹೊಸ ಸೇನೆಯನ್ನು ತೆಗದುಕೊಂಡು ಬಂದನು.*

ಊಡು ನೋಡಲಾಗಿ ಅವನಿಗೆ ಇದು ಇರೋಪಿಯನ್‌ರ ಯುದ್ಧವಲ್ಲವೆಂದು ಗೊತ್ತಾಯಿತು. ಶತ್ರುಗಳಿಗೆ ಸೈನ್ಯವಿಲ್ಲ, ರಾಜಧಾನಿಯಿಲ್ಲ. ಕೋಟೆಗಳಿಲ್ಲ, ಆದರೆ ಎಲ್ಲಾ ಅವರಧೀನವಾಗಿಯೇ ಇತ್ತೆಂದು ಗೊತ್ತಾಯಿತು. ಯಾವ ದಿನ ಎಲ್ಲಿ ಬ್ರಿಟಿಷ್ ಸೇನೆಯ ಶಿಬಿರವೋ ಆ ದಿನಮಟ್ಟಿಗೆ ಆ ಸ್ಥಳವು ಬ್ರಿಟಿಷ್ ಸೇನೆಯ ಅಧೀನ—ಮಾರನೇ ದಿನ ಬ್ರಿಟಿಷ್ ಸೇನೆಯು ಆ ಸ್ಥಳವನ್ನು ಬಿಟ್ಟು ಹೊರಟು ಹೋಗಿಬಿಟ್ಟರೆ ನಾಲ್ಕುದಿಕ್ಕುಗಳಲ್ಲಿಯೂ 'ವಂದೇ ಮಾತರಂ' ಹಾಡಲ್ಪಡುವುದು. ಎಲ್ಲಿಂದ ಇರಿವೇ ಸಾಲಿಟ್ಟಹಾಗೆ ಒಂದೊಂದೇ ರಾತ್ರಿಯಲ್ಲಿ ಇಷ್ಟುಮಂದಿ ಹೊರಟು ಬಂದು ಇಂಗ್ಲೀಷರ ಕೈವಶವಾದ ಗ್ರಾಮಗಳನ್ನು ಹೇಗೆ ಸುಟ್ಟುಹಾಕುವರೋ, ಅಲ್ಪ ಸಂಖ್ಯೆಯುಳ್ಳ ಬ್ರಿಟಿಷ್ ಸೇನೆಯು ಸಿಕ್ಕಿದರೆ ಹೇಗೆ ಆ ಕೂಡಲೆ ಅದನ್ನು ಧ್ವಂಸಮಾಡುವರೋ ಅದು ಯಾವದನ್ನೂ ಊಡು ಸಾಹೇಬ ಗೊತ್ತುಮಾಡಿಕೊಳ್ಳಲಾರದೆ ಹೋದನು. ಊಡು ಹೀಗೇ ವಿಚಾರಿಸಿಕೊಂಡಿದ್ದು ಕಡೆಗೆ ಪದಚಿಹ್ನ ಗ್ರಾಮದಲ್ಲಿ ಇವರು ಕೋಟೆಯನ್ನು ಕಟ್ಟಿಕೊಂಡು ಅಲ್ಲಿಯೇ ತಮ್ಮ ಆಯುಧಶಾಲೆಯನ್ನೂ ಧನಾಗಾರವನ್ನೂ ಮಾಡಿಕೊಂಡಿದ್ದಾರೆಂದು ಗೊತ್ತಾಯಿತು. ಆದಕಾರಣ ಊಡುಸಾಹೇಬನು ಆ ದುರ್ಗವನ್ನು ಜಯಿಸತಕ್ಕದ್ದೆಂದು ಸ್ಥಿರಮಾಡಿಕೊಂಡನು.

ಪದಚಿಹ್ನದಲ್ಲಿದ್ದ ಸಂತಾನರ ಸಂಖ್ಯೆಯನ್ನು ಗೂಢಚಾರರಿಂದ ಗೊತ್ತುಮಾಡಿಕೊಂಡು ಕೂಡ್ಲೇ ಆ ದುರ್ಗವನ್ನು ಆಕ್ರಮಣಮಾಡುವುದು ಸರಿಯಲ್ಲವೆಂದು

* ಚರಿತ್ರೆಯಲ್ಲಿ ಮೇಜರ್ ಎಡ್ವರ್ಡ್ಸ್ ಎಂದು ಬರೆದಿದೆ. ಉಪನ್ಯಾಸದಲಿ ಊಡೆಂದು ಹೆಸರು ತಪ್ಪಾಗಿದ್ದರೆ ದೋಷವೇನು?

ತಿಳಿದುಕೊಂಡನು. ಮನಸ್ಸಿನಲ್ಲಿ ಒಂದಪೂರ್ವವಾದ ಕೌಶಲವನ್ನು ಏರ್ಪಾಡು ಮಾಡಿಕೊಂಡನು.

ಮಾಘಮಾಸದ ಪೂರ್ಣಿಮೆಯು ಮುಂದೆ ಇತ್ತು. ಆಗ ಅವನ ಶಿಬಿರಕ್ಕೆ ಸಮೀಪವಾದ ಕೇಂದುಬಿಲ್ಲವೆಂಬ ಗ್ರಾಮದಲ್ಲಿ ಒಂದು ಗೋಸಾಯಿಗಳ ಪರಿಶೆ ಯಾಗುತ್ತದೆ. ಈ ಸಲದ ಪರಿಶೆಯಲ್ಲಿ ಬಹಳ ಗದ್ದಲವಾಗಬಹುದು. ಅಲ್ಲಿ ಸಾಮಾನ್ಯವಾಗಿ ಪರಿಶೆಗೆ ಒಂದು ಲಕ್ಷ ಪ್ರಜೆ ಸೇರುವುದು. ಈಸಲ ವೈಷ್ಣವ ರಾಜ್ಯವಾಗಿರುವದ್ದರಿಂದ ವೈಷ್ಣವರು ಪರಿಶೆಗೆ ಬಂದು ಬಹಳ ಸಂಭ್ರಮಮಾಡ ಬೇಕೆಂದು ಯೋಚಿಸಿಕೊಂಡಿದ್ದರಾದ್ದರಿಂದ ಸಂತಾನರೆಲ್ಲರೂ ಕೇಂದುಬಿಲ್ಲ ಗ್ರಾಮಕ್ಕೆ ಬಂದು ಸೇರುವ ಸಂಭವವಿತ್ತು. ಮೇಜರು ಊಡುಸಾಹೇಬನು ಪದಚಿಹ್ನ ಗ್ರಾಮದಲ್ಲಿರುವ ಧನಾಗಾರದ ರಕ್ಷಕರಾದವರೆಲ್ಲರೂ ಪರಿಶೆಗೆ ಬರುವ ಸಂಭವವಿರುವದ್ದರಿಂದ ಆ ಸಮಯ ನೋಡಿಕೊಂಡುಹೋಗಿ ಪದಚಿಹ್ನವನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಯೋಚಿಸಿಕೊಂಡನು.

ಊಡುಸಾಹೇಬನು ಮನಸ್ಸಿನಲ್ಲಿ ಈ ಅಭಿಪ್ರಾಯವನ್ನು ಮಾಡಿಕೊಂಡು ಹೊರಕ್ಕೆ ಪರಿಶೇ ದಿನ ಕೇಂದುಬಿಲ್ಲ ಗ್ರಾಮವನ್ನು ಆಕ್ರಮಣಮಾಡುವುದಾಗಿಯೂ ಒಂದೇ ದಿನ ಒಂದೇ ಸ್ಥಳದಲ್ಲಿ ಶತ್ರುಗಳನೆಲ್ಲ ನಿಶ್ಶೇಷಮಾಡಿಬಿಡುವುದಾಗಿಯೂ ವೈಷ್ಣವರ ಪರಿಶೆಯನ್ನು ಆಗಗೊಡಿಸದೆ ಮಾಡುವುದಾಗಿಯೂ ಪ್ರಸಿದ್ಧಪಡಿ ಸಿದನು.

ಈ ಸಮಾಚಾರವು ಗ್ರಾಮ ಗ್ರಾಮದಲ್ಲಿಯೂ ಪ್ರಚಾರಗೊಂಡಿತು. ಆಗ ಎಲ್ಲಿ ಸಂತಾನ ಸಂಪ್ರದಾಯದವರಿದ್ದರೂ ಅವರೆಲ್ಲರೂ ಕೂಡಲೆ ಆಯುಧಪಾಣಿ ಗಳಾಗಿ ಕೇಂದುಬಿಲ್ಲಗ್ರಾಮದ ಕಡೆಗೆ ಪರಿಶೆಯನ್ನು ಆಗಮಾಡಿಸುವುದಕ್ಕೆ ಹೊರಟರು. ಸಕಲ ಸಂತಾನರೂ ಮಾಘ ಪೂರ್ಣಿಮಾ ದಿನ ಕೇಂದುಬಿಲ್ಲ ಗ್ರಾಮದಲ್ಲಿ ಸೇರಿದರು. ಊಡುಸಾಹೇಬನು ಯೋಚಿಸಿದಹಾಗೆಯೇ ಆಯಿತು. ಇಂಗ್ಲೀಷರ ಅದೃಷ್ಟಕ್ಕೆ ಸರಿಯಾಗಿ ಮಹೇಂದ್ರನೂ ಈ ಮೋಸಕ್ಕೊಳಗಾದನು. ಮಹೇಂದ್ರನು ಪದಚಿಹ್ನಗ್ರಾಮದಲ್ಲಿ ಸ್ವಲ್ಪ ಸಂಖ್ಯೆಯನ್ನುಳ್ಳ ಸೈನ್ಯವಿಟ್ಟು ಬಹು ಭಾಗದ ಸೈನ್ಯವನ್ನು ತೆಗೆದುಕೊಂಡು ಕೇಂದುಬಿಲ್ಲ ಗ್ರಾಮಕ್ಕೆ ಹೊರಟನು.

ಇದೆಲ್ಲ ನಡೆಯುವುದಕ್ಕೆ ಮೊದಲೇ ಜೀವಾನಂದನೂ ಶಾಂತಿಯೂ ಸಹ ಪದಚಿಹ್ನವನ್ನು ಬಿಟ್ಟು ಹೊರಟುಹೋಗಿದ್ದರು. ಆಗ ಯುದ್ಧದ ಮಾತೇನೂ ಇರಲಿಲ್ಲ. ಮಾಘ ಪೂರ್ಣಿಮಾ ಪುಣ್ಯದಿನದಲ್ಲಿ ಶುಭಮುಹೂರ್ತದಲ್ಲಿ ಜಯದೇವ ಗೋಸ್ವಾಮಿಯ ತೀರ್ಥವಾದ ಅಜಯ ನದಿಯ ಪವಿತ್ರವಾದ ಜಲದಲ್ಲಿ ಆತ್ಮ ಸಮರ್ಪಣೆಯಿಂದ ಪ್ರಾಣವಿಸರ್ಜನೆಯನ್ನು ಮಾಡಿ ಪ್ರತಿಜ್ಞಾ ಭಂಗದ ಮಹಾ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂದು ಅವರಿಬ್ಬರ ಅಭಿಸಂಧಿ ಯಾಗಿತ್ತು. ಆದರೆ ದಾರಿಯಲ್ಲಿ ಹೋಗುತ್ತ, ಕೇಂದುಬಿಲ್ಲ ಗ್ರಾಮದಲ್ಲಿ ಸೇರುವ

ಸಂತಾನರ ಸಂಗಡ ರಾಜಸೈನ್ಯದವರ ಮಹಾ ಯುದ್ಧವಾಗುವುದೆಂದು ಕೇಳಿದರು. ಜೀವಾನಂದನು, ಹಾಗಾದರೆ ಯುದ್ಧದಲ್ಲಿ ಸಾಯೋಣ, ನಡೆ ಎಂದನು.

ಅವರು ಶೀಘ್ರಶೀಘ್ರವಾಗಿ ಹೊರಟರು. ಮಾರ್ಗದಲ್ಲಿ ಒಂದು ಗುಡ್ಡದ ಮೇಲೆ ಹೋಗುತ್ತಿದ್ದರು. ಅಲ್ಲಿಂದ ವೀರದಂಪತಿಗಳಿಬ್ಬರೂ ಗುಡ್ಡದ ಕೆಳಗೆ ಸ್ವಲ್ಪ ದೂರದಲ್ಲಿ ಇಂಗ್ಲೀಷರ ಶಿಬಿರವಿರುವುದನ್ನು ನೋಡಿದರು. ಶಾಂತಿಯು ಸಾಯುವ ಮಾತು ಈಗ ಹಾಗಿರಲಿ, 'ವಂದೇ ಮಾತರಂ' ಹೇಳೆಂದಳು.

---

## ಹದಿನೇಳನೆಯ ಪರಿಚ್ಛೇದ

ಆಗ ಅವರಿಬ್ಬರೂ ಕಿವಿಯಲ್ಲಿ ಏನೋ ಮಾತುನಾಡಿಕೊಂಡರು. ಮಾತುನಾಡಿಕೊಂಡು ಜೀವಾನಂದನು ಒಂದು ವನದಲ್ಲಿ ಔತುಕೊಂಡನು. ಶಾಂತಿಯು ಮತ್ತೊಂದು ವನದಲ್ಲಿ ಪ್ರವೇಶಮಾಡಿ ಅಲ್ಲಿ ಒಂದು ಅದ್ಭುತವಾದ ರಹಸ್ಯವಾದ ಕಾರ್ಯದಲ್ಲಿ ಪ್ರವೃತ್ತಳಾದಳು.

ಶಾಂತಿಯು ಸಾಯುವುದಕ್ಕೆ ಹೋಗುತ್ತಿದ್ದಳು ; ಆದರೆ ಸಾಯುವ ಕಾಲದಲ್ಲಿ ಹೆಂಗಸರುಡುಪನ್ನು ಧಾರಣೆ ಮಾಡಬೇಕೆಂದು ಸ್ಥಿರಮಾಡಿಕೊಂಡಿದ್ದಳು. ಅವಳ ಪುರುಷ ವೇಷವು ಮೋಸಗೊಳಿಸತಕ್ಕದ್ದೆಂದು ಮಹೇಂದ್ರನು ಹೇಳಿದ್ದನು. ಮೋಸಮಾಡಿ ಸಾಯುವುದು ಸರಿಯಲ್ಲ. ಆದ್ದರಿಂದ ಸಂಗಡ ಒಂದು ಬಿಳಿ ಸೀರೆಯನ್ನು ತಂದಿದ್ದಳು. ಅದರ ಸಂಗಡ ಬೇಕಾದ ಮಿಕ್ಕ ಸಾಮಾನೂ ಇತ್ತು. ನವೀನಾನಂದನ ವೇಷವನ್ನು ತೆಗೆದು ಬೇರೇ ವೇಷದಲ್ಲಿ ಪ್ರವೃತ್ತಳಾದಳು.

ಮುಖಕ್ಕೆ ಎಣ್ಣೆಗೆಂಪು ಕುಂಕುಮವನ್ನು ಹಚ್ಚಿಕೊಂಡು ಅದರ ಮಧ್ಯೆ ಬೆರಳುನಿಂದ ಊರ್ಧ್ವಪುಂಡ್ರದಹಾಗೆ ಮಾಡಿಕೊಂಡು ಕೈಯಲ್ಲಿ ಒಂದು ಸಾರಂಗವನ್ನು ಪಿಡಿದು ಶಾಂತಿಯು ವೈಷ್ಣವೀ ವೇಷದಿಂದ ಇಂಗ್ಲೀಷು ಶಿಬಿರಕ್ಕೆ ಹೋದಳು. ನೋಡಿ ಸಿಪಾಯಿಗಳು ಬಹಳ ಮೋಹಿತರಾದರು. ಅವಳ ಕಂಠವನ್ನು ಕೇಳಿ ಕೆಲವರು ಲಾವಣಿ ಹಾಡೆಂದರು, ಕೆಲವರು ಕೇತಾರಗೌಳಿ ಹಾಡೆಂದರು, ಕೆಲವರು ಕೀರ್ತನೆ ಹಾಡೆಂದು, ಕೆಲವರು ಕೃಷ್ಣವಿಷಯ, ಕೆಲವರು ಶಾಮಾವಿಷಯ, ಹೀಗೆ ನಾನಾವಿಧವಾಗಿ ಫರ್ಮಾಯಿಷಿಗಳನೆಲ್ಲ ಹೇಳಿಸಿ, ಅಕ್ಕಿ, ಬೇಳೆ, ದುಡ್ಡು, ಕಾಸು, ಸೀರೆ, ಬಟ್ಟೆ ಮುಂತಾದುದೆಲ್ಲ ಕೊಟ್ಟರು. ವೈಷ್ಣವಿಯು ಶಿಬಿರದ ಸ್ಥಿತಿಯನ್ನೆಲ್ಲ ಕಣ್ಣಾರ ನೋಡಿಕೊಂಡು ಹೊರಟಳು. ಆಗ ಸಿಪಾಯಿಗಳು ತಿರುಗಿ ಯಾವಾಗ ಬರುತ್ತೀ? ಎಂದು ಕೇಳಿದರು. ವೈಷ್ಣವಿಯು ಗೊತ್ತಿಲ್ಲ, ನಾನಿರುವುದು ದೂರವೆಂದಳು. ಎಷ್ಟು ದೂರವೆಂದು ಕೇಳಿದ್ದಕ್ಕೆ ಪದಚಿಹ್ನದಲ್ಲಿದ್ದೇನೆಂದಳು. ಆ ದಿನ ಮೇಜರು ಊಡುಸಾಹೇಬನು ಪದಚಿಹ್ನ ಗ್ರಾಮ ವಿಷಯದಲ್ಲಿ ಕೆಲಸಂಗತಿಗಳನ್ನು ವಿಚಾರಮಾಡುತಲಿದ್ದನು. ಇದು

ಒಬ್ಬ ಸಿಪಾಯಿಗೆ ತಿಳಿದಿದ್ದು, ವೈಷ್ಣವಿಯನ್ನು ಕೇಪ್ಟನ್ ಬಳಿಗೆ ಕರೆದುಕೊಂಡು ಹೋದನು. ಕೇಪ್ಟನ್ ಸಾಹೇಬನು ಅವಳನ್ನು ಮೇಜರು ಊಡುಸಾಹೇಬನ ಹತ್ತಿರ ಕರೆದುಕೊಂಡು ಹೋದನು. ಮೇಜರು ಊಡುಸಾಹೇಬನ ಹತ್ತಿರ ಹೋಗಿ ವೈಷ್ಣವಿಯು ಮಧುರವಾದ ನಗುಮುಖಳಾಗಿ ಮರ್ಮಭೇದಿಯಾದ ಕಟಾಕ್ಷವನ್ನೆಸೆದುಹಾಕಿ ಊಡುಸಾಹೇಬನ ತಲೆಯು ತಿರುಗುವಹಾಗೆ ಮಾಡಿದಳು. ಕೈಲಿದ್ದ ಖಂಜನೀಯನ್ನು ಹೊಡಿಯುತ್ತ ಮಾಳವರಾಗದಲ್ಲಿ ರೂಪಕತಾಳದಿಂದ ಹಾಡಿದಳು :—

"ಮ್ಲೇಂಛ ನಿವಹ ನಿಧನೆ ಕಲಯಸಿ ಕರವಾಲಂ" ಎಂದು—

ಊಡು—ನಿನ್ನ ಮನೆ ಎಲ್ಲಿದೆ, ಬೀಬಿ?

ಬೀಬಿ—ನಾನು ಬೀಬಿ ಅಲ್ಲ, ವೈಷ್ಣವಿ. ಮನೆ ಪದಚಿಹ್ನದಲ್ಲಿದೆ.

ಊಡು—Well, that is Padsin! Padsin, is it? ಅಲ್ಲಿ ಒಂದು ಗರ ಇದೆಯೆ?

ವೈಷ್ಣವಿ—ಘರ್ (ಮನೆ)? ಎಷ್ಟೋ ಮನೆ ಇದೆ.

ಊಡು—ಗರ ಅಲ್ಲ, ಗರ ಅಲ್ಲ, ಗರ ಅಲ್ಲ.

ವೈಷ್ಣವಿ—ನಿನ್ನ ಮನಸ್ಸಿನ ಮಾತು ಗೊತ್ತಾಯಿತು. ಗಡೊ (ಕೋಟೆ)?

ಊಡು—ಎಸ್, ಎಸ್, ಗರ! ಗರ! ಅದೆಯೊ?

ವೈಷ್ಣವಿ—ಗಡ ಇದೆ. ಭಾರೀ ಕೋಟೆ.

ಊಡು—ಎಷ್ಟು ಜನ?

ವೈಷ್ಣವಿ—ಕೋಟೆಯಲ್ಲಿ ಎಷ್ಟು ಜನ ಇದ್ದಾರೆ? ೨೦–೨೫ ಸಾವಿರ ಜನ.

ಊಡು—ನಾನ್ಸೆನ್ಸ್. ಒಂದು ಕೋಟೆಯಲ್ಲಿ ೩–೪ ಸಾವಿರ ಜನವಿರುವುದಕ್ಕೆ ಸಾಕು. ಇನ್ನೂ ಇದ್ದಾರೊ? ಹೊರಟುಹೋದರೊ?

ಶಾಂತಿ—ಹೋಗುವುದೆಲ್ಲಿಗೆ?

ಊಡು—ಪರಿಶೆಗೆ. ಏನು ಹೇಳುತ್ತಾರೆ. ಕಿಂಡಲ?

ಶಾಂತಿ—ಕೆಂದುಲಿ. ಕೆಂದುಲಿಗೆ ಅವರು ಹೋಗುವುದಿಲ್ಲ.

ಊಡು—ನೀನು ಅಲ್ಲಿಂದ ಯಾವಾಗ ಬಂದೆ?

ಶಾಂತಿ—ನೆನ್ನೇರಾತ್ರಿ ಬಂದೆನು.

ಊಡು—ಅವರು ಈ ಹೊತ್ತು ಹೊರಟಿದ್ದಾರೆ.

ಶಾಂತಿಯು ಮನಸ್ಸಿನಲ್ಲಿ ನಿನ್ನ ಶ್ರಾದ್ಧ ಮಾಡಿಸದಿದ್ದರೆ ನನ್ನ ರಸಿಕತ್ವವೆಲ್ಲ ವ್ಯರ್ಥವಾದೀತೆಂದಂದುಕೊಂಡು, ಪ್ರಕಾಶ್ಯವಾಗಿ, ಸಾಹೇಬ! ಅದಿರಬಹುದು, ಈ ಹೊತ್ತು ಅವರು ಹೊರಗೆ ಹೊರಟಿರಬಹುದು. ಅಷ್ಟು ಸಮಾಚಾರ ನನಗೆ ತಿಳಿಯದು. ವೈಷ್ಣವಿ ನಾನು, ಅಲ್ಲಲ್ಲಿ ಹಾಡುವುದು, ಭಿಕ್ಷೆಗಿಕ್ಷೆ ಮಾಡಿಕೊಂಡು ತಿನ್ನುವವಳು. ಅಷ್ಟು ಸಮಾಚಾರ ನನಗೇತಕ್ಕೆ? ಹಾಡಿಹಾಡಿ ಗಂಟ್ಲು

ಒಣಗಿತು, ಏನಾದರೂ ಕೊಟ್ಟರೆ ತೆಗೆದುಕೊಂಡು ಹೋಗುತ್ತೇನೆ. ಸ್ವಲ್ಪ ಹೆಚ್ಚಾಗಿ ಕೊಟ್ಟರೆ ನಾಡಿದ್ದು ಬರುತ್ತೇನೆ. ಬಂದು ಹೇಳುತ್ತೇನೆ ಎಂದಳು.

ಊಡುಸಾಹೇಬನು ಒಂದು ರೂಪಾಯಿಯನ್ನು ತೆಗೆದು ಬಿಸಾಟು, ನಾಡಿದ್ದಲ್ಲ. ಬೀಬಿ ಎಂದನು.

ಶಾಂತಿ—ದೂರ, ಮಗನೆ! ವೈಷ್ಣವಿ ಎಂದು ಹೇಳು. ಬೀಬಿ ಅನ್ನಬೇಡ.

ಊಡು—ನಾಡಿದ್ದಲ್ಲ, ಈಹೊತ್ತು ರಾತ್ರಿಗೆ ನನಗೆ ಸಮಾಚಾರ ಬೇಕು.

ಶಾಂತಿ—ಒಂದು ಬುಡ್ಡಿ ಸಾರಾಯಿ ಹೊಡದು, ಬಂದೂಕು ತಲೆದಿಂಬಿಗೆ ಇಟ್ಟುಕೊಂಡು ನಿದ್ದೆಹೋಗು. ನಾನು ಈ ದಿನ ಹತ್ತು ಹರಿದಾರಿ ಹೋಗಿ ಒರಬೇಕಲ್ಲವೆ? ಅದೂ ಬಂದು ನಿನಗೆ ಸಮಾಚಾರ ಕೊಡುವುದಕ್ಕೆ—

ಏನು ಬೊಗಳುತ್ತೀಯೊ, ಹನುಮಂತರಾಯ!

ಊಡು—ಹನುಮಂತರಾಯ ಎಂದು ಯಾರಿಗೆ ಹೇಳುತ್ತೀ?

ಶಾಂತಿ—ಅವನು ದೊಡ್ಡ ವೀರಪುರುಷ. ಭಾರಿ ಜಡರಲ್.

ಊಡು—ಓ Great General! ಅವನಿಗಿಂತ ನಾನು ಶಕ್ತನಾಗಿದ್ದೇನೆ. ಕ್ಲೈವಿನ ಹಾಗೆ. ಆದರೆ ನನಗೆ ಈ ಹೊತ್ತೇ ಸಮಾಚಾರ ಬೇಕು. ನೂರು ರೂಪಾಯಿ ಇನಾಂ ಕೊಡುವೆನು.

ಶಾಂತಿ—ನೂರು ಕೊಡು. ಸಾವಿರ ಕೊಡು. ಇಪ್ಪತ್ತು ಹರದಾರಿ ನಡೆಯುವುದಕ್ಕೆ ಬೇರೇ ಆಗುವುದಿಲ್ಲ.

ಊಡು—ಕುದುರೆ ಮೇಲೆ?

ಶಾಂತಿ—ಕುದುರೆ ಮೇಲೆ ಹತ್ತುವುದಕ್ಕೆ ಬಂದಿದ್ದರೆ ಈ ವೇಷದಲ್ಲಿ ತಬಲಾ ತೆಗೆದುಕೊಂಡು ಬಂದು ನಿನ್ನಲ್ಲಿ ಭಿಕ್ಷಬೇಡುತಲಿದ್ದೆನೆ?

ಊಡು—ಯಾರಾದರೂ ಜೀನು ಹಾಕಿ ಕೂಡಿಸಿಕೊಂಡರೆ?

ಶಾಂತಿ—ಇನ್ನೊಬ್ಬ ಹಿಡಿದುಕೊಂಡೆ? ನನಗೆ ಲಜ್ಜೆ ಇಲ್ಲವೆ?

ಊಡು—ಕಷ್ಟವೇನು? ಐನೂರು ರೂಪಾಯಿ ಕೊಡುವೆನು.

ಶಾಂತಿ—ಯಾರು ಕರೆದುಕೊಂಡು ಹೋಗುವವರು? ನೀನೇ ಸ್ವಂತವಾಗಿ ಹೊರಡುವಿಯಾ?

ಊಡುಸಾಹೇಬನು, ಅಂಗುಳಿನಿರ್ದೇಶದಿಂದ ಇದಿರಿಗೆ ನಿಂತುಕೊಂಡಿದ್ದ ಲಿಂಡ್ಲೆ ಎಂಬ ಒಬ್ಬ ಯೌವನ ಪುರುಷನಾದ ಎನ್‌ಸೈನನ್ನು (Ensign) ತೋರಿಸಿ, ಅವನನ್ನು ಕುರಿತು, ಲಿಂಡ್ಲೆ! ನೀನು ಹೋಗುವಿಯಾ? ಎಂದು ಕೇಳಿದನು. ಶಾಂತಿಯ ರೂಪ ಯೌವನ ಲಾವಣ್ಯಾದಿಗಳನ್ನು ನೋಡಿ, ಬಹಳ ಸಂತೋಷದಿಂದ, ಎಂದನು.

ಆಗ ಒಂದು ಭಾರಿ ಅರಬ್ಬಿ ಕುದುರೆಯು ಲಗಾಮು ಜೀನು ಹಾಕಿ ತಯಾರಾಗಿ ಬಂದು ನಿಂತಿತು. ಶಾಂತಿಯನ್ನು ಹಿಡಿದೆತ್ತಿ ಕುದುರೆಯ ಮೇಲೆ ಕೂಡಿಸು

ವುದಕ್ಕೆ ಹೋದನು. ಶಾಂತಿಯು ಛಿ! ನಾಯಿ! ಇಷ್ಟು ಜನರ ಇದಿರಿಗೆ ? ನನಗೆ ಲಜ್ಜೆಯೇ ಇಲ್ಲವೆ! ಮುಂದೆ ಹೋಗು, ಎತ್ತರವಾದ ಕಡೆಯಲ್ಲಿ ಹತ್ತಿ ಕೊಳ್ಳುತ್ತೇನೆಂದಳು.

ಲಿಂಡ್ಲೆಯು ಕುದುರೆಯನ್ನು ನಡೆಸಿಕೊಂಡು ಹೋದನು. ಶಾಂತಿಯು ಹಿಂದೆ ಹೋದಳು. ಹೀಗೆ ಇಬ್ಬರೂ ಶಿಬಿರವನ್ನು ಬಿಟ್ಟುಹೋದರು.

ಶಿಬಿರವನ್ನು ಬಿಟ್ಟು ನಿರ್ಜನವಾದ ಪ್ರಾಂತರಕ್ಕೆ ಹೋದಮೇಲೆ ಶಾಂತಿಯು ಲಿಂಡ್ಲೆಯ ಕಾಲಿನಮೇಲೆ ಕಾಲಿಟ್ಟುಕೊಂಡು ಒಂದು ಹಾರಿನಿಂದ ಕುದುರೆಯ ಮೇಲೆ ಹತ್ತಿಕೊಂಡಳು. ಲಿಂಡ್ಲೆಯು ನಕ್ಕು, ನೀನು ಪಕ್ಕಾ ಸವಾರಳೆಂದನು.

ಶಾಂತಿಯು ನಾನು ಇಷ್ಟು ಪಕ್ಕಾ ಸವಾರಳಾದುದರಿಂದ ನಿನ್ನ ಸಂಗಡ ಹತ್ತುವುದಕ್ಕೆ ಲಜ್ಜೆಯುಂಟಾಯಿತು. ಛಿ! ಛಿ! ರಿಕಾಬಿನಲ್ಲಿ ಕಾಲಿಟ್ಟುಕೊಂಡು ಕುದುರೆ ಹತ್ತುವುದೆ! ಎಂದಳು.

ಹೆಮ್ಮೆಗೋಸ್ಕರ ಲಿಂಡ್ಲೆಯು ಒಂದು ಸಲ ರಿಕಾಬಿನಿಂದ ಕಾಲು ತೆಗದನು. ಶಾಂತಿಯು ಇಂತಹ ನಿರ್ಬೋಧನಾದ ಇಂಗ್ಲೀಷಿನವನ ಕುತ್ತಿಗೆಗೆ ಕೈಹಾಕಿ ಕುದುರೆಯಿಂದ ತಳ್ಳಿಬಿಟ್ಟು ಕುದುರೆಯ ಮೇಲೆ ಸರಿಯಾಗಿ ಕುಳಿತುಕೊಂಡು ಕಾಲಿನಿಂದ ಹೊಟ್ಟೆಗೆ ಒಂದು ಗುದ್ದು ಕೊಟ್ಟು ವಾಯುವೇಗದಿಂದ ಅರಬ್ಬಿ ಕುದುರೆಯನ್ನು ದೌಡಾಯಿಸಿಕೊಂಡು ಹೊರಟುಹೋದಳು.

ಶಾಂತಿಯು ನಾಲ್ಕು ವರುಷಗಳು ಸಂತಾನರ ಸೈನ್ಯದ ಜತೆಯಲ್ಲಿ ತಿರುಗಿ ತಿರುಗಿ ಕುದುರೆಯ ಸವಾರಿಯನ್ನು ಕಲಿತುಕೊಂಡಿದ್ದಳು. ಹಾಗಿಲ್ಲದಿದ್ದರೆ ಜೀವಾನಂದನ ಸಂಗಡ ಹೇಗೆತಾನೇ ವಾಸಮಾಡಲು ಸಾಧ್ಯವಾಗಿದ್ದಿತು ? ಲಿಂಡ್ಲೆಯು ಕಾಲುಮುರಿದು ಬಿದ್ದಿದ್ದನು. ಶಾಂತಿಯು ವಾಯುವೇಗದಿಂದ ಕುದುರೆಯನ್ನು ಓಡಿಸಿಕೊಂಡು ಹೋದಳು.

ಶಾಂತಿಯು ಜೀವಾನಂದನು ಔತುಕೊಂಡಿದ್ದ ಅರಣ್ಯಕ್ಕೆ ಹೋಗಿ ಅವನಿಗೆ ಎಲ್ಲ ಸಮಾಚಾರವನ್ನು ತಿಳಿಸಿದಳು. ಅವನು ಹಾಗಾದರೆ ನಾನು ಶೀಘ್ರವಾಗಿ ಹೋಗಿ ಮಹೇಂದ್ರನಿಗೆ ಎಚ್ಚರಿಸುತ್ತೇನೆ; ನೀನು ಕೇಂದುಬಿಲ್ಲ ಗ್ರಾಮಕ್ಕೆ ಹೋಗಿ ಸತ್ಯಾನಂದನಿಗೆ ಸಮಾಚಾರವನ್ನು ಕೊಡು, ನೀನು ಕುದುರೆಯ ಮೇಲೆ ಹೋಗು—ಪ್ರಭುಗಳಿಗೆ ಶೀಘ್ರವಾಗಿ ಸಮಾಚಾರವು ಸೇರಬೇಕು—ಎಂದು ಹೇಳಿದನು. ಆಗವರು ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಓಡಿದರು. ಶಾಂತಿಯು ಪುನಃ ನವೀನಾನಂದಳಾದಳೆಂದು ಹೇಳಬೇಕಾದ ಅವಶ್ಯವಿಲ್ಲ.

———

## ಹದಿನೆಂಟನೆಯ ಪರಿಚ್ಛೇದ

ಊಡು ಪಕ್ಕಾ ಇಂಗ್ಲೀಷು—ಸಾಮಾನ್ಯನಲ್ಲ. ಅಲ್ಲಲ್ಲಿ ಜನಗಳನ್ನು ಇಟ್ಟಿದ್ದನು. ಶೀಘ್ರವಾಗಿ ಆ ವೈಷ್ಣವಿಯು ಲಿಂಡ್ಲೆ ಸಾಹೇಬನನ್ನು ಕೆಡುವಿಬಿಟ್ಟು ಕುದುರೆಯನ್ನು ಹತ್ತಿಕೊಂಡು ಎಲ್ಲಿಯೋ ಮಾಯವಾಗಿ ಹೊರಟು ಹೋದಳು ಎಂದು ಸಮಾಚಾರವು ಬಂದಿತು. ಮೇಜರು ಊಡುಸಾಹೇಬನು "An imp of satan! Strike the tents"* ಎಂದು ಹೇಳಿದನು.

ಆಗ ಟಕಾಟಕ್, ಖಟ್‌ಖಟ್ ಎಂದು ತಂಬೂರು ಶಬ್ದವಾಗುತ್ತಲೇ ಡೇರೆಗಳು ಉರುಡುವುದಕ್ಕೆ ಪ್ರಾರಂಭವಾಯಿತು. ಮೇಘ ರಚಿತವಾದ ಅಮರಾವತಿಯು ಹಾಗಿದ್ದ ಆ ವಸ್ತ್ರನಗರವು ಅಂತರ್ಹಿತವಾಯಿತು. ಗಾಡಿಗಳ ಮೇಲೆ ಹೊರೆಗಳಾಗಿ ಪರಿಣಮಿಸಿತು. ಮನುಷ್ಯನು ಕುದುರೆಯ ಮೇಲೆ ಅಥವಾ ಪಾದಚಾರಿ. ಹಿಂದು, ಮುಸಲಮಾನ, ಮದರಾಸಿ, ಫರಂಗಿ ಎಲ್ಲರೂ ಭುಜದಮೇಲೆ ಬಂದೂಕು ಹೊತ್ತುಕೊಂಡು ಜರಬರ ಹೊರಟರು. ಫಿರಂಗಿ ಭಂಡಿಗಳು ಗಡಗಡ ಹೊರಟವು.

ಇತ್ತಲಾಗಿ ಮಹೇಂದ್ರನು ಸಂತಾನ ಸೇನೆಯನ್ನು ತೆಗೆದುಕೊಂಡು ಕ್ರಮಕ್ರಮವಾಗಿ ಕೇಂದುಬಿಲ್ಲು ಗ್ರಾಮಾಭಿಮುಖವಾಗಿ ಹೋಗುತ್ತಿದ್ದನು. ಹೊತ್ತಾದುದರಿಂದ ದಾರಿಯಲ್ಲಿಯೇ ನಿಲ್ಲಬೇಕೆಂದು ಯೋಚಿಸಿಕೊಂಡಿದ್ದನು.

ಶಿಬಿರವನ್ನು ಸ್ಥಾಪನೆಮಾಡುವುದೇ ಉಚಿತವಾಗಿ ಕಂಡಿತು. ವೈಷ್ಣವರಿಗೆ ತಂಬೂರು (Band) ಇಲ್ಲ, ಡೇರೆ ಗೊತ್ತಿಲ್ಲ, ಮರದ ಕೆಳಗೆ ಗೋಣಿತಟ್ಟು ಕಂಥೆ ಕೌದಿ ಹೊದ್ದುಕೊಂಡು ನಿದ್ರೆ ಮಾಡುವರು. ಹರಿಚರಣಾಮೃತವನ್ನು ತಿಂದು ರಾತ್ರಿ ಕಾಲಹರಣ, ಸುಧೆ ಒಂದು ಬಾಕಿ—ಅದಕ್ಕೆ ಸ್ವಪ್ನದಲ್ಲಿ ವೈಷ್ಣವೀ ಠಾಕೂರಣಿಗಳ ಅಧರಾಮೃತವನ್ನು ಪಾನಮಾಡಿ ಹೊಟ್ಟೆತುಂಬಿಕೊಳ್ಳಬೇಕು! ಶಿಬಿರಕ್ಕೆ ಸರಿಯಾದ ಸ್ಥಳವು ಸಮೀಪದಲ್ಲಿದ್ದಿತು, ಒಂದು ತೋಪು—ಬೇವು ಮಾವು ಹಲಸು ಹಿಪ್ಪೆ ಹೊಂಗೆ ಮುಂತಾದ ದೊಡ್ಡ ದೊಡ್ಡ ಮರಗಳು—ಇಲ್ಲಿ ಮಜಿಲು ಮಾಡಬೇಕೆಂದು ಮಹೇಂದ್ರನು ಅಪ್ಪಣೆಯಂ ಕೊಟ್ಟನು. ಅದಕ್ಕೆ ಹತ್ತಿರವೇ ಒಂದು ಗುಡ್ಡ, ಹತ್ತುವುದಕ್ಕೆ ಬಹಳ ಕಡಿದು, ಮಹೇಂದ್ರನು ಈ ಗುಡ್ಡದ ಮೇಲೆ ಮಜಿಲುಮಾಡುವುದಕ್ಕೆ ಹತ್ತಿ ನೋಡಿಕೊಂಡು ಬರಬೇಕೆಂದು ಯೋಚಿಸಿಕೊಂಡಿದ್ದನು.

ಹೀಗೆ ಯೋಚಿಸಿ ಮಹೇಂದ್ರನು ಕುದುರೆಯನ್ನು ಹತ್ತಿಕೊಂಡು ಮೆಲ್ಲಮೆಲ್ಲನೆ ಪರ್ವತದ ಶಿಖರಕ್ಕೆ ಹತ್ತಲು ಪ್ರಾರಂಭಿಸಿದನು. ಅವನು ಸ್ವಲ್ಪ ದೂರ ಹತ್ತುತ್ತಲೇ ಒಬ್ಬ ಯುವಕನಾದ ಯೋದ್ಧನು ವೈಷ್ಣವ ಸೇನೆ ಮಧ್ಯದಲ್ಲಿ

* "ಕರ್ಣ ಪಿಶಾಚಿ ರಂಡೇಮಗಳು! ಡೇರೆಗಳನ್ನು ತೆಗೆಯಿರಿ."

ಪ್ರವೇಶಿಸಿ ನಡೆಯಿರಿ, ಪರ್ವತದ ಮೇಲೆ ಹತ್ತಿರೆಂದು ಹೇಳಿದನು. ಹತ್ತಿರದಲ್ಲಿದ್ದವರು, ಏಕೆ ? ಎಂದು ಕೇಳಿದರು.

ಯೋದ್ಧನು ಒಂದು ಕಲ್ಲುಬಂಡೆಮೇಲೆ ನಿಂತುಕೊಂಡು ನಡೆಯಿರಿ, ಈ ಬೆಳದಿಂಗಳು ರಾತ್ರಿಯಲ್ಲಿ ಈ ಪರ್ವತಶಿಖರದಲ್ಲಿ ನೂತನವಾದ ವಸಂತದ ನೂತನ ಕುಸುಮವನ್ನು ಘ್ರಾಣಮಾಡುತ್ತ ಇಂದು ನಾವು ಶತ್ರುಗಳ ಸಂಗಡ ಯುದ್ಧವನ್ನು ಮಾಡಬೇಕೆಂದು ಹೇಳಿದನು. ಸಂತಾನರು ನೋಡಲಾಗಿ ಅವನು ಸೇನಾಪತಿ ಜೀವಾನಂದನಾಗಿದ್ದನು.

ಆಗ ಘಟ್ಟಿಯಾಗಿ "ಹರೇ ಮುರಾರೆ" ಶಬ್ದವಾಗಿ ಎಲ್ಲಾ ಸೇನೆಯು ಭಲ್ಲೆಗಳನ್ನೂರಿಕೊಂಡು ಮೇಲಕ್ಕೆ ಹೊರಟು ಜೀವಾನಂದನನ್ನು ಅನುವರ್ತಿಸಿಕೊಂಡು ಜಾಗ್ರತೆ ಜಾಗ್ರತೆಯಾಗಿ ಪರ್ವತಾರೋಹಣೆಯನ್ನು ಮಾಡಲಾರಂಭಿಸಿತು. ಒಬ್ಬನು ತಯಾರಾದ ಕುದುರೆಯನ್ನು ಜೀವಾನಂದನ ಸವಾರಿಗೆ ತಂದು ಕೊಟ್ಟನು. ಮಹೇಂದ್ರನು ದೂರದಿಂದ ನೋಡಿ ವಿಸ್ಮಿತನಾಗಿ ಇದೇನಿದು ? ಇವರು ಹೇಳದೆ ಬರುತ್ತಾರೆಂದಂದುಕೊಂಡನು.

ಹೀಗೆಂದುಕೊಂಡು ಮಹೇಂದ್ರನು ಕುದುರೆಯನ್ನು ತಿರುಗಿಸಿ, ಕಮಿಚಿಯನ್ನು ಮೇಲಕ್ಕೆತ್ತಿ ಹಿಡಿದುಕೊಂಡು ದೌಡಾಯಿಸುತ್ತ ಇಳಿದು ಬಂದು ಸಂತಾನ ವಾಹಿನಿಯ ಮುಂದಾಳಾಗಿದ್ದ ಜೀವಾನಂದನನ್ನು ನೋಡಿ ಇದೇನು ! ಪುನಃ ಆನಂದವೇನೆಂದು ಕೇಳಿದನು.

ಜೀವಾನಂದನು ನಕ್ಕು—ಈ ಹೊತ್ತು ಬಹಳ ಆನಂದ. ಗುಡ್ಡದಮೇಲೆ ಗುಡ್ಡದ ಹಿಂದುಗಡೆ ಸಹ ಊಡುಸಾಹೇಬ—ಯಾರು ಮುಂಚಿತವಾಗಿ ಮೇಲೆ ಹತ್ತುವರೋ ಅವರಿಗೆ ಜಯ.

ಜೀವಾನಂದನು ಸಂತಾನ ಸೈನ್ಯವನ್ನು ಕುರಿತು ಘಟ್ಟಿಯಾಗಿ, ನಾನು ಯಾರೆಂಬುದು ಗೊತ್ತುಂಟೆ ! ನಾನು ಜೀವಾನಂದಗೋಸ್ವಾಮಿ. ಅಜಯನದೀ ತೀರದಲ್ಲಿ ಸಹಸ್ರ ಇಂಗ್ಲೀಷು ಜನರ ಪ್ರಾಣವಧೆಯನ್ನು ಮಾಡಿದವನು ಎಂದು ಕೂಗಿ ಕೇಳಿದನು.

ತುಮುಲ ನಿನಾದದಿಂದ ಕಂದರ ಕಾನನ ಪ್ರಾಂತರವೆಲ್ಲ ಧ್ವನಿತವಾಗುವ ಹಾಗೆ, ಬಲ್ಲೆವು ನಾವು ! ನೀವು ಜೀವಾನಂದಗೋಸ್ವಾಮಿ ಎಂದು ಶಬ್ದವಾಯಿತು.

ಜೀವಾನಂದ—ಹೇಳಿ, 'ಹರೇ ಮುರಾರೆ.'

ಪರ್ವತ ಕಂದರ ಕಾನನ ಪ್ರಾಂತರವೆಲ್ಲ ಸಹಸ್ರ ಸಹಸ್ರ ಕಂಠದಿಂದ ಹರೇ ಮುರಾರೆ ಎಂದು ಧ್ವನಿತವಾಯಿತು.

ಜೀವಾನಂದ—ಗುಡ್ಡದ ಅತ್ತಕಡೆ ಶತ್ರುಗಳು. ಇಂದು ಈ ಪರ್ವತಶಿಖರದಲ್ಲಿ ಈ ನೀಲಾಂಬರಿಯಾದ ಯಾಮಿನೀ ಸಾಕ್ಷಾತ್ಕಾರವಾಗಿ ಸಂತಾನರು

ಯುದ್ಧವನ್ನು ಮಾಡಬೇಕು. ಬೇಗ ಬನ್ನಿ. ಯಾರು ಮುಂಚಿತವಾಗಿ ಶಿಖರ ವನ್ನು ಹತ್ತಿ ನಿಲ್ಲುವರೋ ಅವರು ಜಯಿಸುವರು. ಹೇಳಿ, 'ವಂದೇ ಮಾತರಂ.'

ಆಗ ಪರ್ವತಕಂದರ ಕಾನನ ಪ್ರಾಂತರವೆಲ್ಲ ಧ್ವನಿತವಾಗಿ "ವಂದೇ ಮಾತರಂ" ಗೀತ ಶಬ್ದವು ಎದ್ದಿತು. ಸಂತಾನ ಸೇನೆಯು ಮೆಲ್ಲಮೆಲ್ಲನೆ ಪರ್ವತಾರೋಹಣ ಮಾಡಲಾರಂಭವಾಯಿತು; ಆದರೆ ಇದ್ದಕ್ಕಿದ್ದ ಹಾಗೆ ಮಹೇಂದ್ರಸಿಂಹನು ತುತ್ತೂರಿಯ ಶಬ್ದವನ್ನು ಮಾಡುತ್ತ ವೇಗದಿಂದ ಪರ್ವತದಿಂದಿಳಿದು ಬರುವು ದನ್ನು ನೋಡಿ ಭಯುಪಟ್ಟಿತು. ನೋಡುತಲಿದ್ದ ಹಾಗೆ ಪರ್ವತ ಶಿಖರದೇಶ ದಲ್ಲಿ ನೀಲಾಕಾಶಪಟದಲ್ಲಿ ಫಿರಂಗಿಗುಂಡುಗಳ ಸಾಲುಗಳಿಂದ ಇಂಗ್ಲೀಷರ ಸೇನೆಯು ಕಣ್ಗೊಳಿಸಿತು. ಉಚ್ಚಸ್ವರದಿಂದ ವೈಷ್ಣವ ಸೇನೆಯು—

ಆನ್ವೀಕ್ಷಿಕೀ ತ್ರಯೀವಾರ್ತಾ।
ದಂಡನೀತಿಸ್ತ್ವಮೇವಚ ॥
ಸೌಮ್ಯಾಸೌಮ್ಯೈರ್ಜಗದ್ರೂಪೈ।
ಸ್ತ್ವಯ್ಯೈತದ್ದೇವಿಪೂರಿತಂ ॥
ಕಾತ್ವನ್ಯಾತ್ವಾಮೃತೇದೇವಿ।
ಸರ್ವಯಜ್ಞಮಯಂ ವಪುಃ ॥
ವಸುಧೇತ್ವಮೇವವಿದ್ಯಾ।
ಭಕ್ತಿಶ್ಯಕ್ತಿಶ್ಚಬಾಹ್ವೋರ್ಸಃ ॥
ಜನನೀದ್ರವಿಣಂ ಮಿತ್ರಂ।
ತ್ವಂಹಿಪ್ರಾಣಾಶ್ಶರೀರೇಸಿ ॥
ತ್ವಂಹಿವಿದ್ಯಾ ತ್ವಂಹಿಮಾತಾ।
ತ್ವಂಹಿಪ್ರಾಣಾಶ್ಶರೀರ ॥
ತ್ವಂಹಿಭಕ್ತಿಃ ತ್ವಂಹಿಶಕ್ತಿಃ।
ತ್ವಂಹಿಪ್ರಾಣಾಶ್ಶರೀರೆ ॥

ಎ ನಮಾಡಿದರು. ಆದರೆ ಇಂಗ್ಲೀಷರ ಫಿರಂಗಿಗಳ ಶಬ್ದದಲ್ಲಿ ಆ ಮಹಾ ಸಂಗೀತ ಶಬ್ದವು ಮುಣುಗಿಹೋಯಿತು. ನೂರಾರು ಸಂತಾನರು ಹತ ಆಹತರಾಗಿ ಪರ್ವತದ ಝರಿಯಲ್ಲಿ ಬಿದ್ದುಹೋದರು. ಪುನಃ ಆ ಫಿರಂಗಿ ಗುಂಡುಗಳು ದಧೀಚಿ ಋಷಿಯ ಅಸ್ಥಿಯನ್ನು ವ್ಯಂಗ್ಯಮಾಡಿ ಸಮುದ್ರ ತರಂಗ ಗಳನ್ನು ತುಚ್ಛವಾಗಿ ಮಾಡಿ ಇಂಗ್ಲೀಷರಿಗೆ ವಜ್ರಾಯುಧವಾಗಿ ಪರಿಣಮಿ ಸಿದವು. ಸುಪಕ್ವವಾಗಿ ನಿಂತಿರುವ ಧಾನ್ಯದ ಪೈರು ಕುಡುಗೋಲಿಗೆ ಸಿಕ್ಕಿದ ಹಾಗೆ ಸಂತಾನ ಸೇನೆಯು ಖಂಡವಿಖಂಡವಾಗಿ ಧರಾಶಾಯಿಯಾಗಲಾರಂಭ ವಾಯಿತು. ಪತನಶೀಲವಾದ ಶಿಲಾರಾಶಿಯ ಹಾಗೆ ಸಂತಾನ ಸೇನೆಯು ಪರ್ವತ ದೇಶದಿಂದ ಹಿಂದಿರುಗಲಾರಂಭವಾಯಿತು. ಯಾರು ಎಲ್ಲಿ ಓಡಿ ಹೋದರೋ

ಗೊತ್ತೇ ಇಲ್ಲವಾಯಿತು. ಜೀವಾನಂದನೂ ಮಹೇಂದ್ರನೂ ಸಹ ಸಿಲ್ಲಿಸುವು ದಕ್ಕೆ ಪಟ್ಟ ಪ್ರಯತ್ನವು ವ್ಯರ್ಥವಾಯಿತು. ಆಗ ಎಲ್ಲರ ವಿನಾಶ ಸಾಧಕ ಕೈಕ್ರೋಸ್ಕರ ಹುರ್ರೆ! ಹುರ್ರೆ! ಎಂದು ಶಬ್ದಮಾಡುತ್ತ ಕೆಂಪು ಜನರ ಪಲ್ಟನ್ ಪರ್ವತದಿಂದ ಇಳಿದರು. ಸನೀನುಗಳನ್ನು ಎತ್ತಿಕೊಂಡು ಅತಿವೇಗದಿಂದ ಪರ್ವತ ದಿಂದ ಬೀಳುವ ವಿಶಾಲವಾದ ತಟಿನಿಯ ಪ್ರಪಾತದೋಪಾದಿಯಲ್ಲಿ ದುರ್ದಮ ನೀಯವಾದ ಅಲಂಘ್ಯವಾದ ಅಜೇಯವಾದ ಬ್ರಿಟೀಷು ಸೇನೆಯು ಪಲಾಯನ ಪರರಾದ ಸಂತಾನ ಸೇನೆಯ ಮೇಲೆ ಬಿದ್ದು ಅದರ ಬೆನ್ನಟ್ಟಿತು. ಜೀವಾನಂದನು ಒಂದು ಸಲ ಮಾತ್ರ ಮಹೇಂದ್ರನನ್ನು ಕಂಡು, ಈ ಹೊತ್ತು ಕೊನೆಗಾಲ, ಬಾ, ಇಲ್ಲಿಯೇ ಸಾಯೋಣವೆಂದನು.

ಮಹೇಂದ್ರನು, ಸತ್ತರೂ ರಣಜಯವಾದರೆ ಸಾಯೋಣ—ವೃಥಾ ಸಾಯು ವುದು ವೀರರ ಧರ್ಮವಲ್ಲವೆಂದನು.

ಜೀವಾನಂದ—ನಾನು ವ್ಯರ್ಥವಾಗಿಯೇ ಸಾಯುವೆನು. ಆದರೂ ಯುದ್ಧ ದಲ್ಲಿ ಸಾಯುವೆನು.

ಹೀಗೆ ಹೇಳಿ, ಒಂದು ಪಾರ್ಶ್ವಕ್ಕೆ ತಿರುಗಿಕೊಂಡು ಜೀವಾನಂದನು, ಯಾರು ಹರಿನಾಮವನ್ನು ಹೇಳಿಕೊಂಡು ಸಾಯುವುದಕ್ಕೆ ಇಷ್ಟವುಳ್ಳವರೋ ಅವರು ನನ್ನ ಸಂಗಡ ಬರಲೆಂದು ಹೇಳಿ ಕೂಗಿದನು.

ಅನೇಕರು ಮುಂದಾದರು. ಜೀವಾನಂದನು ಹಾಗಲ್ಲ, ಹರಿಸಾಕ್ಷಾತ್ತಾಗಿ ಪ್ರಾಣಹೋದರೂ ಹಿಂದಿರುಗುವುದಿಲ್ಲವೆಂದು ಶಪಥಮಾಡಬೇಕೆಂದನು.

ಆಗ ಮುಂದಾದವರು ಹಿಮ್ಮೆಟ್ಟಿದರು. ಜೀವಾನಂದನು, ಯಾರೂ ಬರುವುದಿಲ್ಲವೆ? ಹಾಗಾದರೆ ನಾನೊಬ್ಬನೇ ಹೊರಟೆನೆಂದನು.

ಜೀವಾನಂದನು ಕುದುರೆಯಮೇಲೆ ಬಹಳದೂರ ಬೆಟ್ಟವನ್ನು ಹತ್ತಿ ಹಿಂದಿದ್ದ ಮಹೇಂದ್ರನನ್ನು ಕೂಗಿ, ಅಣ್ಣಾ! ನವೀನಾನಂದನಿಗೆ ನಾನು ಹೊರಟುಹೋದೆ, ಲೋಕಾಂತರದಲ್ಲಿ ನೋಡುವೆನೆಂದು ಹೇಳೆಂದು ಹೇಳಿದನು.

ಇಷ್ಟು ಹೇಳಿ ಆ ವೀರಪುರುಷನು ಆ ಲೋಹವೃಷ್ಟಿ ಮಧ್ಯದಲ್ಲಿ ಕುದುರೆ ಯನ್ನ ವೇಗವಾಗಿ ಓಡಿಸಿದನು. ಎಡಗೈಯಲ್ಲಿ ಭಲ್ಲೆ, ಬಲಗೈಯಲ್ಲಿ ಬಂದೂಕು, ಬಾಯಿಯಲ್ಲಿ ಹರೇ ಮುರಾರೆ, ಹರೇ ಮುರಾರೆ ಯುದ್ಧಮಾಡುವ ಸಂಭವವೇ ಇಲ್ಲ. ಇಂತಹ ಸಾಹಸದಿಂದ ಫಲವೇನೂ ಇಲ್ಲ. ಆದರೂ 'ಹರೇ ಮುರಾರೆ' ಹಾಡುತ್ತ ಜೀವಾನಂದನು ಶತ್ರುವ್ಯೂಹಮಧ್ಯದಲ್ಲಿ ಪ್ರವೇಶ ಮಾಡಿದನು.

ಪಲಾಯನಪರರಾದ ಸಂತಾನರನ್ನು ಕೂಗಿ ಮಹೇಂದ್ರನು, ನೋಡಿ, ಒಂದುಸಲ ಹಿಂದಿರುಗಿ ಜೀವಾನಂದಗೋಸ್ವಾಮಿಯನ್ನು ನೋಡಿ, ನೋಡಿದರೆ ನೀವು ಸಾಯುವುದಿಲ್ಲವೆಂದನು.

ಕೆಲಸಂತಾನರು ಹಿಂದಿರುಗಿ ಜೀವಾನಂದನ ಅಮಾನುಷವಾದ ಕೀರ್ತಿಯನ್ನು ನೋಡಿದರು. ಮೊದಲು ವಿಸ್ಮಿತರಾದರು, ಅನಂತರ, ಜೀವಾನಂದನಿಗೆ ಮಾತ್ರ ಸಾಯುವುದು ಗೊತ್ತೆ? ನಮಗೆ ಗೊತ್ತಿಲ್ಲವೆ? ನಡೆಯುರಿ, ಜೀವಾನಂದನ ಜತೆಯಲ್ಲಿ ನಾವೂ ವೈಕುಂಠಕ್ಕೆ ಹೋಗೋಣವೆಂದರು.

ಇದನ್ನು ಕೇಳಿ ಕೆಲಜನ ಸಂತಾನರು ತಿರುಗಿದರು, ಅವರನ್ನು ನೋಡಿ ಇನ್ನೂ ಕೆಲವರು ತಿರುಗಿದರು. ಮತ್ತೆ ಅವರನ್ನು ನೋಡಿ ಮತ್ತಷ್ಟು ಮಂದಿ ತಿರುಗಿದರು. ಗದ್ದಲವೋ ಗದ್ದಲವಾಯಿತು. ಜೀವಾನಂದನು ಶತ್ರುವ್ಯೂಹದಲ್ಲಿ ಪ್ರವೇಶ ಮಾಡಿಬಿಟ್ಟಿದ್ದನು. ಸಂತಾನರು ಯಾರೂ ಪುನಃ ಅವನನ್ನು ನೋಡಲಿಲ್ಲ.

ಇತ್ತಲಾಗಿ ರಣಕ್ಷೇತ್ರದಿಂದ ಸಂತಾನರು ನೋಡುತ್ತಿರಲಾಗಿ, ಕೆಲವು ಮಂದಿ ಸಂತಾನರು ಪುನಃ ಹಿಂದಿರುಗಿ ಬರುತ್ತಲಿದ್ದರು. ಎಲ್ಲರೂ ಮನಸ್ಸಿನಲ್ಲಿ, 'ಸಂತಾನರಿಗೆ ಜಯವಾಯಿತು, ಶತ್ರುಗಳನ್ನು ಓಡಿಸಿಬಿಟ್ಟು ಬರುತ್ತಾರೆಂದು ತಿಳಿದುಕೊಂಡು, ಹೊಡಿ, ಶತ್ರುಗಳನ್ನು ಕಡಿ, ಎಂದು ಶಬ್ದಮಾಡಿಕೊಂಡು ತಿರುಗಿ ಇಂಗ್ಲೀಷು ಸೈನ್ಯದವರ ಮೇಲೆ ಬಿದ್ದರು.

ಅತ್ತ ಇಂಗ್ಲೀಷರ ಸೈನ್ಯದಲ್ಲಿ ಗದ್ದಲಹತ್ತಿ ಶಿಪಾಯಿಗಳು ಯುದ್ಧದಲ್ಲಿ ಯತ್ನರಾಗದೆ ಎರಡು ಕಡೆಯಿಂದಲೂ ಓಡುತಲಿದ್ದರು. ಕೆಂಪು ಜನರೂ ಸಹ ಸನೀನುಗಳನ್ನು ಇಳಿಸಿಕೊಂಡು ಶಿಬಿರಾಭಿಮುಖವಾಗಿ ಓಡುತ್ತಾರೆ. ಮಹೇಂದ್ರನು ಅತ್ತಿತ್ತ ನೋಡುತ್ತಿದ್ದ ಹಾಗೆ ಪರ್ವತಶಿಖರದಲ್ಲಿ ಅನಂತವಾದ ಸಂತಾನ ಸೇನೆಯನ್ನು ನೋಡಿದನು. ಅವರು ವೀರದರ್ಪದಿಂದ ಇಳಿಯುತ್ತ ಇಂಗ್ಲೀಷು ಸೇನೆಯನ್ನು ಆಕ್ರಮಣ ಮಾಡುತಲಿದ್ದರು. ಮಹೇಂದ್ರನು ಕೂಗಿ ಸಂತಾನರನ್ನು ಕುರಿತು, ಸಂತಾನರ! ಅಲ್ಲಿ ನೋಡಿ, ಪರ್ವತಶಿಖರದಲ್ಲಿ ಪ್ರಭು ಸತ್ಯಾನಂದಗೋಸ್ವಾಮಿಯ ಧ್ವಜವು ಕಾಣುತ್ತದೆ. ಇಂದು ಸ್ವಯಂ ಮುರಾರಿಯಾದ ಮಧುಕೈಟಭ ನಿಷೂದನಾದ ಕಂಸಕೇಶಿ—ವಿನಾಶನನೇ ರಣಕ್ಷೇತ್ರದಲ್ಲಿ ಬಂದಿದ್ದಾನೆ! ಪರ್ವತದ ಮೇಲೆ ಲಕ್ಷ ಸಂತಾನರು—ಹೇಳಿ, ಹರೇ ಮುರಾರೆ! ಹರೇ ಮುರಾರೆ! ಏಳಿ! ಎದ್ದು ಶತ್ರುಗಳ ಎದೆಗೆ ಒದ್ದು ಅಪ್ಪಳಿಸಿ ಹೊಡೆಯುರಿ—ಲಕ್ಷ ಸಂತಾನರು ಪರ್ವತದ ಮೇಲೆ—ಎಂದು ಹೇಳಿದನು.

ಆಗ ಹರೇ ಮುರಾರಿಯ ಭೀಷಣವಾದ ಧ್ವನಿಯಿಂದ ಪರ್ವತ ಕಂದರ ಕಾನನ ಪ್ರಾಂತರವೆಲ್ಲ ಮಥಿತವಾಗಲಾರಂಭವಾಯಿತು. ಸಕಲ ಸಂತಾನರ ಮಾಭೈಃ ಮಾಭೈಃ (ಭಯಬೇಡ ಭಯಬೇಡ) ಎಂಬ ರವದಿಂದ ಲಲಿತವಾದ ತಾಳಧ್ವನಿಯಾಗಿ ಥಳಥಳಿತವಾದ ಅಸ್ತ್ರಗಳ ಝುಂಝುನಾ ಶಬ್ದದಲ್ಲಿ ಸರ್ವ ಜೀವವೂ ವಿಮೋಹಿತವಾಯಿತು. ವೇಗವಾಗಿ ಮಹೇಂದ್ರನ ಸಂತಾನ ಪ್ರವಾಹವು ಪರ್ವತವನ್ನು ಆರೋಹಣಮಾಡಲಾರಂಭಿಸಿತು. ಬಂಡೆಗಳಿಂದ ಘಾತ ಪ್ರತಿಘಾತವಾಗಿ ಪ್ರತಿಪ್ರೇರಿತವಾದ ನಿರ್ಝರಿಣಿಯೋಪಾದಿಯಲ್ಲಿ ರಾಜಸೇನೆಯು ವಿಲೋಡಿತವಾಗಿ

ಸ್ತಂಭಿತವಾಗಿ ಭೀತಿಗೊಂಡು ಹೋಯಿತು. ಆ ಸಮಯದಲ್ಲಿ ಇಪ್ಪತ್ತೈದು ಸಹಸ್ರ ಸಂತಾನ ಸೇನೆಯನ್ನು ತೆಗೆದುಕೊಂಡು ಸ್ವಯಮಾಗಿ ಸತ್ಯಾನಂದ ಬ್ರಹ್ಮಚಾರಿಯು ಪರ್ವತಶಿಖರದಿಂದ ಅವರಮೇಲೆ ಸಮುದ್ರವೇ ಬಂದು ಬಿದ್ದಹಾಗೆ ಬಿದ್ದನು. ಅತ್ಯಂತ ಭಯಂಕರವಾದ ಯುದ್ಧವಾಯಿತು.

ಹೇಗೆ ಎರಡು ದೊಡ್ಡ ದೊಡ್ಡ ಕಲ್ಲುಬಂಡೆಗಳ ಸಂಘರ್ಷಣ ಮಧ್ಯದಲ್ಲಿ ಅಲ್ಪವಾದ ನೊಣವು ಸಿಕ್ಕಿ ಪುಡಿಪುಡಿಯಾಗಿ ಧೂಳೀಪಟವಾಗಿ ಹೋಗಿಬಿಡುವುದೋ ಹಾಗೆ ಎರಡು ಸಂತಾನ ಸೇನೆಗಳ ಸಂಘರ್ಷಣದಿಂದ ಆ ವಿಶಾಲವಾದ ರಾಜಸೈನ್ಯವು ಪರ್ವತ ಸಾನುದೇಶದಲ್ಲಿ ನಿಷ್ಪೇಷಿತವಾಗಿ ಪುಡಿಚೂರ್ಣವಾಗಿ ಹೋಗಿಬಿಟ್ಟಿತು.

ವಾರನ್ ಹೇಸ್ಟಿಂಗ್ಸನ ಬಳಿಗೆ ಸಮಾಚಾರವನ್ನು ಒಯ್ಯಲು ಒಬ್ಬನೂ ಉಳಿಯಲಿಲ್ಲ.

---

## ಹತ್ತೊಂಭತ್ತನೆಯ ಪರಿಚ್ಛೇದ

ಪೂರ್ಣಿಮಾ ರಾತ್ರಿ!—ಆ ಭೀಷಣವಾದ ರಣಕ್ಷೇತ್ರವು ಈಗ ಸ್ಥಿರವಾಯಿತು. ಆ ಕುದುರೆಗಳ ದಡಬಡಿ, ಆ ಬಂದೂಕಗಳ ಕಡಕಡಿ, ಆ ಫಿರಂಗಿಗಳ ಢಂ—ಸರ್ವವ್ಯಾಪಿಯಾದ ಧೂಮ, ಇದು ಯಾವದೂ ಇಲ್ಲ. ಯಾರೂ ಹುರ್ರೆ! ಹೇಳುವವರಿಲ್ಲ. ಯಾರೂ ಹರಿಧ್ವನಿಯನ್ನು ಮಾಡಲಿಲ್ಲ. ಶಬ್ದಮಾಡುತಲಿದ್ದದ್ದು—ನರೀನಾಯಿ—ಇದರಮೇಲೆಲ್ಲಾ ಆಹತರಾದ ಜನರ ಕ್ಷಣಿಕವಾದ ಆರ್ತನಾದ. ಕೆಲವರು ಛಿನ್ನ ಹಸ್ತರು, ಕೆಲವರು ಭಗ್ನ ಮಸ್ತಕರು, ಕೆಲವರಿಗೆ ಕಾಲು ಒಡದು ಹೋಗಿದೆ, ಕೆಲವರಿಗೆ ಎದೆಯು ಕಂಡಿಬಿದ್ದುಹೋಗಿದೆ. ಕೆಲವರು ಕುದುರೆಗಳ ಕೆಳಗೆ ಬಿದ್ದಿದ್ದಾರೆ, ಕೆಲವರು ಅಮ್ಮ! ಎನ್ನುತ್ತಾರೆ, ಕೆಲವರು ತಂದೆಯನ್ನು ಅಪ್ಪಾ! ಎಂದು ಕೂಗುತ್ತಾರೆ. ಕೆಲವರು ನೀರು ಕೇಳುತ್ತಾರೆ. ಕೆಲವರ ಆಶೆ ಮರಣ. ಬಂಗಾಳಿಗಳು, ಮುಸಲ್ಮಾನರು, ಇಂಗ್ಲೀಷರು, ಹಿಂದುಸ್ಥಾನದವರು ಎಲ್ಲರೂ ಏಕತ್ರ ಜಡಜಡಿತವಾಗಿ ಮೃತರಾಗಿದ್ದಾರೆ. ಮನುಷ್ಯರು ಕುದುರೆಗಳು ಸಹ ಮಿಶಾಮಿಶಿಯಾಗಿ ಒದ್ದಾಡುತ್ತಾರೆ. ಆ ಮಾಘಮಾಸದ ಪೂರ್ಣಿಮಾ ರಾತ್ರಿಯಲ್ಲಿ ಆ ದಾರುಣವಾದ ಶೀತದಲ್ಲಿ ಹೊಳೆಯುತ್ತಿರುವ ಬೆಳದಿಂಗಳಲ್ಲಿ ರಣಭೂಮಿಯು ಅತಿಭಯಂಕರವಾಗಿ ಕಾಣುತಲಿದ್ದಿತು. ಅಲ್ಲಿಗೆ ಹೋಗುವುದಕ್ಕೆ ಯಾರಿಗೂ ಧೈರ್ಯವಿಲ್ಲ.

ಯಾರೂ ಧೈರ್ಯಮಾಡಿ ಹೋಗಲಿಲ್ಲ, ಆದರೆ ಅರ್ಧರಾತ್ರಿಯಲ್ಲಿ ಒಬ್ಬ ರಮಣಿಯು ಆ ಅಗಮ್ಯವಾದ ರಣಕ್ಷೇತ್ರದಲ್ಲಿ ತಿರುಗಾಡುತಲಿದ್ದಳು. ಒಂದು ಮಷಾಲನ್ನು ಹಚ್ಚಿಕೊಂಡು ಆ ಬೆಳಕಿನಲ್ಲಿ ಏನೋ ಹುಡುಕುತಲಿದ್ದಳು. ಪ್ರತಿ

ಒಂದು ಶವದ ಮುಖಕ್ಕೂ ಮಶಾಲಿನ ಬೆಳಕು ಹಿಡಿದು ನೋಡಿಬಿಟ್ಟು ಬೇರೆ ಮತ್ತೊಂದು ಶವದ ಬಳಿಗೆ ಮಶಾಲನ್ನು ತೆಗೆದುಕೊಂಡು ಹೋಗುತಲಿದ್ದಳು, ಶವವು ಕುದುರೆ ಕೆಳಗೆ ಸಿಕ್ಕಿಬಿದ್ದಿದ್ದರೆ ಯುವತಿಯು ಮಶಾಲನ್ನು ನೆಲದ ಮೇಲೆ ಇಟ್ಟು ಕುದುರೆಯನ್ನು ಎರಡು ಕೈಗಳಿಂದಲೂ ತಳ್ಳಿ ಶವವನ್ನು ತೆಗೆದು ಮಶಾಲಿನ ಬೆಳಕಿನಿಂದ ನೋಡಿ ಅದಲ್ಲದಿದ್ದರೆ ಅದನ್ನು ಬಿಟ್ಟು ಹೊರಟು ಹೋಗುವಳು. ಈ ರೀತಿಯಾಗಿ ಹುಡುಕುತ್ತ ಆ ರಣಕ್ಷೇತ್ರವನ್ನೆಲ್ಲ ತಿರುಗಿದಳು —ಹುಡುಕುತಲಿದ್ದುದು ಎಲ್ಲಿಯೂ ಸಿಕ್ಕಲಿಲ್ಲ. ಆಗ ಮಶಾಲನ್ನು ಬಿಸಾಟು ಆ ಶವರಾಶಿ ಪೂರ್ಣವಾದ ರಕ್ತಮಯವಾದ ಭೂಮಿಯಮೇಲೆ ಬಿದ್ದು ಅಳುತ್ತ ಹೊರಳಾಡುತಲಿದ್ದಳು. ಅವಳು ಶಾಂತಿ, ಜೀವಾನಂದನ ದೇಹವನ್ನು ಹುಡುಕುತಲಿದ್ದಳು.

ಶಾಂತಿಯು ಅಳುತ್ತ ಹೊರಳಾಡುತ್ತಿದ್ದ ಸಮಯದಲ್ಲಿ ಅವಳು, ಅತಿ ಮಧುರವಾದ ಸಕರುಣವಾದ ಧ್ವನಿಯಲ್ಲಿ ಅಳುವವರು ಯಾರು? ಏಳಮ್ಮ! ಅಳಬೇಡವೆಂದು ಹೇಳಿದ್ದನ್ನು ಕೇಳಿದಳು—ಶಾಂತಿಯು ನೋಡಲಾಗಿ ಎದುರಿಗೆ ಆ ಜ್ಯೋತ್ಸ್ನಾಲೋಕದಲ್ಲಿ ಹಿಂದೆ ನೋಡಿದ ಜಟಾಜೂಟಧಾರಿಯಾದ ಏಕಾಕಾರವಾದ ಮಹಾಪುರುಷನು ನಿಂತಿದ್ದನು.

ಶಾಂತಿಯು ಎದ್ದುನಿಂತಳು. ಬಂದಿದ್ದವನು ಅಳಬೇಡವಮ್ಮ! ಜೀವಾನಂದನ ದೇಹವನ್ನು ನಾನು ಹುಡುಕಿಕೊಡುವೆನು, ನನ್ನ ಜತೆಯಲ್ಲಿ ಬಾ, ಎಂದನು.

ಆಗವನು ಶಾಂತಿಯನ್ನು ರಣಕ್ಷೇತ್ರದಲ್ಲಿ ಮಧ್ಯಸ್ಥಳಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅಸಂಖ್ಯವಾದ ಶವರಾಶಿಯು ಒಂದರಮೇಲೊಂದು ಬಿದ್ದಿದ್ದಿತು. ಶಾಂತಿಯ ಕೈಲಿ ಅದನ್ನು ಅಲ್ಲಾಡಿಸುವುದಕ್ಕಾಗಲಾರದೆ ಹೋಯಿತು. ಆ ಬಲಿಷ್ಠನಾದ ಮಹಾಪುರುಷನು ಅದನ್ನೆಲ್ಲ ತೆಗೆದು ಒಂದು ಶವವನ್ನು ಹೊರಕ್ಕೆ ತೆಗೆದನು. ಅದನ್ನು ನೋಡಿ ಶಾಂತಿಯು ಜೀವಾನಂದನ ದೇಹವೆಂದು ಗುರುತಿಸಿದಳು. ಸರ್ವಾಂಗವೂ ಕ್ಷತವಿಕ್ಷತವಾಗಿ ರಕ್ತಮಯವಾಗಿತ್ತು. ಶಾಂತಿಯು ನೋಡಿ ಸಾಮಾನ್ಯಳಾದ ಹೆಂಗಸಿನ ಹಾಗೆ ಅಳಲಾರಂಭಿಸಿದಳು.

ಆ ಮಹಾಪುರುಷನು ಪುನಃ, ಅಳಬೇಡವಮ್ಮ? ಜೀವಾನಂದನು ಸತ್ತಿಲ್ಲ— ಸ್ಥಿರಳಾಗಿ ಅವನ ದೇಹವನ್ನು ಪರೀಕ್ಷೆಮಾಡಿ ನೋಡು—ಮೊದಲು ನಾಡಿಯನ್ನು ಹಿಡಿದು ನೋಡೆಂದನು.

ಶಾಂತಿಯು ಶವದ ನಾಡಿಯನ್ನು ಹಿಡಿದು ನೋಡಿದಳು. ಸ್ವಲ್ಪವೂ ಗತಿಯಿರಲಿಲ್ಲ. ಆ ಪುರುಷನು ಎದೆಯಮೇಲೆ ಕೈಯಿಟ್ಟು ನೋಡೆಂದನು.

ಶಾಂತಿಯು ಹೃತ್ಪಿಂಡವಿರುವ ಕಡೆಯಲ್ಲಿ ಎದೆಯಮೇಲೆ ಕೈಯಿಟ್ಟು ನೋಡಿದಳು. ಅಲ್ಲಿಯೂ ಏನೂ ಗತಿಯಿರಲಿಲ್ಲ, ಎಲ್ಲ ತಣ್ಣಗಾಗಿಹೋಗಿದ್ದಿತು.

ಅವನು ಪುನಃ ಮೂಗಿನ ಹತ್ತಿರ ಕೈಯಿಟ್ಟು ನೋಡು, ಶ್ವಾಸವಾಡುತ್ತ ದೆಯೋ ನೋಡೆಂದನು.

ಶಾಂತಿಯು ನೋಡಲಾಗಿ ಏನೇನೂ ಇರಲಿಲ್ಲ.

ಆ ಪುರುಷನು ಪುನಃ ಬಾಯಿಯಲ್ಲಿ ಬೆರಳಿಟ್ಟು ಏನಾದರೂ ಉಷ್ಣವಿದೆಯೆ ನೋಡೆಂದು ಹೇಳಿದ ಪ್ರಕಾರ ಬಾಯಿಯಲ್ಲಿ ಬೆರಳಿಟ್ಟು ನೋಡಿದಳು. ಏನೂ ಗೊತ್ತಾಗಲಿಲ್ಲ. ಆಗವಳು ಆಶಾಮುಗ್ಧಳಾಗಿದ್ದುಬಿಟ್ಟಳು.

ಮಹಾಪುರುಷನು ತನ್ನ ಎಡಗೈಯಿಂದ ಜೀವಾನಂದನ ದೇಹವನ್ನು ಸ್ಪರ್ಶ ಮಾಡಿ ನೀನು ಭಯದಿಂದ ಹತಾಶಳಾಗಿದ್ದೆಯಾದಕಾರಣ ಏನೂ ಗೊತ್ತಾಗದೆ ಹೋಯಿತು. ಶರೀರದಲ್ಲಿನ್ನೂ ಉಷ್ಣವಿರುವ ಹಾಗೆ ಕಾಣಿಸುತ್ತದೆ, ಪುನಃ ನೋಡೆಂದನು.

ಶಾಂತಿಯು ಪುನಃ ನಾಡಿಯನ್ನು ಹಿಡಿದು ನೋಡಿದಳು. ಸ್ವಲ್ಪ ನಾಡಿಗೆ ಗತಿ ಇತ್ತು; ವಿಸ್ಮಿತಳಾಗಿ ಎದೆಯಮೇಲೆ ಕೈಯಿಟ್ಟು ನೋಡಿದಳು—ಡಬಡಬ ಹೊಡಿದುಕೊಳ್ಳುತಲಿದ್ದಿತು. ಮೂಗಿನ ಹತ್ತಿರ ಬೆರಳಿಟ್ಟು ನೋಡಲಾಗಿ ಶ್ವಾಸ ವಾಡುತಲಿದ್ದಿತು. ಬಾಯಿಯಲ್ಲಿ ಉಷ್ಣವೂ ಇತ್ತು. ಶಾಂತಿಯು ಆಶ್ಚರ್ಯಪಟ್ಟು ಪ್ರಾಣವಿತ್ತೊ? ಇಲ್ಲ ಹೊಸದಾಗಿ ಬಂತೊ? ಎಂದಳು.

ಅವನು, ಅದರಿಂದೇನಾಯಿತಮ್ಮ! ನೀನು ಅವನನ್ನು ಎತ್ತಿಕೊಂಡು ಪುಷ್ಕರಣಿಯ ಹತ್ತಿರ ತರಬಲ್ಲೆಯಾ? ನಾನು ವೈದ್ಯನು, ಇನ್ನೂ ಚಿಕಿತ್ಸೆಯನ್ನು ಮಾಡಬೇಕು, ಮಾಡುವೆನೆಂದನು.

ಶಾಂತಿಯು ಅನಾಯಾಸದಿಂದ ಜೀವಾನಂದನನ್ನು ಕೊಂಕುಳಲ್ಲಿ ಎತ್ತಿ ಕೊಂಡು ಕೊಳದ ಹತ್ತಿರ ತೆಗೆದುಕೊಂಡುಹೋದಳು. ವೈದ್ಯನು ಹೇಳಿದ ಪ್ರಕಾರ ರಕ್ತವನ್ನೆಲ್ಲ ತೊಳೆಯುತಿದ್ದಳು. ವೈದ್ಯನು ಔಷಧವನ್ನು ತರುವುದಕ್ಕೆ ಹೋದನು.

ಶಾಂತಿಯು ತೊಳೆದು ಪೂರೈಸುವುದರೊಳಗಾಗಿ ವೈದ್ಯನು ಕಾಡೆಲೆಗಳನ್ನು ಕುಟ್ಟಿ ಅದರ ರಸವನ್ನು ತಂದು ಗಾಯಗಳಿಗೆಲ್ಲ ಹಚ್ಚಿಸಿ ಜೀವಾನಂದನ ಮೈಯನ್ನು ತನ್ನ ಕೈಯಿಂದ ತಡವಿದನು. ಜೀವಾನಂದನು, ದೀರ್ಘನಿಶ್ವಾಸವನ್ನು ಬಿಟ್ಟು ಎದ್ದುಕೂತನು. ಶಾಂತಿಯ ಮುಖವನ್ನು ನೋಡಿ, ಯುದ್ಧದಲ್ಲಿ ಯಾರಿಗೆ ಜಯವಾಯಿತೆಂದು ಕೇಳಿದನು.

ಶಾಂತಿಯು, ನಿನಗೇ ಜಯವಾಯಿತು. ಈ ಮಹಾಪುರುಷನಿಗೆ ನಮ ಸ್ಕಾರಮಾಡೆಂದು ಹೇಳಿದಳು.

ಆಗವರಿಬ್ಬರೂ ನೋಡಲಾಗಿ ಯಾರೂ ಇರಲಿಲ್ಲ! ಯಾರಿಗೆ ನಮಸ್ಕಾರ ವನ್ನು ಮಾಡುವುದು?

ಹತ್ತಿರದಲ್ಲಿಯೇ ಜಯಶಾಲಿಗಳಾದ ಸಂತಾನರ ಕೋಲಾಹಲವಾಗುತ

ಲಿದ್ದಿತು. ಆದರೆ ಶಾಂತಿಯಾಗಲಿ, ಜೀವಾನಂದನಾಗಲಿ ಎದ್ದುಹೋಗಲಿಲ್ಲ. ಆ ಪೂರ್ಣಚಂದ್ರ ಕಿರಣಗಳಿಂದ ಉಜ್ವಲವಾದ ಸೋಪಾನದ ಮೇಲೆ ಕುಳಿತಿದ್ದರು. ಜೀವಾನಂದನ ಶರೀರವು ಔಷಧದ ಗುಣದಿಂದ ಸ್ವಲ್ಪಹೊತ್ತಿನಲ್ಲಿಯೇ ಸುಸ್ಥ ವಾಗುತಬಂತು. ಅವನು, ಶಾಂತಿ! ಚಿಕಿತ್ಸಕನ ಔಷಧವು ಆಶ್ಚರ್ಯವಾದುದು; ನನ್ನ ಶರೀರದಲ್ಲಿ ಇನ್ನೇನು ವೇದನೆ ಅಥವಾ ಗ್ಲಾನಿ ಯಾವದೂ ಇಲ್ಲ. ಈಗ ಎಲ್ಲಿಗೆ ಹೋಗಬೇಕೋ, ನಡೆ—ಇಲ್ಲಿ ಸಂತಾನರ ಜಯಸೂಚಕವಾದ ಉತ್ಸವವು ನಡೆಯುತಲಿದೆ ಎಂದನು.

ಶಾಂತಿಯು ಇನ್ನು ಅಲ್ಲಿಗೆ ಬೇಡ, ಮಹಾತ್ಮಾಯಿಯ ಕಾರ್ಯವು ಉದ್ಧಾರ ವಾಯಿತು. ಈ ದೇಶವು ಸಂತಾನರದಾಯಿತು, ನಮಗೆ ರಾಜ್ಯದಲ್ಲಿ ಭಾಗವು ಬೇಡ, ಇನ್ನೇನು ಮಾಡಬೇಕೆಂದು ಕೇಳಿದಳು.

ಜೀವಾನಂದ—ಯಾವುದನ್ನು ಜಯಿಸಿದೆವೋ ಅದನ್ನು ಬಾಹುಬಲದಿಂದ ಕಾಪಾಡಿಕೊಳ್ಳಬೇಕು.

ಶಾಂತಿ—ಕಾಪಾಡಿಟ್ಟುಕೊಳ್ಳುವುದಕ್ಕೆ ಮಹೇಂದ್ರನು ಇದ್ದಾನೆ. ಸತ್ಯಾ ನಂದನೇ ಸ್ವಯಂ ಇದ್ದಾನೆ; ನೀನು ಪ್ರಾಯಶ್ಚಿತ್ತ ಮಾಡಿಕೊಂಡು ಸಂತಾನ ಧರ್ಮಕ್ಕೋಸ್ಕರ ದೇಹವನ್ನು ತ್ಯಾಗಮಾಡಿದ್ದೆ; ಈಗ ಪುನಃ ಪ್ರಾಪ್ತವಾದ ದೇಹದಲ್ಲಿ ಸಂತಾನರಿಗೆ ಏನೂ ಅಧಿಕಾರವಿಲ್ಲ. ನಾವು ಸಂತಾನರ ಪಕ್ಷಕ್ಕೆ ಸತ್ತವರಾಗಿದ್ದೇವೆ. ಈಗ ಸಂತಾನರು ನಮ್ಮನ್ನು ನೋಡಿದರೆ, ಜೀವಾನಂದನು ಯುದ್ಧಸಮಯದಲ್ಲಿ ಪ್ರಾಯಶ್ಚಿತ್ತದ ಭಯಕ್ಕಾಗಿ ಓಡಿಟ್ಟುಕೊಂಡಿದ್ದು ಜಯ ವಾದದ್ದನ್ನು ನೋಡಿ ರಾಜ್ಯದಲ್ಲಿ ಭಾಗಕ್ಕೆ ಬಂದಿದ್ದಾನೆಂದು ಹೇಳುವರು.

ಜೀವಾನಂದ—ಅದು ಹೇಗೆ, ಶಾಂತಿ? ಜನರ ಅಪವಾದದ ಭಯಕ್ಕೆ ನಾವು ಮಾಡುವ ಕೆಲಸವನ್ನು ಬಿಡುವುದೆ? ನಮ್ಮ ಕೆಲಸ, ಮಾತೃಸೇವೆ. ಯಾರು ಏನು ಹೇಳಿದರೂ ನಾನು ಮಾತೃಸೇವೆಯನ್ನು ಮಾಡುವೆನು.

ಶಾಂತಿ—ಅದಕ್ಕೆ ನಿನಗೆ ಪುನಃ ಅಧಿಕಾರವಿಲ್ಲ. ಏಕೆಂದರೆ, ನೀನು ಮಾತೃ ಸೇವೆಗೋಸ್ಕರ ದೇಹವನ್ನು ಪರಿತ್ಯಾಗ ಮಾಡಿದೆ. ಪುನಃ ಮಾತೃಸೇವೆ ಮಾಡ ಬೇಕಾದರೆ ನಿನ್ನ ಪ್ರಾಯಶ್ಚಿತ್ತವೇನಾಯಿತು? ಮಾತೃಸೇವೆಯಲ್ಲಿ ವಂಚಿತನಾಗು ವುದೇ ಈ ಪ್ರಾಯಶ್ಚಿತ್ತದ ಮುಖ್ಯಾಂಶವಾಗಿರುತ್ತೆ. ಇಲ್ಲದಿದ್ದರೆ, ಕೇವಲ ಈ ತುಚ್ಛವಾದ ಪ್ರಾಣವನ್ನು ಪರಿತ್ಯಾಗ ಮಾಡುವುದು ಬಹಳ ದೊಡ್ಡಕೆಲಸವಾಯಿತೆ.

ಜೀವಾನಂದ—ಶಾಂತಿ! ನೀನೇ ಸಾರವನ್ನು ತಿಳಿದವಳು. ನಾನು ಈ ಪ್ರಾಯಶ್ಚಿತ್ತವನ್ನು ಅಸಂಪೂರ್ಣಮಾಡುವುದಿಲ್ಲ. ನನ್ನ ಸುಖವು ಸಂತಾನ ಧರ್ಮ ದಲ್ಲಿ—ಆ ಸುಖದಲ್ಲಿ ವಂಚಿತನಾಗುವೆನು. ಆದರೆ ಹೋಗುವುದೆಲ್ಲಿಗೆ? ಮಾತೃ ಸೇವೆಯನ್ನು ಬಿಟ್ಟು, ಮನೆಗೆ ಹೋಗಿ ಸುಖಭೋಗವನ್ನು ಮಾಡುವುದಾಗ ಲಾರದು.

ಶಾಂತಿ—ನಾನೇನು ಹಾಗೆ ಹೇಳುವುದಿಲ್ಲ. ಛೀ! ನಾವು ಇನ್ನು ಗೃಹೀಗಳಲ್ಲ. ಹೀಗೆಯೇ ಇಬ್ಬರೂ ಸನ್ಯಾಸಿಗಳಾಗಿರೋಣ. ಚಿರಬ್ರಹ್ಮಚರ್ಯವನ್ನು ಕಾಪಾಡೋಣ. ನಡೆ, ದೇಶದೇಶದಲ್ಲಿ ತೀರ್ಥಯಾತ್ರೆಯನ್ನು ಮಾಡಿಕೊಂಡಿರೋಣ.

ಜೀವಾನಂದ—ಆಮೇಲೆ?

ಶಾಂತಿ—ಆಮೇಲೆ ಹಿಮಾಲಯದಲ್ಲಿ ಕುಟೀರವನ್ನು ಮಾಡಿಕೊಂಡು ಇಬ್ಬರೂ ದೇವತಾರಾಧನೆಯನ್ನು ಮಾಡೋಣ. ಯಾತರಿಂದ ಮಹಾತಾಯಿಗೆ ಮಂಗಳವುಂಟಾಗುವುದೋ ಆ ವರವನ್ನು ಬೇಡೋಣ.

ಆಗ ಅವರಿಬ್ಬರೂ ಎದ್ದು ಒಬ್ಬಳ ಕೈ ಒಬ್ಬ ಹಿಡಿದುಕೊಂಡು ಜ್ಯೋತ್ಸ್ನಾಮಯವಾದ ಅರ್ಧರಾತ್ರಿಯಲ್ಲಿ ಅನಂತದಲ್ಲಿ ಅಂತರ್ಹಿತರಾದರು.

ಹಾ! ತಾಯೆ! ಪುನಃ ಬಂದಾರೆ! ಜೀವಾನಂದನಹಾಗಿರುವ ಪುತ್ರನನ್ನು ಶಾಂತಿಯಂಥಾ ಮಗಳನ್ನು ಪುನಃ ಗರ್ಭದಲ್ಲಿ ಧಾರಣೆಮಾಡುವಿಯಾ?

---

## ಇಪ್ಪತ್ತನೆಯ ಪರಿಚ್ಛೇದ

ಸತ್ಯಾನಂದಠಾಕೂರನು ರಣಕ್ಷೇತ್ರದಿಂದ ಯಾರಿಗೂ ಏನೂ ಹೇಳದೆ ಆನಂದ ಮಠಕ್ಕೆ ಹೊರಟುಹೋದನು. ಅಲ್ಲಿ ಆ ಗಭೀರವಾದ ರಾತ್ರಿಯಲ್ಲಿ ವಿಷ್ಣುಮಂಟಪದಲ್ಲಿ ಕುಳಿತು ಧ್ಯಾನದಲ್ಲಿ ಪ್ರವೃತ್ತನಾದನು. ಆ ಸಮಯದಲ್ಲಿ ಆ ಚಿಕಿತ್ಸಕನು ಅಲ್ಲಿಗೆ ಬಂದು ದರ್ಶನವನ್ನು ಕೊಟ್ಟನು. ನೋಡಿ ಸತ್ಯಾನಂದನು ಎದ್ದು ಪ್ರಣಾಮವಂ ಗೈದನು.

ಚಿಕಿತ್ಸಕ—ಸತ್ಯಾನಂದ! ಇಂದು ಮಾಘಪೂರ್ಣಿಮಾ.

ಸತ್ಯಾನಂದ—ದಯಮಾಡಿಸೋಣಾಗಲಿ. ನಾನು ಸಿದ್ಧನಾಗಿದ್ದೇನೆ. ಆದರೆ, ಹೇ ಮಹಾತ್ಮರೆ! ನನ್ನದೊಂದು ಸಂದೇಹವಿದೆ, ಅದನ್ನು ಹರಿಸಬೇಕು. ನಾನು ಯಾವ ಮುಹೂರ್ತದಲ್ಲಿ ಯುದ್ಧವನ್ನು ಜಯಿಸಿ ಆರ್ಯಧರ್ಮವನ್ನು ನಿಷ್ಕಂಟಕವಾಗಿ ಮಾಡಿದೆನೋ—ಆ ಮುಹೂರ್ತದಲ್ಲಿ ನನ್ನನ್ನು ಕುರಿತು ಈ ಪ್ರತ್ಯಾಖ್ಯಾನದ ಅಪ್ಪಣೆಯು ಏಕೆ?

ಚಿಕಿತ್ಸಕ—ನಿನ್ನ ಕಾರ್ಯವು ಸಿದ್ಧವಾಯಿತು, ಮುಸಲಮಾನರ ರಾಜ್ಯವು ಧ್ವಂಸವಾಯಿತು. ಇನ್ನು ನಿನಗೆ ಇಲ್ಲೇನೂ ಕೆಲಸವಿಲ್ಲ. ಅನರ್ಥಕವಾಗಿ ಪ್ರಾಣಿಹತ್ಯದಿಂದ ಪ್ರಯೋಜನವಿಲ್ಲ.

ಸತ್ಯಾನಂದ—ಮುಸಲಮಾನರ ರಾಜ್ಯವು ಧ್ವಂಸವಾಯಿತು. ಆದರೆ ಹಿಂದೂ ರಾಜ್ಯವು ಸ್ಥಾಪಿತವಾಗಲಿಲ್ಲ. ಈಗಲೂ ಕಲಕತ್ತೆಯಲ್ಲಿ ಇಂಗ್ಲೀಷರು ಪ್ರಬಲವಾಗಿದ್ದಾರೆ.

ಚಿಕಿತ್ಸಕ—ಹಿಂದೂ ರಾಜ್ಯವು ಈಗ ಸ್ಥಾಪಿತವಾಗುವುದಿಲ್ಲ. ಈಗ ನೀನು ಇದ್ದರೆ ಅನರ್ಥವಾಗಿ ನರಹತ್ಯೆಗಳಾಗುತ್ತವೆ. ಅದುಕಾರಣ ಹೊರಡು.

ಕೇಳಿ ಸತ್ಯಾನಂದನು ಅತ್ಯಂತವಾಗಿ ಮರ್ಮಾಹತನಾಗಿ ಕಾತರನಾಗಿ, ಹೇ ಪ್ರಭು! ಹಿಂದುಗಳ ರಾಜ್ಯವು ಸ್ಥಾಪಿತವಾಗದಿದ್ದರೆ ಯಾರು ರಾಜರಾಗುವವರು? ಪುನಃ ಮುಸಲಮಾನರೇ ರಾಜರಾಗುವರೆ? ಎಂದನು.

ಚಿಕಿತ್ಸಕ—ಇಲ್ಲ. ಈಗ ಇಂಗ್ಲೀಷರು ರಾಜರಾಗುವರು.

ಸತ್ಯಾನಂದನ ಕಣ್ಣುಗಳಿಂದ ಜಲಧಾರೆಯು ಹರಿಯಲಾರಂಭವಾಯಿತು. ಅವನು ಮೇಲೆ ಇದ್ದ ಮಾತೃರೂಪವಾದ ಜನ್ಮಭೂಮಿಯ ಪ್ರತಿಮೆಯ ಕಡೆ ತಿರುಗಿ ಕೈಮುಗಿದುಕೊಂಡು ಬಾಷ್ಪನಿರುದ್ಧವಾದ ಸ್ವರದಿಂದ ಹಾ! ತಾಯೆ! ನಿನ್ನ ಉದ್ಧಾರವನ್ನು ಮಾಡಲಾರದೆ ಹೋದೆನು. ಪುನಃ ನೀನು ಮ್ಲೇಂಛರ ಕೈಗೆ ಬೀಳುವೆ, ಸಂತಾನರ ಅಪರಾಧವನ್ನು ಮನ್ನಿಸು. ಹಾ! ತಾಯೆ! ಏಕೆ ರಣ ಕ್ಷೇತ್ರದಲ್ಲಿ ಇಂದು ನನ್ನ ಪ್ರಾಣವು ಹೋಗಲಿಲ್ಲವೆಂದು ಮೊರೆಯಿಟ್ಟನು.

ಚಿಕಿತ್ಸಕ—ಸತ್ಯಾನಂದ ಕಾತರನಾಗಬೇಡ. ಆಗುವುದೆಲ್ಲ ಒಳ್ಳೆಯದಾಗುತ್ತೆ. ಇಂಗ್ಲೀಷರು ರಾಜರಾಗದೆ ಹೋದರೆ ಆರ್ಯಧರ್ಮವು ಪುನರುದ್ಧಾರವಾಗುವ ಸಂಭವವಿಲ್ಲ. ಮಹಾತ್ಮರು ಹೇಳಿರುವ ಮಾತನ್ನೇ ನಾನು ಹೇಳುತ್ತೇನೆ. ಮನಸ ವಿಟ್ಟು ಕೇಳು. ಮುಪ್ಪತ್ತುಮೂರು ಕೋಟಿ ದೇವತೆಗಳನ್ನು ಪೂಜೆಮಾಡುವುದು ಆರ್ಯರ ಧರ್ಮವಲ್ಲ—ಅದೊಂದು ಲೌಕಿಕವಾದ ಅಪಕೃಷ್ಟವಾದ ಧರ್ಮ; ಅದರ ಪ್ರಭಾವವೇ ಈಗಿನ ಆರ್ಯಧರ್ಮವಾಗಿದೆ. ಮ್ಲೇಂಛರು ಯಾವುದನ್ನು ಹಿಂದೂ ಧರ್ಮವೆನ್ನುತ್ತಾರೋ ಅದು ಲೋಪವಾಗಿಹೋಗಿದೆ. ಶುದ್ಧವಾದ ಹಿಂದೂ ಧರ್ಮವು ಜ್ಞಾನಾತ್ಮಕವಾದುದು. ಕೇವಲ ಕರ್ಮಾತ್ಮಕವಾದುದಲ್ಲ; ಆ ಜ್ಞಾನವು ಎರಡು ಪ್ರಕಾರ, ಬಹಿರ್ವಿಷಯಕವಾದುದೊಂದು, ಅಂತರ್ವಿಷಯಕ ವಾದುದೊಂದು. ಅಂತರ್ವಿಷಯಕವಾದ ಜ್ಞಾನವೇ ಆರ್ಯಧರ್ಮದ ಪ್ರಧಾನ ಭಾಗ. ಆದರೆ ಬಹಿರ್ವಿಷಯಕವಾದ ಜ್ಞಾನವು ಮೊದಲು ಹುಟ್ಟದಿದ್ದರೆ ಅಂತ ರ್ವಿಷಯಕವಾದ ಜ್ಞಾನ ಹುಟ್ಟುವುದರ ಸಂಭವವು ಕಡಿಮೆ. ಸ್ಥೂಲವಾದುದನ್ನು ತಿಳಿಯದಿದ್ದರೆ ಸೂಕ್ಷ್ಮವಾದುದನ್ನು ತಿಳಿಯುವುದು ಕಷ್ಟ. ಈಗ ಈ ದೇಶದಲ್ಲಿ ಬಹಳ ಕಾಲದಿಂದ ಬಹಿರ್ವಿಷಯಕ ಜ್ಞಾನವು ವಿಲುಪ್ತವಾಗಿ ಹೋಗಿದೆ. ಅದ ರೊಂದಿಗೆ ಸ್ವಭಾವಸಿದ್ಧವಾದ ಆರ್ಯಧರ್ಮವೂ ಲೋಪವಾಗಿದೆ. ಆರ್ಯಧರ್ಮ ವನ್ನು ಪುನರುದ್ಧಾರಮಾಡಬೇಕಾದರೆ ಮೊದಲು ಬಹಿರ್ವಿಷಯಕವಾದ ಜ್ಞಾನ ವನ್ನು ಪ್ರಚಾರಮಾಡಬೇಕು. ಈಗ ಈ ದೇಶದಲ್ಲಿ ಬಹಿರ್ವಿಷಯಕವಾದ ಜ್ಞಾನವೇ ಇಲ್ಲ. ತಿಳಿಸಿ ಹೇಳಿಕೊಡುವ ಜನರಿಲ್ಲ; ನಾವು ಜನಗಳಿಗೆ ಶಿಕ್ಷಿಸುವುದರಲ್ಲಿ ಅಷ್ಟು ಸಮರ್ಥರಾಗಿಲ್ಲ; ಅದುಕಾರಣ ಬೇರೆ ದೇಶದಿಂದ ಬಹಿರ್ವಿಷಯಕವಾದ ಜ್ಞಾನವು ಬರಬೇಕು. ಇಂಗ್ಲೀಷರು ಬಹಿರ್ವಿಷಯಕವಾದ ಜ್ಞಾನದಲ್ಲಿ ಪಂಡಿತರು, ಜನ

ಗಳಿಗೆ ತಿಳಿಸುವುದರಲ್ಲಿ ಪಟುಗಳಾಗಿದ್ದಾರೆ. ಆದುದರಿಂದ ಇಂಗ್ಲೀಷರು ರಾಜರಾಗ ಬೇಕು. ಇಂಗ್ಲೀಷು ಕಲಿತರೆ ಬಹಿರ್ವಿಷಯಕವಾದ ಜ್ಞಾನದಲ್ಲಿ ಸುಶಿಕ್ಷಿತರಾಗಿ ಜನರು ಅಂತಸ್ತತ್ವವನ್ನು ತಿಳಿಯಲು ಸಮರ್ಥರಾಗುವರು. ಆಗ ಆರ್ಯಧರ್ಮದ ಪ್ರಚಾರಕ್ಕೆ ವಿಘ್ನವುಂಟಾಗುವುದಿಲ್ಲ. ಆಗ ನಿಜವಾದ ಧರ್ಮವು ತನಗೆ ತಾನಾಗಿಯೇ ಪುನರುದ್ದೀಪ್ತವಾಗುವುದು. ಎಷ್ಟುದಿನ ಹಾಗಾಗುವುದಿಲ್ಲವೋ ಎಷ್ಟುದಿನ ಹಿಂದುಗಳು ಜ್ಞಾನಿಗಳಾಗುವುದಿಲ್ಲವೋ, ಗುಣಾಢ್ಯರಾಗುವುದಿಲ್ಲವೋ, ಬಲಿಷ್ಠರಾಗುವುದಿಲ್ಲವೋ ಅಷ್ಟುದಿನ ಇಂಗ್ಲೀಷರ ರಾಜ್ಯವು ಅಕ್ಷಯವಾಗಿರುವುದು. ಇಂಗ್ಲೀಷರ ರಾಜ್ಯದಲ್ಲಿ ಪ್ರಜೆಗಳು ಸುಖಿಗಳಾಗುವರು. ನಿಷ್ಕಂಟಕವಾಗಿ ಧರ್ಮಾಚರಣೆಯನ್ನು ಮಾಡಬಲ್ಲರು. ಆದುದರಿಂದ ಎಲೈ ಬುದ್ಧಿವಂತನೆ! ಇಂಗ್ಲೀಷರ ಸಂಗಡ ಯುದ್ಧಮಾಡದೆ ನನ್ನನ್ನು ಅನುಸರಿಸಿ ಬಂದುಬಿಡು.

ಸತ್ಯಾನಂದ—ಎಲೈ ಮಹಾತ್ಮನೆ! ಇಂಗ್ಲೀಷರು ರಾಜರಾಗುವುದೇ ತಮ್ಮ ಅಭಿಪ್ರಾಯವಾಗಿದ್ದರೆ ಈ ಸಮಯದಲ್ಲಿ ಇಂಗ್ಲೀಷರ ರಾಜ್ಯವೇ ಈ ದೇಶಕ್ಕೆ ಮಂಗಳದಾಯಕವಾಗಿದ್ದರೆ ನನಗೆ ಈ ನೃಶಂಸವಾದ ಯುದ್ಧಕಾರ್ಯದಲ್ಲಿ ಏಕೆ ನಿಯಮಿಸಲಾಯಿತು?

ಮಹಾಪುರುಷ—ಇಂಗ್ಲೀಷರು ಈಗ ವರ್ತಕರು. ಅರ್ಥಸಂಗ್ರಹದಲ್ಲಿಯೇ ಮನವುಳ್ಳವರಾಗಿದ್ದಾರೆ. ರಾಜ್ಯಶಾಸನಭಾರವನ್ನು ವಹಿಸಲು ಇಷ್ಟವಿಲ್ಲ. ಈ ಸಂತಾನ ವಿದ್ರೋಹವೇ ಕಾರಣವಾಗಿ ರಾಜ್ಯಶಾಸನ ಭಾರವನ್ನು ವಹಿಸಬೇಕಾಗುತ್ತದೆ. ಏಕೆಂದರೆ, ರಾಜ್ಯಶಾಸನ ಹೊರತು ಅರ್ಥಸಂಗ್ರಹವಾಗುವುದಿಲ್ಲ. ಇಂಗ್ಲೀಷರು ರಾಜ್ಯದಲ್ಲಿ ಅಭಿಷಿಕ್ತರಾಗುವರೆಂತಲೇ ಸಂತಾನ ವಿದ್ರೋಹವುಂಟಾಯಿತು. ಈಗ ಹೊರಡು. ಜ್ಞಾನವನ್ನು ಪಡೆದು ಅನಂತರ ನೀನಾಗಿಯೇ ಎಲ್ಲ ತಿಳಿಯುವವನಾಗುತ್ತೀ.

ಸತ್ಯಾನಂದ—ಎಲೈ ಮಹಾತ್ಮರೆ! ನನಗೆ ಜ್ಞಾನಲಾಭದಲ್ಲಿ ಇಷ್ಟವಿಲ್ಲ. ಜ್ಞಾನದಿಂದ ನನಗೆ ಕೆಲಸವಿಲ್ಲ. ನಾನು ಯಾವ ವ್ರತದಲ್ಲಿ ವ್ರತಿಯಾಗಿದ್ದೇನೋ ಆ ವ್ರತವನ್ನು ರಕ್ಷಿಸಿಕೊಂಡಿರುವೆನು. ನನ್ನ ವ್ರತವಾದ ಮಾತೃಭಕ್ತಿಯು ಅಚಲವಾಗಿರಲೆಂದು ಆಶೀರ್ವಾದವನ್ನು ಮಾಡೋಣಾಗಲಿ.

ಮಹಾಪುರುಷ—ವ್ರತವು ಸಫಲವಾಯಿತು. ತಾಯಿಯ ಮಂಗಳ ಸಾಧನವನ್ನು ಮಾಡಿದೆ, ಇಂಗ್ಲೀಷರ ರಾಜ್ಯವನ್ನು ಸ್ಥಾಪಿತಮಾಡಿದೆ, ಯುದ್ಧ ವಿಗ್ರಹಗಳನ್ನು ಬಿಡು, ಜನರು ಕೃಷಿಕಾರ್ಯದಲ್ಲಿ ನಿಯುಕ್ತರಾಗಲಿ, ಪೃಥಿವಿಯು ಸಸ್ಯಶಾಲಿನಿಯಾಗಲಿ, ಜನರಿಗೆ ಶ್ರೀವೃದ್ಧಿಯಾಗಲಿ.

ಸತ್ಯಾನಂದನ ಕಣ್ಣುಗಳಿಂದ ಕಿಡಿಕೆಂಡಗಳು ಸುರಿದವು. ಅವನು ಶತ್ರುಗಳ ರಕ್ತದಿಂದ ಸಿಂಚನೆಮಾಡಿ ಮಾತೆಯನ್ನು ಸಸ್ಯಶಾಲಿನಿಯಾಗಿ ಮಾಡುವೆನೆಂದನು.

ಮಹಾಪುರುಷ—ಶತ್ರು ಯಾರು ? ಶತ್ರುಗಳು ಇನ್ನು ಇಲ್ಲ. ಇಂಗ್ಲೀಷರು ಮಿತ್ರರಾಜರು. ಇಂಗ್ಲೀಷರ ಸಂಗಡ ಯುದ್ಧಮಾಡಿ ಜಯಿಸುವುದಕ್ಕೆ ಯಾರಿಗೂ ಶಕ್ತಿ ಇಲ್ಲ.

ಸತ್ಯಾನಂದ—ಶಕ್ತಿ ಇಲ್ಲದಿದ್ದರೆ ಇಲ್ಲಿಯೇ ಈ ಮಾತೆಯ ಪ್ರತಿಮೆಯ ಎದುರಿಗೆ ದೇಹತ್ಯಾಗವನ್ನು ಮಾಡಿಬಿಡುವೆನು.

ಮಹಾಪುರುಷ—ಅಜ್ಞಾನದಿಂದಲೆ ? ನಡೆ. ಜ್ಞಾನಲಾಭವನ್ನು ಮಾಡು, ಹಿಮಾಲಯಶಿಖರದಲ್ಲಿ ಮಾತೃಮಂದಿರವಿರುವುದು. ಅಲ್ಲಿಯೇ ಮಾತೆಯ ಮೂರ್ತಿಯನ್ನು ತೋರಿಸುವೆನು.

ಇಷ್ಟು ಹೇಳಿ ಮಹಾಪುರುಷನು ಸತ್ಯಾನಂದನ ಕೈಯನ್ನು ಹಿಡಿದು ಕೊಂಡನು. ಏನು ಅಪೂರ್ವವಾದ ಶೋಭಾಕಾಂತಿ ! ಆ ಗಂಭೀರವಾದ ವಿಷ್ಣುಮಂದಿರದಲ್ಲಿ ಆ ಪ್ರಕಾಂಡವಾದ ಚತುರ್ಭುಜಮೂರ್ತಿಯ ಸಮ್ಮುಖದಲ್ಲಿ ಆ ಮಸಕುಮಸಕಾದ ಬೆಳಕಿನಲ್ಲಿ ಮಹಾಪ್ರತಿಭಾಪೂರ್ಣರಾದ ಇಬ್ಬರು ಪುರುಷಮೂರ್ತಿಗಳು, ಒಬ್ಬನು ಮತ್ತೊಬ್ಬನ ಕೈಯನ್ನು ಹಿಡಿದಿದ್ದಾನೆ. ಯಾರು ಯಾರನ್ನು ಹಿಡಿದಿರುವುದು ? ಜ್ಞಾನ ಬಂದು ಭಕ್ತಿಯನ್ನು ಹಿಡಿದಿದೆ. ಧರ್ಮವು ಬಂದು ಕರ್ಮದ ಕೈಯನ್ನು ಹಿಡಿದಿದೆ. ವಿಸರ್ಜನವು ಬಂದು ಪ್ರತಿಷ್ಠೆಯನ್ನು ಹಿಡಿದಿದೆ. ಕಲ್ಯಾಣಿಯು ಬಂದು ಶಾಂತಿಯನ್ನು ಕೈಹಿಡಿದಿದ್ದಾಳೆ. ಈ ಸತ್ಯಾನಂದನು ಶಾಂತಿ; ಈ ಮಹಾಪುರುಷನು ಕಲ್ಯಾಣಿ. ಸತ್ಯಾನಂದನು ಪ್ರತಿಷ್ಠೆ ; ಈ ಮಹಾಪುರುಷನು ವಿಸರ್ಜನೆ. ವಿಸರ್ಜನೆ ಬಂದು ಪ್ರತಿಷ್ಠೆಯನ್ನು ತೆಗದು ಕೊಂಡು ಹೋಯಿತು.

—ಸಂಪೂರ್ಣಂ—

# APPENDIX I

## HISTORY OF

# The Sannyasi Rebellion

**(From Warren Hasting's Letters in Gleig's Memoirs)**

You will hear of great disturbances committed by Sannasis, or wandering Fakirs, who annually infest the province, about this time of the year, in pilgrimages to Jaggannath, going in bodies of 1,000 and sometimes even 10,000 men. An officer of reputation (Captain Thomas) lost his life in an unequal attack upon a party of these banditti, about 3,000 of them, near Rangapore, with a small party of Pergona Sepoys which has made them more talked of than they deserve. The Revenue, however, has felt the affects of their ravages in the Northern Districts. The new establishment of Sepoys which is now forming on the plan enjoined by the Court of Directors and the distribution of them ordered for the internal protection of the provinces, will, I hope, effectually secure them hereafter from these incursions.—Hastings to Sir George Colebrook—dated 2nd February 1773 —Gleig's *Memoirs*, Vol. I, 282.

Our own provinces have worn something of a warlike apperance this year, having been infested by a band of Sannasis, who have defeated two small parties of Purgunna Sepoys (a rascally corps) and cut off the two officers who commanded them. One was Captain Thomas, whom you know. Four battalions of the brigade Sepoys are now in pursuit of them, but they will not stand any engagement, and have neither camp equipage nor even clothes, to retard their flight. Yet I hope we shall yet make an example of some of them as they are shut in by rivers which they cannot pass when closely pursued.

The history of these people is very curious. They inhabit or rather possess the country lying south of the hills of Tibbet from Caubul to China. They go mostly naked; they have neither towns, houses nor families; but rove continually from place to place,

recruiting their number with the healthiest children they can steal in the countries through which they pass. Thus they are the stoutest and the most active men in India. Many are merchants. They are all pilgrims, and held by all castes of Gentoos in great veneration. This infatuation prevents our obtaining any intelligence of their motion or aid from the country against them, notwithstanding very rigid orders which have been published for these purposes, in so much that they often appear in the heart of the province as if they dropt from heaven. They are hardy, bold and enthusiastic to a degree surprising credit. Such are the Sannasies, the Gipsies of Hindustan.

We have dissolved all Pargunna Sepoys and fixed stations of the brigade Sepoys on our frontiers, which are to be employed only in the defence of the provinces, and to be relieved every three months. This, I hope, will secure the peace of the country against future irruptions, and as they are no longer to be employed in the collections, the people will be freed from the oppressions of our own plunderers. Hastings to Josias Du Pre—9th March 1773.

We have lately been much troubled here by hoardes of desperate adventurers called Sannasis, who have overrun the province in great numbers and committed great depredations. The particulars of these disturbances and of our endeavours to repel them you will find in our general letters and consultations which will acquit the Government of any degree of blame from such a calamity. At this time we have five battalions of Sepoys in pursuit of them, and I have still hopes of exacting ample vengeance for the mischief they have done us, as they have no advantage over us but in the speed with which they fly from us. A minute relation of these adventures cannot amuse you, nor indeed are they of great moment, for which reason give me leave to drop the subject, and lead you to one in which you cannot but be more interested, etc.—Hastings to Purling—dated 31st March 1773—para 4.—Gleig's *Memoirs of Hastings*, 294, Vol. I.

In my last I mentioned that we had every reason to suppose the Sannassie Fakirs had entirely evacuated the Company's possessions. Such were the advices I then received and their usual progress made this highly probable. But it seems they were either disappointed in crossing the Burramputra river or they changed their intention, and returned in several bands of about 2,000 or 3,000 each, appearing

unexpectedly in different parts of the Rungpoor and Dinagepoor provinces. For in spite of the strictest orders issued and the severest penalties threatened to the inhabitants in case they fail in giving intelligence of the approach of the Sannasis, they are so infatuated, by superstition as to be backward in giving the information, so that the banditti are sometimes advanced into the very heart of our provinces before we know anything of their motions; as if they dropt from heaven to punish the inhabitants for their folly. One of these parties falling in with a small detachment commanded by Captaian Edwards an engagement ensued wherein our Sepoys gave way, and Captain Edwards lost his life in endeavouring to cross a Nulla. This detachment was formed of the worst of our Purganna Sepoys, who seemed to have behaved very ill. This success elated the Sannasis, and I heard of their depredations from every quarter in those Districts. Captain Stewart with the nineteenth battalion of Sepoys, who was before employed against them, was vigilent in the pursuit, wherever he could hear of them, but to no purpose. They were gone before he could reach the places to which he was directed. I ordered another battalion from Burrampoor to march immediately to co-operate with Captain Stewart, but to act separately in order to have the better chance of falling in with them. At the same time I ordered another battalion to march from Dinapoor station through Tyroot and by the northern frontier of the Purneah Province, following the track which the Sannasis usually took, in order to intercept them in case they marched that way. This battalion after acting against the Sannasis, if occasion offered, was directed to pursue their march to Cooch Behar, where they are to join Captain Jones and assist in the reduction of that country.

Several parties of the Sannasis having entered into the Purneah Province, burning and destroying many villages there, the Collector applied to Captain Brooke who had just arrived at Panity, near Rajmahal, with his newly raised battalion of light infantry. That officer immediately crossed the river, and entered upon measures against Sannasis and had very nearly fallen in with a party of them, just as they were crossing the Cosa river, to escape out of that Province. They arrived on the opposite bank before their rear had entirely crossed, but too late to do any execution among them. It is apparent

now that the Sannasis are glad to escape as they can from the Company's possessions, but I am still in hopes, that some of the many detachments now acting against them may fall in with some of their parties, and punish them exemplarily for their audacity.

It is impossible but that on account of the various depredations which the Sannasis have committed, the Revenue must fall short in some of the Company's Districts as well from real as from pretended losses. The Board of Revenue aware of the last consideration, have come to the resolution of admitting no pleas for a reduction of Revenue but such as are attended with circumstances of conviction; and by this means they hope to prevent, as much as in their power, all impositions on the Government, and to render the loss to the Company as inconsiderable as possible. Effectual means will be used by stationing some small detachments at proper posts on our frontier to prevent any future incursions from the Sannassie Fakirs, or any other roving banditti, a measure which only the extraordinary audacity of their last incursions have manifested to be necessary. This will be effected without employing many troops, and I hope in no future time the Sannassies shall again suffer from this cause. —Hastings to Sir George Colebrooke—dated 31st March 1773.

The Sannassies threatened us with the same disturbances from the beginning of this year as we experienced from them the last. But by being easily provided to oppose them, and one or two severe checks which they received in their first attempt, we have kept the country clear of them. A party of horse which we employed in pursuit of them chiefly contributed to intimidate these ravagers who seemed to pay little regard to our Sepoys, having so much the advantage of them in speed, on which they entirely rely for safety. It is my intention to proceed more effectually against them by expelling them from their fixed residences which they have established in the north-eastern quarter of the province and by making severe examples of the Zamindars who have afforded them protection or assistance. —Hastings to Lawrence—dated 20th March 1774.

# APPENDIX II

## HISTORY OF

# The Sannyasi Rebellion

**(From the Annals of Rural Bengal)**

" A set of lawless banditti " wrote the Council in 1773, " known under the name of Sannassies or Fakirs have long infested these countries, and under pretence of religious pilgrimage, have been accustomed to traverse the chief part of Bengal begging, stealing and plundering wherever they go, and as it best suits their convenience to practise. " In the years subsequent to the famine, their ranks were swollen by a crowd of starving peasants who had neither seed nor implements to recommence cultivation with, and the cold weather of 1772 brought them down upon the harvest fields of Lower Bengal, burning, plundering and ravaging in " bodies of fifty thousand men ". The Collectors called out military; but after a temporary success our Sepoys " were at length totally defeated, and Captain Thomas (their leader) with almost the whole party cut off. " It was not till the close of the winter, that the Council could report to the Court of Directors that a battalion, under an experienced Commander, had acted successfully against them, and a month later we find that even this tardy intimation had been premature. On the 31st March 1772, Warren Hastings finnaly acknowledges that the Commander who had succeeded Captain Thomas "unhappily underwent the same fate, that four battalions of the army were then actively engaged against the banditti, but that in spite of the militia levies called from the landholders, their combined operations had been fruitless. The Revenue could not be collected, the inhabitants made common cause with the marauders, and the whole rural administration was unhinged. Such excursions were annual episodes in what some have been pleased to represent the *still life* of Bengal.—Hunter's *Annals of Rural Bengal*, pp. 70-72.